ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ದಸರಾ ಸುತ್ತ ಸೃಷ್ಟಿಯಾದ ಗ್ರಾಮೀಣ, ಕೃಷಿ ಪ್ರಧಾನ ಜಾನಪದ ಜಗತ್ತಿನ ಅನಾವರಣ

ಕನ್ನಡ ಸಾಹಿತ್ಯ ಸಮ್ಮೇಳನ– ತಲುಪದ ಹಣ; ಲಾಂಛನಕ್ಕೂ 'ಗ್ರಹಣ' 7
ಬಿಜೆಪಿ ಮುಖಂಡನ ರೆಸಾರ್ಟ್‌ನಲ್ಲಿ ಸ್ವಾಗತಕಾರಿಣಿಯಾಗಿದ್ದ ಯುವತಿ
'ಪೇಸಿಎಂ': ಕಾಂಗ್ರೆಸ್‌ನ ಡರ್ಟಿ ಪಾಲಿಟಿಕ್ಸ್' 6
ಉತ್ತರಾಖಂಡ: ಲೈಂಗಿಕ ಕ್ರಿಯೆಗೆ ಒಪ್ಪದ ಯುವತಿ ಕೊಲೆ 9

ಕಲ್ಯಾಣ ಮಂಡಳಿಯಲ್ಲಿ ಮಧ್ಯವರ್ತಿಗಳಿಗೆ ಮಣೆ, ಭ್ರಷ್ಟಾಚಾರದ ಆರೋಪ

# ಕಾರ್ಮಿಕರ ಸೌಲಭ್ಯಕ್ಕೂ ಕಮಿಷನ್?

• ಸಿದ್ದಯ್ಯ ಹಿರೇಮಠ

**ದಾವಣಗೆರೆ:** ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು ನೋಂದಾಯಿತ ಕಾರ್ಮಿಕರಿಗೆ ಹತ್ತುಹಲವು ಸೌಲಭ್ಯಗಳನ್ನು ನೀಡುತ್ತಿದೆ. ಆದರೆ ಇಂಥ ಯಾವುದೇ ಸೌಲಭ್ಯ ಪಡೆಯಲು ಲಂಚ ನೀಡದೇ ಫಲಾನುಭವಿಗಳಿಗೆ ವಿಧಿಯಿಲ್ಲ ಎಂಬ ಸ್ಥಿತಿ ನಿರ್ಮಾಣವಾಗಿದೆ ಎನ್ನುವ ಆರೋಪಗಳು ಕೇಳಿಬಂದಿವೆ.

ನೆರವು ಕೋರಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಫಲಾನುಭವಿಗಳಿಗೆ ಕಾರ್ಮಿಕ ಇಲಾಖೆಯ ಆಯಾ ಜಿಲ್ಲಾ ಕಚೇರಿಗಳು ಹಾಗೂ ಬೆಂಗಳೂರಿನಲ್ಲಿ ಪ್ರಧಾನ ಕಚೇರಿ ಹೊಂದಿರುವ ಮಂಡಳಿಯ ಮೂಲಕ ಸೌಲಭ್ಯಗಳ ಹಂಚಿಕೆಯಾಗುತ್ತಿದೆ. ಕಾರ್ಮಿಕರ ನೋಂದಣಿ ಪ್ರಕ್ರಿಯೆಯಿಂದ ಹಿಡಿದು ಸೌಲಭ್ಯ ದೊರ ಕಿಸಿಕೊಡುವ ಹಂತದವರೆಗೂ ಮಧ್ಯವರ್ತಿಗಳ ಅಟಾಟೋಪ ಮಿತಿಮೀರಿದೆ. ಒಂದರ್ಥದಲ್ಲಿ ಕಾರ್ಮಿಕರ ಸುಲಿಗೆಯೇ ನಡೆಯುತ್ತಿದೆ. ಇಲಾಖೆಯ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸದೇ ಇರುವುದು ಮಧ್ಯವರ್ತಿಗಳಿಗೆ 'ಕುಮ್ಮಕ್ಕು' ನೀಡುತ್ತಿದೆ ಎನ್ನುವ ದೂರುಗಳಿವೆ.

ಪ್ರಾದೇಶಿಕ ಸಾರಿಗೆ ಕಚೇರಿ (ಆರ್‌ಟಿಒ)ಯಿಂದ ವಾಹನ ಚಾಲನಾ ಪರವಾನಗಿ ಸೇರಿದಂತೆ ಅನೇಕ ಸೌಲಭ್ಯ ದೊರಕಿಸಿಕೊಡಲು ಮಧ್ಯವರ್ತಿಗಳು ಇರುವಂತೆಯೇ, ಕಾರ್ಮಿಕರಿಗೆ ಮಂಡಳಿಯ ಸೌಲಭ್ಯ ಕೊಡಿಸುವುದಕ್ಕೂ ಏಜೆಂಟರು (ದಲ್ಲಾಳಿಗಳು) ಹುಟ್ಟಿಕೊಂಡಿದ್ದಾರೆ. ಸೌಲಭ್ಯದ ಮಂಜೂರಾತಿ ಕೋರಿ ಏಜೆಂಟರ ಮೂಲಕ ಅರ್ಜಿ ಸಲ್ಲಿಸಿ, ಲಂಚದ ಬೇಡಿಕೆಯ ಹಣ ನೀಡಿದಲ್ಲಿ ಫಲಾನುಭವಿಯ ಖಾತೆಗೆ ಸೌಲಭ್ಯದ ಹಣ ನೇರವಾಗಿ ಸೇರುತ್ತದೆ. ಇಲ್ಲದಿದ್ದರೆ ಅರ್ಜಿಯನ್ನು ಯಾವುದಾದರೂ ಕಾರಣ ನೀಡಿ ತಿರಸ್ಕರಿಸಲಾಗುತ್ತದೆ ಎಂಬುದು ಕಾರ್ಮಿಕರ ಅಳಲು.

ಮಂಡಳಿಯಿಂದ ಯಾವುದೇ ಸೌಲಭ್ಯ ಪಡೆಯಲು ಸದಸ್ಯ ಕಾರ್ಮಿಕರು ಮಧ್ಯವರ್ತಿಗಳಿಗೆ ಶೇ 25ರಿಂದ 30ರಷ್ಟು ಕಮಿಷನ್ ನೀಡಬೇಕು. ಇಲ್ಲದಿದ್ದರೆ ಕೆಲಸ ಆಗುವುದಿಲ್ಲ ಎಂದು ಕಾರ್ಮಿಕರು, ಕಾರ್ಮಿಕ ಸಂಘಟನೆಗಳ ಮುಖ್ಯಸ್ಥರು ಹೇಳುತ್ತಾರೆ. 'ಸೌಲಭ್ಯ ನೀಡುವ ನಿಟ್ಟಿನಲ್ಲಿ ಪಾರದರ್ಶಕತೆ ಇರಲಿ' ಎಂಬ ಉದ್ದೇಶದಿಂದಲೇ ಮಂಡಳಿಯು ಆನ್‌ಲೈನ್ ಮೂಲಕವೇ ಅರ್ಜಿ ಸಲ್ಲಿಸುವ ಪದ್ಧತಿ ಜಾರಿಗೊಳಿಸಿದೆ. ಆದರೂ ಮಂಜೂರಾತಿಗಾಗಿ ಲಂಚವನ್ನು ನೀಡುವುದು ಕಡ್ಡಾಯ ಎಂಬ ದೂರುಗಳಿವೆ.

ರಾಜ್ಯದಲ್ಲಿ ಮಂಡಳಿಯೊಂದಿಗೆ ಸೌಲಭ್ಯಕ್ಕಾಗಿ ನೋಂದಣಿ ಮಾಡಿಸಿದ ಕಾರ್ಮಿಕರ ಸಂಖ್ಯೆಯೇ 37 ಲಕ್ಷದಷ್ಟಿದೆ. ಆದರೆ, ಕಟ್ಟಡ ಮತ್ತು ಇತರೆ ನಿರ್ಮಾಣ ವಲಯದ ಕಾರ್ಮಿಕಲ್ಲದವರೂ ನೋಂದಣಿ ಮಾಡಿಸಿದ್ದು, ಅಂಥವರ ಸಂಖ್ಯೆಯೇ 8 ಲಕ್ಷದಿಂದ 10 ಲಕ್ಷದಷ್ಟಿದೆ ಎಂಬ ಅಂದಾಜು ಇದೆ.

**ನೋಂದಣಿಗೂ ಹಣ:** 'ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಸಾಕಷ್ಟು ಸೌಲಭ್ಯಗಳನ್ನು ನೀಡಲಾಗುತ್ತದೆ' ಎಂಬ ಆಮಿಷ ಒಡ್ಡುವ ಏಜೆಂಟರು, ಗ್ರಾಮೀಣ ಪ್ರದೇಶದ ನಿರುದ್ಯೋಗಿಗಳು ಹಾಗೂ ನಗರ ಪ್ರದೇಶಗಳ ಇತರೆ ವಲಯದ ಕಾರ್ಮಿಕರಿಂದ ₹ 2 ಸಾವಿರದಿಂದ ₹ 3 ಸಾವಿರ ಪಡೆದು ಕಲ್ಯಾಣ ಮಂಡಳಿಯ ನೋಂದಣಿ ಮಾಡಿಸಿ, 'ಕಾರ್ಮಿಕ ಕಾರ್ಡ್' ಮಾಡಿಸಿಕೊಡುತ್ತಾರೆ. ಈ ವಲಯದ ನಿಜವಾದ ಕಾರ್ಮಿಕರೂ ಇಷ್ಟೇ ಪ್ರಮಾಣದ ಹಣವನ್ನು ನೀಡಿಯೇ ನೋಂದಣಿ ಮಾಡಿಸಿ ಕಾರ್ಡ್ ಪಡೆದುಕೊಳ್ಳುವುದು ಅನಿವಾರ್ಯವಾಗಿದೆ ಎನ್ನುವ ದೂರುಗಳಿವೆ.

ರಾಜ್ಯದಾದ್ಯಂತ ಏಜೆಂಟರ ದೊಡ್ಡಜಾಲವೇ ಕ್ರಿಯಾಶೀಲವಾಗಿದೆ. ಕಾರ್ಮಿಕರ, ಕಾರ್ಮಿಕರಲ್ಲದವರ ನೋಂದಣಿ ಕಾರ್ಯದಲ್ಲಿ ತೊಡಗಿರುವ ಅನೇಕ ಏಜೆಂಟರು, ಮಂಡಳಿ ನೀಡುವ ಮೂಲ (ಒರಿಜಿನಲ್) 'ಕಾರ್ಮಿಕ ಕಾರ್ಡ್' ಅನ್ನು ತಾವೇ ಇಟ್ಟುಕೊಂಡು, ಅದರ ಪ್ರತಿಯನ್ನು ಫಲಾನುಭವಿಗಳಿಗೆ ನೀಡುತ್ತಾರೆ.

8ನೇ ಪುಟ ನೋಡಿ

**ಒಳನೋಟ**
ಫಲಾನುಭವಿಗಳ ಪರದಾಟ
ಪ್ರತಿಕ್ರಿಯಿಸಿ: 9606038256
feedback@prajavani.co.in

**ಸಾಲ ಮಾಡಿ ಎರಡನೇ ಮಗಳ ಮದುವೆ ಮಾಡಿದ್ದೇವೆ. ಸಹಾಯಧನ ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸಿ ಆರು ತಿಂಗಳು ಕಳೆದರೂ ದೊರೆತಿಲ್ಲ. ನಮಗೆ ಒಮ್ಮೆಯೂ ಆಹಾರ ಮತ್ತಿತರ ಕಿಟ್ ನೀಡಿಲ್ಲ.**
**ಹನುಮವ್ವ,** ಕಟ್ಟಡ ನಿರ್ಮಾಣ ಕಾರ್ಮಿಕರು, ದಾವಣಗೆರೆ

ಸಾಂದರ್ಭಿಕ ಚಿತ್ರ



ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕ ಮಂಡಳಿಯಲ್ಲಿ ಮನೆ ಕಟ್ಟಿಕೊಡುವ ಯೋಜನೆ ಇಲ್ಲ. ಕಾರ್ಮಿಕರು ಮನೆ ಕಟ್ಟಿಕೊಳ್ಳುತ್ತಿದ್ದರೆ ₹2 ಲಕ್ಷ ಸಾಲ ನೀಡಲಾಗುತ್ತಿದೆ. ಒಂದು ವೇಳೆ ಕಾರ್ಮಿಕ ಕೊಳಚೆ ಪ್ರದೇಶ ಅಭಿವೃದ್ಧಿ ಮಂಡಳಿಯ ವಸತಿ ಯೋಜನೆ ಫಲಾನುಭವಿ ಆಗಿದ್ದರೆ ಕಾರ್ಮಿಕರ ಪಾಲಿನ ಸಾಲದ ಮೊತ್ತವನ್ನಷ್ಟೇ ಆ ಮಂಡಳಿಗೆ ವರ್ಗಾವಣೆ ಮಾಡಲಾಗುತ್ತಿದೆ. ಹೀಗಾಗಿ ಕಾರ್ಮಿಕರಿಗೆ ಅನ್ಯಾಯ ಆಗುತ್ತಿದೆ ಎಂಬುದು ಸುಳ್ಳು ಆರೋಪ.
**ಶಿವರಾಮ ಹೆಬ್ಬಾರ್,** ಕಾರ್ಮಿಕ ಸಚಿವ

### 'ಸಾವಿನ ಪರಿಹಾರಕ್ಕೂ ಲಂಚ ನೀಡಬೇಕು'

'ಕಾರ್ಮಿಕರಿಗೆ ಒಟ್ಟು 19 ಬಗೆಯ ಸೌಲಭ್ಯಗಳಿವೆ. ಪಿಂಚಣಿ, ಕುಟುಂಬ ಪಿಂಚಣಿ, ವೈದ್ಯಕೀಯ ಸಹಾಯ ಧನ, ಅಪಘಾತ ಪರಿಹಾರ, ಬಸ್ ಪಾಸ್, ಹೆರಿಗೆ ಸೌಲಭ್ಯ ನೀಡಲಾಗುತ್ತದೆ. ಇಬ್ಬರು ಮಕ್ಕಳಿಗೆ ಕೆ.ಜಿ. ಯಿಂದ ಪಿ.ಜಿ ಮತ್ತು ಪಿಎಚ್‌.ಡಿ ವರೆಗಿನ ವಿದ್ಯಾಭ್ಯಾಸಕ್ಕೆ ವಾರ್ಷಿಕ ₹5,000ದಿಂದ ₹ 75,000 ವಿದ್ಯಾರ್ಥಿವೇತನ ನೀಡಲಾಗುತ್ತದೆ. ಕಾರ್ಮಿಕರು ಸಹಜ ಸಾವಿಗೆ ಈಡಾದರೂ ಅಂತ್ಯಕ್ರಿಯೆಗೆ ₹ 4,000 ಸೇರಿ ಅವಲಂಬಿತರಿಗೆ ₹ 75,000 ಪರಿಹಾರ ನೀಡಲಾಗುತ್ತದೆ. ಈ ಸೌಲಭ್ಯ ಕೊಡಿಸಲೂ ಲಂಚ ಪಡೆಯುವ ಏಜೆಂಟರು ಇದ್ದಾರೆ. ಇಂಥವರಿಗೆ 'ಪಾಲು' ಪಡೆಯುವ ಇಲಾಖೆಯ ಅಧಿಕಾರಿಗಳು ಬೆಂಬಲವಾಗಿ ನಿಂತಿದ್ದಾರೆ ಎಂದು ಕಾರ್ಮಿಕ ಮುಖಂಡ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಕೆ.ಮಹಾಂತೇಶ ದೂರುತ್ತಾರೆ.

ಇನ್ನಷ್ಟು ಸುದ್ದಿಗಳು 8

# ರೈತರ ಮನೆ, ಆಸ್ತಿ ಜಪ್ತಿ ನಿಷೇಧಕ್ಕೆ ಕ್ರಮ: ಸಿ.ಎಂ

ಪ್ರಜಾವಾಣಿ ವಾರ್ತೆ

**ಸಿರಿಗೆರೆ (ಚಿತ್ರದುರ್ಗ):** 'ರೈತ ವಿರೋಧಿ ಕಾಯ್ದೆಗಳಿಗೆ ತಿದ್ದುಪಡಿ ತರುವ ಮೂಲಕ ಸಾಲ ತೀರಿಸಲು ಅವಕಾಶ ನೀಡಲಾಗುವುದು. ಸಾಲ ವಸೂಲಿಗೆ ರೈತರ ಮನೆ, ಆಸ್ತಿ ಜಪ್ತಿ ಮಾಡುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಶ್ವಾಸನೆ ನೀಡಿದರು.

ಚಿತ್ರದುರ್ಗ ತಾಲ್ಲೂಕಿನ ಸಿರಿಗೆರೆಯ ತರಳಬಾಳು ಮಠದಲ್ಲಿ ಶನಿವಾರ ನಡೆದ ಲಿಂಗೈಕ್ಯ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಅವರ 30ನೇ ಶ್ರದ್ಧಾಂಜಲಿ ಸಮಾರಂಭದಲ್ಲಿ ಅವರು ಮಾತನಾಡಿದರು.

'ರಾಜ್ಯದಲ್ಲಿ ಅತಿವೃಷ್ಟಿಯಿಂದ ಬೆಳೆನಷ್ಟವಾಗಿದ್ದು, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇಂತಹ ಸಂದರ್ಭದಲ್ಲಿ ಹಣಕಾಸು ಸಂಸ್ಥೆ, ಬ್ಯಾಂಕುಗಳು ಸಾಲ ವಸೂಲಿಗೆ ಮುಂದಾಗಿರುವುದು ಗಮನಕ್ಕೆ ಬಂದಿದೆ. ರೈತರ ಆಸ್ತಿ ಜಪ್ತಿಗೆ ನೋಟಿಸ್ ನೀಡುವ ಕಾರ್ಯಕ್ಕೆ ಅಂತ್ಯ ಹಾಡಲಾಗುವುದು' ಎಂದರು.

'ರೈತರು ನೆಮ್ಮದಿಯಿಂದ ಇದ್ದಾಗ ಮಾತ್ರ ಸಮಾಜ ಸುಸ್ಥಿತಿಯಲ್ಲಿರಲು ಸಾಧ್ಯ. ಆಸ್ತಿ ಜಪ್ತಿ ಆಗುತ್ತದೆ ಎಂಬ ಆತಂಕ ಇನ್ನು ಮುಂದೆ ರೈತರನ್ನು ಕಾಡುವುದಿಲ್ಲ. ಸರ್ಕಾರ ರೈತಪರವಾಗಿದ್ದು, ಎದೆಗುಂದುವ ಅಗತ್ಯವಿಲ್ಲ' ಎಂದು ಶಾಸಕ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಇದಕ್ಕೂ ಮುನ್ನ ವಿಷಯ ಪ್ರಸ್ತಾಪಿಸಿದ ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಎಚ್‌.ಆರ್‌.ಬಸವರಾಜಪ್ಪ, 'ರೈತರಿಗೆ ಸರ್ಕಾರ ನೀಡುವ ಸಹಾಯಧನವನ್ನು ಬ್ಯಾಂಕ್‌ ಗಳು ಸಾಲಕ್ಕೆ ಜಮಾ ಮಾಡಿಕೊಳ್ಳುತ್ತಿವೆ. ಫೈನಾನ್ಸ್‌ಗಳು ದುಬಾರಿ ಬಡ್ಡಿ ವಸೂಲಿ ಮಾಡುತ್ತಿವೆ. ಹಣಕಾಸು ಸಂಸ್ಥೆಗಳು ಸಾಲ ವಸೂಲಿಗೆ ಕಿರುಕುಳ ನೀಡುತ್ತಿವೆ. ಸರ್ಕಾರ ಈ ಕಿರುಕುಳವನ್ನು ತಪ್ಪಿಸಬೇಕು' ಎಂದು ಮನವಿ ಮಾಡಿದರು.

**ರೈತರ ಜಮೀನು ಆನ್‌ಲೈನ್ ಮೂಲಕವೇ ಹರಾಜು ಆಗುತ್ತಿವೆ. ಇದು ರೈತರ ಗಮನಕ್ಕೆ ಬರುತ್ತಿಲ್ಲ. ಇದಕ್ಕೆ ಕಡಿವಾಣ ಹಾಕಲು ಸರ್ಕಾರ ಕಾನೂನು ರೂಪಿಸಬೇಕು.**
**ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ,** ತರಳಬಾಳು ಮಠ, ಸಿರಿಗೆರೆ

ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಎಂಬಿಬಿಎಸ್ ಸೀಟ್

# ಶೇಕಡ 10ರಷ್ಟು ಶುಲ್ಕ ಹೆಚ್ಚಳ

**ಬೆಂಗಳೂರು:** ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ವೈದ್ಯಕೀಯ ಕೋರ್ಸ್ (ಎಂಬಿಬಿಎಸ್) ಶುಲ್ಕವನ್ನು ಶೇ 10ರಷ್ಟು ಹೆಚ್ಚಿಸಲು ರಾಜ್ಯ ಸರ್ಕಾರ ಒಪ್ಪಿಗೆ ನೀಡಿದೆ. ಹೀಗಾಗಿ, ಎಂಬಿಬಿಎಸ್ ಪದವಿ ಪ್ರವೇಶ ವಿದ್ಯಾರ್ಥಿಗಳಿಗೆ ದುಬಾರಿ ಆಗಲಿದೆ.

'ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಅವರು ಖಾಸಗಿ ವೈದ್ಯಕೀಯ ಕಾಲೇಜುಗಳ ಆಡಳಿತ ಮಂಡಳಿಗಳ ಪ್ರತಿನಿಧಿಗಳ ಜೊತೆ ಶುಕ್ರವಾರ ನಡೆಸಿದ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ' ಎಂದು ವೈದ್ಯಕೀಯ ಶಿಕ್ಷಣ ಇಲಾಖೆಯ ಮೂಲಗಳು ತಿಳಿಸಿವೆ.

ಶೇ 10ರಷ್ಟು ಶುಲ್ಕ ಹೆಚ್ಚಳದಿಂದಾಗಿ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಸರ್ಕಾರಿ ಕೋಟಾದಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಈ ವರ್ಷ ಹೆಚ್ಚುವರಿಯಾಗಿ ₹12,884 ಪಾವತಿಸಬೇಕಾಗಿದೆ. ಇದರಿಂದಾಗಿ, ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಸರ್ಕಾರಿ ಕೋಟಾದಡಿ ಎಂಬಿಬಿಎಸ್ ಕೋರ್ಸ್‌ಗೆ ಪ್ರತಿವರ್ಷ ₹ 1,41,630 ಶುಲ್ಕ ಕಟ್ಟಬೇಕಿದೆ. ಸದ್ಯ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಸರ್ಕಾರಿ ಕೋಟಾದಡಿ ಎಂಬಿಬಿಎಸ್ ಕೋರ್ಸ್‌ಗೆ ₹ 1,28,746 ಶುಲ್ಕವಿದೆ.

**ಸದ್ಯ ವೈದ್ಯಕೀಯ ಕೋರ್ಸ್ ಶುಲ್ಕ**
(₹ಗಳಲ್ಲಿ)

| | |
|---|---|
| ಖಾಸಗಿ ವೈದ್ಯಕೀಯ ಕಾಲೇಜಿನಲ್ಲಿ ಸರ್ಕಾರಿ ಕೋಟಾ (ಎಂಬಿಬಿಎಸ್) | 1,28,746 |
| ಖಾಸಗಿ ವೈದ್ಯಕೀಯ ಕಾಲೇಜಿನಲ್ಲಿ ಖಾಸಗಿ ಕೋಟಾ (ಎಂಬಿಬಿಎಸ್) | 9,81,956 |
| ಖಾಸಗಿ ವೈದ್ಯಕೀಯ ಕಾಲೇಜಿನಲ್ಲಿ ಸರ್ಕಾರಿ ಕೋಟಾ (ದಂತ ವೈದ್ಯಕೀಯ) | 83,356 |
| ಖಾಸಗಿ ವೈದ್ಯಕೀಯ ಕಾಲೇಜಿನಲ್ಲಿ ಖಾಸಗಿ ಕೋಟಾ (ದಂತ ವೈದ್ಯಕೀಯ) | 6,66,023 |

5Aನೇ ಪುಟ ನೋಡಿ

**ಚಿನಕುರಳಿ**
ಪ್ರಕಾಶ್ ಶೆಟ್ಟಿ

ಪಿಎಫ್‌ಐ ಚಟುವಟಿಕೆ ಕುರಿತು ನ್ಯಾಯಾಲಯಕ್ಕೆ ವರದಿ ಸಲ್ಲಿಸಿದ ಎನ್‌ಐಎ

# 'ನಿರ್ದಿಷ್ಟ ಸಮುದಾಯದ ಮುಖಂಡರು ಗುರಿ'

**ಕೊಚ್ಚಿ (ಪಿಟಿಐ):** ನಿರ್ದಿಷ್ಟ ಸಮುದಾಯದ ಪ್ರಮುಖ ಮುಖಂಡರನ್ನು ಗುರಿ ಮಾಡಲು ಕುಮ್ಮಕ್ಕು ನೀಡುವಂತಹ ಸಾಹಿತ್ಯವು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಕಚೇರಿಗಳಲ್ಲಿ ಶೋಧ ನಡೆಸಿದ ವೇಳೆ ಸಿಕ್ಕಿದೆ ಎಂದು ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಹೇಳಿದೆ.

ಕೇರಳದಲ್ಲಿ ಬಂಧಿಸಲಾದ 10 ಜನರನ್ನು ಕಸ್ಟಡಿಗೆ ಕೇಳುವುದಕ್ಕಾಗಿ ರಿಮಾಂಡ್ ವರದಿಯನ್ನು ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಲಷ್ಕರ್ ಎ ತಯಬಾ ಮತ್ತು ಇಸ್ಲಾಮಿಕ್ ಸ್ಟೇಟ್‌ನಂತಹ ಭಯೋತ್ಪಾದಕ ಸಂಘಟನೆಯನ್ನು ಸೇರುವಂತೆ ಯುವಜನರಿಗೆ ಪಿಎಫ್‌ಐ ಕುಮ್ಮಕ್ಕು ನೀಡಿದೆ ಎಂದೂ ಈ ವರದಿಯಲ್ಲಿ ಹೇಳಲಾಗಿದೆ.

ಹಿಂಸಾತ್ಮಕ ಜಿಹಾದ್‌ನ ಭಾಗವಾಗಿ ಭಯೋತ್ಪಾದನಾ ಕೃತ್ಯಗಳನ್ನು ಎಸಗುವ ಮೂಲಕ ದೇಶದಲ್ಲಿ ಇಸ್ಲಾಂ ಆಳ್ವಿಕೆ ಜಾರಿಗೆ ತರಲು ಪಿಎಫ್‌ಐ ಸಂಚು ರೂಪಿಸಿದೆ. ಸರ್ಕಾರದ ನೀತಿಗಳನ್ನು ತಪ್ಪಾಗಿ ವ್ಯಾಖ್ಯಾನಿಸಿ ನಿರ್ದಿಷ್ಟ ವರ್ಗವೊಂದರ ಜನರಲ್ಲಿ ಭಾರತದ ಬಗ್ಗೆ ಅಸಹನೆ ಮೂಡುವಂತೆ ಮಾಡಲಾಗಿದೆ. ದೇಶ ಮತ್ತು ಅದರ ಸಂಸ್ಥೆಗಳ ಮೇಲೆ ದ್ವೇಷ ಹುಟ್ಟುವಂತೆಯೂ ಮಾಡಲಾಗಿದೆ ಎಂದು ಎನ್‌ಐಎ ಆರೋಪಿಸಿದೆ.

ಇತರ ಧರ್ಮಗಳ ಜನರನ್ನು ಭಯಪಡಿಸಲು, ಎಫ್‌ಐಆರ್‌ನಲ್ಲಿ ಹೆಸರಿಸಲಾಗಿರುವ ವ್ಯಕ್ತಿಗಳು ಸಂಘಟಿತ ಅಪರಾಧ ಕೃತ್ಯಗಳು, ಕಾನೂನುಬಾಹಿರ ಚಟುವಟಿಕೆಗಳಲ್ಲಿ ಪದೇಪದೇ ಭಾಗಿಯಾಗಿದ್ದಾರೆ. ಪಿಎಫ್‌ಐ ಗುರಿಯಾಗಿಸಲು ಬಯಸಿರುವ ವ್ಯಕ್ತಿಗಳ ಪಟ್ಟಿಯನ್ನು ನೋಡಿದರೆ, ಸಮುದಾಯದಲ್ಲಿ ಅಶಾಂತಿ ಮೂಡಿಸುವಲ್ಲಿ ಈ ಸಂಘಟನೆಯು ಬಹಳ ಮುಂದಕ್ಕೆ ಹೋಗಿದೆ ಎಂಬುದು ತಿಳಿಯುತ್ತದೆ ಎಂದೂ ವರದಿಯಲ್ಲಿ ಆಪಾದಿಸಲಾಗಿದೆ.

### ಪ್ರತಿಭಟನೆಯಲ್ಲಿ ಪಾಕ್ ಪರ ಘೋಷಣೆ?

ಪಿಎಫ್‌ಐ ಕಾರ್ಯಕರ್ತರು ಪುಣೆಯಲ್ಲಿ ಶುಕ್ರವಾರ ನಡೆಸಿದ ಪ್ರತಿಭಟನೆ ವೇಳೆ ಗುಂಪೊಂದು 'ಪಾಕಿಸ್ತಾನ ಜಿಂದಾಬಾದ್' ಎಂಬ ಘೋಷಣೆ ಕೂಗಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಪ್ರತಿಭಟನಕಾರರನ್ನು ವಶಕ್ಕೆ ಪಡೆದು ಪೊಲೀಸ್ ವಾಹನದಲ್ಲಿ ಕೂರಿಸುವ ಹೊತ್ತಿನಲ್ಲಿ ಈ ಘೋಷಣೆ ಕೂಗಲಾಗಿದೆ ಎಂದು ಆರೋಪಿಸಲಾಗಿದೆ.

MBBS
Ministry Of Health Of Russia
SMOLENSK STATE MEDICAL UNIVERSITY, RUSSIA
Invites Indian students for direct Government Admissions
Recognized by India, WHO, USA & UK, Min. Qual. 50% in XII in PCB
Satisfies all requirements of NMC of India
**UNIVERSITY** - Founded in 1920, 102 years old, Smolensk is 380 km west of Moscow, Very high standards of education, strict disciplinary system. **1650** Indian students (**650** Girls) studying, **183** got degree in **2022,** English Medium in all years, Closed type campus system, **8** attached hospitals (**6000** Beds).
**MCI SCREENING TEST** – Our graduates of **2008** to **2021** have given **BEST** results among graduates of all foreign medical colleges (Official web sites of Indian Embassy, Moscow and NBE conducting Screening Test confirm this).
**SPECIAL HOSTELS ONLY FOR INDIAN STUDENTS WITH INDIAN MESS**
**Fee** (Tuition+Hostel+Med.Ins.) – **USD 6000** (Approx. Rs. 4,80,000/-) per year and one time payment of Rs.1,50,000/- (By Bank Draft only) which includes – Admission procedure, invitation letter, student visa, air ticket Delhi - Moscow.
**Scholarship to all Indian students.**
Bank loans from Indian banks are available.
Contact Foreign advisor to Chancellor: Dr.Alok Aeron+79605805555(Russia)
**Official web site: www.sgmu.info**
**DM us on insta: @sgmu.info**
**Admission details: admission.sgmu.live**
INFORMATION CENTERS (Parents of Students or Our Graduates):
**Bangalore & Manglore:** Mrs. Sudha Kamath - 9740622038
**Hubli-Dharwad & Belgavi:** Dr. Suchita Halli - 9916187559
**Gulbarga & Yadgir:** Mr. Chowdhry – 9886813741

## ಸಹಾಯ ಕೇಳುವ ನೆಪದಲ್ಲಿ ದರೋಡೆ

**ಕುಣಿಗಲ್:** ತಾಲ್ಲೂಕಿನ ಗವಿಮಠದ ಸೇತುವೆ ಬಳಿ ಶನಿವಾರ ಮುಂಜಾನೆ ಕಾರಿನಲ್ಲಿ ತೆರಳುತ್ತಿದ್ದ ವ್ಯಕ್ತಿಯನ್ನು ಅಡ್ಡಗಟ್ಟಿದ ತೃತೀಯಲಿಂಗಿಗಳು ಸಹಾಯ ಕೇಳುವ ನೆಪದಲ್ಲಿ ದರೋಡೆ ಮಾಡಿದ್ದಾರೆ.

ಬೆಂಗಳೂರಿನ ನಿವಾಸಿ ಗಣೇಶ್ ನಾಗಮಂಗಲ ತಾಲ್ಲೂಕು ದೊಡ್ಡಬಾಲದಿಂದ ಕಾರಿನಲ್ಲಿ ಬೆಂಗಳೂರಿಗೆ ಹಿಂತಿರುಗುವಾಗ ಖಾರಪುಡಿ ಎರಚಿ ಹಲ್ಲೆ ನಡೆಸಿದ್ದಾರೆ. ಗಣೇಶ್ ಅವರು ಕುಣಿಗಲ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಶಿವಾನಂದ ವೃತ್ತದ ಮೇಲ್ಸೇತುವೆಯ ಒಂದು ಭಾಗದಲ್ಲಿ ಸಂಚಾರ ಬಂದ್ ಮಾಡಿರುವುದು –ಪ್ರಜಾವಾಣಿ ಚಿತ್ರ

# ಉಕ್ಕಿನ ಮೇಲ್ಸೇತುವೆ: ಶೀಘ್ರ ಸಂಚಾರಕ್ಕೆ ಮುಕ್ತ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಶಿವಾನಂದ ವೃತ್ತದ ಉಕ್ಕಿನ ಮೇಲ್ಸೇತುವೆಯ ಮತ್ತೊಂದು ಭಾಗದಲ್ಲೂ ವಾಹನಗಳ ಸಂಚಾರಕ್ಕೆ ಶೀಘ್ರವೇ ಅನುವು ಮಾಡಿಕೊಡಲಾಗುವುದು ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

493 ಮೀಟರ್ ಉದ್ದದ ಮೇಲ್ಸೇತುವೆ ಆಗಸ್ಟ್‌ನಲ್ಲಿ ಉದ್ಘಾಟನೆಗೊಂಡಿದ್ದು, ರಸ್ತೆಯಲ್ಲಿ ಉಬ್ಬುಗಳಿವೆ ಎಂಬ ಕಾರಣಕ್ಕೆ ಒಂದು ಭಾಗದಲ್ಲಿ ವಾಹನ ಸಂಚಾರ ಬಂದ್ ಮಾಡಲಾಯಿತು. ರೇಸ್‌ಕೋರ್ಸ್ ರಸ್ತೆ ಕಡೆಯಿಂದ ವಾಹನಗಳು ಈಗ ಸರ್ವೀಸ್ ರಸ್ತೆಯಲ್ಲೇ ಸಾಗುತ್ತಿವೆ.

ವಾಹನ ಸಂಚಾರಕ್ಕೆ ಮೇಲ್ಸೇತುವೆ ಯೋಗ್ಯವಾಗಿದೆಯೆ ಎಂಬುದರ ಬಗ್ಗೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಿಂದ(ಐಐಎಸ್‌ಸಿ) ಬಿಬಿಎಂಪಿ ಅಭಿಪ್ರಾಯ ಕೇಳಿತ್ತು. 'ವರದಿ ಇನ್ನೂ ಬಂದಿಲ್ಲ. ಆದರೆ, ಸೇತುವೆ ರಚನೆಯಲ್ಲಿ ಯಾವುದೇ ದೋಷ ಇಲ್ಲ ಎಂಬ ಅಭಿಪ್ರಾಯ ಇದೆ. ಆದ್ದರಿಂದ ಶೀಘ್ರವೇ ಮತ್ತೊಮ್ಮೆ ಡಾಂಬರ್ ಹಾಕಿ ವಾಹನ ಸಂಚಾರಕ್ಕೆ ಮುಕ್ತಗೊಳಿಸಲಾಗುವುದು' ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

# ಮ್ಯಾಜಿಸ್ಟ್ರೇಟ್–ಸೆಷನ್ಸ್ ಕೋರ್ಟ್‌ಗಳಿಗೆ ಹೈಕೋರ್ಟ್ ನಿರ್ದೇಶನ

**ಬೆಂಗಳೂರು:** 'ಮ್ಯಾಜಿಸ್ಟ್ರೇಟ್ ಮತ್ತು ಸೆಷನ್ಸ್ ಕೋರ್ಟ್ ನ್ಯಾಯಾಧೀಶರು ಅಪರಾಧ ದಂಡ ಸಂಹಿತೆಯ (ಸಿಆರ್‌ಪಿಸಿ) ಸೆಕ್ಷನ್ 357–ಎ ಹಿಂದಿನ ಉದ್ದೇಶವನ್ನು ಸೂಕ್ತ ರೀತಿಯಲ್ಲಿ ಅರ್ಥ ಮಾಡಿಕೊಳ್ಳುವ ಮೂಲಕ, ಸಂತ್ರಸ್ತರಿಗೆ ವಿಚಾರಣೆ ಮುಗಿದ ನಂತರ ಪರಿಹಾರ ನೀಡುವ ಬದಲಿಗೆ ಅಂತಿಮ ಆದೇಶ ನೀಡುವುದಕ್ಕೂ ಮುನ್ನವೇ ನೀಡಬೇಕು' ಎಂದು ಹೈಕೋರ್ಟ್ ಆದೇಶಿಸಿದೆ.

ಕೊಲೆ ಪ್ರಕರಣವೊಂದರಲ್ಲಿ ಆರೋಪಿಯನ್ನು ಖುಲಾಸೆಗೊಳಿಸಿರುವ ಕೋಲಾರದ ಪ್ರಧಾನ ಸೆಷನ್ಸ್ ಕೋರ್ಟ್ ಆದೇಶ ಪ್ರಶ್ನಿಸಿ ಡಿ.ರೆಡ್ಡಪ್ಪ ಎಂಬುವರು ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಕೆ.ಸೋಮಶೇಖರ್ ಮತ್ತು ಶಿವಶಂಕರ ಅಮರಣ್ಣವರ್ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಸಂತ್ರಸ್ತರಿಗೆ ಪರಿಹಾರಧನ ಸಿಗುತ್ತದೆ ಎಂಬ ಕಾರಣಕ್ಕೆ ಸುಳ್ಳು ಕ್ರಿಮಿನಲ್ ಕೇಸು ದಾಖಲಿಸಿ ಕಾನೂನು ದುರುಪಯೋಗ ಮಾಡಿಕೊಳ್ಳುವ ಪ್ರಕರಣಗಳೂ ನಡೆಯುತ್ತವೆ. ಆದ್ದರಿಂದ, ವಿಚಾರಣಾ ಕೋರ್ಟ್‌ಗಳು ಸೆಕ್ಷನ್ 357–ಎ ಅಡಿ ಪರಿಹಾರ ನೀಡುವಾಗ ಜಾಗರೂಕರಾಗಿರಬೇಕು' ಎಂದು ನ್ಯಾಯಪೀಠ ಎಚ್ಚರಿಸಿದೆ.

# ಪೌರಕಾರ್ಮಿಕರ ಆರೋಗ್ಯ ವಿಚಾರಿಸಿದ ಸಿ.ಎಂ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪೌರಕಾರ್ಮಿಕರಿಗೆ ಆತ್ಮವಿಶ್ವಾಸ ಮತ್ತು ಆತ್ಮಗೌರವ ತುಂಬಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಪೌರಕಾರ್ಮಿಕರ ದಿನಾಚರಣೆ ಅಂಗವಾಗಿ ಶುಕ್ರವಾರ ಪೌರಕಾರ್ಮಿಕರೊಂದಿಗೆ ಮುಖ್ಯಮಂತ್ರಿ ಉಪಾಹಾರ ಸೇವಿಸಿದ ನಂತರ ಮಾತನಾಡಿದರು.

ಪೌರಕಾರ್ಮಿಕರಿಗೆ ಸೇವಾ ಭದ್ರತೆ ಇರದಿದ್ದ ಕಾರಣ ಸಮಿತಿ ರಚಿಸಲಾಗಿತ್ತು. ಸಮಿತಿ ಶಿಫಾರಸಿನಂತೆ ಹಂತ ಹಂತವಾಗಿ ಸುಮಾರು 43 ಸಾವಿರ ಪೌರಕಾರ್ಮಿಕರನ್ನು ಕಾಯಂಗೊಳಿಸಲು ಆದೇಶಿಸಲಾಗಿತ್ತು. ಅದರಂತೆ 11,137 ಪೌರಕಾರ್ಮಿಕರ ಹುದ್ದೆ ಕಾಯಂ ಮಾಡಲಾಗಿದೆ. 2ನೇ ಹಾಗೂ 3ನೇ ಕಂತಿನಲ್ಲಿ ಪೂರ್ತಿ ಮಾಡಲಾಗುವುದು ಎಂದು ಹೇಳಿದರು.

ಮಾನವೀಯತೆಯ ನೆಲೆಯಲ್ಲಿ ಗೌರವ ನೀಡಿ ಕಾರ್ಯಕ್ರಮ ರೂಪಿಸಲಾಗುವುದು ಎಂದು ಹೇಳಿದರು.

ಪೌರಕಾರ್ಮಿಕರ ದಿನಾಚರಣೆ ಅಂಗವಾಗಿ ಪೌರಕಾರ್ಮಿಕರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಉಪಾಹಾರ ಬಡಿಸಿದರು

ಅದಕ್ಕೂ ಮೊದಲು ಪೌರಕಾರ್ಮಿಕರ ಕುಶಲೋಪರಿ ವಿಚಾರಿಸಿದ ಮುಖ್ಯಮಂತ್ರಿ ಅವರು, 'ನಿಮ್ಮ ಆರೋಗ್ಯ, ನಿಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಸರ್ಕಾರ ಕಾಳಜಿ ವಹಿಸಲಿದೆ' ಎಂದು ಭರವಸೆ ತುಂಬಿದರು.

ವೇತನ ಸರಿಯಾಗಿ ಆಗುತ್ತಿದೆಯೇ? ಕೆಲಸದ ಸ್ಥಳದಲ್ಲಿ ಸೂಕ್ತ ಸೌಲಭ್ಯಗಳು ದೊರೆಯುತ್ತಿವೆಯೇ? ಎಂಬ ಹಲವು ವಿಷಯಗಳ ಕುರಿತು ಪೌರಕಾರ್ಮಿಕರಾದ ಭಾರತಿ ಅವರಿಂದ ಮುಖ್ಯಮಂತ್ರಿ ಬೊಮ್ಮಾಯಿ ಮಾಹಿತಿ ಪಡೆದರು.

ಸಚಿವರಾದ ಗೋವಿಂದ ಕಾರಜೋಳ, ಸಿ.ಸಿ.ಪಾಟೀಲ, ಕೋಟ ಶ್ರೀನಿವಾಸ ಪೂಜಾರಿ, ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಶಿವಣ್ಣ ಉಪಸ್ಥಿತರಿದ್ದರು.



ನಗರದಲ್ಲಿ ಶನಿವಾರ ನಡೆದ ಎಸ್‌ಆರ್‌ ಫೌಂಡೇಷನ್ ಡೇ ಹಾಗೂ ಸ್ವಾತಂತ್ರ್ಯದ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಡಾ. ಆರ್‌ ಇಂದಿರಾ ಅವರ 'ಸಾಮಾನ್ಯ ಜ್ಞಾನ' ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಇಂದಿರಾ ಕೃಷ್ಣಪ್ಪ, ಸುಶೀಲಮ್ಮ, ಡಾ.ಟಿ.ಎಚ್‌ ಅಂಜನಪ್ಪ ಹಾಗೂ ಅರವಿಂದ ಜತ್ತಿ ಇದ್ದಾರೆ –ಪ್ರಜಾವಾಣಿ ಚಿತ್ರ

# 'ಬಸವಣ್ಣನ ಹೆಸರಲ್ಲಿ ರಾಜಕೀಯ ಸಲ್ಲ'

**ಬೆಂಗಳೂರು:** 'ಶರಣರ ವಚನಗಳನ್ನು ಧಾರ್ಮಿಕ ಸಾಹಿತ್ಯದ ನೆಲೆಗಟ್ಟಿನಲ್ಲಿ ಕಾಣುವುದು ಸರಿಯಲ್ಲ ಮತ್ತು ಬಸವಣ್ಣನ ಹೆಸರಿನಲ್ಲಿ ರಾಜಕೀಯ ಸಲ್ಲದು' ಎಂದು ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ ಅಭಿಪ್ರಾಯಪಟ್ಟರು.

ನಗರದಲ್ಲಿ ಶನಿವಾರ ನಡೆದ ಎಸ್.ಆರ್.ಫೌಂಡೇಷನ್ ಡೇ ಹಾಗೂ ಸ್ವಾತಂತ್ರ್ಯದ ಅಮೃತ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, 'ವಚನಗಳು ಯುವಜನತೆಯ ಸಾಕ್ಷಿಪ್ರಜ್ಞೆ ಇದ್ದಂತೆ' ಎಂದರು. ಮಹಾತ್ಮ ಗಾಂಧಿ ಅವರ 'ಮೈ ಲೈಫ್ ಈಸ್ ಮೈ ಮೆಸೇಜ್' ಕೃತಿಯನ್ನು ಉದಾಹರಿಸಿ, 'ಬದುಕಿನ ದರ್ಶನ ಇರುವುದೇ ಮಾನವೀಯತೆಯ ಆಧಾರದ ಮೇಲೆ. ಇಂತಹ ಅಮೂಲ್ಯ ತತ್ವಗಳನ್ನು ಶರಣರ ವಚನಗಳು ನೀಡಿವೆ' ಎಂದರು.

'ಪ್ರಧಾನಿ ಮೋದಿಯವರೂ ಬಸವಣ್ಣನ ವಿಚಾರಧಾರೆಗಳ ಬಗ್ಗೆ ಅತೀವ ಆಕರ್ಷಣೆ ಹೊಂದಿದ್ದಾರೆ. ಬಸವಣ್ಣನ ತತ್ವ ಎಂದೆಂದಿಗೂ ಪ್ರಸ್ತುತ. 12ನೇ ಶತಮಾನದ ಶರಣರ ಹೋರಾಟ, ಚಳವಳಿಗಳು, ಜೀವತತ್ವದ ಸಾಹಿತ್ಯ ಈಗಲೂ ಯುವ ಜನತೆಗೆ ಬೆಳಕಿನ ಹಾದಿಯಾಗಿವೆ' ಎಂದರು.

ಶಸ್ತ್ರಚಿಕಿತ್ಸಾ ತಜ್ಞ ಡಾ.ಟಿ.ಎಚ್. ಅಂಜನಪ್ಪ ಅವರು ಮಾತನಾಡಿ, 'ಯುವಜನತೆ ತಪ್ಪು, ಒಪ್ಪುಗಳ ವಿವೇಚನೆ ಮಾಡಿ ಬದುಕು ನಡೆಸಬೇಕು. ಮೌಢ್ಯಗಳ ವಿಚಾರದಲ್ಲಿ ಪ್ರಾಣಕ್ಕೇ ಕುತ್ತು ತಂದುಕೊಳ್ಳುವ ಸಂದರ್ಭಗಳಿವೆ. ಆದ್ದರಿಂದ, ಜೀವನದಲ್ಲಿ ವೈಜ್ಞಾನಿಕ ದೃಷ್ಟಿಕೋನ ಅಳವಡಿಸಿಕೊಳ್ಳಬೇಕು. ಶರೀರದ ಅಂಗಗಳ ಪ್ರಾಮುಖ್ಯವನ್ನೂ ಅರಿಯಬೇಕು. ಬದುಕಿನ ಬಗ್ಗೆ ಸ್ಪಷ್ಟತೆ ಇರಿಸಿಕೊಂಡು ಅರಿವಿನ ಹಾದಿಯಲ್ಲಿ ನಡೆಯಬೇಕು' ಎಂದರು.

# ಮ್ಯಾನ್ಮಾರ್: ನಕಲಿ ಐಟಿ ಉದ್ಯೋಗ ಜಾಲ– ಕೇಂದ್ರ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಥಾಯ್ಲೆಂಡ್‌ನಲ್ಲಿ ಉದ್ಯೋಗ ನೀಡುವುದಾಗಿ ಹೇಳಿ ವಂಚಿಸುತ್ತಿರುವ ನಕಲಿ ಕಂಪನಿಗಳ ಬಗ್ಗೆ ಎಚ್ಚರದಿಂದ ಇರಬೇಕು ಎಂದು ಕೇಂದ್ರ ಸರ್ಕಾರವು ದೇಶದ ಮಾಹಿತಿ ತಂತ್ರಜ್ಞಾನ (ಐಟಿ) ವೃತ್ತಿಪರರಿಗೆ ಶನಿವಾರ ಸಲಹೆ ನೀಡಿದೆ.

ಉದ್ಯೋಗದ ಆಮಿಷವೊಡ್ಡಿ, ಭಾರತೀಯರಿಗೆ ವಂಚಿಸುತ್ತಿದ್ದ ನಕಲಿ ಐಟಿ ಕಂಪನಿಗಳ ಜಾಲದ ಬಗ್ಗೆ ಬ್ಯಾಂಕಾಕ್ ಹಾಗೂ ಯಾಂಗೂನ್ ನಲ್ಲಿರುವ ಭಾರತದ ರಾಯಭಾರ ಕಚೇರಿಗಳು ಮಾಹಿತಿ ನೀಡಿದ ಬೆನ್ನಲ್ಲೇ, ವಿದೇಶಾಂಗ ಸಚಿವಾಲಯ ಈ ಸಲಹೆ ನೀಡಿದೆ.

ಭಾರತದ ಹಲವು ಯುವಕರನ್ನು ಬಂಧನದಲ್ಲಿರಿಸಿ, ಮ್ಯಾನ್ಮಾರ್‌ನಲ್ಲಿ ಬಲವಂತವಾಗಿ ಸೈಬರ್ ಅಪರಾಧ ಕೃತ್ಯಗಳನ್ನು ಮಾಡಿಸಲಾಗುತ್ತಿದೆ ಎಂಬ ಮಾಹಿತಿಯ ಹಿನ್ನೆಲೆಯಲ್ಲಿ ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಈ ಸಲಹೆ ನೀಡಿದೆ.

ಥಾಯ್ಲೆಂಡ್‌ನ ನಕಲಿ ಕಂಪನಿಗಳು ಭಾರತದ ಐಟಿ ವೃತ್ತಿಪರರನ್ನು ಡಿಜಿಟಲ್ ಸೇಲ್ಸ್ ಮತ್ತು ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ಸ್ ಹುದ್ದೆಗಳಿಗೆ ನೇಮಕ ಮಾಡಿಕೊಂಡು, ಬಳಿಕ ಅವರನ್ನು ಕಾಡುಗಳ ಮೂಲಕ ಅಕ್ರಮವಾಗಿ ಮ್ಯಾನ್ಮಾರ್‌ಗೆ ಕರೆದುಕೊಂಡು ಹೋಗುತ್ತಿದ್ದವು. ನಂತರ ಆಗ್ನೇಯ ಮ್ಯಾನ್ಮಾರ್ ಮ್ಯಾವಾಡ್ಡಿ ಎನ್ನುವ ಪ್ರದೇಶದಲ್ಲಿ ಅವರ ಮೂಲಕ ಸೈಬರ್ ಅಪರಾಧ ಕೃತ್ಯಗಳನ್ನು ಮಾಡಿಸಲಾಗುತ್ತಿದೆ ಎನ್ನುವ ಕುರಿತು ಸಚಿವಾಲಯಕ್ಕೆ ವರದಿಗಳು ಬಂದಿವೆ ಎಂದು ಮೂಲಗಳು ತಿಳಿಸಿವೆ.

ಮ್ಯಾವಾಡ್ಡಿ ಸಿಲುಕಿರುವ ಭಾರತೀಯ ಐಟಿ ವೃತ್ತಿಪರರ ಸಂಖ್ಯೆ ಇನ್ನೂ ನಿಖರವಾಗಿ ಖಚಿತಪಡಿಸಲಾಗಿಲ್ಲ. ಅವರಲ್ಲಿ ಕನಿಷ್ಠ 32 ಮಂದಿಯನ್ನು ರಕ್ಷಿಸಲು ಭಾರತ ವ್ಯವಸ್ಥೆ ಮಾಡಿದೆ. ಅಂತೆಯೇ ಯಾಂಗೂನ್‌ನಲ್ಲಿ ಭಾರತೀಯ ರಾಯಭಾರ ಕಚೇರಿಯು 50 ಮಂದಿಯೊಂದಿಗೆ ಸಂಪರ್ಕದಲ್ಲಿದೆ ಎಂದು ಇವೇ ಮೂಲಗಳು ಹೇಳಿವೆ.



## ರಾಹುಲ್ ಗಾಂಧಿ ಆಪ್ತರಿಂದ ಸಭೆ

ಬೆಂಗಳೂರು: 'ಭಾರತ್ ಜೋಡೊ' ಯಾತ್ರೆ ಕುರಿತು ಸದಾಶಿವನಗರದಲ್ಲಿರುವ ಸಂಸದ ಡಿ.ಕೆ.ಸುರೇಶ್ ನಿವಾಸದಲ್ಲಿ ಶನಿವಾರ ಸಭೆ ನಡೆಯಿತು. ಈ ಕೊನೆ ಹಂತದ ಸಿದ್ಧತಾ ಸಭೆಯಲ್ಲಿ ರಾಹುಲ್ ಗಾಂಧಿ ಅವರ ಆಪ್ತ ತಂಡ ಭಾಗವಹಿಸಿತ್ತು. ಯಾತ್ರೆಯ ಯಶಸ್ವಿಗಾಗಿ ರಚಿಸಿರುವ ವಿವಿಧ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರು ಸಭೆಯಲ್ಲಿದ್ದರು. 'ಯಾತ್ರೆಯನ್ನು ಕರ್ನಾಟಕದಲ್ಲಿ ಯಶಸ್ವಿಗೊಳಿಸುವ ಜವಾಬ್ದಾರಿ ರಾಜ್ಯ ಕಾಂಗ್ರೆಸ್ ನಾಯಕರ ಮೇಲಿದೆ. ಕೆಪಿಸಿಸಿ ಅಧ್ಯಕ್ಷರು ಪ್ರತಿ ಹಂತದಲ್ಲಿಯೂ ಕಾರ್ಯಕ್ರಮದ ಯಶಸ್ವಿಗಾಗಿ ಕಾರ್ಯತಂತ್ರ ರೂಪಿಸುತ್ತಿದ್ದಾರೆ ಎಂದು ತಂಡ ಮೆಚ್ಚುಗೆ ವ್ಯಕ್ತಪಡಿಸಿದೆ' ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಯಾತ್ರೆಯ ರಾಷ್ಟ್ರೀಯ ಸಂಯೋಜಕ ಕೆ.ಬಿ.ಬೈಜು, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಸಲೀಂ ಅಹ್ಮದ್, ರಾಮಲಿಂಗಾರೆಡ್ಡಿ, ರಾಜ್ಯಸಭೆ ಸದಸ್ಯ ಜಿ.ಸಿ. ಚಂದ್ರಶೇಖರ್, ಶಾಸಕರಾದ ಕೆ.ಜೆ. ಜಾರ್ಜ್, ದಿನೇಶ್ ಗುಂಡೂರಾವ್, ಪ್ರಿಯಾಂಕ್ ಖರ್ಗೆ, ಮುಖಂಡರಾದ ಚಲುವರಾಯಸ್ವಾಮಿ, ಎಸ್.ಸಿ. ಮಹದೇವಪ್ಪ, ವಿಧಾನ ಪರಿಷತ್ ಸದಸ್ಯ ಎಸ್. ರವಿ, ಮಾಜಿ ಐಎಎಸ್ ಅಧಿಕಾರಿ ಸಸಿಕಾಂತ್ ಸೆಂಥಿಲ್, ರಘುನಂದನ್ ರಾಮಣ್ಣ, ವಿನಯ್ ಕಾರ್ತಿಕ್ ಸಭೆಯಲ್ಲಿದ್ದರು.

ಗುಂಡ್ಲುಪೇಟೆ ಮೂಲಕ ಇದೇ 30ರಂದು ಕರ್ನಾಟಕ ಪ್ರವೇಶಿಸಲಿರುವ ಈ ಯಾತ್ರೆ, 21 ದಿನ ಸಂಚಾರ ನಡೆಸಲಿದೆ. ಒಟ್ಟು 500 ಕಿ.ಮೀ ಪಾದಯಾತ್ರೆ ಮಧ್ಯ ಕರ್ನಾಟಕದಲ್ಲಿ ನಡೆಯಲಿದ್ದು, ನಾಯಕರಿಗೆ ಜಿಲ್ಲಾವಾರು ಜವಾಬ್ದಾರಿ ಹಂಚಿಕೆ ನೀಡಲಾಗಿದೆ. ರಾಯಚೂರು ಮೂಲಕ ಯಾತ್ರೆ ತೆಲಂಗಾಣಕ್ಕೆ ಹೊರಡಲಿದೆ.

### ಶಿವಮೊಗ್ಗ ಸುಬ್ಬಣ್ಣ ಒಡನಾಟ ಸ್ಮರಿಸಿಕೊಂಡ ಒಡನಾಡಿಗಳು, ಆಪ್ತರು

# ಗಾನ ಗಾರುಡಿಗನಿಗೆ ಗೀತ ನಮನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂಚಿನ ಕಂಠದ ಮೂಲಕ ನಾಡಿನ ಜನರ ಹೃದಯಗಳನ್ನು 'ಆನಂದಮಯ'ಗೊಳಿಸಿದ್ದ ಶಿವಮೊಗ್ಗ ಸುಬ್ಬಣ್ಣ ಅವರಿಗೆ, ಸುಗಮ ಸಂಗೀತ ಕ್ಷೇತ್ರದ ಪ್ರಮುಖರು ಅವರದೇ ಗೀತೆಗಳನ್ನು ಹಾಡುವ ಮೂಲಕ ನಮನ ಸಲ್ಲಿಸಿದರು.

ಒಡನಾಡಿಗಳು ಹಾಗೂ ಆಪ್ತರು ಸುಬ್ಬಣ್ಣ ಅವರ ಗಾಯನ ಹಾಗೂ ವ್ಯಕ್ತಿತ್ವವನ್ನು ಕೊಂಡಾಡಿದರು.

ಕರ್ನಾಟಕ ಸುಗಮ ಸಂಗೀತ ಪರಿಷತ್ತು ನಗರದಲ್ಲಿ ಶನಿವಾರ ಹಮ್ಮಿಕೊಂಡ 'ಕಾಡು ಕುದುರೆ ಓಡಿ ಬಂದಿತ್ತಾ' ಶಿವಮೊಗ್ಗ ಸುಬ್ಬಣ್ಣ ಅವರಿಗೆ ಗೀತ ನಮನ ಕಾರ್ಯಕ್ರಮ ಉದ್ಘಾಟಿಸಿದ ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ, 'ನಾನು ರಚಿಸಿದ 'ಕಾಡುಕುದುರೆ ಓಡಿ ಬಂದಿತ್ತಾ' ಗೀತೆಯನ್ನು ಸುಬ್ಬಣ್ಣ ಹಾಡಿದ್ದರಿಂದ ಪ್ರಶಸ್ತಿ ದೊರೆಯಿತು.

ಈ ಗೀತೆಯ ಬಳಿಕ ನನ್ನ ಸ್ಥಾನಮಾನವೂ ಏರಿತು. ಸಿನಿಮಾ ಗೀತೆಗಳನ್ನು ಇನ್ನಷ್ಟು ಬರೆಯುವಂತೆ ಮನವಿಗಳು ಬಂದವು. ಸಂಗೀತ ಕಾರ್ಯಕ್ರಮಗಳಲ್ಲಿ ನಿರ್ಣಾಯಕನಾಗಿಯೂ ಭಾಗವಹಿಸಿದೆ' ಎಂದರು.

'1979ರಲ್ಲಿ ಬಿಡುಗಡೆಯಾದ 'ಕಾಡು ಕುದುರೆ' ಚಿತ್ರವನ್ನು ಕೇವಲ ₹ 4 ಲಕ್ಷದಲ್ಲಿ ಮಾಡಿದ್ದೆವು. ಆಗ ನಮ್ಮ ಬಳಿ ಹಣ ಇರಲಿಲ್ಲ. ಆದ್ದರಿಂದ ಅಂದಿನ ಮುಖ್ಯಮಂತ್ರಿ ದೇವರಾಜ ಅರಸು ಅವರಿಗೆ ಮನವಿ ಸಲ್ಲಿಸಿ, ಸಂಪೂರ್ಣ ತೆರಿಗೆ ವಿನಾಯಿತಿ ಮಾಡಿಸಿ ಕೊಂಡೆವು. ಈ ಚಿತ್ರದಿಂದ ಹಣ ಹಾಗೂ ಜನಪ್ರಿಯತೆ ಬಂದಿತು. ಆ ಕಾಲದಲ್ಲಿ ಗಿರೀಶ ಕಾರ್ನಾಡ, ಲಂಕೇಶ್ ಸಿನಿಮಾ ಮಾಡುತ್ತಿದ್ದರು. ಅವರು ಶ್ರೀಮಂತರಾಗಿದ್ದರೆ, ನಾವು ಬಡವರಾಗಿದ್ದೆವು. ಸಿನಿಮಾ ಮಾಡಲು ಇದ್ದ ಹಿಂಜರಿಕೆ ಹೋಗಲಾಡಿಸಿದವರು ಸುಬ್ಬಣ್ಣ' ಎಂದು ಸ್ಮರಿಸಿಕೊಂಡರು.

ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಗಾಯಕ ನಾಗರಾಜ ರಾವ್ ಹವಾಲ್ದಾರ್, '1990ರಲ್ಲಿ ಚೌಡಯ್ಯ ಸ್ಮಾರಕ ಭವನದಲ್ಲಿ ಇಬ್ಬರೂ ಒಟ್ಟಾಗಿ ಹಾಡಿದ್ದೆವು. ಅವರ ಗಾಯನ ಮನೆ, ಮನದಲ್ಲಿ ಶಾಶ್ವತವಾಗಿ ಇರುತ್ತದೆ' ಎಂದು ಹೇಳಿದರು.

**'ನನ್ನ ಕಂಡಾಗ ಹಾಡುತ್ತಿದ್ದರು':** ನಿವೃತ್ತ ನ್ಯಾಯಮೂರ್ತಿ ಚಂದ್ರಶೇಖರ್, 'ಒಮ್ಮೆ 'ಇಳಿದು ಬಾ ತಾಯೇ ಇಳಿದು ಬಾ' ಗೀತೆ ಹಾಡುವಂತೆ ಸುಬ್ಬಣ್ಣ ಅವರಿಗೆ ಕೇಳಿಕೊಂಡಿದ್ದೆ. ಅವರು ದೊಡ್ಡ ದನಿಯಲ್ಲಿ ಹಾಡಿದ ರೀತಿ ನೋಡಿ ನನಗೆ ಭಯವಾಗಿತ್ತು.

ಅಕ್ಕಪಕ್ಕ ದವರು ಏನು ಅಂದುಕೊಳ್ಳುತ್ತಾರೆಯೋ ಅಂದುಕೊಂಡಿದ್ದೆ. ನಂತರ ನನ್ನ ಕಂಡಾಗಲೆಲ್ಲ ಅದೇ ಹಾಡನ್ನು ಹಾಡು ತ್ತಿದ್ದರು. ಅವರಿಗೆ ಶತ್ರುಗಳೇ ಇರಲಿಲ್ಲ' ಎಂದು ಸ್ಮರಿಸಿದರು.

ಗಾಯಕ ಪುತ್ತೂರು ನರಸಿಂಹ ನಾಯಕ್, 'ಸುಬ್ಬಣ್ಣ ಅವರು ಜಾತಿ, ಧರ್ಮ ಮೀರಿದ ಕಲಾವಿದ. ಅವರು ಕೊನೆಯುಸಿರೆಳೆಯುವ ವಾರದ ಮೊದಲು ಪತ್ರೊಡೆ ಮಾಡಿಕೊಂಡು ಅವರ ಮನೆಗೆ ಹೋಗಿದ್ದೆವು. ತುಂಬಾ ಸಂತೋಷದಿಂದ ಅದನ್ನು ಸ್ವೀಕರಿಸಿ, ಸವಿದರು' ಎಂದು ಹೇಳಿದರು.

ಗಾಯಕ ಶ್ರೀನಿವಾಸ ಉಡುಪ, ನಿವೃತ್ತ ನ್ಯಾಯಮೂರ್ತಿ ಎ.ಜೆ. ಸದಾಶಿವ, ಲಹರಿ ವೇಲು ಸೇರಿ ಹಲವರು ಸುಬ್ಬಣ್ಣ ಅವರೊಂದಿಗಿನ ಒಡನಾಟ ಹಂಚಿಕೊಂಡರು.

ಗೀತ ನಮನ ಕಾರ್ಯಕ್ರಮದಲ್ಲಿ ಸುಬ್ಬಣ್ಣ ಅವರ ಭಾವಚಿತ್ರಕ್ಕೆ ಪತ್ನಿ ಶಾಂತಾ ಸುಬ್ಬಣ್ಣ ಪುಷ್ಪ ನಮನ ಸಲ್ಲಿಸಿದರು. ಚಂದ್ರಶೇಖರ ಕಂಬಾರ, ನ್ಯಾ.ಎ.ಜೆ. ಸದಾಶಿವ, ಸಿ. ಸೋಮಶೇಖರ್, ಶ್ರೀನಿವಾಸ ಉಡುಪ, ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷ ವೈ.ಕೆ. ಮುದ್ದುಕೃಷ್ಣ ಹಾಗೂ ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ ಇದ್ದಾರೆ. –ಪ್ರಜಾವಾಣಿ ಚಿತ್ರ

#### 'ರಾಜ್ಯಮಟ್ಟದ ಪ್ರಶಸ್ತಿ ಸ್ಥಾಪಿಸಿ'

'ಸುಬ್ಬಣ್ಣ ಅವರ ಹೆಸರಿನಲ್ಲಿ ರಾಜ್ಯ ಮಟ್ಟದ ಪ್ರಶಸ್ತಿಯನ್ನು ಕರ್ನಾಟಕ ಸುಗಮ ಸಂಗೀತ ಪರಿಷತ್ತು ಸ್ಥಾಪಿಸಬೇಕು. ಈ ಮೂಲಕ ಯುವ ಗಾಯಕರನ್ನೂ ಪ್ರೋತ್ಸಾಹಿಸಲು ಸಾಧ್ಯ. ಕವಿ ರಚಿಸಿದ ಹಾಡಿಗೆ ಉತ್ತಮ ಕಂಠ ಸಿಗದಿದ್ದರೆ ಗೀತೆ ಚಿರಸ್ಥಾಯಿ ಆಗದು' ಎಂದು ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ ಹೇಳಿದರು.

ಬಿಬಿಎಂಪಿ ವಿಶೇಷ ಆಯುಕ್ತ (ಹಣಕಾಸು) ಜಯರಾಮ ರಾಯಪುರ, 'ಕರ್ನಾಟಕ ಸುಗಮ ಸಂಗೀತ ಪರಿಷತ್ತಿಗೆ ಸ್ವಂತ ಕಚೇರಿ ಹಾಗೂ ಆದಾಯ ಇಲ್ಲ. ಆದರೂ ಉತ್ತಮ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಆದ್ದರಿಂದಲೇ ಪುರಭವನದಲ್ಲಿ ಉಚಿತವಾಗಿ ಕಾರ್ಯಕ್ರಮ ನಡೆಸಲು ಪರಿಷತ್ತಿಗೆ ಅವಕಾಶ ನೀಡುವಂತೆ ಮುಖ್ಯಮಂತ್ರಿ ಸೂಚಿಸಿದ್ದಾರೆ. ಅವರು ಮುಂದಿನ ದಿನಗಳಲ್ಲಿ ನಡೆಸುವ ಕಾರ್ಯಕ್ರಮಗಳಿಗೂ ಉಚಿತವಾಗಿ ವೇದಿಕೆ ಒದಗಿಸಲಾಗುವುದು' ಎಂದು ತಿಳಿಸಿದರು.

## ಬಲಿಜ ಸಮುದಾಯಕ್ಕೆ ಶೀಘ್ರ ಉದ್ಯೋಗ, ರಾಜಕೀಯ ಮೀಸಲಾತಿ: ಎಮ್. ಆರ್. ಸೀತಾರಾಮ್ ವಿಶ್ವಾಸ

ಹಿರಿಯ ವಕೀಲ ಎಸ್.ಎನ್.ಅಶ್ವತ್ಥ ನಾರಾಯಣ ಅವರನ್ನು ಮಾಜಿ ಸಚಿವ ಹಾಗೂ ಗೋಕುಲ ಶಿಕ್ಷಣ ಪ್ರತಿಷ್ಠಾನದ ಉಪಾಧ್ಯಕ್ಷ ಎಂ.ಆರ್.ಸೀತಾರಾಮ್ ಸನ್ಮಾನಿಸಿದರು. ಕರ್ನಾಟಕ ರಾಜ್ಯದ ಬಲಿಜ ವಕೀಲರ ಸಂಘದ ಅಧ್ಯಕ್ಷರಾದ ಪ್ರಕಾಶ್ ರಾಮಯ್ಯ, ಕಾರ್ಯದರ್ಶಿ ಕೆ.ಆರ್.ಆನಂದ್ ಬಾಬು, ಸಂಸ್ಥಾಪಕ ಅಧ್ಯಕ್ಷ ಭಕ್ತವತ್ಸಲ, ಖಜಾಂಚಿ ವರಲಕ್ಷ್ಮೀ, ತೆಲುಗು ಬಲಿಜ ಕಾಪು ಜಂಟಿ ಕಾರ್ಯ ಸಮಿತಿಯ ದಕ್ಷಿಣ ಭಾರತ ಸಂಯೋಜಕ ದಾಸರಿ ರಾಮು, ಮುಖಂಡರಾದ ಸುರೇಂದ್ರ ಬಾಬು ಉಪಸ್ಥಿತರಿದ್ದರು.

ಬೆಂಗಳೂರು, ಸೆ 24: ಬಲಿಜ ಸಮುದಾಯಕ್ಕೆ ಮೊದಲಿನಿಂದಲೂ ಮೀಸಲಾತಿ ಸೌಲಭ್ಯ ಇತ್ತು. ಆದರೆ 1994ರಲ್ಲಿ ಒಂದು ವರ್ಷಕ್ಕೆ ತಡೆ ನೀಡಿದ್ದರು. ಈಗ ಮೊದಲಿದ್ದ ಮೀಸಲಾತಿ ಸೌಲಭ್ಯದ ಮರುಸ್ಥಾಪನೆಗಾಗಿ ನಮ್ಮ ಹೋರಾಟ ಮುಂದುವರಿದಿದೆ ಎಂದು ಮಾಜಿ ಸಚಿವ ಹಾಗೂ ಗೋಕುಲ ಶಿಕ್ಷಣ ಪ್ರತಿಷ್ಠಾನದ ಉಪಾಧ್ಯಕ್ಷ ಎಂ.ಆರ್. ಸೀತಾರಾಮ್ ಹೇಳಿದರು.

**ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್**

ಕರ್ನಾಟಕ ರಾಜ್ಯ ಬಲಿಜ ವಕೀಲರ ಸಂಘವು ಶನಿವಾರ (ಸೆಪ್ಟೆಂಬರ್ 24) ಆಯೋಜಿಸಿದ್ದ ಹಿರಿಯ ವಕೀಲ ಎಸ್.ಎನ್. ಅಶ್ವತ್ಥನಾರಾಯಣ ಅವರ ಅಭಿನಂದನಾ ಸಮಾರಂಭದಲ್ಲಿ ಸೀತಾರಾಮ್ ಅವರು ಮಾತನಾಡಿದರು.

ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಅವರಿಗೆ ಈಗಾಗಲೇ ಸುದೀರ್ಘ ವಿವರ ಕೊಟ್ಟಿದ್ದೇವೆ. ಅವರಿಂದ ನಮಗೆ ನ್ಯಾಯ ಸಿಗುವ ವಿಶ್ವಾಸವಿದೆ. ಅಕಸ್ಮಾತ್ ಅದು ಸಾಧ್ಯವಾಗದಿದ್ದರೆ ನ್ಯಾಯಾಲಯದಲ್ಲಿ ನಮ್ಮ ಹೋರಾಟ ಮುಂದುವರಿಯಲಿದೆ ಎಂದು ಸೀತಾರಾಮ್ ಅವರು ಅಭಿಪ್ರಾಯಪಟ್ಟರು.

ಬಲಿಜ ಸಮುದಾಯದ ಮೀಸಲಾತಿಗಾಗಿ ನ್ಯಾಯಾಲಯದಲ್ಲಿ ಹೋರಾಟದ ನೇತೃತ್ವವನ್ನು ಅಶ್ವತ್ಥನಾರಾಯಣ ಅವರೇ ವಹಿಸಿಕೊಳ್ಳಲಿದ್ದಾರೆ. ಸಮಾಜದ ಎಲ್ಲ ವಕೀಲರೂ ಯೋಧರಂತೆ ಅವರ ಬೆನ್ನಿಗೆ ನಿಲ್ಲಬೇಕಿದೆ ಎಂದು ಸೀತಾರಾಮ್ ಅವರು ಸಲಹೆ ಮಾಡಿದರು. ನಮ್ಮ ಹೋರಾಟ ಯಾವುದೇ ಸಮುದಾಯ ಅಥವಾ ಸಮಾಜದ ವಿರುದ್ಧ ಅಲ್ಲ. ನಮ್ಮ ಸಮುದಾಯಕ್ಕೆ ನ್ಯಾಯಯುತವಾಗಿ ಸಿಗಬೇಕಿರುವ ಶೈಕ್ಷಣಿಕ, ಉದ್ಯೋಗ ಮತ್ತು ರಾಜಕೀಯ ಪ್ರಾತಿನಿಧ್ಯವನ್ನು ನಾವು ಕೋರುತ್ತಿದ್ದೇವೆ ಎಂದು ಮಾಜಿ ಸಚಿವರು ಸ್ಪಷ್ಟಪಡಿಸಿದರು.

ಅಶ್ವತ್ಥನಾರಾಯಣ ಅವರು ಇಂಥದ್ದೇ ಪ್ರಯತ್ನದಲ್ಲಿ ನಿರತರಾಗಿದ್ದಾರೆ. ರಾಜ್ಯ ಬಲಿಜ ಸಂಘದ ಪರವಾಗಿ ಮುಖ್ಯಮಂತ್ರಿಗಳ ಎದುರು ನಮ್ಮ ಅಹವಾಲು ಹೇಳಿಕೊಂಡಿದ್ದೇವೆ, ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾದ ಜಯಪ್ರಕಾಶ್ ಹೆಗ್ಡೆ ಅವರಿಗೆ ಪರಿಸ್ಥಿತಿ ವಿವರಿಸಿದ್ದೇವೆ ಎಂದು ನೆನಪಿಸಿಕೊಂಡರು. ಹಿಂದೆ ಹೈಕೋರ್ಟ್ 'ಬಲಿಜ ಸಮುದಾಯದ ಮೀಸಲಾತಿಯನ್ನು ದೃಢೀಕರಿಸಿಕೊಡಿ' ಎಂದು ಸರ್ಕಾರಕ್ಕೆ ಸೂಚಿಸಿತ್ತು. ಆಗ ನಾನು ಮಂತ್ರಿಯಾಗಿದ್ದೆ. ಹಿಂದುಳಿದ ವರ್ಗಗಳ ಇಲಾಖೆಯ ಕಾರ್ಯದರ್ಶಿಯಾಗಿದ್ದ ಮೊಹಿಸಿನ್ ಅವರು ಯಾವುದೇ ಒತ್ತಡಕ್ಕೆ ಜಗ್ಗದೆ ಸರ್ಕಾರದ ನಿಲುವನ್ನು ದೃಢೀಕರಿಸಿಕೊಟ್ಟರು.

ಹೀಗಾಗಿ ನಮ್ಮ ಸಮುದಾಯಕ್ಕೆ ಸರ್ಕಾರವು ಕೊಟ್ಟಿದ್ದ ವಿದ್ಯಾಭ್ಯಾಸದ ಆರಕ್ಷಣೆ ಮುಂದುವರಿಯಲು ಸಾಧ್ಯವಾಯಿತು ಎಂದು ಎಂ.ಆರ್.ಸೀತಾರಾಮ್ ವಿವರಿಸಿದರು.

# 'ಪತ್ರಿಕೋದ್ಯಮ ಶಿಕ್ಷಣ: ಕಗ್ಗಂಟಿನ ವಾತಾವರಣ'

### ಭಾರತೀಯ ವಿದ್ಯಾಭವನದ ನಿರ್ದೇಶಕ ಎಚ್.ಎನ್. ಸುರೇಶ್ ಕಳವಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾಧ್ಯಮ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಗಳು ನಡೆದಿದ್ದು, ಪತ್ರಿಕೋದ್ಯಮ ಶಿಕ್ಷಣ ನೀಡುವ ಸಂಸ್ಥೆಗಳಲ್ಲಿ ಕಗ್ಗಂಟಿನ ವಾತಾವರಣ ಇದೆ' ಎಂದು ಭಾರತೀಯ ವಿದ್ಯಾಭವನದ ನಿರ್ದೇಶಕ ಎಚ್.ಎನ್. ಸುರೇಶ್ ಕಳವಳ ವ್ಯಕ್ತಪಡಿಸಿದರು.

ನಗರದಲ್ಲಿ ಶನಿವಾರ ಫ್ಲೇರ್ ಮೀಡಿಯಾ, ಭಾರತೀಯ ವಿದ್ಯಾಭವನ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಆಶ್ರಯದಲ್ಲಿ ನಡೆದ 'ಮಾಧ್ಯಮದಲ್ಲಿ ಭಾಷಾ ಕೌಶಲ' ಕಾರ್ಯಾಗಾರದಲ್ಲಿ ಮಾತನಾಡಿದರು.

'ಇಂದಿನ ವಾತಾವರಣದಲ್ಲಿ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಏನು ಹಾಗೂ ಯಾವ ವಿಷಯ ಕಲಿಸಬೇಕೆಂಬ ಗೊಂದಲದಲ್ಲಿ ಸಂಸ್ಥೆಗಳಿವೆ. ಮಾಧ್ಯಮ ಕ್ಷೇತ್ರದವರು ಈ ಗೊಂದಲ ಪರಿಹರಿಸಬೇಕು' ಎಂದು ಅವರು ಕೋರಿದರು.

'ಸುದ್ದಿವಾಹಿನಿಗಳ ವೀಕ್ಷಣೆ ಬಿಟ್ಟರೆ ಆರೋಗ್ಯ ವೃದ್ಧಿಸಲಿದೆ ಎಂಬ ವಾತಾವರಣ ಈಗಿನದ್ದು. ದೃಶ್ಯ ಮಾಧ್ಯಮದಲ್ಲಿ ಕನ್ನಡ ಬಳಕೆ ಆಗುತ್ತಿದೆಯೇ ಎಂಬ ಸಂದೇಹವಿದೆ. ಟಿ.ವಿಗಳ ಭಾಷೆ ಬದಲಾಗಿದೆ. ಇದು ದುರಂತ' ಎಂದು ಬೇಸರ ವ್ಯಕ್ತಪಡಿಸಿದರು.

ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಸದಾಶಿವ ಶೆಣೈ ಮಾತನಾಡಿ, 'ಭಾಷೆಯೊಂದು ನಶಿಸಿದರೆ ಆ ಜನಾಂಗದ ಪರಂಪರೆ, ಇತಿಹಾಸವು ಕಣ್ಮರೆ ಆಗಲಿದೆ. ಮುಂದಿನ ಪೀಳಿಗೆಗೂ ಶುದ್ಧವಾದ ಭಾಷೆ ಉಳಿಸಿ ಹಸ್ತಾಂತರಿಸುವುದು ನಮ್ಮೆಲ್ಲರ ಕರ್ತವ್ಯ. ಭಾಷಾ ಕೌಶಲವನ್ನು ವಿದ್ಯಾರ್ಥಿಗಳೇ ಕರಗತ ಮಾಡಿಕೊಳ್ಳಬೇಕು. ಯಾರೂ ಕಲಿಸುವುದಲ್ಲ' ಎಂದರು.

'ರಾಜಕಾರಣಿಗಳ ಹೆಸರಿಗೆ ದೃಶ್ಯ ಮಾಧ್ಯಮಗಳು ಕತ್ತರಿ ಹಾಕಿ ಬಳಸುತ್ತಿವೆ. ಈ ರೀತಿ ಬಳಸಲು ಮಾಧ್ಯಮಕ್ಕೆ ಅಧಿಕಾರ ಇಲ್ಲ. ತಮಿಳುನಾಡಿನಲ್ಲಿ ಈ ರೀತಿ ಕತ್ತರಿ ಪ್ರಯೋಗಿಸಿದರೆ ಕ್ರಮವಾಗಲಿದೆ' ಎಂದು ಅವರು ಹೇಳಿದರು.

'ಮಾಧ್ಯಮ ಅಕಾಡೆಮಿಯು 40ರ ಸಂಭ್ರಮದಲ್ಲಿದೆ. ಕನ್ನಡ ಮಾಧ್ಯಮ ಕ್ಷೇತ್ರಕ್ಕೆ ಗಟ್ಟಿ ನೆಲೆ ಕಲ್ಪಿಸಿದ ಹಿರಿಯರ ಕುರಿತು ಕೃತಿ ಹೊರತರಲಾಗುತ್ತಿದೆ' ಎಂದರು.

ಭಾರತೀಯ ವಿದ್ಯಾಭವನದ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಎನ್.ಎಸ್. ಶ್ರೀಧರಮೂರ್ತಿ, 'ಕೌಶಲಾಭಿವೃದ್ಧಿ ಮಂಡಳಿಯು ಭಾಷೆಯನ್ನು ಕೌಶಲವೆಂದು ಪರಿಗಣಿಸಿಲ್ಲ. ಕೌಶಲವೆಂದು ಪರಿಗಣಿಸಿದರೆ ವೃತ್ತಿಪರತೆ ಆಯಾಮ ಸಿಗಲಿದೆ. ವೃತ್ತಿಪರ ಆಯಾಮ ನೀಡುವ ಉದ್ದೇಶದಿಂದ 5 ಸ್ಥಳಗಳಲ್ಲಿ ಕಾರ್ಯಾಗಾರ ನಡೆಸಲಾಗುವುದು' ಎಂದು ಹೇಳಿದರು.

'ಭವಿಷ್ಯದಲ್ಲಿ ಶುದ್ಧ ಭಾಷೆ ಉಳಿಯಬೇಕಿದ್ದರೆ ಮಾಧ್ಯಮಗಳ ಪಾತ್ರ ಬಹಳ ಮುಖ್ಯ' ಎಂದು ಅವರು ನುಡಿದರು.

'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅವರು ಸಾಹಿತ್ಯದ ಓದು, ಭಾಷಾ ಕೌಶಲ ಹಾಗೂ ಭಾಷೆಯ ಬಳಕೆ ಕುರಿತು ಉಪನ್ಯಾಸ ನೀಡಿದರು.

ಫ್ಲೇರ್ ಮೀಡಿಯಾದ ನಿರ್ದೇಶಕಿ ಎಸ್.ಲಲಿತಾ ಚಲಂ ಹಾಜರಿದ್ದರು.

ನಗರದಲ್ಲಿ ಶನಿವಾರ ಆಯೋಜಿಸಿದ್ದ 'ಮಾಧ್ಯಮದಲ್ಲಿ ಭಾಷಾ ಕೌಶಲ' ಕಾರ್ಯಾಗಾರದಲ್ಲಿ ಭಾರತೀಯ ವಿದ್ಯಾಭವನದ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಎನ್.ಎಸ್. ಶ್ರೀಧರಮೂರ್ತಿ, ಮಾಧ್ಯಮ ಅಕಾಡೆಮಿ ಅಧ್ಯಕ್ಷ ಸದಾಶಿವ ಶೆಣೈ, ಭಾರತೀಯ ವಿದ್ಯಾಭವನದ ನಿರ್ದೇಶಕ ಎಚ್.ಎನ್. ಸುರೇಶ್ ಮತ್ತು ಫ್ಲೇರ್ ಮೀಡಿಯಾದ ಎಸ್. ಲಲಿತಾ ಚಲಂ ಮಾತುಕತೆಯಲ್ಲಿ ತೊಡಗಿದ್ದರು.
ಪ್ರಜಾವಾಣಿ ಚಿತ್ರ

## 'ಮಸೀದಿ ದರ್ಶನ–ಪ್ರವಾಸ' ಇಂದು

ಬೆಂಗಳೂರು: ಬನ್ನೇರುಘಟ್ಟ ರಸ್ತೆಯಲ್ಲಿರುವ ಬಿಲಾಲ್ ಮಸೀದಿ ವತಿಯಿಂದ ಸೆಪ್ಟೆಂಬರ್ 25ರಂದು (ಭಾನುವಾರ) ಸಾರ್ವಜನಿಕರಿಗೆ 'ಮಸೀದಿ ದರ್ಶನ: ಒಂದು ಮಸೀದಿಯ ಪ್ರವಾಸ' ಎಂಬ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಪರಸ್ಪರ ಅರಿಯುವ ಮೂಲಕ ಸಹೋದರತೆ, ಬಾಂಧವ್ಯ ಮತ್ತು ಧಾರ್ಮಿಕ ಸೌಹಾರ್ದ ಬೆಳೆಸುವ ಎಂಬ ಉದ್ದೇಶದಿಂದ ಕಾರ್ಯಕ್ರಮ ಆಯೋಜಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಎಲ್ಲಾ ಧರ್ಮದ ಸ್ತ್ರೀ, ಪುರುಷರು ಭಾಗವಹಿಸಬಹುದು. ಸಂಜೆ 4ರಿಂದ ರಾತ್ರಿ 8 ಗಂಟೆಯವರೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ಬೆಂಗಳೂರು ಗ್ರಾಹಕರಿಗೆ ಅಮೆಜಾನ್ ಮೆಟಾವರ್ಲ್ಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆಜಾನ್ ಇಂಡಿಯಾ ಕಂಪನಿಯು 'ದಿ ಗ್ರೇಟ್ ಇಂಡಿಯನ್ ಫೆಸ್ಟಿವಲ್' ಮಾರಾಟದ ಭಾಗವಾಗಿ ಬೆಂಗಳೂರಿನ ಗ್ರಾಹಕರಿಗೆ ಜಯಮಹಲ್ ಪ್ಯಾಲೇಸ್‌ನಲ್ಲಿ 'ಅಮೆಜಾನ್ ಮೆಟಾವರ್ಲ್ಡ್' ಅನುಭವ ಕಟ್ಟಿಕೊಡುವ ವ್ಯವಸ್ಥೆಯನ್ನು ರೂಪಿಸಿದೆ.

ಇದು ವರ್ಚವಲ್ ತಾಣವಾಗಿದ್ದು, ಅಮೆಜಾನ್ ಜಗತ್ತಿಗೆ ಪ್ರವೇಶವನ್ನು ಇದು ಒದಗಿಸಲಿದೆ. ಮೆಟಾವರ್ಲ್ಡ್‌ನಲ್ಲಿ ವಿಆರ್ ಹೆಡ್‌ಸೆಟ್‌ಗಳನ್ನು ಧರಿಸಿ ಸಹ ಆಟಗಾರರೊಂದಿಗೆ ಸ್ಪರ್ಧಿಸುತ್ತಲೇ ಅತ್ಯಾಕರ್ಷಕ ಬಹುಮಾನಗಳನ್ನು ಗೆಲ್ಲಲು ಗ್ರಾಹಕರಿಗೆ ಅವಕಾಶ ಸಿಗುತ್ತದೆ. ಬೈಕ್ ರೇಸ್ ಸೇರಿದಂತೆ ವಿವಿಧ ಗೇಮ್‌ಗಳನ್ನು ಆಡಬಹುದು. ಸ್ಮಾರ್ಟ್‌ಫೋನ್‌ಗಳು, ಗ್ಯಾಜೆಟ್‌ಗಳು ಮತ್ತು ಎಲೆಕ್ಟ್ರಾನಿಕ್ಸ್, ಫ್ಯಾಷನ್ ಮತ್ತು ಮೇಕಪ್, ದಿನಸಿ ಸೇರಿದಂತೆ ಒಂಬತ್ತು ಆಕರ್ಷಕ ವಲಯಗಳು ಇಲ್ಲಿವೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಕರ್ನಾಟಕದ ಮಾರುಕಟ್ಟೆಯು ಅಮೆಜಾನ್ ಇಂಡಿಯಾಗೆ ಬಹಳ ಮುಖ್ಯವಾಗಿದೆ. ನಮ್ಮ ಬೆಂಗಳೂರಿನ ಗ್ರಾಹಕರಿಗೆ ಮೆಟಾವರ್ಲ್ಡ್ ಅನುಭವ ಒದಗಿಸಲು ಸಂತೋಷವಾಗುತ್ತಿದೆ ಎಂದು ಅಮೆಜಾನ್ ಇಂಡಿಯಾದ ನಿರ್ದೇಶಕ ನೂರ್ ಪಟೇಲ್ ಅವರು ಹೇಳಿದರು.



## ಮಹಿಷ ಪ್ರತಿಮೆ ಪೂಜೆ ಅವಕಾಶಕ್ಕೆ ನಕಾರ

ಬೆಂಗಳೂರು: 'ದಸರಾ ಹಬ್ಬದ ಸಂದರ್ಭದಲ್ಲಿ ಮೈಸೂರು ಚಾಮುಂಡಿ ಬೆಟ್ಟದಲ್ಲಿರುವ ಮಹಿಷ ಪ್ರತಿಮೆಗೆ ಅಗ್ರಪೂಜೆ ಸಲ್ಲಿಸಲು ಅಡ್ಡಿಪಡಿಸಲಾಗುತ್ತಿದ್ದು, ಪ್ರತಿಮೆಗೆ ಪುಷ್ಪಾರ್ಚನೆ ಮಾಡಲು ಮೈಸೂರು ಜಿಲ್ಲಾಡಳಿತಕ್ಕೆ ನಿರ್ದೇಶನ ನೀಡಬೇಕು' ಎಂಬ ಅರ್ಜಿದಾರರೊಬ್ಬರ ಮಧ್ಯಂತರ ಮನವಿಯನ್ನು ಸಾರಾಸಗಟಾಗಿ ತಳ್ಳಿಹಾಕಿರುವ ಹೈಕೋರ್ಟ್, ಈ ಸಂಬಂಧ ಹೆಚ್ಚಿನ ವಿವರಣೆಗಾಗಿ ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗಕ್ಕೆ ತುರ್ತು ನೋಟಿಸ್ ಜಾರಿಗೆ ಆದೇಶಿಸಿದೆ.

ಮೈಸೂರಿನ ವಕೀಲ ಪಿ.ಚಂದ್ರಶೇಖರ್ ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಮಹಿಷಾಸುರ ಪ್ರತಿಮೆಯನ್ನು ಪೂಜೆ ಮಾಡಿದ ನಂತರ ಚಾಮುಂಡಿ ದೇವತೆಗೆ ಪೂಜೆ ಸಲ್ಲಿಸಿದ ಬಗ್ಗೆ ಯಾವುದಾದರೂ ಅಧಿಕೃತ ಮತ್ತು ಪರಿಗಣನಾರ್ಹ ವಿವರಗಳು ಲಭ್ಯವಿದ್ದರೆ ಹಾಜರುಪಡಿಸಿ' ಎಂದು ಅರ್ಜಿದಾರರ ಪರ ವಕೀಲ ಅಬೂಬಕರ್ ಶಫಿ ಅವರಿಗೆ ಸೂಚಿಸಿದೆ.

ಅರ್ಜಿದಾರರ ಮಧ್ಯಂತರ ಮನವಿಯನ್ನು ತಳ್ಳಿ ಹಾಕಿ ಮೌಖಿಕವಾಗಿ ಪ್ರತಿಕ್ರಿಯಿಸಿದ ನ್ಯಾಯಪೀಠ, 'ರಾಕ್ಷಸರು ಕೆಟ್ಟವರೇನೂ ಅಲ್ಲ. ದೇವತೆಗಳು ಯಾವ ತಪ್ಪೂ ಮಾಡದೇ ಇರುವವರೂ ಅಲ್ಲ. ಅವರಲ್ಲೂ ಕೆಟ್ಟವರಿದ್ದಾರೆ. ಅವರವರ ಗುಣಾವಗುಣಗಳನ್ನು ಪರಿಗಣಿಸಿ ಮೌಲ್ಯಮಾಪನ ಮಾಡಬೇಕಾಗುತ್ತದೆ' ಎಂದಿತು.

'ಮಹಿಷಾಸುರನ ಮೂರ್ತಿಗೆ ಪೂಜೆ ಸಲ್ಲಿಸಬೇಕು ಎಂಬುದಕ್ಕೆ ಕರ್ನಾಟಕದ ಇತಿಹಾಸವನ್ನು ಬರೆದ ಸೂರ್ಯನಾಥ ಕಾಮತ್, ಫ್ರಾನ್ಸಿಸ್ ಬುಚನನ್, ಕೆ.ಎ.ನೀಲಕಂಠ ಶಾಸ್ತ್ರಿ ಅವರ ಕೃತಿಗಳಲ್ಲಿ, ಮೈಸೂರು ಗೆಜೆಟಿಯರ್, ಪ್ರಸಾರಾಂಗದ ಪುಸ್ತಕಗಳಲ್ಲಾಗಲೀ ಮಾಹಿತಿ ಇಲ್ಲ' ಎಂದು ನ್ಯಾಯಪೀಠ ಹೇಳಿದೆ.

ಹಾಸಿಗೆ ಸಮಸ್ಯೆ: ಖಾಸಗಿ ಆಸ್ಪತ್ರೆಯಲ್ಲಿ 1.39 ಲಕ್ಷ ಕೋವಿಡ್ ಪೀಡಿತರಿಗೆ ವೈದ್ಯಕೀಯ ನೆರವು

# ಸರ್ಕಾರಿ ಆಸ್ಪತ್ರೆಯಲ್ಲಿ ಸಿಗದ ಚಿಕಿತ್ಸೆ

• ವರುಣ ಹೆಗಡೆ

ಬೆಂಗಳೂರು: ಕೋವಿಡ್ ಚಿಕಿತ್ಸೆಗೆ ಸಂಬಂಧಿಸಿದಂತೆ ಸರ್ಕಾರಿ ಆಸ್ಪತ್ರೆಗಳ ಮೂಲಸೌಕರ್ಯ ವೃದ್ಧಿಸಿ, ಸಾವಿರಾರು ಸಂಖ್ಯೆಯಲ್ಲಿ ಹಾಸಿಗೆಗಳನ್ನು ಮೀಸಲಿಟ್ಟಿರುವುದಾಗಿ ಹೇಳಿಕೊಂಡಿದ್ದ ಸರ್ಕಾರ, ಮೂರು ಅಲೆಗಳಲ್ಲಿ ರಾಜ್ಯದಲ್ಲಿ ಚಿಕಿತ್ಸೆ ನೀಡಲಾದ 2.88 ಲಕ್ಷ ಪ್ರಕರಣಗಳಲ್ಲಿ 1.39 ಲಕ್ಷ ಮಂದಿಗೆ ಖಾಸಗಿ ಆಸ್ಪತ್ರೆಗಳಲ್ಲಿಯೇ ಚಿಕಿತ್ಸೆ ಒದಗಿಸಿದೆ.

ಈ ಪ್ರಕರಣಗಳಲ್ಲಿ 'ಆಯುಷ್ಮಾನ್ ಭಾರತ-ಆರೋಗ್ಯ ಕರ್ನಾಟಕ' ಯೋಜನೆಯಡಿ ಕೋವಿಡ್ ಪೀಡಿತರಿಗೆ ಚಿಕಿತ್ಸೆ ನೀಡಲಾಗಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ತೀವ್ರ ನಿಗಾ ಘಟಕ ಹೊಂದಿದ (ಐಸಿಯು) ಹಾಸಿಗೆಗಳ ಕೊರತೆ, ವೆಂಟಿಲೇಟರ್ ಸಂಪರ್ಕ ಹೊಂದಿದ ಹಾಸಿಗೆಗಳ ಸಮಸ್ಯೆ ಸೇರಿ ವಿವಿಧ ಕಾರಣಗಳಿಂದ ಖಾಸಗಿ ಆಸ್ಪತ್ರೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಕೋವಿಡ್ ಪೀಡಿತರನ್ನು ಶಿಫಾರಸು ಮಾಡಲಾಗಿದೆ. ಕೋವಿಡ್ ಕಾಣಿಸಿಕೊಂಡಾಗಿನಿಂದ 2022ರ ಜೂನ್ ಅಂತ್ಯಕ್ಕೆ 1.49 ಲಕ್ಷ ಮಂದಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಲಭ್ಯವಾಗಿದೆ.

ಐಸಿಯು ಚಿಕಿತ್ಸೆಗೆ ಸಂಬಂಧಿಸಿದಂತೆ ಶೇ 90ರಷ್ಟು ಪ್ರಕರಣಗಳನ್ನು ಖಾಸಗಿ ಆಸ್ಪತ್ರೆಗಳೇ ನಿರ್ವಹಿಸಿವೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಸಿಗೆ ಕೊರತೆ ಎದುರಾದ್ದರಿಂದ ರೆಫರಲ್ ಆಧಾರ ಚಿಕಿತ್ಸೆ ನೀಡಲಾಗಿದೆ

ಪ್ರಸನ್ನ ಎಚ್.ಎಂ., ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ ಅಧ್ಯಕ್ಷ

ಪ್ರಜಾವಾಣಿ ವಿಶೇಷ

### ಖಾಸಗಿ ನಿಯಂತ್ರಣದಲ್ಲಿದ್ದ ಹಾಸಿಗೆಗಳು

ಕೋವಿಡ್ ಮೂರನೇ ಅಲೆಯಲ್ಲಿ ಕೋವಿಡ್ ಚಿಕಿತ್ಸೆಗೆ ಸರ್ಕಾರ ಗುರುತಿಸಿದ್ದ 1.94 ಲಕ್ಷ ಹಾಸಿಗೆಗಳಲ್ಲಿ ಶೇ 73.71ರಷ್ಟು ಹಾಸಿಗೆಗಳು ಖಾಸಗಿಯವರ ನಿಯಂತ್ರಣದಲ್ಲಿಯೇ ಇದ್ದವು. 51,093 ಹಾಸಿಗೆಗಳು ಮಾತ್ರ ಸರ್ಕಾರಿ ವ್ಯವಸ್ಥೆಯಡಿಯಿತ್ತು. 1.43 ಲಕ್ಷ ಹಾಸಿಗೆಗಳು ಖಾಸಗಿ ಆಸ್ಪತ್ರೆ ಮತ್ತು ವೈದ್ಯಕೀಯ ಕಾಲೇಜುಗಳ ಅಡಿಯಲ್ಲಿ ಇದ್ದವು. ಕೋವಿಡ್ ಚಿಕಿತ್ಸೆಗೆ ಸಂಬಂಧಿಸಿದಂತೆ ಖಾಸಗಿ ಆಸ್ಪತ್ರೆಗಳಿಗೆ ಮೊದಲ ಮೂರು ಅಲೆಗಳಲ್ಲಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ ₹ 779.83 ಕೋಟಿ ಪಾವತಿಸಲಾಗಿದೆ.

ಬೆಂಗಳೂರಿನಲ್ಲಿ ಚಿಕಿತ್ಸೆ ಪಡೆದ 97,169 ಮಂದಿಯಲ್ಲಿ 70,755 ಮಂದಿಗೆ ಖಾಸಗಿ ಆಸ್ಪತ್ರೆಗಳಲ್ಲಿಯೇ ಶಿಫಾರಸು ಆಧಾರದಲ್ಲಿ ಚಿಕಿತ್ಸೆ ನೀಡಲಾಗಿದೆ. 20,414 ಮಂದಿಯನ್ನು ಮಾತ್ರ ಸರ್ಕಾರಿ ಆಸ್ಪತ್ರೆಗಳು ದಾಖಲಿಸಿಕೊಂಡು, ಚಿಕಿತ್ಸೆ ಒದಗಿಸಿವೆ. ಇದೇ ರೀತಿ, ಬೆಂಗಳೂರು ಗ್ರಾಮಾಂತರ, ದಕ್ಷಿಣ ಕನ್ನಡ ಹಾಗೂ ಉಡುಪಿಯಲ್ಲಿಯೂ ಸರ್ಕಾರಿ ಆಸ್ಪತ್ರೆಗಳಿಗಿಂತ ಖಾಸಗಿ ಆಸ್ಪತ್ರೆಗಳಲ್ಲಿಯೇ ಅಧಿಕ ಮಂದಿಗೆ ಚಿಕಿತ್ಸೆ ಕಲ್ಪಿಸಲಾಗಿದೆ.

ರಾಜ್ಯದಲ್ಲಿ 2020ರ ಮಾ.8ರಂದು ಮೊದಲ ಕೋವಿಡ್ ಪ್ರಕರಣ ವರದಿಯಾಗಿತ್ತು. ಬಳಿಕ ಪ್ರಕರಣಗಳ ಸಂಖ್ಯೆ ಏರಿಕೆ ಕಂಡಿದ್ದರಿಂದ ಪ್ರಮುಖ ಸರ್ಕಾರಿ ಆಸ್ಪತ್ರೆಗಳ ಹಾಗೂ ವೈದ್ಯಕೀಯ ಕಾಲೇಜುಗಳಲ್ಲಿ ಕೋವಿಡ್ ಚಿಕಿತ್ಸೆಗೆ ಹಾಸಿಗೆಗಳನ್ನು ನಿಗದಿಪಡಿಸಲಾಗಿತ್ತು. ಪ್ರಕರಣಗಳ ಸಂಖ್ಯೆ ಹೆಚ್ಚಳವಾದ ಬಳಿಕ ಬೆಂಗಳೂರಿನ ವಿಕ್ಟೋರಿಯಾ, ಬೌರಿಂಗ್ ಸೇರಿ ಕೆಲ ಸರ್ಕಾರಿ ಆಸ್ಪತ್ರೆಗಳನ್ನು ಕೋವಿಡ್ ಆಸ್ಪತ್ರೆಯನ್ನಾಗಿ ಪರಿವರ್ತಿಸಲಾಗಿತ್ತು.

ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಮಸ್ಯೆ ಗಂಭೀರ ಸ್ವರೂಪ ಪಡೆದ ಬಳಿಕ, ಖಾಸಗಿ ಆಸ್ಪತ್ರೆಗಳಿಗೆ ದರ ನಿಗದಿಪಡಿಸಿ, ಶೇ 50 ರಷ್ಟು ಹಾಸಿಗೆಗಳನ್ನು ಶಿಫಾರಸು ಮಾಡುವ ರೋಗಿಗಳಿಗೆ ಮೀಸಲಿಡುವಂತೆ ಸರ್ಕಾರ ಆದೇಶ ಹೊರಡಿಸಿತ್ತು. ಕೋವಿಡ್ ಚಿಕಿತ್ಸೆಗೆ ಎರಡನೇ ಅಲೆಯಲ್ಲಿ 63,761 ಹಾಸಿಗೆಗಳನ್ನು ಮೀಸಲಿರಿಸಲಾಗಿತ್ತು. '[illegible] ಎರಡೂ ಅಲೆ ಮುಗಿಯುವ ಹೊತ್ತಿಗೆ ರಾಜ್ಯದ 37 ಸಾವಿರಕ್ಕೂ ಹೆಚ್ಚು ಜನ ಪ್ರಾಣ ಕಳೆದುಕೊಂಡಿದ್ದರು.

'ಕೋವಿಡ್ ಕಾಣಿಸಿಕೊಂಡ ಸಂದರ್ಭದಲ್ಲಿ ಪ್ರತಿಯೊಬ್ಬರಿಗೂ ತ್ವರಿತ ಹಾಗೂ ಗುಣಮಟ್ಟದ ವೈದ್ಯಕೀಯ ಸೇವೆ ಒದಗಿಸುವುದು ನಮ್ಮ ಆದ್ಯತೆಯಾಗಿತ್ತು. ಆದ್ದರಿಂದ ಖಾಸಗಿ ವ್ಯವಸ್ಥೆಯಡಿಯೂ ಹೆಚ್ಚಿನವರಿಗೆ ವೈದ್ಯಕೀಯ ಸೌಲಭ್ಯ ಒದಗಿಸಲಾಗಿದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಇಲಾಖೆ ಆಯುಕ್ತ ಡಿ. ರಂದೀಪ್ ದೂರವಾಣಿ ಸಂಪರ್ಕಕ್ಕೆ ಲಭ್ಯವಾಗಲಿಲ್ಲ.

## ಸುದ್ದಿ 2 ನಿಮಿಷ

### ಗುತ್ತಿಗೆದಾರ ಸಂತೋಷ ಪಾಟೀಲ ಲಿಂಗಾಯತರಲ್ಲವೇ?: ಕಾಂಗ್ರೆಸ್

ಬೆಂಗಳೂರು: 'ಶೇ 40ರ ಲಂಚಕ್ಕಾಗಿ ಕಿರುಕುಳ ನೀಡಿ, ಬಿಜೆಪಿ ಸರ್ಕಾರದಿಂದ ಕೊಲೆಯಾದ ಗುತ್ತಿಗೆದಾರ ಸಂತೋಷ್ ಪಾಟೀಲ್ ಲಿಂಗಾಯತರಲ್ಲವೇ' ಎಂದು ಕರ್ನಾಟಕ ಕಾಂಗ್ರೆಸ್ ಪಕ್ಷವು ಪ್ರಶ್ನಿಸಿದೆ.

ಬಿಜೆಪಿ ನಾಯಕರು 'ಲಿಂಗಾಯತ' ಚರ್ಚೆಯನ್ನು ಮುನ್ನೆಲೆಗೆ ತಂದ ಬೆನ್ನಲ್ಲೇ ಟ್ವೀಟ್ ಮಾಡಿರುವ ಕಾಂಗ್ರೆಸ್, ಜಾತಿ ಶೀಲ್ಡ್ ಹಿಡಿದು ಕಮಿಷನ್ ಭ್ರಷ್ಟಾಚಾರವನ್ನು ರಕ್ಷಿಸಲು ಬಿಜೆಪಿ ವಿಫಲ ಯತ್ನ ನಡೆಸುತ್ತಿದೆ ಎಂದು ಹಂಗಿಸಿದೆ.

'ಲಿಂಗಾಯತನೊಬ್ಬನ ಜೀವ ತೆಗೆದ ಬಿಜೆಪಿ ಸರ್ಕಾರ ಲಿಂಗಾಯತ ವಿರೋಧಿಯಲ್ಲವೇ? ಲಂಚ ಕಿರುಕುಳದ ಸಂತ್ರಸ್ತರಲ್ಲಿ ಲಿಂಗಾಯತ ಗುತ್ತಿಗೆದಾರರು ಇಲ್ಲವೇ? ಬಿಜೆಪಿ ಲಿಂಗಾಯತ ವಿರೋಧಿ ಮಾತ್ರವಲ್ಲ, ಇಡೀ ಮನುಕುಲದ ವಿರೋಧಿ' ಎಂದೂ ಟೀಕಿಸಿದೆ.

'ಮಠಗಳ ಅನುದಾನ ಪಡೆಯಲು ಶೇ 30ರ ಲಂಚ ಕೊಡಬೇಕು ಎಂದು ಎಂದು ಲಿಂಗಾಯತ ಸಮುದಾಯದ ಸ್ವಾಮೀಜಿಗಳು ಆರೋಪಿಸಿದ್ದರು. ಇದು ಲಿಂಗಾಯತರಿಗೆ ಮಾಡಿದ ಅವಮಾನವಲ್ಲವೇ? ಶೇ 40ರ ಸರ್ಕಾರದ್ದು ಜಾತ್ಯಾತೀತ ಭ್ರಷ್ಟಾಚಾರ. ಇದರಲ್ಲಿ ಲಿಂಗಾಯತರೂ ಸಂತ್ರಸ್ತರೇ' ಎಂದು ಕಾಂಗ್ರೆಸ್ ಹೇಳಿದೆ.

### ರಸ್ತೆ ಅಭಿವೃದ್ಧಿಗೆ ಚಾಲನೆ

ರಾಜರಾಜೇಶ್ವರಿನಗರ: ದೊಡ್ಡಗೊಲ್ಲರಹಟ್ಟಿಯ ವ್ಯಾಪ್ತಿಯಲ್ಲಿ ₹ 75 ಕೋಟಿ ವೆಚ್ಚದಲ್ಲಿ ಕೈಗೊಂಡಿರುವ ರಸ್ತೆ ಅಭಿವೃದ್ಧಿ, ಚರಂಡಿ, ಡಾಂಬರೀಕರಣ ಕಾಮಗಾರಿಗಳಿಗೆ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಚಾಲನೆ ನೀಡಿದರು.

ನಂತರ ಮಾತನಾಡಿ, 'ಮಾಗಡಿ ಮುಖ್ಯರಸ್ತೆಯ ಅಭಿವೃದ್ಧಿಗೆ ಶೀಘ್ರ ಚಾಲನೆ ನೀಡಲಾಗುವುದು. ಈ ರಸ್ತೆಯಲ್ಲಿ ಬೆಂಗಳೂರು ಮೆಟ್ರೊ ರೈಲು ಕಾಮಗಾರಿಗೆ ಮಂಜೂರಾತಿ ಸಿಕ್ಕಿದ್ದು, ಕಾಮಗಾರಿಯನ್ನು ಮೆಟ್ರೊ ರೈಲು ನಿಗಮ ಮಾಡಬೇಕಾಗಿತ್ತು. ಮೆಟ್ರೊ ರೈಲು ಕಾಮಗಾರಿ ವಿಳಂಬದಿಂದ ರಸ್ತೆಯಲ್ಲಿ ಗುಂಡಿಗಳು ಬಿದ್ದು ಸಮಸ್ಯೆಯಾಗಿದೆ. ಹೇರೋಹಳ್ಳಿ, ದೊಡ್ಡ ಬಿದರಕಲ್ಲು ವಾರ್ಡ್ ವ್ಯಾಪ್ತಿಯಲ್ಲಿ ಕಾವೇರಿ ನೀರು, ಒಳಚರಂಡಿ ಕಾಮಗಾರಿಗಳು ಸಂಪೂರ್ಣ ಮುಗಿದಿದ್ದು, ಎಲ್ಲ ಬಡಾವಣೆಗಳಲ್ಲಿ ಡಾಂಬರೀಕರಣ ಕೈಗೊಳ್ಳಲಾಗಿದೆ' ಎಂದರು.

ಪಾಲಿಕೆಯ ಮಾಜಿ ಸದಸ್ಯರಾದ ರಾಜಣ್ಣ, ಆರ್ಯ ಶ್ರೀನಿವಾಸ್, ರ.ಆಂಜನಪ್ಪ, ಮೈಲಸಂದ್ರ ಮುನಿರಾಜು ಬಿಜೆಪಿ ಮುಖಂಡರಾದ ನಿಶಾಂತ್ ಸೋಮಶೇಖರ್, ಬಿ.ಆರ್.ಶಿವಮಾದಯ್ಯ, ವಾಜರಹಳ್ಳಿ ಎಸ್. ಶಶಿಕುಮಾರ್, ಹೊಸಹಳ್ಳಿ ಎಂ.ಸತೀಶ್ ಇತರರು ಇದ್ದರು.

ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಮೆಟ್ಟಿಲೇರಿದ ಪ್ರಕರಣ

# 'ವಸತಿ ಸಮುಚ್ಚಯಕ್ಕೆ ನಾಲೆ ಜಾಗ ಒತ್ತುವರಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಮಹದೇವಪುರ ವಲಯದ ಕುಂಬೇನ ಅಗ್ರಹಾರದಲ್ಲಿ ವಸತಿ ಸಮುಚ್ಚಯದ ಮಾಲೀಕರು ನಾಲೆಯ ಜಾಗ ಒತ್ತುವರಿ ಮಾಡಿದ್ದು, ಈ ಪ್ರಕರಣ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ದಕ್ಷಿಣ ವಲಯ ಪೀಠದ ಮೆಟ್ಟಿಲೇರಿದೆ.

ಕುಂಬೇನ ಅಗ್ರಹಾರದ ಸರ್ವೆ ಸಂಖ್ಯೆ 2/1 ಹಾಗೂ 2/7ರಲ್ಲಿ ವೆಂಕಟೇಶ್ವರ ಬಿಲ್ಡರ್ (ಎಸ್.ವಿ.ಎಲಿಗೆಂಟ್) ವಸತಿ ಸಮುಚ್ಚಯ ನಿರ್ಮಾಣ ಮಾಡುತ್ತಿದೆ. ಈ ಬಿಲ್ಡರ್ ನಾಲೆಯ ಮೀಸಲು ಪ್ರದೇಶದಲ್ಲಿ 203 ಚದರ ಮೀಟರ್‌ನಲ್ಲಿ ಈಜುಕೊಳ, 20.50 ಚದರ ಮೀಟರ್‌ನಲ್ಲಿ ಸ್ನಾನದ ಕೊಠಡಿಗಳನ್ನು ನಿರ್ಮಾಣ ಮಾಡಿದ್ದಾರೆ. ಎನ್‌ಜಿಟಿಯಲ್ಲಿ ಪ್ರಕರಣ ದಾಖಲಾದ ಬೆನ್ನಲ್ಲೇ ಎಚ್ಚೆತ್ತಿರುವ ಪಾಲಿಕೆಯು, ಬಿಬಿಎಂಪಿ ಕಾಯ್ದೆ 2020ರ ಕಟ್ಟಡ ನಿಯಮಾವಳಿ ಹಾಗೂ ಬೈಲಾ ಉಲ್ಲಂಘಿಸಿ ಅನಧಿಕೃತ ಕಟ್ಟಡಗಳನ್ನು ನಿರ್ಮಾಣ ಮಾಡಲಾಗಿದೆ ಎಂದು ಹೇಳಿದೆ. ಜತೆಗೆ, ಅನಧಿಕೃತ ನಿರ್ಮಾಣಗಳನ್ನು ಕೂಡಲೇ ತೆರವು ಮಾಡಬೇಕು ಎಂದು ನಿರ್ದೇಶನ ನೀಡಿದೆ. ಅನಧಿಕೃತ ಕಟ್ಟಡ ನಿರ್ಮಾಣದ ತೆರವಿಗೆ ಕ್ರಮವನ್ನೂ ಕೈಗೊಳ್ಳಲಾಗಿದೆ ಎಂದೂ ಎನ್‌ಜಿಟಿಗೆ ವರದಿ ಸಲ್ಲಿಸಿದೆ.

ಮುಖ್ಯಾಂಶಗಳು

- ಅಕ್ಟೋಬರ್ 10ಕ್ಕೆ ವಿಚಾರಣೆ ಮುಂದೂಡಿಕೆ
- ಒತ್ತುವರಿ ಕುರಿತು ಸರ್ವೆ ನಡೆಸಿ ವರದಿ ಸಲ್ಲಿಕೆಗೆ ಸೂಚನೆ
- ಕುಂಬೇನ ಅಗ್ರಹಾರ ನಿವಾಸಿ ಪರಮೇಶ್ ಎಂಬುವವರಿಂದ ದೂರು

ನಾಲೆಯ ಮೀಸಲು ಪ್ರದೇಶದಲ್ಲಿ ನಿಯಮಬಾಹಿರವಾಗಿ ವಸತಿ ಸಮುಚ್ಚಯ ನಿರ್ಮಾಣ ಮಾಡಲಾಗುತ್ತಿದೆ ಎಂದು ಆರೋಪಿಸಿ ಸ್ಥಳೀಯ ನಿವಾಸಿ ಪರಮೇಶ್ ವಿ. ಎಂಬುವರು ಬಿಬಿಎಂಪಿಗೆ ದೂರು ಸಲ್ಲಿಸಿದ್ದರು. ಆದರೆ, ಬಿಬಿಎಂಪಿ ಅಧಿಕಾರಿಗಳು ಕ್ರಮ ಕೈಗೊಂಡಿರಲಿಲ್ಲ. ಬಳಿಕ ಪರಮೇಶ್, ಎನ್‌ಜಿಟಿಯಲ್ಲಿ ಪ್ರಕರಣ ದಾಖಲಿಸಿದ್ದರು.

ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ ಉಪ ಪರಿಸರ ಅಧಿಕಾರಿ 2022ರ ಏಪ್ರಿಲ್ 27ರಂದು ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಿದ್ದರು. ಮಹಾಯೋಜನೆಯ ನಿಯಮಗಳನ್ನು ಉಲ್ಲಂಘಿಸಿ ನಿರ್ಮಾಣ ಚಟುವಟಿಕೆ ನಡೆಸಲಾಗಿದೆ ಎಂದು ವರದಿ ಸಲ್ಲಿಸಿದ್ದರು. ಎನ್‌ಜಿಟಿಯಲ್ಲಿ ಜುಲೈ 18ರಂದು ನಡೆದ ವಿಚಾರಣೆಯ ವೇಳೆ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು ಈ ಬಗ್ಗೆ ಮಾಹಿತಿ ನೀಡಿದ್ದರು. ಅನಧಿಕೃತವಾಗಿ ಕಟ್ಟಡ ನಿರ್ಮಾಣ ಮಾಡಿದ್ದರೂ ಬಿಬಿಎಂಪಿ ಅಧಿಕಾರಿಗಳು ಕ್ರಮ ಕೈಗೊಳ್ಳದ ಎನ್‌ಜಿಟಿ ಅಚ್ಚರಿ ವ್ಯಕ್ತಪಡಿಸಿತ್ತು.

ಸೆಪ್ಟೆಂಬರ್ 19ರಂದು ನಡೆದ ಪ್ರಕರಣದ ವಿಚಾರಣೆಯ ವೇಳೆ ಬಿಬಿಎಂಪಿ ಅಧಿಕಾರಿಗಳು, ಅಕ್ರಮ ನಿರ್ಮಾಣಗಳನ್ನು ತೆರವು ಮಾಡಲಾಗಿದೆ ಎಂದು ಮಾಹಿತಿ ನೀಡಿದರು. ಈ ಸಂಬಂಧ ಕೈಗೊಂಡ ಕ್ರಮಗಳ ವರದಿಯನ್ನು ಎನ್‌ಜಿಟಿಗೆ ಸಲ್ಲಿಸಿದರು. ಅರ್ಜಿದಾರರ ವಕೀಲರು, 'ನಾಲೆಯ ಮೀಸಲು ಪ್ರದೇಶ ಒತ್ತುವರಿ ಮಾಡಿ ಕಟ್ಟಡದ ಕಾಂಪೌಂಡ್ ನಿರ್ಮಾಣ ಮಾಡಲಾಗಿದೆ' ಎಂದು ವಾದಿಸಿದರು. ಈ ಬಗ್ಗೆ ಅಧಿಕಾರಿಗಳು ಸರ್ವೆ ನಡೆಸಿ ವರದಿ ಸಲ್ಲಿಸಬೇಕು ಎಂದು ಎನ್‌ಜಿಟಿ ಆದೇಶ ಹೊರಡಿಸಿದೆ. ಪ್ರಕರಣದ ವಿಚಾರಣೆಯನ್ನು ಅಕ್ಟೋಬರ್ 10ಕ್ಕೆ ಮುಂದೂಡಲಾಗಿದೆ.

## ಶೇಕಡ 10ರಷ್ಟು ಶುಲ್ಕ ಹೆಚ್ಚಳ

ಒಂದನೇ ಪುಟದಿಂದ...

'2021-22ನೇ ಸಾಲಿನಲ್ಲಿ ಶುಲ್ಕ ಹೆಚ್ಚಳ ಮಾಡಿಲ್ಲ. ಆದರೆ, ಬೋಧಕ ಸಿಬ್ಬಂದಿಯ ವೇತನ ಹೆಚ್ಚಿಸಲಾಗಿದೆ. ಹೀಗಾಗಿ, ವೈದ್ಯಕೀಯ ಕಾಲೇಜುಗಳನ್ನು ನಡೆಸುವುದು ಕಷ್ಟಕರವಾಗಿದ್ದು, ಶೇ 15ರಷ್ಟು ಶುಲ್ಕ ಹೆಚ್ಚಿಸಲೇ ಬೇಕು' ಎಂದು ಸರ್ಕಾರ ಮುಂದೆ ಆಡಳಿತ ಮಂಡಳಿಗಳು ಬೇಡಿಕೆ ಇಟ್ಟಿದ್ದವು. ಬೇಡಿಕೆಯನ್ನು ಗಣನೆಗೆ ತೆಗೆದುಕೊಂಡ ಸರ್ಕಾರ, ಶೇ 10ರಷ್ಟು ಹೆಚ್ಚಿಸಲು ಒಪ್ಪಿಗೆ ನೀಡಿದೆ.

'ಕೋವಿಡ್ ಕಾರಣದಿಂದ ಕಳೆದ ವರ್ಷ ಶುಲ್ಕ ಹೆಚ್ಚಿಸಲು ಸರ್ಕಾರ ಅವಕಾಶ ನೀಡಿಲ್ಲ. ಮಾನವೀಯ ದೃಷ್ಟಿಯಿಂದ ನಾವು ಕೂಡಾ ಅದಕ್ಕೆ ಒಪ್ಪಿದ್ದೆವು. ಈ ಬಾರಿ ಶೇ 15ರಷ್ಟು ಹೆಚ್ಚಿಸುವಂತೆ ಆಗ್ರಹಿಸಿದ್ದೆವು' ಎಂದು ಖಾಸಗಿ ವೈದ್ಯಕೀಯ ಕಾಲೇಜಿನ ಪ್ರತಿನಿಧಿಯೊಬ್ಬರು ಹೇಳಿದರು. ಶುಲ್ಕ ಹೆಚ್ಚಳ ಒಪ್ಪಂದಕ್ಕೆ ಸೋಮವಾರ ಸಹಿ ಮಾಡಿದ ಬಳಿಕ ಮುಖ್ಯಮಂತ್ರಿ ಅಥವಾ ವೈದ್ಯಕೀಯ ಸಚಿವರು ಶುಲ್ಕ ಹೆಚ್ಚಳವನ್ನು ಘೋಷಿಸಲಿದ್ದಾರೆ ಎಂದೂ ಮೂಲಗಳು ತಿಳಿಸಿವೆ.

ಸರ್ಕಾರಿ ವೈದ್ಯಕೀಯ ಕಾಲೇಜಿಗಳಲ್ಲಿ ಕಳೆದ ವರ್ಷದಂತೆ ₹ 59,800 ಶುಲ್ಕ ಮುಂದುವರಿಯಲಿದೆ. 2018-19ರಲ್ಲಿ ಸರ್ಕಾರಿ ಕಾಲೇಜುಗಳಲ್ಲಿನ ಶುಲ್ಕವನ್ನು ₹ 16,700ರಿಂದ ₹ 59,800ಕ್ಕೆ ಹೆಚ್ಚಿಸಲಾಗಿತ್ತು.

# ಮ್ಯಾನ್‌ಹೋಲ್‌ಗೆ ಇಳಿದ ಕಾರ್ಮಿಕರು

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಬಸವನಪುರ ವಾರ್ಡ್‌ನ ಸಮೃದ್ಧಿ ಬಡಾವಣೆಯಲ್ಲಿ ಇಬ್ಬರು ಕಾರ್ಮಿಕರನ್ನು ಮ್ಯಾನ್‌ಹೋಲ್‌ಗೆ ಇಳಿಸಿ ಸ್ವಚ್ಛಗೊಳಿಸಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು, ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಶೀಗೆಹಳ್ಳಿಯಿಂದ ಬೆಳತೂರು ಕಡೆಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯ ಸಮೃದ್ಧಿ ಬಡಾವಣೆ ಸಮೀಪ ಶುಕ್ರವಾರ ಬೆಳಿಗ್ಗೆ 11.30ರ ಸಮಯದಲ್ಲಿ ಇಬ್ಬರು ಕಾರ್ಮಿಕರು ಮ್ಯಾನ್‌ಹೋಲ್ ಸ್ವಚ್ಛಗೊಳಿಸುತ್ತಿರುವುದು ಕಂಡುಬಂದಿತ್ತು. ಸಾಮಾಜಿಕ ಕಾರ್ಯಕರ್ತ ಬೆಳತೂರು ಪರಮೇಶ್ ಹಾಗೂ ಜಗನ್ ಕುಮಾರ್ ಇದನ್ನು ಗಮನಿಸಿದ್ದಾರೆ. ಬಿಡಬ್ಲ್ಯೂಎಸ್‌ಎಸ್‌ಬಿ ಅಧಿಕಾರಿಗಳು ಹಾಗೂ ಗುತ್ತಿಗೆದಾರರೇ ಈ ಘಟನೆಗೆ ಕಾರಣ ಎಂದು ದೂರಿರುವ ಅವರು, ರಾಷ್ಟ್ರಪತಿ, ರಾಜ್ಯಪಾಲ, ಮುಖ್ಯ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ಸಮಾಜ ಕಲ್ಯಾಣ ಇಲಾಖೆಗೆ ಇ-ಮೇಲ್ ಕಳುಹಿಸಿದ್ದಾರೆ.

ಮ್ಯಾನ್ ಹೋಲ್‌ನಿಂದ ಹೊರಬರುತ್ತಿರುವ ಕಾರ್ಮಿಕ

'ಮ್ಯಾನ್‌ಹೋಲ್‌ಗೆ ಕಾರ್ಮಿಕರನ್ನು ಇಳಿಸುವ ಪದ್ಧತಿ ನಿಷೇಧಿಸಲಾಗಿದೆ. ಆದರೆ, ಅಧಿಕಾರಿಗಳು ಇಬ್ಬರು ಕಾರ್ಮಿಕರನ್ನು ಮ್ಯಾನ್‌ಹೋಲ್‌ಗೆ ಇಳಿಸಿ ಸ್ವಚ್ಛಗೊಳಿಸುವ ಕಾರ್ಯಕ್ಕೆ ಮುಂದಾಗಿರುವುದು ಹೇಯಕರ. ಪಕ್ಕದಲ್ಲೇ ಸ್ವಚ್ಛಗೊಳಿಸುವ ಯಂತ್ರಗಳಿದ್ದರೂ ಬಳಸಿಕೊಳ್ಳದೆ ಕಾರ್ಮಿಕರನ್ನು ಮ್ಯಾನ್‌ಹೋಲ್‌ಗೆ ಇಳಿಸಿದ್ದಾರೆ. ಕಾರ್ಮಿಕರು ಬರಿಗೈಯಲ್ಲಿ ಬಕೆಟ್‌ಗಳ ಮೂಲಕ ಆಳವಾದ ಮ್ಯಾನ್‌ಹೋಲ್ ಸ್ವಚ್ಛಗೊಳಿಸುವುದನ್ನು ಕಂಡು ಅವರನ್ನು ಕೂಡಲೇ ರಕ್ಷಣೆ ಮಾಡಿದ್ದೇವೆ' ಎಂದು ಬೆಳತೂರು ಪರಮೇಶ್ ತಿಳಿಸಿದರು.

ಆವಲಹಳ್ಳಿ ಠಾಣೆ ಇನ್‌ಸ್ಪೆಕ್ಟರ್ ಪ್ರಕಾಶ್ ಪ್ರತಿಕ್ರಿಯಿಸಿ, 'ಘಟನೆ ಸಂಬಂಧ ಠಾಣೆಯಲ್ಲಿ ಯಾವುದೇ ದೂರು ದಾಖಲಾಗಿಲ್ಲ. ಕಾಡುಗೋಡಿ ಅಥವಾ ಕೆ.ಆರ್.ಪುರ ಠಾಣೆ ವ್ಯಾಪ್ತಿಗೆ ಈ ಪ್ರಕರಣ ಬರಲಿದೆ' ಎಂದರು.

### ಸಂಪರ್ಕ ಕಲ್ಪಿಸಿಲ್ಲ: ಅಧಿಕಾರಿಗಳ ಸ್ಪಷ್ಟನೆ

110 ಹಳ್ಳಿಗಳಿಗೆ ಕಾವೇರಿ ನೀರು ಒದಗಿಸುವ ಹೊಸ ಕಾಮಗಾರಿ ಪ್ರಗತಿಯಲ್ಲಿದೆ. ಹೊಸ ಮ್ಯಾನ್‌ಹೋಲ್‌ಗೆ ಪ್ಲಾಸ್ಟರಿಂಗ್ ಕೆಲಸ ನಡೆಯುತ್ತಿದೆ. ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಹೊಸ ಮ್ಯಾನ್‌ಹೋಲ್‌ಗೆ ಇನ್ನೂ ಎಸ್.ಟಿ.ಪಿ.ಗೆ ಸಂಪರ್ಕವೇ ಕಲ್ಪಿಸಿಲ್ಲ. ಇತ್ತೀಚೆಗೆ ಸುರಿದ ಭಾರಿ ಮಳೆಗೆ ಮ್ಯಾನ್‌ಹೋಲ್‌ಗೆ ಮಳೆ ನೀರು ಹೋಗಿರುವುರಿಂದ ಸ್ವಚ್ಛಗೊಳಿಸಿರಬಹುದು. ಈ ಘಟನೆ ಬಗ್ಗೆ ತಪ್ಪು ಮಾಹಿತಿ ನೀಡಿದ್ದಾರೆ. ಘಟನೆ ಕುರಿತು ಹಿರಿಯ ಅಧಿಕಾರಿಗಳಿಗೆ ತಿಳಿಸಲಾಗಿದೆ ಎಂದು ಬಿಡಬ್ಲ್ಯುಎಸ್‌ಎಸ್‌ಬಿ ಎಇ ವಿನಯ್ ಬಾಬು ತಿಳಿಸಿದ್ದಾರೆ.

ಸ್ವಚ್ಛಗೊಳಿಸಲು ಮ್ಯಾನ್ ಹೋಲ್‌ಗೆ ಇಳಿದಿರುವ ಕಾರ್ಮಿಕ

ವಸಂತ ಪ್ರಕಾಶನದ 12 ಮಕ್ಕಳ ಕೃತಿಗಳ ಬಿಡುಗಡೆ

# 'ಅನ್ನದ ಜತೆಗೆ ಅರಿವೂ ಮುಖ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಕ್ಕಳಿಗೆ ಊಟ ಮಾಡಿಸಲು ಈಗ ಮೊಬೈಲ್ ಫೋನ್ ಕೊಡುವುದು ಅನಿವಾರ್ಯವಾಗಿದೆ. ನಮ್ಮ ಜನಪದರು ಮಕ್ಕಳಿಗೆ ಅನ್ನದ ಜತೆಗೆ ಅರಿವನ್ನೂ ತಿನ್ನಿಸುತ್ತಿದ್ದರು. ಅದು ಅತ್ಯಂತ ಮುಖ್ಯವಾದ ಕೆಲಸ' ಎಂದು ಸಾಹಿತಿ ಎಸ್.ಜಿ.ಸಿದ್ಧರಾಮಯ್ಯ ಹೇಳಿದರು.

ವಸಂತ ಪ್ರಕಾಶನ ಪ್ರಕಟಿಸಿರುವ ಎಚ್.ಎಸ್. ವೆಂಕಟೇಶಮೂರ್ತಿ ಅವರು ಸಂಪಾದಿಸಿರುವ 'ವಸಂತ ಬಾಲ ಸಾಹಿತ್ಯ ಮಾಲೆ'ಯ 12 ಮಕ್ಕಳ ಕೃತಿಗಳನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, 'ಆಟ ಮತ್ತು ಊಟದ ಹೊತ್ತಿನಲ್ಲೂ ಮಕ್ಕಳಲ್ಲಿ ಪ್ರಪಂಚ ಜ್ಞಾನವನ್ನು ಸೃಜನಶೀಲವಾಗಿ ತುಂಬುತ್ತಿದ್ದರು. ಈಗಿನ ಮಕ್ಕಳಿಗೆ ಮೊಬೈಲ್ ಇಲ್ಲದೆ ಊಟ ಮಾಡಿಸುವುದೇ ಕಷ್ಟ. ಫೋನ್‌ನಲ್ಲಿ ಬರುವ ಚಿತ್ರಗಳಿಗೂ, ತಿನ್ನುವ ತುತ್ತಿಗೂ ಸಂಬಂಧವೇ ಇರುವುದಿಲ್ಲ. ನವ್ಯ ಸಾಹಿತಿಗಳು ಮಕ್ಕಳ ಸಾಹಿತ್ಯದಿಂದ ದೂರವಾಗಿದ್ದರು. ಮಹಾಕಾವ್ಯಗಳನ್ನೂ ರಚಿಸಿರುವ ಎಚ್. ಎಸ್. ವೆಂಕಟೇಶಮೂರ್ತಿ ಅವರು 12 ಮಕ್ಕಳ ಕೃತಿಗಳನ್ನು ತಮ್ಮ ಸಂಪಾದಕತ್ವದಲ್ಲಿ ಹೊರ ತಂದಿರುವುದು ಸಂತಸದ ಸಂಗತಿ' ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ, 'ಮಕ್ಕಳ ಸಾಹಿತ್ಯ ಲೋಕಕ್ಕೆ ಹನ್ನೆರಡು ಕೃತಿಗಳು ಒಂದೇ ದಿನ ಲೋಕಾರ್ಪಣೆಗೊಂಡಿದ್ದು, ಇದು ಸುಲಭದ ಸಂಗತಿಯಲ್ಲ. ಕೃತಿಗಳು ಮಕ್ಕಳ ಮನಸ್ಸನ್ನು ತಲುಪುವಂತೆ ಮಾಡುವುದು ಪೋಷಕರ ಕರ್ತವ್ಯ' ಎಂದು ಸಲಹೆ ನೀಡಿದರು.

ಕೃತಿಗಳನ್ನು ಪರಿಚಯಿಸಿದ 'ಸುಧಾ' ವಾರ ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ರಘುನಾಥ ಚ.ಹ. ಮಾತನಾಡಿ, 'ಮಕ್ಕಳ ಸಾಹಿತ್ಯಕ್ಕೆ ಇದು ಸಮೃದ್ಧಿಯ ವರ್ಷವಾಗಿದೆ. ಮಕ್ಕಳ ಸಾಹಿತ್ಯಕ್ಕೆ ಕನ್ನಡ ಬರಹಲೋಕ ತೆರೆದುಕೊಳ್ಳುತ್ತಿದೆ ಎಂಬುದಕ್ಕೆ 12 ಮಕ್ಕಳ ಕೃತಿಗಳ ಬಿಡುಗಡೆಯೇ ಸಾಕ್ಷಿ. ಎಲ್ಲಾ ಲೇಖಕರು ತಮ್ಮ ಜೀವಮಾನದಲ್ಲಿ ಒಂದಾದರೂ ಮಕ್ಕಳ ಸಾಹಿತ್ಯದ ಕೃತಿ ರಚಿಸಬೇಕು' ಎಂದರು.

### ಬಿಡುಗಡೆಯಾದ ಕೃತಿಗಳು

ಕೆ.ವಿ. ತಿರುಮಲೇಶ್ ಅವರ 'ಪುಟ್ಟನ ಮನ', ಬಸು ಬೇವಿನಗಿಡದ ಅವರ 'ಒಳ್ಳೆಯ ದೆವ್ವ', ಎಚ್. ಡುಂಡಿರಾಜ್ ಅವರ 'ಕಾಳಿಗುಡ್ಡದ ಕೌತುಕ', ಚಿಂತಾಮಣಿ ಕೊಡ್ಲೆಕೆರೆ ಅವರ 'ಓಕೆ ಮೇಕೆ', ಎನ್. ಶ್ರೀನಿವಾಸ ಉಡುಪ ಅವರ 'ಪಾಪು, ಪದ್ಯಗಳು ಮತ್ತು ಓಬಿರಾಯನ ಕಥೆ', ವೈದೇಹಿ ಅವರ 'ಧಾಮ್‌ಧೂಮ್ ಸುಂಟರಗಾಳಿ', ರಾಧೇಶ ತೋಳ್ಪಾಡಿ ಎಸ್. ಅವರ 'ನವಿಲ ಕರುಣೆ', ಎಚ್.ಎಸ್. ವೆಂಕಟೇಶಮೂರ್ತಿ ಅವರ 'ಗುಬ್ಬಿ ಜಂಕ್ಷನ್', ಜಿ.ಎನ್. ರಂಗನಾಥ ರಾವ್ ಅವರ 'ಟಾಮಿಯ ಪ್ರಚಂಡ ಸಾಹಸಗಳು', ಟಿ.ಎಸ್. ನಾಗರಾಜಶೆಟ್ಟಿ ಅವರ 'ನರಿಯಣ್ಣನ ಅಂಗಡಿ', ವಿಜಯಶ್ರೀ ಹಾಲಾಡಿ ಅವರ 'ಪಟ್ ಪಟಕಾಯಿ ಚಟ್ ಪಟ', ಟಿ.ಎಸ್.ರಮಾನಂದ ಅವರ 'ಮರಿಯಾನೆಗೆ ಮಾತು ಬಂತು'.

ಶನಿವಾರ ರಾತ್ರಿ ದಿಢೀರ್ ಸುರಿದ ಮಳೆಯಿಂದ ಹೊಂಬೇಗೌಡನಗರದ ರಸ್ತೆಯಲ್ಲಿ ತುಂಬಿದ್ದ ನೀರಿನಲ್ಲಿ ವಾಹನಗಳು ಸಂಚರಿಸಿದವು —ಪ್ರಜಾವಾಣಿ ಚಿತ್ರ

## 'ತಂಬಾಕು ಜಾಗೃತಿ ಕಡ್ಡಾಯಗೊಳಿಸಿ'

ಬೆಂಗಳೂರು: 'ಕೋವಿಡ್ ಕಾಣಿಸಿಕೊಂಡ ಬಳಿಕ ವಿವಿಧ ಒಟಿಟಿ ವೇದಿಕೆಗಳ ಮೂಲಕ ಚಲನಚಿತ್ರ, ವೆಬ್ ಸರಣಿಗಳನ್ನು ವೀಕ್ಷಿಸುವವರ ಸಂಖ್ಯೆಯು ಗಣನೀಯವಾಗಿ ಹೆಚ್ಚಾಗಿದೆ. ಈ ವೇದಿಕೆಗಳಲ್ಲಿ ತಂಬಾಕು ಬಳಕೆಯ ದುಷ್ಪರಿಣಾಮದ ಎಚ್ಚರಿಕೆ ಸಂದೇಶಗಳ ಪ್ರದರ್ಶನವನ್ನು ಕಡ್ಡಾಯಗೊಳಿಸಬೇಕು' ಎಂದು ಆರೋಗ್ಯ ತಜ್ಞರು ಹಾಗೂ ವಿವಿಧ ವಿಶ್ವವಿದ್ಯಾಲಯಗಳ ಕುಲಪತಿಗಳು ಆಗ್ರಹಿಸಿದ್ದಾರೆ.

ಈ ಬಗ್ಗೆ ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವಿಯ ಅವರಿಗೆ ತಂಬಾಕು ಮುಕ್ತ ಕರ್ನಾಟಕ ವೇದಿಕೆ ನೇತೃತ್ವದಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕ್ರೈಸ್ಟ್ ವಿಶ್ವವಿದ್ಯಾಲಯ, ಮಂಗಳೂರು ವಿಶ್ವವಿದ್ಯಾಲಯ, ಸಿಎಂಆರ್ ವಿಶ್ವವಿದ್ಯಾಲಯ, ಕೆಎಲ್ಇ ವಿಶ್ವವಿದ್ಯಾಲಯ ಮತ್ತು ಜೈನ್ ವಿಶ್ವವಿದ್ಯಾಲಯದ ಕುಲಪತಿಗಳು ಪತ್ರ ಬರೆದಿದ್ದಾರೆ.

'ಒಟಿಟಿ ವೇದಿಕೆಗಳಿಗೆ ಸೂಕ್ತ ಎಚ್ಚರಿಕೆ ನೀಡುವ ಮೂಲಕ, ಅವುಗಳಲ್ಲಿ ತಂಬಾಕು ಬಳಕೆಯ ದೃಶ್ಯಗಳನ್ನು ನಿಯಂತ್ರಿಸಬೇಕು' ಎಂದು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎಂ.ಕೆ. ರಮೇಶ್ ಆಗ್ರಹಿಸಿದ್ದಾರೆ.


ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ.: CAO/CN/BNC/78/2022
ದಿನಾಂಕ: 19.09.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

| ಕಾಮಗಾರಿಯ ವಿವರ | ಅಂದಾಜು ಮೌಲ್ಯ |
|---|---|
| ಎಸ್‌ಎಂವಿಬಿಯಲ್ಲಿ (ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೈಯ್ಯಪನಹಳ್ಳಿ, ಬೆಂಗಳೂರು) ಧಕ್ಷತೆಯುಳ್ಳ ವಿದ್ಯುತ್ ಸರಬರಾಜಿಗೆ ಅನುಕೂಲವಾಗುವಂತೆ ಬೆಸ್ಕಾಂ ನಿರ್ದೇಶನದಂತೆ ಮೀಸಲಾದ 11ಕೆವಿ ಎಚ್‌ಟಿ ಫೀಡರ್‌ನ ವಿಸ್ತರಣೆಗೆ ವಿದ್ಯುತ್ ವ್ಯವಸ್ಥೆಗಳ ಕಾಮಗಾರಿ. ಟೆಂಡರ್ ಸಂ.ECN-28-2022 | ರೂ. 1,28,26,370/- |

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 14.10.2022, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ವಿದ್ಯುತ್ ಇಂಜಿನಿಯರ್/ನಿರ್ಮಾಣ
ಬೆಂಗಳೂರು ದಂಡು

PUB/383/AAD/PRB/SWR/2022-23

S.W.Railways SWRRLY SWRRLY


# ಲಸಿಕೆ ಬರಲು ಬೇಕು 6 ತಿಂಗಳು

• ಚಂದ್ರಶೇಖರ ಆರ್.

ದಾವಣಗೆರೆ: ರಾಜ್ಯದಾದ್ಯಂತ ಜಾನುವಾರುಗಳಲ್ಲಿ ಚರ್ಮಗಂಟು ರೋಗದ (ಲಂಪಿ ಸ್ಕಿನ್ ಡಿಸೀಸ್) ಕಾಣಿಸಿಕೊಂಡಿದ್ದು, ಲಸಿಕೆ ಕಂಡು ಹಿಡಿದಿದ್ದರೂ ಪಶು ಆಸ್ಪತ್ರೆಗಳಿಗೆ ಬರಲು ಇನ್ನೂ 6ರಿಂದ 7 ತಿಂಗಳು ಬೇಕಾಗಲಿದೆ. ಇದರಿಂದ ಜಾನುವಾರುಗಳು ಹೆಚ್ಚಿನ ಪ್ರಮಾಣದಲ್ಲಿ ರೋಗಬಾಧೆಗೆ ಒಳಗಾಗುವ ಆತಂಕ ಎದುರಾಗಿದೆ.

ಎರಡು ತಿಂಗಳಿಂದ ದೇಶದಲ್ಲಿ ಈ ರೋಗ ಕಾಣಿಸಿಕೊಂಡಿದೆ. ರಾಜ್ಯದ ಬೆಂಗಳೂರು ಗ್ರಾಮಾಂತರ, ಹಾವೇರಿ, ದಾವಣಗೆರೆ, ರಾಮನಗರ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ರೋಗ ಉಲ್ಬಣಿಸಿದೆ. ರಾಜ್ಯದಲ್ಲಿ 3800ಕ್ಕೂ ಹೆಚ್ಚು ಜಾನುವಾರುಗಳಲ್ಲಿ ಇದು ಕಾಣಿಸಿಕೊಂಡಿದ್ದು, ದಾವಣಗೆರೆ ಜಿಲ್ಲೆಯಲ್ಲಿ 90ಕ್ಕೂ ಹೆಚ್ಚು ಜಾನುವಾರು ರೋಗಬಾಧೆಗೆ ಒಳಗಾಗಿವೆ.

ಒಂದು ಹಸುವಿನಲ್ಲಿ ರೋಗ ಕಾಣಿಸಿಕೊಂಡ ಕೂಡಲೇ ಇತರ ಜಾನುವಾರಿಗೂ ತಕ್ಷಣ ಹರಡುತ್ತದೆ. ಕೆಲ ರೈತರು ಇದನ್ನು ಬೇಗ ಗುರುತಿಸುತ್ತಾರೆ. ಕೆಲವರು ಗುರುತಿಸದ ಕಾರಣ ಹೆಚ್ಚಿನ ಜಾನುವಾರು ರೋಗಕ್ಕೆ ತುತ್ತಾಗಿರುವ ಸಾಧ್ಯತೆ ಇದೆ ಎನ್ನುತ್ತಾರೆ ಪಶು ವೈದ್ಯಕೀಯ ಇಲಾಖೆ ಅಧಿಕಾರಿಗಳು.

ಈ ರೋಗಕ್ಕೆ ಸದ್ಯ ನಿರ್ದಿಷ್ಟ ಲಸಿಕೆ ಇಲ್ಲ. ಕಳೆದ ತಿಂಗಳು ಚರ್ಮಗಂಟು ರೋಗಕ್ಕೆ ಐಸಿಎಆರ್ (ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ) ನಿಂದ ಲಂಪಿ ಸ್ಕಿನ್ ಡಿಸೀಸ್ ನಿರೋಧಕ ಲಸಿಕೆ ಕಂಡುಹಿಡಿಯಲಾಗಿದೆ. ಆದರೆ, ಅದು ರಾಜ್ಯಕ್ಕೆ ಬರಲು ಇನ್ನೂ 6ರಿಂದ 7 ತಿಂಗಳ ಸಮಯ ಹಿಡಿಯಬಹುದು. ಕಂಪನಿಗೆ ಗುತ್ತಿಗೆ ನೀಡಿ ಅವರು ಲಸಿಕೆ ತಯಾರಿಕೆ ಆರಂಭಿಸಲು ಸಮಯ ಬೇಕಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದರು.

**ಗೋಟ್ ಫಾಕ್ಸ್ ವಾಕ್ಸಿನ್ ಲಸಿಕೆ ಪರಿಣಾಮಕಾರಿಯಾದ ಕಾರಣ ಇದನ್ನೇ ಬಳಸುತ್ತಿದ್ದೇವೆ. ಹೊಸ ಲಸಿಕೆ ಕಂಡುಹಿಡಿಯಲಾಗಿದ್ದು, ತಯಾರಿಕಾ ಹಂತದಲ್ಲಿದೆ**

**ಡಾ. ಮಂಜು ಎಸ್. ಪಾಳೇಗಾರ್,** ನಿರ್ದೇಶಕ, ಪಶುಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ

**ಜಿಲ್ಲೆಯಲ್ಲಿ 25 ಸಾವಿರ ಗೋಟ್ ಫಾಕ್ಸ್ ವಾಕ್ಸಿನ್ ಲಸಿಕೆಗಳನ್ನು ನೀಡಲಾಗುತ್ತಿದೆ. 1 ಲಕ್ಷ ಲಸಿಕೆಗೆ ಬೇಡಿಕೆ ಸಲ್ಲಿಸಲಾಗಿದೆ**

**ಡಾ. ಚಂದ್ರಶೇಖರ್ ಸುಂಕದ,** ಉಪ ನಿರ್ದೇಶಕ, ಪಶುಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ

ಪ್ರಜಾವಾಣಿ ವಿಶೇಷ

ಸುಧಾ, ಮಯೂರ ಓದಿರಿ

## ನಗರದಲ್ಲಿ ಇಂದು

**ಗಾಯನ, ಹಾಸ್ಯ, ರಸಪ್ರಶ್ನೆ, ಕವಿಗೋಷ್ಠಿ ಕಾರ್ಯಕ್ರಮ:** ಅತಿಥಿಗಳು: ಎಸ್. ಎಸ್. ಪಡಶೆಟ್ಟಿ, ಅಧ್ಯಕ್ಷತೆ: ಸದಾನಂದ, ಉಪಸ್ಥಿತಿ: ಕೆ.ಬಿ. ಮಲ್ಲಿಕಾರ್ಜುನ, ಆಯೋಜನೆ: ಸಹಮತ, ಸ್ಥಳ: ಹೇಮ ಸದನ, ಸಿಕ್ಯುಎಲ್ ಬಡಾವಣೆ, ಸಹಕಾರನಗರ, ಬೆಳಿಗ್ಗೆ 10

**ಯೋಜನೆಗಳ ಪ್ರದರ್ಶನ:** ಅತಿಥಿಗಳು: ಎಚ್.ಆರ್.ಸುದರ್ಶನ ರೆಡ್ಡಿ, ಆಯೋಜನೆ: ಎ.ಪಿ.ಎಸ್. ಶಿಕ್ಷಣ ದತ್ತಿ, ಸ್ಥಳ: ನರ್ಮದಾಬಾಯಿ ಸಭಾಂಗಣ, ನ.ರಾ. ಕಾಲೊನಿ, ಬೆಳಿಗ್ಗೆ 10

**ನೇಷನ್ ವೈಡ್ ಅವಾರ್ಡ್ಸ್-2022:** ಅತಿಥಿಗಳು: ತೇಜಸ್ವಿ ಸೂರ್ಯ, ಭಾಸ್ಕರ್ ರಾವ್, ಹರಿಕೃಷ್ಣ ಮರಮ್, ಆಯೋಜನೆ: ಬ್ಯುಸಿನೆಸ್‌ಮೆಂಟ್ ಮಿಂಟ್, ಸ್ಥಳ: ರ‍್ಯಾಡಿಸನ್ ಬ್ಲ್ಯೂ ಹೋಟೆಲ್, ಬೆಳಿಗ್ಗೆ 10.30

**ಎಚ್.ಆರ್. ರಾಮಕೃಷ್ಣರಾವ್ ಅವರಿಗೆ ನುಡಿನಮನ:** ಎಚ್.ಆರ್. ಕೃಷ್ಣಮೂರ್ತಿ, ಎಚ್.ಆರ್. ಚಂದ್ರಶೇಖರ್, ಎಂ.ಆರ್. ನಾಗರಾಜು, ವೈ.ಸಿ.ಕಮಲ, ಟಿ.ವಿ. ರಾಜು, ಸ್ಥಳ: ಉದಯಭಾನು ಸಾಂಸ್ಕೃತಿಕ ಭವನ, ಕೆಂಪೇಗೌಡನಗರ, ಬೆಳಿಗ್ಗೆ 10.30

**ಅರೆಭಾಷೆ ವಿಶ್ವಕೋಶ ಬಿಡುಗಡೆ, ವಿಚಾರಗೋಷ್ಠಿ ಸಮಾರಂಭ ಮತ್ತು ಅರೆಭಾಷೆ ತಾಳಮದ್ದಳೆ:** ಉದ್ಘಾಟನೆ: ಡಿ.ವಿ. ಸದಾನಂದಗೌಡ, ಅತಿಥಿಗಳು: ಹಾ.ತಿ. ಕೃಷ್ಣೇಗೌಡ, ರವೀಂದ್ರನಾಥ್ ಕೇವಳ, ಕೇಕಡ ನಾಣಯ್ಯ, ಆಯೋಜನೆ: ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ, ಸ್ಥಳ: ನಮ್ಮನೆ ಸಾಂಸ್ಕೃತಿಕ ಕಲಾಕೇಂದ್ರ, ಚೌಡೇಶ್ವರಿನಗರ, ಲಗ್ಗೆರೆ, ಬೆಳಿಗ್ಗೆ 10.30

**ಅಬ್ಬಕ್ಕ ದೇವಿ ನೃತ್ಯೋತ್ಸವ:** ಅತಿಥಿಗಳು: ಪದ್ಮಜಾ ಸುರೇಶ, ಮೇದಿನಿ ಹೊಂಬಳ, ಆಯೋಜನೆ ಮತ್ತು ಸ್ಥಳ: ಭಾರತೀಯ ವಿದ್ಯಾಭವನ, ಬೆಳಿಗ್ಗೆ 10.30

**ಪ್ರತಿಭಾ ಪುರಸ್ಕಾರ ಮತ್ತು ವಿದ್ಯಾರ್ಥಿವೇತನ ವಿತರಣಾ ಸಮಾರಂಭ:** ಅತಿಥಿಗಳು: ಎಸ್.ಆರ್. ವಿಶ್ವನಾಥ್, ಕೆ.ಎ. ಮುನೀಂದ್ರಕುಮಾರ್, ಅಧ್ಯಕ್ಷತೆ: ಎನ್.ಸೊಣ್ಣಪ್ಪ, ಆಯೋಜನೆ: ವಿದ್ಯಾ ಪೋಷಕರ ಸಂಘ, ಸ್ಥಳ: ಶೇಷಾದ್ರಿಪುರ ಕಾಲೇಜು ಸಭಾಂಗಣ, ಯಲಹಂಕ, ಬೆಳಿಗ್ಗೆ 11

**ರೈತರ ದುಂಡು ಮೇಜಿನ ಅಧಿವೇಶನ:** ಆಯೋಜನೆ: ರಾಜ್ಯ ರೈತ ಸಂಘಟನೆಗಳು, ರಾಜ್ಯ ಕಬ್ಬು ಬೆಳೆಗಾರರ ಸಂಘ, ಸ್ಥಳ: ಗಾಂಧಿಭವನದ ಜಯಪ್ರಕಾಶ್ ನಾರಾಯಣ ಸಭಾಂಗಣ, ಬೆಳಿಗ್ಗೆ 11

**ಈರಾಚಾರ್ ಅಕ್ಕಸಾಲಿ ಅವರು ಬರೆದ 'ಭಾವನೆಗಳ ಬದುಕು' ಪುಸ್ತಕ ಬಿಡುಗಡೆ:** ಉದ್ಘಾಟನೆ: ಎಚ್. ಎಸ್. ಹಂಡೆ, ಅಧ್ಯಕ್ಷತೆ: ಎನ್. ವಿ. ಅಂಬಾಮಣಿಮೂರ್ತಿ, ಕೆ.ಎಸ್. ಪ್ರಭಾಕರ್, ಅತಿಥಿಗಳು: ಸಿ.ವಿ. ಮುರಳೀಧರ, ಬಾಬು ಪತ್ತಾರ್, ಎಂ.ಎಲ್. ನಂದಾ, ಆಯೋಜನೆ: ಕರ್ನಾಟಕ ವಿಶ್ವಕರ್ಮ ಸಾಹಿತ್ಯ ಕಲಾ ಅಕಾಡೆಮಿ, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಬೆಳಿಗ್ಗೆ 11

**ರಾಹುಲ್ ರಾಮಗುಂಡಂ ಅವರ 'ದಿ ಲೈಫ್ ಆ್ಯಂಡ್ ಟೈಮ್ಸ್ ಆಫ್ ಜಾರ್ಜ್ ಫರ್ನಾಂಡಿಸ್' ಪುಸ್ತಕ ಬಿಡುಗಡೆ:** ಸಿದ್ದರಾಮಯ್ಯ, ಎಂ.ಎನ್. ವೆಂಕಟಾಚಲಯ್ಯ, ಎನ್. ಸಂತೋಷ್ ಹೆಗ್ಡೆ, ರಾಮಚಂದ್ರ ಗುಹಾ, ಮೈಕಲ್.ಬಿ. ಫರ್ನಾಂಡಿಸ್, ಎಸ್.ಕೆ. ಕಾಂತಾ, ಬಿ.ಎಂ. ಹನೀಫ್, ಆಯೋಜನೆ: ಹಿಂದ್ ಮಜ್ದೂರ್ ಕಿಸಾನ್ ಪಂಚಾಯತ್, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಆವರಣ, ಅರಮನೆ ರಸ್ತೆ, ಬೆಳಿಗ್ಗೆ 10.30



ರಾಮಚಂದ್ರ ಗುಹಾ

ಬಾಲ ಯಕ್ಷೋತ್ಸವ

**ಬಾಲ ಯಕ್ಷೋತ್ಸವ:** ಉದ್ಘಾಟನೆ: ಅಶ್ವಥ್ ಹರಿತಾಸ್, ಅತಿಥಿಗಳು: ಕೆ.ಎಂ. ಶೇಖರ್, ಕಾಂತಿ ಶೆಟ್ಟಿ, ಬಾಲಕೃಷ್ಣ ಭಟ್, ಆಯೋಜನೆ: ಯಕ್ಷದೇಗುಲ, ಸ್ಥಳ: ಯುವಕ ಸಂಘ, ಜಯನಗರ, ಸಂಜೆ 4

**ಐಕ್ಯತಾ ಸಮಾವೇಶ:** ಉದ್ಘಾಟನೆ: ಮಹಮ್ಮದ್ ಯೂಸುಫ್ ಕನ್ನಿ, ಅತಿಥಿಗಳು: ಆರ್. ಮೋಹನ್‌ರಾಜ್, ರಾಜು.ಎಂ.ತಳವಾರ, ಶೇಖರ್ ಹವಂಜೆ, ಕೆ.ಎ. ಓಬಳೇಶ್, ಆಯೋಜನೆ: ಆರ್‌ಪಿಐ ಪಕ್ಷ, ಸ್ಥಳ: ಟೌನ್‌ಹಾಲ್ ಬೆಳಿಗ್ಗೆ 11

**ಅರುಣಾ ಅಸಫ್ ಅಲಿ ಮತ್ತು ಕಮಲಾದೇವಿ ಚಟ್ಟೋಪಾಧ್ಯಾಯ ಅವರ ಕುರಿತು ಚರ್ಚೆ, ಬೊಂಬೆಯಾಟ ಪ್ರದರ್ಶನ:** ದತ್ತಾತ್ರೇಯ ಅರಳಿಕಟ್ಟೆ ಮತ್ತು ತಂಡದವರಿಂದ, ಭಾಷಣಕಾರರು: ದೇವಿಕಾ ಜೈನ್, ಅಶೋಕ್ ಚಟರ್ಜಿ, ಆಯೋಜನೆ: ವುಮೆನ್ ಕಲ್ಚರ್ ಆ್ಯಂಡ್ ಪೀಸ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಸಂಜೆ 4

**'ಕಲಾಭಿಸಾರಿಕೆ' ಪ್ರಶಸ್ತಿ ಪ್ರದಾನ ಸಮಾರಂಭ:** ಪುರಸ್ಕೃತರು: ಶೀಲಾ ಶ್ರೀಧರ್, ಮೀನಾಕ್ಷಿ ರವಿ, ವೈ.ಕೆ. ಸಂಧ್ಯಾ ಶರ್ಮಾ, ಆಯೋಜನೆ: ಕಲಾಭಿಸಾರಿಕೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 5

**ಸುಗಮ ಸಂಗೀತ-ಅವಲೋಕನ:** ಅತಿಥಿಗಳು: ಎ.ಎಂ.ಚಂದ್ರಶೇಖರ, ಭ.ರಾ.ವಿಜಯಕುಮಾರ್, ಶಾಮದತ್ತ ಎಸ್., ದಿನೇಶ್ ಜೋಷಿ, ಗಾಯನ: ಗಾಯತ್ರಿ ಕೇಶವ್ ಮತ್ತು ಅಕಾಡೆಮಿ ವಿದ್ಯಾರ್ಥಿಗಳು, ಆಯೋಜನೆ ಮತ್ತು ಸ್ಥಳ: ಪಂಚಾಮೃತ ಸುಗಮ ಸಂಗೀತ ಅಕಾಡೆಮಿ, ದೊಡ್ಡಬೊಮ್ಮಸಂದ್ರ, ಸಂಜೆ 5.30

**ಕರ್ನಾಟಕ ಸಂಗೀತ ಕಾರ್ಯಕ್ರಮ:** ಗಾಯನ: ಎಚ್.ಎನ್. ಸಿಂಧು, ಎಚ್. ಎನ್. ಸ್ಮಿತಾ, ಪಿಟೀಲು: ಜನಾರ್ದನ್, ಮೃದಂಗ: ಬಿ.ಎಸ್. ಪ್ರಶಾಂತ್, ಆಯೋಜನೆ: ವಿಜಯನಗರ, ಸಂಗೀತ ಸಭಾ ಟ್ರಸ್ಟ್, ಸ್ಥಳ: ವಿಜಯನಗರ ಮಾರುತಿ ಮಂದಿರ ಸಭಾಂಗಣ, ಸಂಜೆ 5.45

2012–14ರ ಸಹಶಿಕ್ಷಕರ ನೇಮಕಾತಿ ಅಕ್ರಮ • ಸಿಐಡಿ ತನಿಖೆ ಚುರುಕು

# ಬಂಧಿತರ ವಿರುದ್ಧ 'ಭ್ರಷ್ಟಾಚಾರ' ಅಸ್ತ್ರ

• ಸಂತೋಷ ಜಿಗಳಿಕೊಪ್ಪ

ಪ್ರಜಾವಾಣಿ ವಿಶೇಷ

**ಬೆಂಗಳೂರು:** ಪ್ರೌಢಶಾಲೆಗಳ ಗ್ರೇಡ್‌-2 ಸಹ ಶಿಕ್ಷಕರ ನೇಮಕಾತಿ ಅಕ್ರಮದ ತನಿಖೆ ಚುರುಕುಗೊಳಿಸಿರುವ ಸಿಐಡಿ ಅಧಿಕಾರಿಗಳು, ಬಂಧಿತ ಸಹಶಿಕ್ಷಕರು ಹಾಗೂ ಎಫ್‌ಡಿಎ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆ ಅಸ್ತ್ರ ಪ್ರಯೋಗಿಸಿದ್ದಾರೆ.

ರಾಜ್ಯದ ಬಹುತೇಕ ಜಿಲ್ಲೆಗಳ ವ್ಯಾಪ್ತಿಯಲ್ಲಿ 2012–13 ಹಾಗೂ 2014–15ನೇ ಸಾಲಿನಲ್ಲಿ ನಡೆದಿದ್ದ ನೇಮಕಾತಿಯಲ್ಲಿ ಅಕ್ರಮ ನಡೆದಿರುವ ಬಗ್ಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ (ಪ್ರೌಢ) ಅವರು ವಿಧಾನಸೌಧ ಠಾಣೆಗೆ ಇತ್ತೀಚೆಗಷ್ಟೆ ಪ್ರತ್ಯೇಕ ದೂರು ನೀಡಿದ್ದರು.

ರಾಜ್ಯ ಸರ್ಕಾರದ ಆದೇಶದನ್ವಯ ಪ್ರಕರಣದ ತನಿಖೆ ಕೈಗೆತ್ತಿಕೊಂಡಿರುವ ಸಿಐಡಿ ಅಧಿಕಾರಿಗಳು, 14 ಸಹಶಿಕ್ಷಕರು ಹಾಗೂ ಶಿಕ್ಷಣ ಇಲಾಖೆಯ ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಕೆ.ಎಸ್. ಪ್ರಸಾದ್ ಅವರನ್ನು ಬಂಧಿಸಿದ್ದಾರೆ.

'ಕೃತ್ಯದಲ್ಲಿ ಭಾಗಿಯಾಗಿರುವ ಆರೋಪಿಗಳು ಸರ್ಕಾರಿ ನೌಕರರು. ಇದೇ ಕಾರಣಕ್ಕೆ ಎಲ್ಲರ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಪ್ರಕರಣದ ವಿಚಾರಣೆಯು ಲೋಕಾಯುಕ್ತ ವಿಶೇಷ ನ್ಯಾಯಾಲಯಕ್ಕೆ ಈಗಾಗಲೇ ವರ್ಗಾವಣೆ ಆಗಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

**ಅಧಿಕಾರಿಗಳು ಭಾಗಿ:** 'ವಿಜಯಪುರ, ಕೋಲಾರ, ತುಮಕೂರು ಸೇರಿ ಹಲವು ಜಿಲ್ಲೆಗಳ ಸಹಶಿಕ್ಷಕರ ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿರುವುದಕ್ಕೆ ಸಂಬಂಧಪಟ್ಟಂತೆ ದಾಖಲೆಗಳು ಲಭ್ಯವಾಗಿವೆ. ಇವುಗಳ ಪರಿಶೀಲನೆ ನಡೆಯುತ್ತಿದ್ದು, ಕೃತ್ಯದಲ್ಲಿ ಅಧಿಕಾರಿಗಳೂ ಭಾಗಿಯಾಗಿರುವ ಸಂಶಯ ಬರುತ್ತಿದೆ' ಎಂದು ಸಿಐಡಿ ಮೂಲಗಳು ತಿಳಿಸಿವೆ.

'ಕೆಲ ಶಾಲೆಗಳ ಮುಖ್ಯ ಶಿಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿ, ಉಪನಿರ್ದೇಶಕರು ಹಾಗೂ ಶಿಕ್ಷಣ ಇಲಾಖೆಯ ಕೆಲ ಅಧಿಕಾರಿಗಳು ಮಧ್ಯವರ್ತಿಗಳಾಗಿ ಕೆಲಸ ಮಾಡಿರುವ ಮಾಹಿತಿ ಇದೆ. ಇದನ್ನು ಆಧರಿಸಿ ಈಗಾಗಲೇ ಹಲವರನ್ನು ವಿಚಾರಣೆ ನಡೆಸಲಾಗಿದೆ. ಆದರೆ, ಅವರ ವಿರುದ್ಧ ಸದ್ಯಕ್ಕೆ ಖಚಿತ ಪುರಾವೆ ಸಿಕ್ಕಿಲ್ಲ' ಎಂದು ಹೇಳಿವೆ.

'ಬಂಧಿತ ಸಹಶಿಕ್ಷಕರು, ₹ 5 ಲಕ್ಷದಿಂದ ₹ 10 ಲಕ್ಷ ನೀಡಿ ಅಕ್ರಮವಾಗಿ ನೇಮಕವಾಗಿರುವ ಬಗ್ಗೆ ತಪ್ಪೊಪ್ಪಿಕೊಂಡಿದ್ದಾರೆ. ಬಂಧಿತ ಎಫ್‌ಡಿಎ ಸಹ ಸಾಕಷ್ಟು ಮಾಹಿತಿ ಬಾಯ್ಬಿಟ್ಟಿದ್ದಾನೆ. ಆರೋಪಿಗಳ ಹೇಳಿಕೆಯಲ್ಲಿ ಸಾಕಷ್ಟು ಮಂದಿ ಹೆಸರು ಇದೆ. ಅವರೆಲ್ಲರ ಪಾತ್ರದ ಬಗ್ಗೆ ತಿಳಿಯಲು ತನಿಖೆ ಮುಂದುವರಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

**ಮತ್ತೊಂದು ಎಫ್‌ಐಆರ್:** 'ಸಹಶಿಕ್ಷಕರ ನೇಮಕಾತಿ ಅಕ್ರಮ ಸಂಬಂಧ ವಿಧಾನಸೌಧ ಠಾಣೆಯಲ್ಲಿ ಮತ್ತೊಂದು ಎಫ್‌ಐಆರ್ ದಾಖಲಾಗಿದೆ. ಈ ಮೂಲಕ ಮೂರು ಎಫ್‌ಐಆರ್ ದಾಖಲಾಗಿದ್ದು, ಸಿಐಡಿಯ ಪ್ರತ್ಯೇಕ ತಂಡಗಳು ತನಿಖೆ ನಡೆಸುತ್ತಿವೆ' ಎಂದು ಮೂಲಗಳು ಹೇಳಿವೆ.

'ಜಿಲ್ಲಾವಾರು ಅಕ್ರಮ ನಡೆದಿರುವುದರಿಂದ ಡಿವೈಎಸ್ಪಿ ನೇತೃತ್ವದಲ್ಲಿ ಜಿಲ್ಲೆಗೊಂದರಂತೆ ತಂಡವನ್ನು ರಚಿಸಲಾಗಿದೆ. ತಂಡದಲ್ಲಿರುವ ಅಧಿಕಾರಿಗಳು ನಿಗದಿತ ಜಿಲ್ಲೆಗಳಲ್ಲಿ ತೆರಳಿ ಮಾಹಿತಿ ಕಲೆಹಾಕುತ್ತಿದ್ದಾರೆ. ಹಲವರನ್ನು ವಶಕ್ಕೆ ಪಡೆದು, ವಿಚಾರಣೆ ನಡೆಸುತ್ತಿದ್ದಾರೆ' ಎಂದು ತಿಳಿಸಿವೆ.

ಯಕ್ಷೋತ್ಸವ

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದಲ್ಲಿ ಅಮೃತ ಭಾರತಿಗೆ ಕನ್ನಡದ ಯಕ್ಷೋತ್ಸವ ಎಂಬ ಕಾರ್ಯಕ್ರಮದಲ್ಲಿ ಸಿರಿಕಲಾ ಮೇಳ ಕಲಾವಿದರು 'ಸುದರ್ಶನ ವಿಜಯ' ಯಕ್ಷಗಾನ ಪ್ರಸ್ತುತ ಪಡಿಸಿದರು. ಪ್ರಾಧಿಕಾರದ ಸದಸ್ಯ ಸಿ.ಎ. ಕಿಶೋರ್, ಆನಂದರಾಮ ಉಪಾಧ್ಯ, ಕೆ.ಎನ್. ಅಡಿಗ, ಕಲಾಮೇಳದ ಸಂಚಾಲಕ ಸುರೇಶ್ ಹೆಗಡೆ ಇದ್ದರು.

## ನೆಹರೂ ಇಂಗ್ಲಿಷ್ ಪ್ರೌಢಶಾಲೆ ಸುಪರ್ದಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಐ ಮಾನಿಟರಿ ಅಡ್ವೈಸರಿ (ಐಎಂಎ) ಕಂಪನಿಯ ಬಹುಕೋಟಿ ವಂಚನೆ ಪ್ರಕರಣದಲ್ಲಿ ಸಕ್ಷಮ ಪ್ರಾಧಿಕಾರದ ವಿಶೇಷ ಅಧಿಕಾರಿ, ಶಿವಾಜಿನಗರದ ನೆಹರೂ ಇಂಗ್ಲಿಷ್ ಪ್ರೌಢಶಾಲೆಗೆ ನೋಟಿಸ್ ನೀಡಿದ್ದಾರೆ.

ವಂಚನೆ ಪ್ರಕರಣದ ಪ್ರಮುಖ ಆರೋಪಿಯೂ ಆದ ಐಎಂಎ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಮೊಹಮ್ಮದ್ ಮನ್ಸೂರ್ ಖಾನ್ ಶಾಲೆ ತೆರೆದಿದ್ದರು. ಎಲ್‌ಕೆಜಿಯಿಂದ 10ನೇ ತರಗತಿಯವರೆಗೆ ಮಕ್ಕಳು ವ್ಯಾಸಂಗ ಮಾಡುತ್ತಿದ್ದರು.

ವಂಚನೆ ಪ್ರಕರಣದಲ್ಲಿ ಕಂಪನಿಯ ಎಲ್ಲ ಆಸ್ತಿಗಳನ್ನು ಸಕ್ಷಮ ಪ್ರಾಧಿಕಾರ ಮುಟ್ಟುಗೋಲು ಹಾಕಿಕೊಳ್ಳುತ್ತಿದ್ದು, ಇದೀಗ ಶಾಲೆಯನ್ನೂ ಸುಪರ್ದಿಗೆ ಪಡೆಯುವುದಕ್ಕಾಗಿ ನೋಟಿಸ್ ಜಾರಿ ಮಾಡಿದೆ.

'ಸೇಂಟ್ ಜಾನ್ಸ್ ಚರ್ಚ್ ರಸ್ತೆಯಲ್ಲಿರುವ ಶಾಲೆ ಜಾಗವನ್ನು ಶಾಂತಿಯುತವಾಗಿ ನಮ್ಮ ಸುಪರ್ದಿಗೆ ನೀಡಿ' ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ. ನೋಟಿಸ್ ಪಡೆದಿರುವ ಆಡಳಿತ ಮಂಡಳಿ, ಶಾಲೆಯನ್ನು ಬಂದ್ ಮಾಡಲು ತೀರ್ಮಾನಿಸಿರುವುದಾಗಿ ಗೊತ್ತಾಗಿದೆ.

ನೋಟಿಸ್ ವಿಷಯ ಗೊತ್ತಾಗುತ್ತಿದ್ದಂತೆ ಶಾಲೆ ಬಳಿ ಶನಿವಾರ ಸೇರಿದ್ದ ಪೋಷಕರು, 'ಏಕಾಏಕಿ ಶಾಲೆ ಬಂದ್ ಮಾಡಿದರೆ, ಮಕ್ಕಳ ಭವಿಷ್ಯ ಹಾಳಾಗುತ್ತದೆ' ಎಂದು ಅಳಲು ತೋಡಿಕೊಂಡರು.

ಶಾಲೆಗೆ ಭೇಟಿ ನೀಡಿದ ಶಾಸಕ ರಿಜ್ವಾನ್ ಅರ್ಷದ್, 'ಮಕ್ಕಳ ಭವಿಷ್ಯ ಹಾಳಾಗಲು ಬಿಡುವುದಿಲ್ಲ. ನೋಟಿಸ್ ಬಗ್ಗೆ ಶಿಕ್ಷಣ ಸಚಿವರ ಜೊತೆ ಮಾತನಾಡಿ, ಪರ್ಯಾಯ ಕ್ರಮದ ಬಗ್ಗೆ ತೀರ್ಮಾನಿಸುತ್ತೇನೆ' ಎಂದರು.

## ಕಳ್ಳತನ: 9 ತಿಂಗಳ ಬಳಿಕ ಸಿಕ್ಕ ಆರೋಪಿ

**ಬೆಂಗಳೂರು:** ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಕಳ್ಳತನ ಮಾಡಿ ಪರಾರಿಯಾಗಿದ್ದ ಆರೋಪಿ ವೆಂಕಟೇಶ್ ಅಲಿಯಾಸ್ ವೆಂಕಿ (20) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಚಕ್ರನಗರದ ಎರಡನೇ ಅಡ್ಡರಸ್ತೆ ನಿವಾಸಿ ವೆಂಕಟೇಶ್ ಜನವರಿ 5ರಂದು ರಾತ್ರಿ ಕೃತ್ಯ ಎಸಗಿ ಪರಾರಿಯಾಗಿದ್ದ. 9 ತಿಂಗಳು ತನಿಖೆ ನಡೆಸಿದ್ದ ಪೊಲೀಸರು, ಇತ್ತೀಚೆಗೆ ಸಿಕ್ಕ ಸುಳಿವು ಆಧರಿಸಿ ಆರೋಪಿಯನ್ನು ಬಂಧಿಸಿದ್ದಾರೆ. ₹ 8 ಲಕ್ಷ ಮೌಲ್ಯದ 160 ಗ್ರಾಂ ಚಿನ್ನಾಭರಣ, 750 ಗ್ರಾಂ ಬೆಳ್ಳಿ ಸಾಮಗ್ರಿ ಹಾಗೂ ರಾಯಲ್ ಎನ್‌ಫೀಲ್ಡ್ ಬೈಕ್ ಜಪ್ತಿ ಮಾಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪೀಣ್ಯ ಹಾಗೂ ಚಿತ್ರದುರ್ಗ ಠಾಣೆ ವ್ಯಾಪ್ತಿಯಲ್ಲೂ ಮನೆಗಳಲ್ಲಿ ಆರೋಪಿ ಕಳ್ಳತನ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ತಿಳಿಸಿವೆ.

## ಡ್ರಗ್ಸ್ ಮಾರಾಟ: ಕೇರಳ ಯುವಕನ ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದ ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಇತರರಿಗೆ ಡ್ರಗ್ಸ್ ಮಾರುತ್ತಿದ್ದ ಆರೋಪದಡಿ ಕೆ.ಎಂ. ಜಿಶ್ನೂ ಎಂಬಾತನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಕೇರಳದ ಜಿಶ್ನೂ ಡ್ರಗ್ಸ್ ಮಾರಾಟವನ್ನೇ ವೃತ್ತಿ ಮಾಡಿಕೊಂಡಿದ್ದ. ಆಗಾಗ ನಗರಕ್ಕೆ ಬರುತ್ತಿದ್ದ ಈತ ಡ್ರಗ್ಸ್ ಮಾರಿ, ತನ್ನೂರಿಗೆ ವಾಪಸು ಹೋಗುತ್ತಿದ್ದ. ಈತನನ್ನು ಬಂಧಿಸಿ, ₹ 10 ಲಕ್ಷ ಮೌಲ್ಯದ ಎಂಡಿಎಂಎ ಡ್ರಗ್ಸ್ ಹಾಗೂ ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಕುಮಾರಸ್ವಾಮಿ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ಇತ್ತೀಚೆಗೆ ಸುತ್ತಾಡುತ್ತಿದ್ದ ಆರೋಪಿ, ಡ್ರಗ್ಸ್ ಮಾರುತ್ತಿದ್ದ. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು. ಈತನ ಜೊತೆ ಮತ್ತಷ್ಟು ಮಂದಿ ಕೃತ್ಯದಲ್ಲಿ ಭಾಗಿಯಾಗಿರುವ ಶಂಕೆ ಇದೆ' ಎಂದು ತಿಳಿಸಿದರು.

'ಕೆಲವು ಕಾಲೇಜು ವಿದ್ಯಾರ್ಥಿಗಳು, ಉದ್ಯಮಿಗಳು, ವ್ಯಾಪಾರಿಗಳು ಆರೋಪಿ ಬಳಿ ಡ್ರಗ್ಸ್ ಖರೀದಿಸುತ್ತಿದ್ದರು. ಹೊರ ರಾಜ್ಯದಿಂದ ಕಡಿಮೆ ಹಣಕ್ಕೆ ಡ್ರಗ್ಸ್ ತರಿಸುತ್ತಿದ್ದ ಆರೋಪಿ, ಹೆಚ್ಚಿನ ಹಣಕ್ಕೆ ಮಾರಿ ಹಣ ಸಂಪಾದಿಸುತ್ತಿದ್ದ' ಎಂದು ಹೇಳಿದರು.

ಸಿಸಿಬಿ ಪೊಲೀಸರು ಆರೋಪಿಯಿಂದ ಜಪ್ತಿ ಮಾಡಿರುವ ಡ್ರಗ್ಸ್

ನಿವೃತ್ತ ವೈದ್ಯಾಧಿಕಾರಿ ಸೇರಿ ಆರು ಮಂದಿ ಬಂಧನ • ಬೊಮ್ಮನಹಳ್ಳಿ ಪೊಲೀಸರ ಕಾರ್ಯಾಚರಣೆ

# ₹ 2,500ಕ್ಕೆ ಆಧಾರ್: ಅಕ್ರಮ ಜಾಲ ಪತ್ತೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಕಲಿ ದಾಖಲೆ ಸೃಷ್ಟಿಸಿ ಅಕ್ರಮ ವಾಸಿಗಳಿಗೆ ಆಧಾರ್ ಮಾಡಿಸಿಕೊಡುತ್ತಿದ್ದ ಜಾಲವನ್ನು ಬೊಮ್ಮನಹಳ್ಳಿ ಠಾಣೆ ಪೊಲೀಸರು ಭೇದಿಸಿದ್ದು, ನಿವೃತ್ತ ವೈದ್ಯಾಧಿಕಾರಿ ಸೇರಿ ಆರು ಮಂದಿಯನ್ನು ಬಂಧಿಸಿದ್ದಾರೆ.

'ಕೋಣನಕುಂಟೆ ಪ್ರಾಥಮಿಕ ಆರೋಗ್ಯ ಕೇಂದ್ರದ ನಿವೃತ್ತ ವೈದ್ಯಾಧಿಕಾರಿ ಡಿ. ಸುನೀಲ್ (63), ಪ್ರವೀಣ್, ನಾಗರಾಜು, ರಮೇಶ್, ರೂಪಂ ಭಟ್ಟಾಚಾರ್ ಹಾಗೂ ರವಿ ಬಂಧಿತರು. ಆರೋಪಿಗಳಿಂದ ನಕಲಿ ದಾಖಲೆಗಳು, ಕಂಪ್ಯೂಟರ್ ಸೇರಿದಂತೆ ಹಲವು ವಸ್ತುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿಗಳು, ಅಕ್ರಮ ವಾಸಿಗಳಿಂದ ತಲಾ ₹ 2,500 ಪಡೆದು ಆಧಾರ್ ಮಾಡಿಸಿಕೊಡುತ್ತಿದ್ದರು. ಕೃತ್ಯದ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಸಾರ್ವಜನಿಕರ ವೇಷದಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ತಿಳಿಸಿವೆ.

'ಆರೋಪಿ ಪ್ರವೀಣ್, ಮೊಬೈಲ್ ಮಾರಾಟ ಹಾಗೂ ದುರಸ್ತಿ ಮಳಿಗೆ ಇಟ್ಟುಕೊಂಡಿದ್ದ. ನಾಗರಾಜು, ಆಧಾರ್ ನೋಂದಣಿ ಏಜೆನ್ಸಿ ಹೊಂದಿದ್ದ. ಇನ್ನೊಬ್ಬ ಆರೋಪಿ ರಮೇಶ್ ಕಾರು ಚಾಲಕ ಹಾಗೂ ಮತ್ತೊಬ್ಬ ಆರೋಪಿ ರೂಪಂ ಗಾರ್ಮೆಂಟ್ಸ್ ಕಾರ್ಖಾನೆ ನೌಕರ. ಆರನೇ ಆರೋಪಿ ರವಿ, ಸರ್ಕಾರಿ ಆಸ್ಪತ್ರೆಯಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದ.'

'ಆರು ತಿಂಗಳಿನಿಂದ ಆರೋಪಿಗಳು ಕೃತ್ಯ ಎಸಗುತ್ತಿದ್ದು, ಇದುವರೆಗೂ 150ಕ್ಕೂ ಹೆಚ್ಚು ಆಧಾರ್ ಮಾಡಿಸಿಕೊಟ್ಟಿರುವ ಮಾಹಿತಿ ಇದೆ. ಆಧಾರ್ ಪಡೆದಿರುವ ವ್ಯಕ್ತಿಗಳನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಹೇಳಿವೆ.

**ಮೊಬೈಲ್ ಮಳಿಗೆಯಿಂದ ಅಕ್ರಮ ಆರಂಭ:** 'ಆರೋಪಿ ಪ್ರವೀಣ್ ತನ್ನ ಮೊಬೈಲ್ ಮಾರಾಟ ಹಾಗೂ ದುರಸ್ತಿ ಮಳಿಗೆಯಲ್ಲಿ ಫಲಾನುಭವಿಗಳ ಪರವಾಗಿ ಸರ್ಕಾರದ ವಿವಿಧ ಯೋಜನೆಗಳಿಗೆ ಆನ್‌ಲೈನ್ ಅರ್ಜಿ ಸಲ್ಲಿಕೆ ಮಾಡುತ್ತಿದ್ದ. ಇದರ ಜೊತೆಯಲ್ಲಿ ಹಲವರಿಗೆ ಅಕ್ರಮವಾಗಿ ಆಧಾರ್ ಮಾಡಿಸಿಕೊಡುತ್ತಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಬಾಂಗ್ಲಾದೇಶ ಹಾಗೂ ಇತರೆ ಅಕ್ರಮವಾಸಿಗಳನ್ನು ಸಂಪರ್ಕಿಸುತ್ತಿದ್ದ ಆರೋಪಿ ಪ್ರವೀಣ್, ಯಾವುದೇ ದಾಖಲೆ ಇಲ್ಲದೇ ಆಧಾರ್ ಮಾಡಿಸಿಕೊಡುವುದಾಗಿ ಹೇಳಿ ತಲಾ ₹ 2,500 ಪಡೆಯುತ್ತಿದ್ದ. ಹಣ ನೀಡಿದ ಅಕ್ರಮ ವಾಸಿಗಳ ಪಟ್ಟಿ ಸಿದ್ಧಪಡಿಸಿ, ಕಾರು ಚಾಲಕ ರಮೇಶ್ ಮೂಲಕ ನಿವೃತ್ತ ವೈದ್ಯಾಧಿಕಾರಿ ಸುನೀಲ್ ಬಳಿ ಕಳುಹಿಸುತ್ತಿದ್ದ.'

'ನಿವೃತ್ತಿ ಬಳಿಕವೂ ವೈದ್ಯಾಧಿಕಾರಿಯ ಸೀಲ್ ತನ್ನ ಬಳಿ ಇಟ್ಟುಕೊಂಡಿದ್ದ ಸುನೀಲ್, ಅದನ್ನು ಬಳಸಿ ಅಕ್ರಮ ವಾಸಿಗಳ ನಕಲಿ ದಾಖಲೆ ಸೃಷ್ಟಿಸುತ್ತಿದ್ದ. ಅದೇ ದಾಖಲೆ ಪಡೆಯುತ್ತಿದ್ದ ಆರೋಪಿ ನಾಗರಾಜ್, ಆಧಾರ್ ನೋಂದಣಿ ಮಾಡುತ್ತಿದ್ದ. ಈ ಅಕ್ರಮಕ್ಕೆ ರೂಪಂ ಹಾಗೂ ರವಿ ಸಹಕಾರ ನೀಡುತ್ತಿದ್ದರು. ಬಂದ ಹಣವನ್ನು ಎಲ್ಲರೂ ಹಂಚಿಕೊಳ್ಳುತ್ತಿದ್ದರು' ಎಂದೂ ಹೇಳಿವೆ.

### 'ಒಂದೇ ದಾಖಲೆ ಪರಿಶೀಲನೆ: ಅಕ್ರಮಕ್ಕೆ ದಾರಿ'

'ಬೆಂಗಳೂರಿಗೆ ಬರುವ ಹಲವು ಅಕ್ರಮ ವಾಸಿಗಳು ತಮ್ಮ ವಿಳಾಸ ದೃಢೀಕರಣ ಮಾಡಿಸಿಕೊಳ್ಳಲು ವಿಫಲರಾಗುತ್ತಾರೆ. ಅಂಥವರು ಹೆಚ್ಚಿನ ಹಣ ನೀಡಿ ವೈದ್ಯಾಧಿಕಾರಿಗಳ ಮೂಲಕ ನಕಲಿ ದಾಖಲೆ ಮಾಡಿಸಿಕೊಳ್ಳುತ್ತಿದ್ದಾರೆ. ಇದೊಂದೇ ದಾಖಲೆ ಪರಿಶೀಲಿಸಿ ಆಧಾರ್ ನೋಂದಣಿ ಮಾಡುತ್ತಿರುವುದು ಅಕ್ರಮಕ್ಕೆ ದಾರಿ ಮಾಡಿಕೊಟ್ಟಿದೆ' ಎಂದು ಆಗ್ನೇಯ ವಿಭಾಗದ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಬಂಧಿತ ಡಿ. ಸುನೀಲ್, ನಿವೃತ್ತಿ ಬಳಿಕವೂ ನಕಲಿ ದಾಖಲೆ ಮಾಡಿಕೊಡುತ್ತಿದ್ದ. ಈತ, ಕರ್ತವ್ಯದಲ್ಲಿದ್ದ ವೇಳೆಯಲ್ಲೂ ಇಂಥ ಕೃತ್ಯ ಎಸಗಿರುವ ಅನುಮಾನವಿದೆ' ಎಂದು ತಿಳಿಸಿದರು. 'ಆಧಾರ್ ಅಕ್ರಮ ಜಾಲದ ಬಗ್ಗೆ ವಿವರವಾದ ವರದಿ ಸಿದ್ಧಪಡಿಸಿ, ಭಾರತೀಯ ವಿಶಿಷ್ಟ ಗುರುತು ಪ್ರಾಧಿಕಾರಕ್ಕೆ ಸಲ್ಲಿಸಲಾಗುವುದು' ಎಂದರು.

## ಗೂಂಡಾ ಕಾಯ್ದೆ: ರೌಡಿ ಕೋಳಿ, ಮತ್ತಿ ಬಂಧನ

**ಬೆಂಗಳೂರು:** ಪದೇ ಪದೇ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿ ಜನರನ್ನು ಬೆದರಿಸುತ್ತಿದ್ದ ಆರೋಪದಡಿ ರೌಡಿಗಳಾದ ಜೆ.ಪಿ. ಮಂಜುನಾಥ್ ಅಲಿಯಾಸ್ ಕೋಳಿ (31) ಹಾಗೂ ಸಂಪತ್‌ರಾವ್ ಅಲಿಯಾಸ್ ಮತ್ತಿಯನ್ನು (28) ಗೂಂಡಾ ಕಾಯ್ದೆಯಡಿ ಬಂಧಿಸಿ ಜೈಲಿಗಟ್ಟಲಾಗಿದೆ.

'ದೊಡ್ಡಬಿದರಕಲ್ಲು ಬಳಿಯ ಚನ್ನನಾಯಕನಹಳ್ಳಿ ನಿವಾಸಿ ಮಂಜುನಾಥ್, ಸುಲಿಗೆ, ಸರಗಳವು, ಹಲ್ಲೆ ಸೇರಿ 32 ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದ. ಜೈಲಿಗೂ ಹೋಗಿ ಜಾಮೀನು ಮೇಲೆ ಹೊರಬಂದಿದ್ದ. ಈತನ ಹೆಸರು ಪೀಣ್ಯ ಠಾಣೆಯ ರೌಡಿ ಪಟ್ಟಿಯಲ್ಲಿತ್ತು' ಎಂದು ಪೊಲೀಸರು ಹೇಳಿದರು.

'ಇನ್ನೊಬ್ಬ ರೌಡಿ ಮತ್ತಿ, ಬಸವೇಶ್ವರನಗರ ನಿವಾಸಿ. ಕೊಲೆ, ಸುಲಿಗೆ, ಅಪಹರಣ, ಕಳ್ಳತನ, ಹಲ್ಲೆ ಸೇರಿದಂತೆ 31 ಪ್ರಕರಣಗಳಲ್ಲಿ ಆರೋಪಿಯಾಗಿದ್ದ. 2008ರಿಂದಲೇ ಅಪರಾಧ ಕೃತ್ಯಗಳಲ್ಲಿ ತೊಡಗಿದ್ದ ಮತ್ತಿಯ ಹೆಸರು ಮಹಾಲಕ್ಷ್ಮಿ ಲೇಔಟ್ ಠಾಣೆಯ ರೌಡಿ ಪಟ್ಟಿಯಲ್ಲಿತ್ತು' ಎಂದು ತಿಳಿಸಿದರು.

'ರೌಡಿಗಳಾದ ಮಂಜುನಾಥ್ ಹಾಗೂ ಮತ್ತಿ ಜನರಿಗೆ ಪದೇ ಪದೇ ತೊಂದರೆ ನೀಡುತ್ತಿದ್ದರು. ಸಾರ್ವಜನಿಕರಲ್ಲಿ ಭಯವನ್ನುಂಟು ಮಾಡುತ್ತಿದ್ದರು. ಇವರಿಬ್ಬರ ವಿರುದ್ಧ ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸಲು ಪ್ರಸ್ತಾವ ಸಲ್ಲಿಸಲಾಗಿತ್ತು. ಅದನ್ನು ಪರಿಶೀಲಿಸಿದ್ದ ಕಮಿಷನರ್ ಪ್ರತಾಪ್ ರೆಡ್ಡಿ, ಗೂಂಡಾ ಕಾಯ್ದೆಯಡಿ ರೌಡಿಗಳನ್ನು ಒಂದು ವರ್ಷ ಜೈಲಿಗಟ್ಟಲು ಆದೇಶ ಹೊರಡಿಸಿದ್ದಾರೆ' ಎಂದೂ ಪೊಲೀಸರು ಹೇಳಿದರು.

## ಲಗ್ನ ಪತ್ರಿಕೆ ಕೊಡುವ ನೆಪದಲ್ಲಿ ದರೋಡೆ

**ಮಾಲೂರು (ಕೋಲಾರ):** ತಾಲ್ಲೂಕಿನ ಗಡಿ ಗ್ರಾಮ ಸಂಪೆಗೆರೆಯಲ್ಲಿ ಶುಕ್ರವಾರ ರಾತ್ರಿ ಲಗ್ನ ಪತ್ರಿಕೆ ನೀಡುವ ನೆಪದಲ್ಲಿ ಮನೆಗೆ ಹೋದ ಕಳ್ಳರು ಮಹಿಳೆಯ ಪ್ರಜ್ಞೆ ತಪ್ಪಿಸಿ ಹಣ ಮತ್ತು ಚಿನ್ನಾಭರಣ ದೋಚಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಭಿಯಾನ ನಡೆಸಿದವರ ವಿರುದ್ಧ ಕಾನೂನು ಕ್ರಮ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಎಚ್ಚರಿಕೆ

# ‘ಪೇಸಿಎಂ: ಕಾಂಗ್ರೆಸ್‌ನ ಡರ್ಟಿ ಪಾಲಿಟಿಕ್ಸ್’

ಪ್ರಜಾವಾಣಿ ವಾರ್ತೆ

ಸಿರಿಗೆರೆ (ಚಿತ್ರದುರ್ಗ): ‘ಪೇಸಿಎಂ’ ಅಭಿಯಾನ ಕಾಂಗ್ರೆಸ್‌ನ ಡರ್ಟಿ ಪಾಲಿಟಿಕ್ಸ್. ನೇರವಾಗಿ ಮಾತನಾಡುವ, ಎದುರಿಸುವ, ದಾಖಲೆ ನೀಡುವ ಬದಲು ಅನ್ಯ ಮಾರ್ಗ ತುಳಿದಿದೆ. ಇದು ಕಾಂಗ್ರೆಸ್ ನೈತಿಕತೆಯ ಅಧಃಪತನದ ಸೂಚಕ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಕ್ರೋಶ ವ್ಯಕ್ತಪಡಿಸಿದರು.



ಬಸವರಾಜ ಬೊಮ್ಮಾಯಿ

ಶನಿವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ‘ಅಭಿಯಾನ ನಡೆಸಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ಎಚ್ಚರಿಕೆ ನೀಡಿದರು.

‘ಕಾಂಗ್ರೆಸ್ ನಾಯಕರು ಸಂಪೂರ್ಣ ಹತಾಶರಾಗಿದ್ದಾರೆ. ಯಾವುದೇ ವಿಚಾರವನ್ನು ಸರಿಯಾಗಿ ತಿಳಿಯುವ ವ್ಯವಧಾನ ಅವರಲ್ಲಿ ಉಳಿದಿಲ್ಲ. ಪೂರ್ವತಯಾರಿ ಇಲ್ಲದೇ ಸದನಕ್ಕೆ ಬರುತ್ತಿದ್ದಾರೆ. ಜನಪರ ಕಾಳಜಿ ಅವರಲ್ಲಿ ಕಾಣುತ್ತಿಲ್ಲ. ಕೆಟ್ಟ ರಾಜಕೀಯ ಮಾಡಿಕೊಂಡು ಅಧಿಕಾರಕ್ಕೆ ಬರುವ ಭ್ರಮೆಯಲ್ಲಿ ಇದ್ದಾರೆ. ಕರ್ನಾಟಕದಲ್ಲಿ ಇದು ಸಾಧ್ಯವಿಲ್ಲ’ ಎಂದರು.

‘ಸಚಿವ ಸಂಪುಟ ವಿಸ್ತರಣೆ ಮಾಡುವ ಬಗ್ಗೆ ಚರ್ಚೆ ನಡೆಯುತ್ತಿದೆ. ಈ ಸಂಬಂಧ ದೆಹಲಿಗೆ ಭೇಟಿ ನೀಡಿ ವರಿಷ್ಠರೊಂದಿಗೆ ಚರ್ಚೆ ಮಾಡಲಾಗುವುದು. ಚುನಾವಣಾ ಪೂರ್ವ ಸಮೀಕ್ಷೆ ಒಂದೊಂದು ರೀತಿ ಬರುತ್ತಿವೆ. ಜನರ ನಾಡಿಮಿಡಿತ ನಮಗೂ ಗೊತ್ತಿದೆ. ಮತ್ತೆ ಬಿಜೆಪಿ ಅಧಿಕಾರಕ್ಕೆ ಬರುವುದು ನಿಶ್ಚಿತ’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯೆ ನೀಡಿದರು.

## ಭ್ರಷ್ಟ ರಹಿತ ಬದುಕು ಸುಲಭವಲ್ಲ: ಮಾಧುಸ್ವಾಮಿ

‘ಭ್ರಷ್ಟಾಚಾರದ ಮೂಲವೇ ಆಲೋಚನೆ. ಕ್ರಿಯೆ ನಮ್ಮನ್ನು ಭ್ರಷ್ಟರನ್ನಾಗಿ ಮಾಡಿದೆ. ಇದಕ್ಕೆ ಒತ್ತಡಗಳೂ ಕಾರಣ ಆಗಬಹುದು. ಭ್ರಷ್ಟಾಚಾರ ರಹಿತವಾಗಿ ಬದುಕುವುದು ಅಷ್ಟೊಂದು ಸುಲಭವಲ್ಲ. ಭ್ರಷ್ಟಾಚಾರ ಕಡಿಮೆ ಮಾಡಲು ಪ್ರಯತ್ನಿಸುತ್ತೇವೆ’ ಎಂದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಅವರು ಪರೋಕ್ಷವಾಗಿ ಭ್ರಷ್ಟಾಚಾರವನ್ನು ಸಮರ್ಥಿಸಿಕೊಂಡರು.

ಚಿತ್ರದುರ್ಗ ತಾಲ್ಲೂಕಿನ ಸಿರಿಗೆರೆಯ ತರಳಬಾಳು ಮಠದಲ್ಲಿ ಶನಿವಾರ ನಡೆದ ಲಿಂಗೈಕ್ಯ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಅವರ 30ನೇ ಶ್ರದ್ಧಾಂಜಲಿ ಸಮಾರಂಭದಲ್ಲಿ ಅವರು ಮಾತನಾಡಿದರು.

‘ನಾವು (ರಾಜಕಾರಣಿ) ಕೆಡುತ್ತಿಲ್ಲ; ವ್ಯವಸ್ಥೆ ನಮ್ಮನ್ನು ಕೆಡಿಸುತ್ತಿದೆ. ವ್ಯವಸ್ಥೆ ಕೆಡಬಾರದೆಂದು ನೀವು (ಮತದಾರ) ಮನಸ್ಸು ಮಾಡಿದರೆ ನಾವು ಕೆಡಬೇಕಾದ ಅಗತ್ಯವಿಲ್ಲ. ಸ್ವಂತಕ್ಕೆ ಒಂದಷ್ಟು ಜಾಸ್ತಿ ಬೇಕು ಎಂಬ ಆಲೋಚನೆ ಬರುವುದು ಸಹಜ. ಇಂತಹ ಮನಸ್ಥಿತಿಗೆ ನಮ್ಮನ್ನು ತಳ್ಳಬೇಡಿ’ ಎಂದರು.

## ‘ಪೋಸ್ಟರ್ ವಾರ್’ ಕೀಳುಮಟ್ಟದ ರಾಜಕಾರಣ: ಜಗದೀಶ್ ಶೆಟ್ಟರ್

ಹುಬ್ಬಳ್ಳಿ: ‘ಕಾಂಗ್ರೆಸ್ ಗೌರವಯುತ ಪಕ್ಷವಾಗಿ ಉಳಿದಿಲ್ಲ, ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಪೋಸ್ಟರ್ ವಾರ್ ಮೂಲಕ ಕೀಳುಮಟ್ಟದ ರಾಜಕಾರಣಕ್ಕೆ ಇಳಿದಿದೆ’ ಎಂದು ಶಾಸಕ ಜಗದೀಶ ಶೆಟ್ಟರ್ ಆಕ್ರೋಶ ವ್ಯಕ್ತಪಡಿಸಿದರು.

ಶನಿವಾರ ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ಕಾಂಗ್ರೆಸ್ ಯಾಕೆ ಇಷ್ಟೊಂದು ಕೆಳಮಟ್ಟಕ್ಕೆ ಇಳಿದಿದೆ ಗೊತ್ತಿಲ್ಲ. ಮುಖ್ಯಮಂತ್ರಿ ಹಾಗೂ ಸರ್ಕಾರದ ವಿರುದ್ಧ ಮುಖಂಡರು ದುರುದ್ದೇಶದಿಂದ ಭ್ರಷ್ಟಾಚಾರದ ಆರೋಪ ಮಾಡುತ್ತಿದ್ದಾರೆ. ಅವರಲ್ಲಿ ದಾಖಲೆಗಳೇನಾದರೂ ಇದ್ದರೆ ಲೋಕಾಯುಕ್ತಕ್ಕೆ ನೀಡಲಿ’ ಎಂದರು.

‘ಭ್ರಷ್ಟಾಚಾರದ ಕುರಿತು ಡಿ.ಕೆ. ಶಿವಕುಮಾರ್ ವಿರುದ್ಧ ಸಾಕಷ್ಟು ಪ್ರಕರಣಗಳು ದಾಖಲಾಗಿವೆ. ಸಿದ್ದರಾಮಯ್ಯರ ಮೇಲೆ ಅರ್ಕಾವತಿ ಹಗರಣದ ಆರೋಪವಿದೆ. ಹೀಗಿದ್ದಾಗ ಅವರು ಯಾವ ನೈತಿಕತೆಯಲ್ಲಿ ನಮ್ಮ ಮೇಲೆ ಆರೋಪ ಮಾಡುತ್ತಿದ್ದಾರೆ. ಪ್ರತಿಪಕ್ಷವಾಗಿ ಕಾರ್ಯ ನಿರ್ವಹಿಸಲು ಅವರು ನಾಲಾಯಕ್’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ರಾಹುಲ್ ಗಾಂಧಿ ಎಐಸಿಸಿ ಅಧ್ಯಕ್ಷರಾಗಬೇಕೆಂದು ಅವರದ್ದೇ ಪಕ್ಷದ ಮುಖಂಡರು ಒತ್ತಾಯಿಸುತ್ತಿದ್ದಾರೆ. ಆದರೆ, ಅಧ್ಯಕ್ಷರಾಗಲು ರಾಹುಲ್ ಅವರಿಗೇ ಮನಸ್ಸಿಲ್ಲ. ಪಕ್ಷದಲ್ಲಿಯೇ ಒಗ್ಗಟ್ಟು ಇಲ್ಲದ ಅವರು, ಭಾರತ್ ಜೋಡೊ ಪಾದಯಾತ್ರೆ ಮಾಡುತ್ತಿರುವುದು ಹಾಸ್ಯಾಸ್ಪದ’ ಎಂದರು.

## ಭ್ರಷ್ಟಾಚಾರ– ಮಾತನಾಡುವ ನೈತಿಕತೆ ಕಾಂಗ್ರೆಸ್‌ಗೆ ಇಲ್ಲ: ಸುನಿಲ್

ಉಡುಪಿ: ‘ಪೇ ಸಿಎಂ’ ಪೋಸ್ಟರ್ ಅಂಟಿಸಿದ ಡಿ.ಕೆ. ಶಿವಕುಮಾರ್, ಇ.ಡಿ. ಕಚೇರಿಗೆ ಹೋಗಿದ್ದು ಯಾಕೆ ಎಂದು ಸಿದ್ದರಾಮಯ್ಯ ಉತ್ತರಿಸಬೇಕು. ಭ್ರಷ್ಟಾಚಾರದ ಬಗ್ಗೆ ವಿಚಾರಣೆಗೆ ಒಳಗಾದವರಿಗೆ ಪೇ ಸಿಎಂ ಪೋಸ್ಟರ್ ಅಂಟಿಸುವ ನೈತಿಕತೆ ಇಲ್ಲ’ ಎಂದು ಸಚಿವ ಸುನಿಲ್ ಕುಮಾರ್ ವಾಗ್ದಾಳಿ ನಡೆಸಿದರು.

ಶನಿವಾರ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿ, ‘ಭ್ರಷ್ಟಾಚಾರದ ಬಗ್ಗೆ ಕಾಂಗ್ರೆಸ್ ಆಧಾರ ರಹಿತ ಆರೋಪ ಮಾಡುತ್ತಿದೆ. ಭ್ರಷ್ಟಾಚಾರ ನಡೆದಿದ್ದರೆ ನ್ಯಾಯಾಲಯ, ಮುಖ್ಯಮಂತ್ರಿ, ಲೋಕಾಯುಕ್ತಕ್ಕೆ ದೂರು ಕೊಡಲಿ. 10 ದಿನಗಳ ಅಧಿವೇಶನದಲ್ಲಿ ಒಂದು ದಿನವೂ ಭ್ರಷ್ಟಾಚಾರದ ಬಗ್ಗೆ ಚರ್ಚೆ ನಡೆಸಿಲ್ಲ’ ಎಂದು ಟೀಕಿಸಿದರು.

**ಪಿಎಫ್ಐ ಬಗ್ಗುಬಡಿಯುತ್ತಿರುವ ಎನ್ಐಎ:** ‘ಕೇಂದ್ರ ಹಾಗೂ ರಾಜ್ಯ ಸರ್ಕಾರವು ಪಿಎಫ್ಐ ಸಂಘಟನೆಯನ್ನು ಬಗ್ಗು ಬಡಿಯುತ್ತಿದೆ. ಬಂಧಿತರು ಭಾರತವನ್ನು ಇಸ್ಲಾಂ ರಾಷ್ಟ್ರ ಮಾಡುವ ಕನಸು ಕಂಡಿದ್ದರು. ಜಗತ್ತಿನ ಯಾವುದೇ ರಾಷ್ಟ್ರದಿಂದ ಭಾರತವನ್ನು ಇಸ್ಲಾಂ ರಾಷ್ಟ್ರ ಮಾಡಲು ಸಾಧ್ಯವಿಲ್ಲ. ಭಾರತ ಹಿಂದೂ ರಾಷ್ಟ್ರವಾಗಿದ್ದು, ಹಿಂದೂ ಸಂಸ್ಕೃತಿಯ ಮೇಲೆ ಮತ್ತಷ್ಟು ಸಬಲಗೊಳಿಸುತ್ತೇವೆ’ ಎಂದರು.

ಸಿದ್ದರಾಮಯ್ಯ ಕಾಲದಲ್ಲಿ ಎಸ್‌ಡಿಪಿಐ ಹಾಗೂ ಪಿಎಫ್ಐ ಸಂಘಟನೆಗಳನ್ನು ಪೋಷಿಸಲಾಗುತ್ತಿತ್ತು. ಹಿಂದೂಗಳ ಕೊಲೆ ಪ್ರಕರಣದ ಆರೋಪಿಗಳ ಮೇಲಿನ ಪ್ರಕರಣವನ್ನು ವಾಪಸ್ ಪಡೆಯಲಾಗಿತ್ತು ಎಂದು ವಾಗ್ದಾಳಿ ನಡೆಸಿದರು.

## ಕಾಂಗ್ರೆಸ್‌ನಿಂದ ರಾಜ್ಯದ ಘನತೆ ಮಣ್ಣುಪಾಲು: ಸುಧಾಕರ್

ಬೆಂಗಳೂರು: ‘ಪೇಸಿಎಂ’ ಅಭಿಯಾನದ ಮೂಲಕ ಕಾಂಗ್ರೆಸ್ ನಾಯಕರು ರಾಜ್ಯದ ಘನತೆಯನ್ನು ಮಣ್ಣುಪಾಲು ಮಾಡಿದ್ದಾರೆ. ಅಧಿಕಾರ ಕಳೆದುಕೊಂಡು ಹತಾಶರಾಗಿರುವ ಕಾಂಗ್ರೆಸ್ ನಾಯಕರು ವೈಯಕ್ತಿಕ ಲಾಭಕ್ಕಾಗಿ ಹೀಗೆ ಮಾಡುತ್ತಿದ್ದಾರೆ’ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಟೀಕಿಸಿದ್ದಾರೆ.

‘ಕಾಂಗ್ರೆಸ್‌ನವರು ಮೂಲಕ, ಕೀಳುಮಟ್ಟದ ರಾಜಕೀಯ ಮಾಡುವುದರಲ್ಲಿ ನಿಸ್ಸೀಮರೆಂದು ಸಾಬೀತು ಮಾಡಿದ್ದಾರೆ. ಆದರೆ, ಏನೇ ಮಾಡಿದರೂ ಅವರು ಮತ್ತೆ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ’ ಎಂದು ಹೇಳಿದರು.

‘ಪದೇ ಪದೇ ಶೇ 40 ಕಮಿಷನ್ ಬಗ್ಗೆ ಹೇಳಿದರೆ ಜನರು ನಂಬುತ್ತಾರೆಂದು ಕಾಂಗ್ರೆಸ್ ತಿಳಿದಿದೆ. ಮುಖ್ಯಮಂತ್ರಿ ಬೊಮ್ಮಾಯಿ ಅವರ ಶುದ್ಧ ಆಡಳಿತ ಜನರಿಗೆ ತಿಳಿದಿದೆ. ಜನಸಾಮಾನ್ಯರ ಸಿ.ಎಂ ಎಂದು ಗುರುತಿಸಿಕೊಂಡಿರುವ ಅವರು, ಒಳ್ಳೆಯ ಆಡಳಿತ ನೀಡುತ್ತಿರುವುದನ್ನು ಸಹಿಸಲು ಕಾಂಗ್ರೆಸ್‌ಗೆ ಆಗುತ್ತಿಲ್ಲ. ಮಾಜಿ ಸಿ.ಎಂವೊಬ್ಬರು ಭಿತ್ತಿಪತ್ರ ಅಂಟಿಸುವುದನ್ನು 75 ವರ್ಷಗಳ ಇತಿಹಾಸದಲ್ಲೇ ನೋಡಿಲ್ಲ’ ಎಂದರು.

## ಎಂಜಿನಿಯರಿಂಗ್ ಓದಿ ರಾಜಕಾರಣಕ್ಕೆ ಬಂದವನಲ್ಲ: ಸಿದ್ದರಾಮಯ್ಯ

ಗೌರಿಬಿದನೂರು: ‘ನಾನು ಎಂಜಿನಿಯರಿಂಗ್ ಪದವಿ ಪಡೆದು ರಾಜಕಾರಣಕ್ಕೆ ಬಂದವನಲ್ಲ. ಕಾನೂನು ಓದಿ ರಾಜಕಾರಣಕ್ಕೆ ಬಂದವನು. ಬಿಜೆಪಿಯವರಿಂದ ಕಾನೂನು ಕಲಿಯುವ ಅಗತ್ಯವಿಲ್ಲ’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪರೋಕ್ಷವಾಗಿ ತಿರುಗೇಟು ನೀಡಿದ್ದಾರೆ.

‘ರಾಜ್ಯದಲ್ಲಿ ಶೇ 40ರಷ್ಟು ಕಮಿಷನ್ ಪಡೆಯುವ ಸರ್ಕಾರವಿದೆ. ಇದನ್ನು ಸಾಕ್ಷಿ ಸಮೇತ ಜನರ ಮುಂದಿಡಲು ಮುಂದಾಗಿದ್ದೇವೆ. ಇದಕ್ಕೆ ಪ್ರತಿಯಾಗಿ ಕಾನೂನು ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಹೇಳಿದ್ದಾರೆ. ನನಗೂ ಕಾನೂನು ಚೆನ್ನಾಗಿ ಗೊತ್ತು’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

## ಸುದ್ದಿ 2 ನಿಮಿಷ

### ಯಾದಗಿರಿಯ ಡಾ. ಎಂ. ಶ್ರೀನಿವಾಸ್‌ಗೆ ಒಲಿದ ಏಮ್ಸ್ ನಿರ್ದೇಶಕ ಸ್ಥಾನ

ಯಾದಗಿರಿ: ನವದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯ (ಏಮ್ಸ್) ನಿರ್ದೇಶಕರಾಗಿ ಯಾದಗಿರಿಯ ಡಾ. ಎಂ.ಶ್ರೀನಿವಾಸ್ ನೇಮಕವಾಗಿದ್ದಾರೆ. ಅವರು ಪ್ರಸ್ತುತ ಹೈದರಾಬಾದ್‌ನ ಇಎಸ್ಐಸಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಡೀನ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಯಾದಗಿರಿಯ ಸ್ಟೇಷನ್ ಬಜಾರ್‌ನ ನಿವಾಸಿಗಳಾದ ಆಶಪ್ಪ ಮತ್ತು ಸರೋಜಾ ಅವರ ಪುತ್ರರಾದ ಡಾ. ಎಂ.ಶ್ರೀನಿವಾಸ್ ಅವರ ಸಹೋದರ ನಾಗರಾಜ ಕಲಬುರಗಿಯ ಇಎಸ್ಐ ಆಸ್ಪತ್ರೆಯಲ್ಲಿ ವೈದ್ಯರಾಗಿದ್ದಾರೆ. ಅವರು ಕಲಿತ ನಗರದ ನ್ಯೂ ಕನ್ನಡ ಶಾಲೆಯಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಸಂಭ್ರಮಿಸಿದರು. ವಿದ್ಯಾರ್ಥಿಗಳಿಗೆ ಚಾಕ್ಲೇಟ್ ವಿತರಿಸಲಾಯಿತು.

ಕನ್ನಡ ಮಾಧ್ಯಮದಲ್ಲೇ ಓದಿದ ಶ್ರೀನಿವಾಸ ಅವರು ಪ್ರಾಥಮಿಕ ಶಿಕ್ಷಣವನ್ನು ಯಾದಗಿರಿಯ ಎಂಪಿಎಸ್ ಶಾಲೆ, ಪ್ರೌಢಶಿಕ್ಷಣ ನ್ಯೂ ಕನ್ನಡ ಶಾಲೆ ಮತ್ತು ಪಿಯು ಶಿಕ್ಷಣವನ್ನು ಜೂನಿಯರ್ ಕಾಲೇಜಿನಲ್ಲಿ ಪಡೆದರು. ನಂತರ ಬಳ್ಳಾರಿಯಲ್ಲಿ ಎಂ.ಬಿ.ಬಿ.ಎಸ್, ದಾವಣಗೆರೆ ಜೆಜೆಎಂ ವೈದ್ಯಕೀಯ ಕಾಲೇಜಿನಲ್ಲಿ ಎಂ.ಎಸ್ ವ್ಯಾಸಂಗ ಮಾಡಿದರು. ಏಮ್ಸ್‌ನಲ್ಲಿ ಎಂಸಿಎಚ್ ಅಭ್ಯಾಸ ಮಾಡಿದ ಅವರು ಅಲ್ಲಿಯೇ ಮಕ್ಕಳ ಶಸ್ತ್ರಚಿಕಿತ್ಸೆ ತಜ್ಞ ವೈದ್ಯರಾಗಿ ಸೇವೆ ಸಲ್ಲಿಸಿದರು.

‘ಅಣ್ಣ ಎಂ.ಶ್ರೀನಿವಾಸ ಅವರು ಏಮ್ಸ್ ನಿರ್ದೇಶಕರಾಗಿದ್ದು ಸಂತಸ ತಂದಿದೆ’ ಎಂದು ಸಹೋದರ ಡಾ. ನಾಗರಾಜ ತಿಳಿಸಿದ್ದಾರೆ.

### ಗಣಪತಿ ವಿಸರ್ಜನೆ ಶೋಭಾಯಾತ್ರೆಯಲ್ಲಿ ಗೋಡ್ಸೆ ಚಿತ್ರ ಪ್ರದರ್ಶನ

ದಾವಣಗೆರೆ: ಮಹಾತ್ಮ ಗಾಂಧಿ ಹತ್ಯೆ ಮಾಡಿದ್ದ ನಾಥೂರಾಂ ಗೋಡ್ಸೆಯ ಭಾವಚಿತ್ರಗಳನ್ನು ಹಿಂದೂ ಮಹಾಗಣಪತಿ ಟ್ರಸ್ಟ್‌ನಿಂದ ಶನಿವಾರ ನಗರದಲ್ಲಿ ನಡೆದ ಹಿಂದೂ ಮಹಾಗಣಪತಿಯ ವಿಸರ್ಜನೆಯ ಶೋಭಾಯಾತ್ರೆಯಲ್ಲಿ ಪ್ರದರ್ಶಿಸಲಾಯಿತು.

ಸಿದ್ಧಗಂಗಾಶ್ರೀ, ಶಿವಾಜಿ, ವಿ.ಡಿ. ಸಾವರ್ಕರ್, ಪುನೀತ್ ರಾಜ್‌ಕುಮಾರ್, ದರ್ಶನ್ ಚಿತ್ರಗಳಿರುವ ಬೃಹತ್ ಬಾವುಟಗಳು, ‘ಕಿಚ್ಚ ಸಾಮ್ರಾಜ್ಯ’ ಎಂದು ಬರೆದ ಬಾವುಟಗಳು, ಕನ್ನಡ ಧ್ವಜ, ಭಗವಧ್ವಜ, ಅರ್ಧ ಹನುಮನ ಚಿತ್ರ ಇರುವ ಧ್ವಜಗಳು ಎಲ್ಲೆಡೆ ಹಾರಾಡುತ್ತಿದ್ದವು. ಇದರ ನಡುವೆಯೇ ಕೆಲವರು ನಾಥೂರಾಂ ಗೋಡ್ಸೆಯ ಫೋಟೊಗಳನ್ನು ಹಿಡಿದು ಸಂಭ್ರಮಿಸಿರುವುದು ಕಂಡುಬಂತು. ಫೋಟೊದ ಕೆಳಭಾಗದಲ್ಲಿ ‘ಅಖಂಡ ಭಾರತದ ಶಿಲ್ಪಿ ನಾಥೂರಾಂ ಗೋಡ್ಸೆ’ ಎಂಬ ಅಡಿಬರಹ ಇರುವುದು ಗಮನ ಸೆಳೆಯಿತು.

# ಮತಾಂತರಕ್ಕೆ ಯತ್ನ ಆರೋಪ: 11 ಮಂದಿ ವಿರುದ್ಧ ಪ್ರಕರಣ

ಹುಬ್ಬಳ್ಳಿ: ಮಂಡ್ಯದ ಯಾದವನಹಳ್ಳಿ ಗ್ರಾಮದ ಶ್ರೀಧರ ಗಂಗಾಧರ ಅವರ ಶಿಶ್ನದ ಮುಂದೊಗಲು ಕತ್ತರಿಸಿ (ಖತ್ನಾ) ಇಸ್ಲಾಂಗೆ ಬಲವಂತವಾಗಿ ಮತಾಂತರ ಮಾಡಲು ಯತ್ನಿಸಿದ 11 ಮಂದಿ ವಿರುದ್ಧ ಇಲ್ಲಿನ ನವನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಂಡ್ಯದ ಅತ್ತಾವರ ರೆಹಮಾನ್, ಬೆಂಗಳೂರಿನ ಅಜೀಸಾಬ್, ನಯಾಜ್ ಪಾಷಾ, ನದೀಮ್ ಖಾನ್, ಅನ್ಸಾರ್ ಪಾಷಾ, ಸಯ್ಯದ್ ದಸ್ತಗಿರ್, ಮಹ್ಮದ್ ಇಕ್ಬಾಲ್, ರಫಿಕ್, ಶಬ್ಬೀರ್, ಖಾಲಿದ್, ಷಾಕಿಲ್ ಮತ್ತು ಅಲ್ತಾಪ್ ವಿರುದ್ಧ ಶ್ರೀಧರ ಅವರು ದೂರು ನೀಡಿದ್ದಾರೆ.

ಎಫ್ಐಆರ್‌ನಲ್ಲಿ ಏನಿದೆ: ಕಳೆದ ಮೇ ತಿಂಗಳಲ್ಲಿ ಶ್ರೀಧರ ಅವರನ್ನು ಬೆಂಗಳೂರಿಗೆ ಕರೆದೊಯ್ದ ಆರೋಪಿಗಳು, ಅಲ್ಲಿನ ಬನಶಂಕರಿಯ ಮಸೀದಿಯೊಂದರಲ್ಲಿ ಬಲವಂತವಾಗಿ ಬಂಧಿಸಿಟ್ಟಿದ್ದರು. ನಂತರ ಅವರಿಗೆ ಇಸ್ಲಾಂ ಬಗ್ಗೆ ನಂಬಿಕೆ ಬರುವಂತೆ ಮಾಡಿ, ‘ಖತ್ನಾ’ ಮಾಡಿದ್ದಾರೆ. ದನದ ಮಾಂಸ ತಿನ್ನುವಂತೆ ಒತ್ತಾಯಿಸಿ ಹಲ್ಲೆ ನಡೆಸಿದ್ದಲ್ಲದೆ, ಮತಾಂತರದ ಬಗ್ಗೆ ಬಾಂಡ್ ಪೇಪರ್‌ನಲ್ಲಿ ಸಹಿ ಪಡೆದಿದ್ದಾರೆ. ಅಲ್ಲಿಂದ ತಿರುಪತಿಗೆ ಕರೆದೊಯ್ದು, ಇಸ್ಲಾಂ ಧರ್ಮದ ಪ್ರಾರ್ಥನೆ ಹಾಗೂ ಇತರ ಪದ್ಧತಿಗಳ ಕುರಿತು ತರಬೇತಿ ನೀಡಿದ್ದಾರೆ.

ಪ್ರತಿವರ್ಷ ಮೂವರನ್ನು ಇಸ್ಲಾಂಗೆ ಮತಾಂತರ ಮಾಡಬೇಕೆಂದು ಆರೋಪಿಗಳು ಶ್ರೀಧರ ಅವರಿಗೆ ಬೆದರಿಸಿದ್ದಾರೆ. ಅವರ ಕೈಯ್ಯಲ್ಲಿ ಪಿಸ್ತೂಲ್ ಹಿಡಿಸಿ, ಫೋಟೊ ತೆಗೆದು, ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟು ಭಯೋತ್ಪಾದಕನೆಂದು ಬಿಂಬಿಸುವುದಾಗಿ ಹೆದರಿಸಿದ್ದಾರೆ. ಅವರ ಬ್ಯಾಂಕ್ ಖಾತೆಗೂ ₹35 ಸಾವಿರ ವರ್ಗಾಯಿಸಿ, ತಾವು ಹೇಳಿದಂತೆ ಕೇಳಬೇಕು ಎಂದು ಜೀವ ಬೆದರಿಕೆ ಹಾಕಿದ್ದಾರೆ.

ಶ್ರೀಧರ ಅವರು ಸಾಮಾಜಿಕ ಜಾಲತಾಣದಲ್ಲಿ ಪರಿಚಯವಾದ ಯುವತಿಯನ್ನು ಭೇಟಿಯಾಗಲು ಸೆ. 21ರಂದು ಹುಬ್ಬಳ್ಳಿಯ ಬೈರಿದೇವರಕೊಪ್ಪಕ್ಕೆ ಬಂದಾಗ, ಅಪರಿಚಿತರು ಅವರ ಮೇಲೆ ಹಲ್ಲೆ ನಡೆಸಿದ್ದಾರೆ.

# ‘ಭಯೋತ್ಪಾದನೆ: ತನಿಖೆ ನಡೆಸದ ಕಾಂಗ್ರೆಸ್’

ಪ್ರಜಾವಾಣಿ ವಾರ್ತೆ

ತೀರ್ಥಹಳ್ಳಿ: ‘ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಭಯೋತ್ಪಾದನೆ ಕುರಿತ ಪ್ರಕರಣಗಳಲ್ಲಿ ಯಾವುದೇ ತನಿಖೆ ನಡೆದಿಲ್ಲ. ಮತಾಂಧ ಶಕ್ತಿಗಳನ್ನು ಹತ್ತಿಕ್ಕುವ ಕೆಲಸವನ್ನು ಬಿಜೆಪಿ ಮಾಡುತ್ತಿದೆ’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಐಎಸ್ ನಂಟಿನ ಆರೋಪ ಸಂಬಂಧ ಬಂಧನಕ್ಕೊಳಗಾಗಿರುವ ಮಾಝ್ ಮುನೀರ್ ಅಹಮದ್ ತಂದೆ ಮುನೀರ್ ಅಹಮದ್ ಅಂತ್ಯಕ್ರಿಯೆ ಹಿನ್ನೆಲೆಯಲ್ಲಿ ಪಟ್ಟಣಕ್ಕೆ ಬಂದಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

‘ಹಿಂದಿನ ಕೇಂದ್ರ ಸರ್ಕಾರದ ಅವಧಿಯಲ್ಲಿ ಬಾಂಬ್‌ಗಳು ದೀಪಾವಳಿ ಪಟಾಕಿಯಂತೆ ಸಿಡಿಯುತ್ತಿದ್ದವು. ಪ್ರಧಾನಿ ನರೇಂದ್ರ ಮೋದಿ ರಕ್ಷಣಾ ವ್ಯವಸ್ಥೆ ಬಲಪಡಿಸಿದ್ದಾರೆ. ಐಎಸ್ ನಂಟಿನ ಪ್ರಕರಣ ಭೇದಿಸಲು ಸಹಕರಿಸಿದ ಪೊಲೀಸ್ ಅಧಿಕಾರಿಗಳಿಗೆ ಪ್ರಶಸ್ತಿ ಘೋಷಿಸುತ್ತೇವೆ. ರಾಜಕೀಯವಾಗಿ ಪೊಲೀಸ್ ಅಧಿಕಾರಿಗಳ ಮೇಲೆ ಒತ್ತಡ ಹಾಕದೇ ಇರುವುದರಿಂದ ಪ್ರಕರಣ ಬಯಲಿಗೆ ಬಂದಿದೆ’ ಎಂದು ಹೇಳಿದರು.

‘ಮುನೀರ್ ಕುಟುಂಬದ ಬಗ್ಗೆ ಇಲ್ಲಿ ಒಳ್ಳೆಯ ಅಭಿಪ್ರಾಯ ಇದೆ. ತೀರ್ಥಹಳ್ಳಿ ಮೂಲವಾಗಿದ್ದರೂ ಮಂಗಳೂರು ಸಹವಾಸದಿಂದ ಮಾಝ್ ದಾರಿ ತಪ್ಪಿದ್ದಾರೆ’ ಎಂದು ಆರಗ ಜ್ಞಾನೇಂದ್ರ ಅಭಿಪ್ರಾಯಪಟ್ಟರು.

## ಎಸ್‌ಡಿಪಿಐ, ಪಿಎಫ್ಐ ನಿಷೇಧಿಸಿ: ಸಿ.ಟಿ.ರವಿ

ಚಿಕ್ಕಮಗಳೂರು: ‘ಸಿಮಿ ಸಂಘಟನೆಯ ಮತ್ತೊಂದು ಅವತಾರದಂತಿರುವ ಎಸ್‌ಡಿಪಿಐ (ಸೋಷಿಯಲ್ ಡೆಮಾಕ್ರೆಟಿಕ್ ಪಾರ್ಟಿ ಆಫ್ ಇಂಡಿಯಾ), ಪಿಎಫ್ಐ (ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ) ಸಂಘಟನೆಗಳನ್ನು ದೇಶದ ಹಿತದೃಷ್ಟಿಯಿಂದ ನಿಷೇಧಿಸಲೇಬೇಕು’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಪ್ರತಿಪಾದಿಸಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಎಸ್‌ಡಿಪಿಐ, ಪಿಎಫ್ಐ ಕೇಂದ್ರಿತವಾಗಿ ಎನ್ಐಎ ತಂಡವು ದಾಳಿ ನಡೆಸಿ 100ಕ್ಕೂ ಹೆಚ್ಚು ಮಂದಿಯನ್ನು ಬಂಧಿಸಿದೆ. ದೇಶದ ವಿರುದ್ಧ ಷಡ್ಯಂತ್ರದಲ್ಲಿ ಅವರು ತೊಡಗಿದ್ದರು ಎಂಬ ಪ್ರಾಥಮಿಕ ಮಾಹಿತಿ ಇದೆ’ ಎಂದು ಪ್ರತಿಕ್ರಿಯಿಸಿದರು.

‘20 ವರ್ಷಗಳ ಹಿಂದೆ ಜಿಲ್ಲೆಯ ಕೊಪ್ಪ ಭಾಗದಲ್ಲಿ ಉಗ್ರರಿಗೆ ತರಬೇತಿ ನಂಟು ಇತ್ತು. ಭಟ್ಕಳ, ಮಂಗಳೂರಿನಲ್ಲಿ ಉಗ್ರಗಾಮಿ ಚಟುವಟಿಕೆ ನಡೆಸಿದವರು ಜಿಲ್ಲೆಯಲ್ಲಿ ನೆಲೆ ಕಂಡುಕೊಂಡಿದ್ದರು. ಜಿಲ್ಲೆಯನ್ನು ಉಗ್ರರು ತರಬೇತಿ ತಾಣವಾಗಿಸಿಕೊಳ್ಳುವ ಸಾಧ್ಯತೆ ಇದ್ದು, ಪೊಲೀಸ್ ಗುಪ್ತಚರ ವಿಭಾಗವನ್ನು ಬಲಗೊಳಿಸಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ತಿಳಿಸಿದ್ದೇನೆ’ ಎಂದರು.

‘ರಾಜಕಾರಣದ ಹೊರತಾಗಿ ದೇಶದ ಹಿತದೃಷ್ಟಿಯಿಂದ ಎಲ್ಲರೂ ಒಂದಾಗಿ ನಿಲ್ಲುವ ಅಗತ್ಯ ಇದೆ. ವೋಟ್ ಬ್ಯಾಂಕ್‌ಗಾಗಿ ದೇಶದ ಹಿತಾಸಕ್ತಿಯನ್ನು ಕಡೆಗಣಿಸಬಾರದು’ ಎಂದರು.

‘ಹಿಂದಿನ ಕಾಂಗ್ರೆಸ್ ಸರ್ಕಾರವು ಹೈಕಮಾಂಡ್‌ಗೆ ಕಪ್ಪ ಒಪ್ಪಿಸುವ ‘ಎಟಿಎಂ’ ಕಾರ್ಯ ಮಾಡಿಕೊಂಡಿತ್ತು. ಅದೇ ಗುಂಗಿನಲ್ಲಿ ಈಗ ಕಾಂಗ್ರೆಸ್‌ನವರು ‘ಪೇ ಸಿಎಂ’ ಪೋಸ್ಟರ್ ಹಾಕಿದ್ದಾರೆ, ಅಂದರೆ ‘ಪೇ ಫಾರ್ ಕಾಂಗ್ರೆಸ್ ಮೇಡಂ’ ಎಂದರ್ಥ. ಪೋಸ್ಟರ್‌ನಲ್ಲಿ ಅಧಿನಾಯಕಿ (ಸೋನಿಯಾ ಗಾಂಧಿ) ಫೋಟೊ ಬದಲಿಗೆ ತಪ್ಪಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಫೋಟೊ ಹಾಕಿದ್ದಾರೆ’ ಎಂದು ಲೇವಡಿ ಮಾಡಿದರು.

## ವರ್ಗಾವಣೆ ಪಟ್ಟಿ ಪ್ರಕಟ

ಬೆಂಗಳೂರು: ಸಾರಿಗೆ ಸಂಸ್ಥೆಗಳ ನೌಕರರ ಅಂತರ ನಿಗಮ ವರ್ಗಾವಣೆ ಕೋರಿ ಸಲ್ಲಿಕೆಯಾಗಿದ್ದ 4,665 ಅರ್ಜಿಗಳ ಪೈಕಿ 1,033 ನೌಕರರ ಸಂಭವನೀಯ ವರ್ಗಾವಣೆ ಪಟ್ಟಿಯನ್ನು ಕೆಎಸ್‌ಆರ್‌ಟಿಸಿ ಪ್ರಕಟಿಸಿದೆ. ksrtc.karnataka.gov.in ವೆಬ್‌ಸೈಟ್‌ನಲ್ಲಿ ಪಟ್ಟಿ ಪ್ರಕಟಿಸಿದ್ದು, ನೌಕರರ ಜ್ಯೇಷ್ಠತೆ ಕುರಿತ ಹಾಗೂ ಇತರ ಆಕ್ಷೇಪಣೆಗಳಿದ್ದರೆ ಅಕ್ಟೋಬರ್ 10ರ ಸಂಜೆ 5.30ರ ತನಕ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಕೆಎಸ್‌ಆರ್‌ಟಿಸಿ ಪ್ರಕಟಣೆ ತಿಳಿಸಿದೆ.

## ಗಾಂಜಾ ಮಾರಾಟ: ಸಿಪಿಐ ಮೇಲೆ ಹಲ್ಲೆ

ಕಮಲಾಪುರ (ಕಲಬುರಗಿ ಜಿಲ್ಲೆ): ಗಾಂಜಾ ಮಾರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರದ ತುರೂರಿ ಸಮೀಪದ ವಾಡಿ ಮತ್ತು ಕರ್ನಾಟಕದ ಗಡಿಗೆ ಹೊಂದಿಕೊಂಡಿರುವ ಬಸವಕಲ್ಯಾಣ ತಾಲ್ಲೂಕಿನ ಹೊನ್ನಾಳಿಯ ಜಮೀನಿನಲ್ಲಿ ಶುಕ್ರವಾರ ರಾತ್ರಿ ಕಾರ್ಯಾಚರಣೆಗೆ ತೆರಳಿದ್ದ ಪೊಲೀಸರ ಮೇಲೆ 40 ಮಂದಿ ದುಷ್ಕರ್ಮಿಗಳು ಹಲ್ಲೆ ಮಾಡಿದ್ದಾರೆ.

ಶ್ರೀಮಂತ ಇಲ್ಲಾಳ

ಕಮಲಾಪುರ ಸರ್ಕಲ್ ಪೊಲೀಸ್ ಇನ್‌ಸ್ಪೆಕ್ಟರ್ ಶ್ರೀಮಂತ ಇಲ್ಲಾಳ ಎಂಬುವರಿಗೆ ಗಂಭೀರ ಗಾಯಗಳಾಗಿವೆ. ಕೆಲ ಪೊಲೀಸರಿಗೆ ಗಾಯಗಳಾಗಿವೆ. ಶ್ರೀಮಂತ ಇಲ್ಲಾಳ ಅವರಿಗೆ ಬಸವಕಲ್ಯಾಣ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿ, ಹೆಚ್ಚುವರಿ ಚಿಕಿತ್ಸೆಗಾಗಿ ಕಲಬುರಗಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತು.

‘ಪ್ರಕರಣಕ್ಕೆ ಸಂಬಂಧಿಸಿದಂತೆ ಎರಡು ದಿನಗಳ ಹಿಂದೆ ಕಮಲಾಪುರ ತಾಲ್ಲೂಕಿನ ದಸ್ತಾಪುರ ಕ್ರಾಸ್ ಬಳಿ ನವೀನ್ ಮತ್ತು ಬಸವಕಲ್ಯಾಣ ತಾಲ್ಲೂಕಿನ ಭೋಸಗಾದ ಸಂತೋಷಗೆ ಬಂಧಿಸಲಾಗಿತ್ತು. ಇಬ್ಬರನ್ನೂ ವಿಚಾರಣೆಗೆ ಒಳಪಡಿಸಿ, ಇನ್ನಷ್ಟು ಮಾಹಿತಿಗೆ 10 ಮಂದಿ ಪೊಲೀಸ್ ತಂಡ ಹೊನ್ನಾಳಿಗೆ ತೆರಳಿದಾಗ, ಹಲ್ಲೆ ನಡೆದಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

## ದುರ್ಗಾ ದೇವಿ ಮೆರವಣಿಗೆ..

‘ನವರಾತ್ರಿ ಉತ್ಸವ’ದ ಪ್ರಯುಕ್ತ ಮುಂಬೈನ ಲಾಲ್‌ಬಾಗ್‌ನಲ್ಲಿ ಶನಿವಾರ ಪ್ರತಿಷ್ಠಾಪನೆ ಸಲುವಾಗಿ ದುರ್ಗಾ ದೇವಿ ಮೂರ್ತಿಯನ್ನು ಮೆರವಣಿಗೆ ಮೂಲಕ ತರಲಾಯಿತು – ಪಿಟಿಐ ಚಿತ್ರ

# ‘ದಂಡ ಕಟ್ಟುತ್ತೇವೆ, ದೇವರ ಮುಟ್ಟಲು ಬಿಡಿ’

ಪ್ರಜಾವಾಣಿ ವಾರ್ತೆ

ಕೋಲಾರ: ‘ಉಳ್ಳೇರಹಳ್ಳಿಯಲ್ಲಿ ಪರಿಶಿಷ್ಟ ಬಾಲಕ ದೇವರ ಗುಜ್ಜಕೋಲು ಮುಟ್ಟಿದನೆಂದು ಗ್ರಾಮದ ಕೆಲವರು ದಂಡ ವಿಧಿಸಿದ್ದಾರೆ. ನಿಮಗೆ ದಂಡ ತಾನೇ ಬೇಕು? ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಪರಿಶಿಷ್ಟ ಜಾತಿ ಘಟಕದಿಂದ ದಂಡ ಕಟ್ಟಲು ನಾವು ಸಿದ್ಧ. ಆದರೆ, ದೇವರನ್ನು ಮುಟ್ಟಲು ದಲಿತರಿಗೆ ಅವಕಾಶ ಮಾಡಿಕೊಡಬೇಕು’ ಎಂದು ಎಂದು ಕೆಪಿಸಿಸಿ ಪರಿಶಿಷ್ಟ ಜಾತಿ ಘಟಕದ ಅಧ್ಯಕ್ಷ ಆರ್.ಧರ್ಮಸೇನ ಸವಾಲು ಹಾಕಿದ್ದಾರೆ.

ಆರ್.ಧರ್ಮಸೇನ

ಶನಿವಾರ ಉಳ್ಳೇರಹಳ್ಳಿಗೆ ಭೇಟಿ ನೀಡಿ ಸಂತ್ರಸ್ತ ಬಾಲಕನ ಕುಟುಂಬವನ್ನು ಭೇಟಿಯಾದ ಬಳಿಕ ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ಬಿಜೆಪಿ ಸರ್ಕಾರದ ಅವಧಿಯಲ್ಲಿ ದೇಶ ಹಾಗೂ ರಾಜ್ಯದಲ್ಲಿ ದಲಿತರ ಮೇಲೆ ದೌರ್ಜನ್ಯ ಪ್ರಕರಣ ಹೆಚ್ಚಿವೆ. ಇದಕ್ಕೆ ಕಡಿವಾಣ ಹಾಕದಿದ್ದರೆ ದಲಿತರು ತಕ್ಕ ಪಾಠ ಕಲಿಸಲಿದ್ದಾರೆ. ದಲಿತರ ರಕ್ಷಣೆಗೆ ಮುಂದಾಗದಿದ್ದರೆ ಈ ಸರ್ಕಾರ ಹೆಚ್ಚು ದಿನ ಇರಲ್ಲ’ ಎಂದರು.

‘ಜಿಲ್ಲಾ ಉಸ್ತುವಾರಿ ಸಚಿವ ಸೇರಿದಂತೆ ಇದುವರೆಗೂ ಒಬ್ಬ ಸಚಿವನೂ ಗ್ರಾಮಕ್ಕೆ ಭೇಟಿ ನೀಡಿಲ್ಲ. ದಲಿತರ ಹೆಸರಿನಲ್ಲಿ ಸ್ಥಾನಮಾನ ಪಡೆದಿರುವ ಸಚಿವ ಗೋವಿಂದ ಕಾರಜೋಳ, ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಕೂಡ ಬಂದಿಲ್ಲ’ ಎಂದು ತರಾಟೆಗೆ ತೆಗೆದುಕೊಂಡರು.

‘ಉಳ್ಳೇರಹಳ್ಳಿ ಘಟನೆ ನಂತರ ಬಾಲಕನ ತಾಯಿ ಶೋಭಾ ಅವರಿಗೆ ಕೊಲೆ ಬೆದರಿಕೆ ಬಂದಿದ್ದು, ಏನಾದರೂ ಅನಾಹುತವಾದರೆ ಬಿಜೆಪಿ ಸರ್ಕಾರವೇ ಹೊಣೆ ಹೊರಬೇಕಾಗುತ್ತದೆ’ ಎಂದು ಎಚ್ಚರಿಕೆ ನೀಡಿದರು.

## ‘ಭೇದ ಭಾವದ ಧರ್ಮ ಬೇಕಿಲ್ಲ’

ಮಾಲೂರು: ‘ಪರಿಶಿಷ್ಟ ಬಾಲಕನಿಗೆ ದಂಡ ವಿಧಿಸಿ ದಬ್ಬಾಳಿಕೆ ನಡೆಸಿರುವುದು ಖಂಡನೀಯ’ ಎಂದು ನಟ, ಹೋರಾಟಗಾರ ಚೇತನ್ ಅಹಿಂಸಾ ಕಿಡಿಕಾರಿದರು.

ಚೇತನ್ ಅಹಿಂಸಾ

ಶನಿವಾರ ಸಂತ್ರಸ್ತ ಕುಟುಂಬವನ್ನು ಭೇಟಿ ಮಾಡಿ ಸಾಂತ್ವನ ಹೇಳಿದ ಅವರು, ‘ಸಾವಿರಾರು ವರ್ಷಗಳಿಂದ ದಲಿತರು, ಮಹಿಳೆಯರು, ಶೂದ್ರರು, ಹಿಂದುಳಿದ ವರ್ಗ ಹಾಗೂ ಬಡವರ ಮೇಲೆ ಸತತವಾಗಿ ದಬ್ಬಾಳಿಕೆ ನಡೆಯುತ್ತಿದೆ. ಪ್ರಸ್ತುತ ಸಮಾಜಕ್ಕೆ ನ್ಯಾಯ ಬೇಕಾಗಿದೆ. ನ್ಯಾಯವೆಂದರೆ ಇತಿಹಾಸದ ತಪ್ಪುಗಳನ್ನು ತಿದ್ದಬೇಕಿದೆ’ ಎಂದರು.

‘ದೇವರನ್ನು ನಂಬಿ ಶೋಭಾ ದೇಗುಲಕ್ಕೆ ಹೋಗುತ್ತಿದ್ದರು. ಭೇದಭಾವ ಮೂಡಿಸುವ ಧರ್ಮ ಬೇಕಾಗಿಲ್ಲ, ಯಾವ ದೇವರೂ ಬೇಡ, ಯಾವ ದೇವಸ್ಥಾನವೂ ಅಗತ್ಯವಿಲ್ಲ. ಬುದ್ಧ, ಅಂಬೇಡ್ಕರ್, ಬಸವ, ಪೆರಿಯಾರ್, ಫುಲೆ ಮತ್ತು ಕುವೆಂಪು ಹೇಳಿರುವ ಸಮಾನತೆ, ನ್ಯಾಯ ಮತ್ತು ವೈಜ್ಞಾನಿಕ ಮನೋಭಾವ ಬೇಕಿದೆ’ ಎಂದರು.

‘ಆಜಾದಿ ಸೇ ಅಂತ್ಯೋದಯ್ ತಕ್’: ಉತ್ತಮ ಸಾಧನೆ ಮಾಡಿದ ರಾಜ್ಯದ ಎರಡು ಜಿಲ್ಲೆಗಳು

# ಜನಮನ ತಲುಪಿದ ಜಿಲ್ಲೆಗೆ ಐದನೇ ಸ್ಥಾನ

ಪ್ರಜಾವಾಣಿ ವಾರ್ತೆ

ಮಂಗಳೂರು: ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಭಾಗವಾಗಿ ಕೇಂದ್ರ ಸರ್ಕಾರ ನಡೆಸಿದ ‘ಆಜಾದಿ ಸೇ ಅಂತ್ಯೋದಯ ತಕ್’ ಫಲಾನುಭವಿ ಆಧಾರಿತ ಯೋಜನೆಗಳ ಅನುಷ್ಠಾನ ಅಭಿಯಾನದಲ್ಲಿ ಶೇ 87.40 ರಷ್ಟು ಗುರಿ ಸಾಧನೆ ಮಾಡುವ ಮೂಲಕ ದಕ್ಷಿಣ ಕನ್ನಡ ಜಿಲ್ಲೆ ರಾಷ್ಟ್ರಮಟ್ಟದಲ್ಲಿ ಐದನೇ ಸ್ಥಾನ ಪಡೆದಿದೆ.

ದೇಶದ 27 ರಾಜ್ಯಗಳ 75 ಜಿಲ್ಲೆಗಳನ್ನು ಈ ಅಭಿಯಾನಕ್ಕೆ ಆಯ್ಕೆ ಮಾಡಲಾಗಿತ್ತು. ಕರ್ನಾಟಕದಿಂದ ದಕ್ಷಿಣ ಕನ್ನಡ ಮತ್ತು ಬೆಳಗಾವಿ ಜಿಲ್ಲೆಗಳು ಆಯ್ಕೆಯಾಗಿದ್ದವು. ಏಪ್ರಿಲ್ 28ರಿಂದ ಒಟ್ಟು 90 ದಿನಗಳ ಅಭಿಯಾನದಲ್ಲಿ ಕೇಂದ್ರ ಸರ್ಕಾರದ 17 ಯೋಜನೆಗಳ ಪರಿಣಾಮಕಾರಿ ಜಾರಿಗೆ ಗುರಿ ನಿಗದಿಪಡಿಸಲಾಗಿತ್ತು. ಅಂತಿಮವಾಗಿ ಆಯ್ಕೆ ಮಾಡಿದ ಟಾಪ್ ಟೆನ್ ಜಿಲ್ಲೆಗಳಲ್ಲಿ ದಕ್ಷಿಣ ಕನ್ನಡ ಐದನೇ ಸ್ಥಾನ ಗಳಿಸಿದರೆ, ಬೆಳಗಾವಿ ಶೇ 84.45 ಸಾಧನೆ ಮಾಡಿ, 10ನೇ ಸ್ಥಾನ ಪಡೆದಿದೆ. ಸೆ.26ರಂದು ದೆಹಲಿಯಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ.

> ವಿವಿಧ ಇಲಾಖೆಗಳು, ಸಿಬ್ಬಂದಿ ತಂಡವಾಗಿ ಕಾರ್ಯನಿರ್ವಹಿಸಿದ ಕಾರಣಕ್ಕೆ ದೇಶ ಮಟ್ಟದಲ್ಲಿ ಐದನೇ ಸ್ಥಾನ ಪಡೆಯಲು ಸಾಧ್ಯವಾಗಿದೆ
> **ಡಾ. ರಾಜೇಂದ್ರ ಕೆ.ವಿ.,** ಜಿಲ್ಲಾಧಿಕಾರಿ

> ವಿಮೆ ಆಧರಿತ ಯೋಜನೆಗಳಲ್ಲಿ ಜಿಲ್ಲೆಯಲ್ಲಿ 10 ಲಕ್ಷ ನೋಂದಣಿ, ನಿರಂತರ ಪ್ರಗತಿ ಪರಿಶೀಲನಾ ಸಭೆ ನಡೆಸಿದ್ದು ಉತ್ತಮ ಸಾಧನೆಗೆ ಅನುಕೂಲವಾಯಿತು.
> **ಡಾ. ಕುಮಾರ್,** ಜಿಲ್ಲಾ ಪಂಚಾಯಿತಿ ಸಿಇಒ

‘ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಕೃಷಿ, ಕಾರ್ಮಿಕ ಇಲಾಖೆ ಸೇರಿದಂತೆ ಸರ್ಕಾರದ ಒಂಬತ್ತು ಇಲಾಖೆಗಳು, ಬ್ಯಾಂಕಿಂಗ್ ಕ್ಷೇತ್ರದವರನ್ನು ಒಳಗೊಂಡು, ಯೋಜನೆ ಜಾರಿಗೆ ಸಮಗ್ರ ಕ್ರಿಯಾ ಯೋಜನೆ ಸಿದ್ಧಪಡಿಸಿ, ಸಮಿತಿ ರಚನೆ ಮಾಡಲಾಗಿತ್ತು. 17 ಯೋಜನೆಗಳಲ್ಲಿ ಅಂಗವಿಕಲರಿಗೆ ಗುರುತಿನ ಚೀಟಿ ನೀಡುವ ಯೋಜನೆ ಕೂಡ ಒಂದಾಗಿತ್ತು. ಜಿಲ್ಲಾ ಕೇಂದ್ರ ಆಸ್ಪತ್ರೆಯಲ್ಲಿ ಇದ್ದ ವ್ಯವಸ್ಥೆಯನ್ನು ವಿಕೇಂದ್ರೀಕರಿಸಿ, ಸ್ಥಳೀಯ ಮೆಡಿಕಲ್ ಕಾಲೇಜು ಸಹಕಾರ ಪಡೆದು, ತಾಲ್ಲೂಕು ಮಟ್ಟಗಳಲ್ಲಿ ಕ್ಯಾಂಪ್ ಆಯೋಜಿಸಲಾಯಿತು. ಅಲ್ಲಿ ವೈದ್ಯರು ಪರೀಕ್ಷಿಸಿದ ಅಂಗವಿಕಲರನ್ನು, ಸರ್ಕಾರಿ ವೈದ್ಯರು ದೃಢೀಕರಿಸಿ, ಶೀಘ್ರ ಕಾರ್ಡ್ ವಿತರಿಸಲು ಸಾಧ್ಯವಾಯಿತು. ತೀವ್ರ ಅಂಗವೈಕಲ್ಯ ಇರುವವರಿಗೆ ಮನೆಗೇ ವಾಹನ ಕಳುಹಿಸಿದೆವು’ ಎಂದು ಜಿಲ್ಲಾಧಿಕಾರಿ ಡಾ. ರಾಜೇಂದ್ರ ಕೆ.ವಿ. ಪ್ರತಿಕ್ರಿಯಿಸಿದರು.

‘ಪ್ರಧಾನಮಂತ್ರಿ ಜೀವನ ಜ್ಯೋತಿ ಬಿಮಾ ಯೋಜನೆ (ಪಿಎಂಜೆಜೆಬಿವೈ), ಪ್ರಧಾನಮಂತ್ರಿ ಸುರಕ್ಷಾ ಬಿಮಾ ಯೋಜನೆ (ಪಿಎಂಎಸ್‌ಬಿವೈ), ಅಟಲ್ ಪಿಂಚಣಿ ಯೋಜನೆಯಡಿ ಜಿಲ್ಲೆಯಲ್ಲಿ 10 ಲಕ್ಷ ಜನರ ನೋಂದಣಿ ಮಾಡುವ ಮೂಲಕ ಅವರನ್ನು ವಿಮೆ ವ್ಯಾಪ್ತಿಗೆ ತರಲಾಗಿದೆ’ ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು
ನಾ. ದಾಮೋದರ ಶೆಟ್ಟಿ
ಸಾಹಿತಿ, ರಂಗನಿರ್ದೇಶಕ
ಸೆಲೆಬ್ರಿಟಿ LIVE
ನಾ.ದಾ.ಲೋಕ

ಬೆಳಿಗ್ಗೆ 11 ಗಂಟೆಗೆ

ಪಾಡ್‌ಕಾಸ್ಟ್: ಕಥಾಸಾಗರ: ಬೆಳಿಗ್ಗೆ 9
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ನಾಳೆ
ಪ್ರಜಾವಾಣಿ ಅರ್ಪಿಸುವ
ನವರಾತ್ರಿ ಸಾಂಸ್ಕೃತಿಕ ಉತ್ಸವ- 2022 Live
ಸಹಯೋಗ: ಕಾಸ್ಮೋಪಾಲಿಟನ್ ಕ್ಲಬ್, ಜಯನಗರ, ಬೆಂಗಳೂರು
ಸೆಪ್ಟೆಂಬರ್ 26ರಿಂದ ಅಕ್ಟೋಬರ್ 4, 2022. ಪ್ರತಿ ರಾತ್ರಿ 9.30 ರಿಂದ
ಸೆಪ್ಟೆಂಬರ್ 26 ಸೋಮವಾರ
ಮಹಾ ನಗೆ ಹಬ್ಬ
ಕಾಮಿಡಿ ಕಿಂಗ್ ಗಂಗಾವತಿ ಪ್ರಾಣೇಶ್
ನರಸಿಂಹ ಜೋಶಿ, ಬಸವರಾಜ ಮಹಾಮನಿ
ನಿರ್ವಹಣೆ: ನಾಗರಾಜ್ ಶೆಟ್ಟಿ

ದಲಿತರ ಮೇಲಿನ ದೌರ್ಜನ್ಯಕ್ಕೆ ಕೊನೆ ಎಂದು?
ಸಂವಾದ
ಭಾಗವಹಿಸುವವರು:
ಡಾ. ಎಲ್.ಹನುಮಂತಯ್ಯ, ರಾಜ್ಯಸಭೆ ಸದಸ್ಯ, ಕಾಂಗ್ರೆಸ್
ಛಲವಾದಿ ನಾರಾಯಣಸ್ವಾಮಿ, ಶಾಸಕ ಹಾಗೂ ರಾಜ್ಯಾಧ್ಯಕ್ಷ, ಬಿಜೆಪಿ ಎಸ್‌ಸಿ ಮೋರ್ಚಾ
ಮಾವಳ್ಳಿ ಶಂಕರ್, ರಾಜ್ಯ ಸಂಚಾಲಕ, ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ್ ವಾದ)
ಗೌರಿ, ಸಮನ್ವಯಕಾರ್ತಿ, ಕರ್ನಾಟಕ ಜನಶಕ್ತಿ
ಮಧ್ಯಾಹ್ನ 12 ರಿಂದ 1

## ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

| ಜಲಾಶಯ | ಗರಿಷ್ಠ ಮಟ್ಟ (ಅಡಿಗಳಲ್ಲಿ) | ಇಂದಿನ ಮಟ್ಟ | ಒಳಹರಿವು (ಕ್ಯುಸೆಕ್‌ಗಳಲ್ಲಿ) | ಹೊರಹರಿವು (ಕ್ಯುಸೆಕ್‌ಗಳಲ್ಲಿ) |
|---|---|---|---|---|
| ಕೆ ಆರ್ ಎಸ್* | 124.80 | 124.32 | 6,696 | 7,133 |
| ಹಾರಂಗಿ | 2,859 | 2,857.60 | 410 | 1,350 |
| ಕಬಿನಿ | 2,284 | 2,282.98 | 5,120 | 1,000 |
| ಹೇಮಾವತಿ | 2,922 | 2,921.95 | 3,289 | 3,225 |
| ಲಿಂಗನಮಕ್ಕಿ | 1,819 | 1,816 | 5,035 | 7,408 |
| ಸೂಪಾ (ಮೀ) | 564 | 554.06 | 2,762 | 3,187 |
| ಮಾಣಿ | 594 | 590.14 | 1,114 | 723 |
| ತುಂಗಭದ್ರಾ | 1,633 | 1,633 | 13,636 | 13,053 |
| ಮಲಪ್ರಭಾ | 2079.5 | 2,079.50 | 1,394 | 1,394 |
| ಘಟಪ್ರಭಾ | 2,175 | 2,175 | 2,206 | 2,206 |
| ಭದ್ರಾ | 186 | 184 | 2,112 | 3,617 |
| ಆಲಮಟ್ಟಿ (ಮೀ) | 519.60 | 519.60 | 9,477 | 9,477 |
| ನಾರಾಯಣಪುರ (ಮೀ) | 492.25 | 492.07 | 8,000 | 8,000 |

* ನೆಲಮಟ್ಟದಿಂದ

## ನಟ ರಮೇಶ್‌ಗೆ ಶಿವರಾಮ ಕಾರಂತ ಹುಟ್ಟೂರ ಪ್ರಶಸ್ತಿ

ಕೋಟ (ಬ್ರಹ್ಮಾವರ, ಉಡುಪಿ ಜಿಲ್ಲೆ): ಇಲ್ಲಿನ ಕೋಟತಟ್ಟು ಗ್ರಾಮ ಪಂಚಾಯಿತಿ ಮತ್ತು ಡಾ. ಕಾರಂತ ಹುಟ್ಟೂರ ಪ್ರಶಸ್ತಿ ಪ್ರತಿಷ್ಠಾನ ಕೊಡಮಾಡುವ, ‘ಕೋಟ ಶಿವರಾಮ ಕಾರಂತ ಹುಟ್ಟೂರ ಪ್ರಶಸ್ತಿ’ಗೆ ನಟ, ನಿರ್ದೇಶಕ ಹಾಗೂ ನಿರೂಪಕ ರಮೇಶ್ ಅರವಿಂದ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಪ್ರತಿಷ್ಠಾನದ ಕಾರ್ಯಾಧ್ಯಕ್ಷ ಆನಂದ ಸಿ. ಕುಂದರ್ ಶನಿವಾರ ತಿಳಿಸಿದರು. ಕೋಟದ ಕಾರಂತ ಥೀಂ ಪಾರ್ಕ್‌ನಲ್ಲಿ ಅಕ್ಟೋಬರ್ 10ರಂದು ನಡೆಯುವ ಶಿವರಾಮ ಕಾರಂತರ ಜನ್ಮ ದಿನ ಕಾರ್ಯಕ್ರಮದಲ್ಲಿ ಪ್ರಶಸ್ತಿ ನೀಡಲಾಗುವುದು ಎಂದರು.

ರಮೇಶ್

# ಪಿತೃಪಕ್ಷ: ಪೂರ್ವಜರನ್ನು ಸ್ಮರಿಸುವ ದಿನ

• ನವೀನ ಗಂಗೋತ್ರಿ

ಇಂದು ಮಹಾಲಯ ಅಮಾವಾಸ್ಯೆ

ನಮ್ಮ ಸಂಪ್ರದಾಯದಲ್ಲಿ ದೇವಯಜ್ಞ, ಋಷಿಯಜ್ಞ, ಪಿತೃಯಜ್ಞ, ಭೂತಯಜ್ಞ ಮತ್ತು ನೃಯಜ್ಞ – ಇವು ಒಬ್ಬ ಗೃಹಸ್ಥನು ಆಚರಿಸಬೇಕಾದ ಐದು ಬಗೆಯ ಯಜ್ಞಗಳು. ಇವನ್ನೇ ಪಂಚಮಹಾಯಜ್ಞಗಳೆಂದೂ ಗುರುತಿಸುವುದಿದೆ. ದೇವತೆಗಳನ್ನು, ಋಷಿಗಳನ್ನು, ಪಿತೃಗಳನ್ನು, ನಮ್ಮ ಸುತ್ತಲಿನ ಜೀವಿಗಳನ್ನು ಮತ್ತು ಮನುಷ್ಯರನ್ನು ತೃಪ್ತರನ್ನಾಗಿಸಿ ಇರಿಸಿಕೊಳ್ಳಬೇಕು ಎನ್ನುವುದು ಈ ಯಜ್ಞಗಳ ಹಿಂದಿನ ಸಾಮಾನ್ಯ ಆಶಯ. ನಮ್ಮ ಜೀವನ ನಮ್ಮದು ಮಾತ್ರವೇ ಅಲ್ಲ, ಅದು ಈ ಸೃಷ್ಟಿಯಲ್ಲಿನ ಹಲವಾರು ಸಂಗತಿಗಳಿಗೆ ಆಭಾರಿಯಾಗಿರಬೇಕಾದ್ದಿದೆ. ದೈವಬಲ, ಪಿತೃಗಳ ಆಶೀರ್ವಾದ, ಋಷಿಗಳ ಕಾಣ್ಕೆ, ಸುತ್ತಲಿನ ಮನುಷ್ಯರು ಮತ್ತು ಉಳಿದ ಜೀವಿಗಳೆಂಬ ಹಲವಾರು ಸಂಗತಿಗಳು ನೇರ್ಪುಗೊಂಡು ಸಂಭವಿಸಿದ್ದು ನಮ್ಮ ಬದುಕು. ಅದರಲ್ಲಿಯೂ ನಮ್ಮ ಮನೋದೈಹಿಕ ರೂಪು ಮತ್ತು ಸ್ಥಿತಿಗತಿಗಳು ನಮ್ಮ ಪಿತೃಗಳ ಸಾಕ್ಷಾತ್ ಕೊಡುಗೆ ಎನ್ನುವುದಕ್ಕೆ ಆಧುನಿಕ ತಳಿವಿಜ್ಞಾನವೂ ಸಾಕ್ಷಿ. ಹಾಗಾಗಿ ಇವೆಲ್ಲ ಆಯಾಮಗಳಿಗೂ ಯಥಾಶಕ್ತಿ ಋಣಸಂದಾಯ ಮಾಡುವುದು ಪ್ರತಿಯೊಬ್ಬನ ಕರ್ತವ್ಯವೇ ಹೌದು. ಕರ್ಮ ಅಥವಾ ಕ್ರಿಯಾ ಎನ್ನುವುದನ್ನು ನಮ್ಮಿಂದ ನೆರವೇರಿಸುವುದು ಸ್ಥೂಲಶರೀರದ ಅವಸ್ಥೆಯಲ್ಲಿ ಇರುವಾಗ ಮಾತ್ರವಾದ್ದರಿಂದ ಈ ಶರೀರ ಲಭ್ಯವಿರುವಾಗಲೇ ಶ್ರದ್ಧೆಯಿಂದ ಅವನ್ನೆಲ್ಲ ನಡೆಸಬೇಕು. ಭಾರತದ ಹಬ್ಬಗಳು, ಇಲ್ಲಿನ ಸಂಪ್ರದಾಯ, ಇಲ್ಲಿನ ನಂಬುಗೆಗಳು ಎಲ್ಲವೂ ಒಂದಿಲ್ಲೊಂದು ಬಗೆಯಲ್ಲಿ ಈ ಐದು ಯಜ್ಞಸಂಗತಿಗಳ ಸುತ್ತಲೇ ಹೆಣೆದುಕೊಂಡಿವೆ. ಇವುಗಳಲ್ಲಿ ಪಿತೃಯಜ್ಞ ಎನ್ನುವುದು ನಮ್ಮ ಕುಲದ ಪೂರ್ವಜರನ್ನು ನೆನೆದು ಅವರನ್ನು ಅನ್ನನೀರುಗಳಿಂದ ತೃಪ್ತಿಗೊಳಿಸುವ ತರ್ಪಣ ಕ್ರಿಯಾ.

ಸಾಮಾನ್ಯವಾಗಿ ಶ್ರದ್ಧಾವಂತ ಗೃಹಸ್ಥರು ಗತಿಸಿದ ತಮ್ಮ ತಂದೆ ತಾಯಿಯರನ್ನು ವಾರ್ಷಿಕವಾಗಿ ಆಯಾ ಮಾಸದ ಆಯಾ ತಿಥಿಯಂದು ನೆನೆದು, ಪಿಂಡತರ್ಪಣಾದಿಗಳನ್ನು ಅರ್ಪಿಸಿ ಕರ್ತವ್ಯ ಪೂರೈಸುತ್ತಾರೆ. ಇದುವೇ ಶ್ರಾದ್ಧ. ಇದರ ಹೊರತಾಗಿ ತಮ್ಮ ಕುಲದಲ್ಲಿ ಅದಕ್ಕೂ ಮುಂಚೆ ಗತಿಸಿದವರನ್ನು ಮತ್ತು ಅವಿಜ್ಞಾತವಾಗಿ ಕಾಲವಾದವರನ್ನು ಸ್ಮರಿಸಿ ಅವರಿಗೆಲ್ಲ ತರ್ಪಣವನ್ನು (ತರ್ಪಣವೆಂದು ತೃಪ್ತಿಗೊಳಿಸುವ ಕ್ರಿಯೆ ಅಥವಾ ಸಾಧನ) ಅರ್ಪಿಸುವುದಕ್ಕೆ ಭಾದ್ರಪದ ಮಾಸದ ಕೃಷ್ಣಪಕ್ಷದ ಹದಿನೈದು ದಿನಗಳು ಮೀಸಲಾಗಿವೆ. ಪಕ್ಷದ ಕೊನೆಯಲ್ಲಿ ಬರುವ ಅಮಾವಾಸ್ಯೆಗೆ 'ಮಹಾಲಯ ಅಮಾವಾಸ್ಯೆ' ಎಂಬ ಹೆಸರು.

ವಸ್ತುತಃ ಅಮಾವಸ್ಯೆ ಅಥವಾ ಅಮಾವಾಸ್ಯೆ ಎಂಬುದು ಆ ದಿನದಲ್ಲಿ ಭೂಮಿಯಿಂದ (ಭಾರತ ಭೂಪ್ರದೇಶದಿಂದ) ತೋರುವಂತೆ ಆಕಾಶದಲ್ಲಿ ಸೂರ್ಯ ಮತ್ತು ಚಂದ್ರರು ಇರುವ ಸ್ಥಿತಿಯನ್ನು ಹೇಳುವ ಪದ. 'ಅಮಾ' ಎನ್ನುವ ಶಬ್ದಕ್ಕೆ 'ಸಮೀಪ, ಒಟ್ಟಿಗೆ' ಎಂಬ ಅರ್ಥ. ಸೂರ್ಯಚಂದ್ರರು ಒಟ್ಟಿಗೆ (ಅಮಾ) ಇರುವ (ವಾಸ್ಯ/ವಸ್ಯ) ಇರುವ ದಿನವಾದ್ದರಿಂದ ಇದು ಅಮಾವಾಸ್ಯಾ. ಈ ದಿನ ಭೂಮಿಯಿಂದ ತೋರುವ ಹಾಗೆ ಚಂದ್ರಸೂರ್ಯರು ನಿರ್ದಿಷ್ಟ ಕೋನದಲ್ಲಿ ಸಮೀಪ ಬರುವುದರಿಂದ ಅಮಾವಾಸ್ಯೆ ಸಂಭವಿಸುತ್ತದೆ. ಭೂಸಾಪೇಕ್ಷವಾದ ಈ ಬಗೆಯ ಆಕಾಶಕಾಯಗಳ ಚಲನೆಯನ್ನು ಪರಿಗಣಿಸಿ ಪೂರ್ಣಿಮೆ, ಅಮಾವಾಸ್ಯೆ, ಸಂಕ್ರಾಂತಿ ಇವುಗಳನ್ನೆಲ್ಲ ಪರ್ವಕಾಲಗಳೆಂದು ಪರಿಗಣಿಸಲಾಗಿದೆ. ಮಾನವಜೀವದ ಪಂಚಕೋಶಗಳಲ್ಲಿ ಎರಡನೆಯದಾದ ಪ್ರಾಣಮಯ ಕೋಶವನ್ನು ಈ ಪರ್ವಕಾಲವು ಪ್ರಭಾವಿಸುತ್ತದೆ ಎನ್ನುವುದು ಅನುಭಾವಿಗಳ ಮಾತು.

ಒಂದೊಂದು ಪರ್ವದಿನವೂ ಒಂದೊಂದು ಕರ್ಮಕ್ಕೆ ಪ್ರಶಸ್ತವಾದ್ದು. ಅದರಂತೆ ಭಾದ್ರಪದ ಮಾಸದ (ದಕ್ಷಿಣಭಾರತದ ಚಾಂದ್ರಮಾನ ಪಂಚಾಂಗದಂತೆ) ಅಮಾವಾಸ್ಯೆಯನ್ನು ಪಿತೃ ಅಮಾ ವಾಸ್ಯೆ, ಸರ್ವಪಿತೃ ಅಮಾವಾಸ್ಯೆ ಎಂದೆಲ್ಲ ಕರೆಯುವ ರೂಢಿ ಇದೆ. ಅದೇನೇ ಇದ್ದರೂ ಪಿತೃಗಳಿಗೆ ತರ್ಪಣ ಕೊಡುವುದರ ಮೂಲಕ ಪಿತೃಯಜ್ಞವನ್ನು ಆಚರಿಸುವುದಕ್ಕೆ ಇರುವ ಪರ್ವಕಾಲವೇ ಮಹಾಲಯ ಅಮಾವಾಸ್ಯೆ. ಈ ಅಮಾವಾಸ್ಯೆಯ ಮರುದಿನವೇ, ಅಂದರೆ ಶರದೃತುವಿನ ಆಶ್ವಯುಜಮಾಸದ ಮೊದಲ ದಿನದಿಂದ ದುರ್ಗೆಯ ಆರಾಧನೆ ಮೊದಲುಗೊಳ್ಳುತ್ತದೆ.

ಮನೆಯಲ್ಲಿ ಅಥವಾ ಪುಣ್ಯಕ್ಷೇತ್ರದ ನದೀತೀರದಲ್ಲಿ ಗತಿಸಿದ ಪಿತೃಗಳಿಗೆ ಈ ಅಮಾವಾಸ್ಯೆಯಂದು ಎಳ್ಳುನೀರಿನ ತರ್ಪಣ ಮತ್ತು ಪಿಂಡದಾನವನ್ನು ಮಾಡಲಾಗುತ್ತದೆ. ಒಂದಿಲ್ಲೊಂದು ಬಗೆಯಲ್ಲಿ ಗತಿಸಿದ ಜೀವಗಳನ್ನು ನೆನೆಯುವ ಪದ್ಧತಿ ಜಗತ್ತಿನ ಬಹುತೇಕ ನಾಗರಿಕತೆಗಳಲ್ಲಿ ಬಹಳ ಮುಂಚಿನಿಂದಲೂ ಆಚರಣೆಯಲ್ಲಿದೆ. ಭಾರತದಲ್ಲಿಯಂತೂ ಬದುಕಿನ ಶ್ರೇಯಸ್ಸಿಗೆ ಪಿತೃಗಳ ಆಶೀರ್ವಾದವು ಬಹಳೇ ಮುಖ್ಯವೆಂದು ಬಗೆಯಲಾಗಿದೆ. ಹಾಗಾಗಿ ಪಿತೃಪಕ್ಷ ಮತ್ತು ಅದರ ಕೊನೆಯ ದಿನವಾದ ಮಹಾಲಯ ಅಮಾವಾಸ್ಯೆ ಶ್ರೇಯಃ ಪ್ರೇಯಗಳನ್ನು ಸಾಧಿಸುವಲ್ಲಿ ಬಹುಮುಖ್ಯವಾದ ಆಚರಣೆ ಎನಿಸಿಕೊಳ್ಳುತ್ತದೆ.

# ವಿದ್ಯುತ್ ದರ ಏರಿಕೆ ಹಿಂದೆ ಹುನ್ನಾರ: ಎಚ್‌ಡಿಕೆ ಟೀಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿಧಾನ ಮಂಡಲ ಅಧಿವೇಶನ ಮುಗಿದ ಕೂಡಲೇ ವಿದ್ಯುತ್ ದರ ಏರಿಕೆ ಮಾಡಿರುವ ಹಿಂದಿನ ಹುನ್ನಾರವೇನು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

ಈ ಕುರಿತು ಸರಣಿ ಟ್ವೀಟ್ ಮಾಡಿರುವ ಅವರು, 'ನಾಡ ಜನರಿಗೆ ನಾಡಹಬ್ಬ ನವರಾತ್ರಿಯ ಶುಭಾಶಯ ಹೇಳಬೇಕಿದ್ದ ಸರ್ಕಾರ, ಕರೆಂಟ್ ಶಾಕ್ ಕೊಟ್ಟು ಗ್ರಾಹಕರು ಕಂಗೆಡುವಂತೆ ಮಾಡಿದೆ. ಪ್ರತಿ ಯೂನಿಟ್‌ಗೆ 24ರಿಂದ 43 ಪೈಸೆವರೆಗೆ ಹೆಚ್ಚಿಸಿರುವುದು ಅವೈಜ್ಞಾನಿಕ' ಎಂದಿದ್ದಾರೆ.

'ಇಂಧನ ಹೊಂದಾಣಿಕೆ ಶುಲ್ಕದ ನೆಪದಲ್ಲಿ ಬಿಜೆಪಿ ಸರ್ಕಾರ ವಿದ್ಯುತ್ ದರ ಏರಿಸಿದೆ. ಕಳೆದ ಜುಲೈನಲ್ಲಿ ಬರೆ ಎಳೆದಿತ್ತು. ಈಗ ಮತ್ತೆ ದರ ಹೆಚ್ಚಿಸಿದೆ. ಕಲ್ಲಿದ್ದಲು ಬೆಲೆ ಹೆಚ್ಚಳದಿಂದ ವಿದ್ಯುತ್ ದರ ಏರಿಸಲಾಗುತ್ತಿದೆ ಎಂಬ ಸಚಿವರ ಮಾತು ಒಪ್ಪಲಾಗದು' ಎಂದವರು ಹೇಳಿದ್ದಾರೆ.

'ರಾಜ್ಯದಲ್ಲಿ ಉತ್ತಮ ಮಳೆಯಾಗಿ ಜಲಾಶಯಗಳು ತುಂಬಿವೆ. ವಿದ್ಯುತ್ ಉತ್ಪಾದನೆ ಉತ್ತಮವಾಗಿದೆ. ಆದರೂ ಖರೀದಿ ವೆಚ್ಚದಲ್ಲಿ ₹1,244 ಕೋಟಿ ಹೆಚ್ಚಳ ಆಗಿದೆ ಎನ್ನುವ ಲೆಕ್ಕವನ್ನು ನಂಬುವ ರೀತಿಯಲ್ಲಿ ಇಲ್ಲ. ಇಂಧನ ವಲಯದ ಕೆಲ ಹಿತಾಸಕ್ತಿಗಳನ್ನು ರಕ್ಷಿಸುವ ಸಲುವಾಗಿ ಎಸ್ಕಾಂಗಳ ಭುಜದ ಮೇಲೆ ಗುಂಡಿಟ್ಟು, ಜನರಿಗೆ ಹೊಡೆಯುವ ಕೆಲಸ ಆಗುತ್ತಿದೆ' ಎಂದು ಕಿಡಿಕಾರಿದ್ದಾರೆ.

'ಬಿಜೆಪಿ ಸರ್ಕಾರ ಜನರ ಪರ ಇಲ್ಲ ಎನ್ನುವುದು ಸತ್ಯ. ಜಾಗತಿಕ ಪೇಟೆಯಲ್ಲಿ ಕಚ್ಚಾತೈಲದ ಬೆಲೆ ನಿರಂತರ ಇಳಿದರೂ ದೇಶದಲ್ಲಿ ತೈಲಬೆಲೆ ಇಳಿಸದ ಕೇಂದ್ರದ ಸರ್ಕಾರದ ಹಾದಿಯಲ್ಲೇ ರಾಜ್ಯ ಸರ್ಕಾರವೂ ಸಾಗಿದೆ. ವಿದ್ಯುತ್ ದರದ ನಿರಂತರ ಏರಿಕೆ ಬಗ್ಗೆ ಗಂಭೀರ ಅನುಮಾನಗಳಿವೆ' ಎಂದು ಅವರು ಹೇಳಿದ್ದಾರೆ.

'ವಿದ್ಯುತ್ ಸೋರಿಕೆ, ಕಳವು ತಡೆಯಲಾಗದ, ನವೀನ ತಂತ್ರಜ್ಞಾನ ಅಳವಡಿಸಿಕೊಳ್ಳದ ಬಿಜೆಪಿ ಸರ್ಕಾರ ಅದಕ್ಷತೆಯ ಆಡೊಂಬಲ. ಬಡವರನ್ನು ಸುಲಿದು ಶ್ರೀಮಂತರ ಜೇಬು ತುಂಬು ಎನ್ನುವುದು ಬಿಜೆಪಿ ತತ್ತ್ವ. ಅದನ್ನೇ ಕರ್ನಾಟಕದಲ್ಲೂ ಎಗ್ಗಿಲ್ಲದೆ ಮಾಡುತ್ತಿದೆ' ಎಂದೂ ಟೀಕಿಸಿದ್ದಾರೆ.

# ತಲುಪದ ಹಣ; ಲಾಂಛನಕ್ಕೂ 'ಗ್ರಹಣ'

## ಸಾಹಿತ್ಯ ಸಮ್ಮೇಳನಕ್ಕೆ 46 ದಿನ ಬಾಕಿ • ಸಿ.ಎಂ ಅಧ್ಯಕ್ಷತೆಯ ಪೂರ್ವಸಿದ್ಧತಾ ಸಭೆಯೇ ನಡೆದಿಲ್ಲ

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

**ಬೆಂಗಳೂರು:** ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ತವರು ಜಿಲ್ಲೆ ಹಾವೇರಿಯಲ್ಲಿ ನಡೆಯಲಿರುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಕೇವಲ 46 ದಿನಗಳಷ್ಟೆ ಬಾಕಿ ಇದೆ. ಆದರೆ, ಇನ್ನೂ ಸ್ವಾಗತ ಸಮಿತಿ ಖಾತೆಗೆ ಹಣ ತಲುಪಿಲ್ಲ. ಲಾಂಛನವೂ ಬಿಡುಗಡೆ ಆಗಿಲ್ಲ!

ಜಿಲ್ಲಾಧಿಕಾರಿ ಅಧ್ಯಕ್ಷತೆಯ ಸ್ವಾಗತ ಸಮಿತಿ ಹೆಸರಿನಲ್ಲಿ ಬ್ಯಾಂಕ್ ಖಾತೆ ತೆರೆದಿರುವುದು ಬಿಟ್ಟರೆ, ವಿವಿಧ ಸಮಿತಿಗಳು ಪೂರ್ಣರೂಪದಲ್ಲಿ ಅಸ್ತಿತ್ವಕ್ಕೆ ಬಂದಿಲ್ಲ. ಸ್ಥಳ ನಿಗದಿಯೂ ಸೇರಿದಂತೆ ಸಮ್ಮೇಳನಕ್ಕೆ ಸಂಬಂಧಿಸಿದ ಯಾವುದೇ ಸಿದ್ಧತೆಗಳು ಅಂತಿಮ ಗೊಂಡಿಲ್ಲ. ಹೀಗಾಗಿ, ನಿಗದಿ ಪಡಿಸಿದ ದಿನದಂದೇ (ನ. 11, 12,13) ಸಮ್ಮೇಳನ ನಡೆಯಬಹುದೇ ಎಂಬ ಅನುಮಾನ ಸಾಹಿತ್ಯ ವಲಯದಲ್ಲಿ ಶುರುವಾಗಿದೆ.

'ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಜುಲೈನಲ್ಲಿ ನಡೆಸಿದ್ದ ಪೂರ್ವಭಾವಿ ಸಭೆಯಲ್ಲಿ ಸೆ. 23, 24, 25ರಂದು ಸಮ್ಮೇಳನ ನಡೆಸಲು ತೀರ್ಮಾನಿಸಲಾಗಿತ್ತು. ಈ ದಿನಗಳಲ್ಲಿ ಪಿತೃಪಕ್ಷ ಎಂಬ ಕಾರಣಕ್ಕೆ ದಿನಾಂಕವನ್ನು ಮರು ನಿಗದಿಪಡಿಸಲಾಗಿತ್ತು. ಆದರೆ, ಆ ನಂತರ ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಪೂರ್ವಸಿದ್ಧತಾ ಸಭೆಯೇ ನಡೆದಿಲ್ಲ. ಲಾಂಛನವು ಅಂತಿಮಗೊಂಡಿಲ್ಲ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

3 ಬಾರಿ ಸಭೆ ನಿಗದಿ ಯಾಗಿತ್ತಾದರೂ ಸಮಯ ಹೊಂದಾಣಿಕೆಯಾಗದ ಕಾರಣ ಮುಂದೂಡಿಕೆಯಾಗಿದೆ. ಸೆ. 22ರಂದು ಸಭೆ ನಡೆಸಲು ತೀರ್ಮಾನಿಸಲಾಗಿತ್ತು. ಆದರೆ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ ಜೋಶಿ ಅವರು ಬಹರೇನ್‌ನಲ್ಲಿ ಕನ್ನಡ ಭವನ ಉದ್ಘಾಟನೆ ತೆರಳಬೇಕಿದ್ದ ಕಾರಣ ಮುಂದೂಡಿಕೆ ಆಗಿದೆ.

'ಸಮ್ಮೇಳನಕ್ಕಾಗಿ ಸರ್ಕಾರ ₹ 15 ಕೋಟಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಬಿಡುಗಡೆ ಮಾಡಿದೆ. ಅಲ್ಲದೆ, ಕನ್ನಡ ಸಾಹಿತ್ಯ ಪರಿಷತ್ತಿಗೆ 2022–23ನೇ ಸಾಲಿಗೆ ನೀಡಿರುವ ₹ 10 ಕೋಟಿ ಅನುದಾನದಲ್ಲಿ ₹ 5 ಕೋಟಿಯನ್ನು ಸಮ್ಮೇಳನಕ್ಕೆ ಬಳಸುವಂತೆ ಆದೇಶ ಹೊರಡಿಸಲಾಗಿದೆ. ಹೀಗೆ ಒಟ್ಟು ₹ 20 ಕೋಟಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿದೆ. ಮುಖ್ಯಮಂತ್ರಿ ಅಥವಾ ಇಲಾಖೆಯ ಸಚಿವರು ನಿರ್ದೇಶನ ನೀಡದೆ ಸ್ವಾಗತ ಸಮಿತಿಯ ಖಾತೆಗೆ ಹಣ ವರ್ಗಾವಣೆಗೆ ಅವಕಾಶ ಇಲ್ಲ' ಎಂದು ಇಲಾಖೆಯ ಮೂಲಗಳು ತಿಳಿಸಿವೆ.

'ಪ್ರಜಾವಾಣಿ'ಗೆ ಮಾಹಿತಿ ನೀಡಿದ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರೂ ಆಗಿರುವ ಹಾವೇರಿ ಜಿಲ್ಲಾಧಿಕಾರಿ ಸಂಜಯ ಬಿ.ಶೆಟ್ಟೆಣ್ಣವರ, 'ಕೆಲ ಸಮಿತಿಗಳನ್ನು ಮಾಡಿದ್ದೇವೆ. ಕೆಟಿಪಿಪಿ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿನ ಪಾರದರ್ಶಕ ಕಾಯ್ದೆ) ಕಾಯ್ದೆಯಡಿ (4ಜಿ) ವಿನಾಯಿತಿ ನೀಡಿದರೆ ಟೆಂಡರ್ ಇಲ್ಲದೆ, 15 ದಿನಗಳಲ್ಲಿ ಎಲ್ಲ ಸಿದ್ಧತೆ ಮಾಡಬಹುದು. ಕಾರ್ಯಕ್ರಮ ನಿರ್ವಹಣೆಯನ್ನು ಎಂಸಿಎಗೆ (ಸರ್ಕಾರದ ಜಾಹೀರಾತು ಏಜೆನ್ಸಿ) ನೀಡಲು ತೀರ್ಮಾನವಾಗಿದೆ. ಈ ಏಜೆನ್ಸಿಯು ಸಮ್ಮೇಳನಕ್ಕೆ ₹ 24 ಕೋಟಿ ವೆಚ್ಚದ ಅಂದಾಜುಪಟ್ಟಿ ನೀಡಿದೆ' ಎಂದರು.

'ಮುಖ್ಯಮಂತ್ರಿ ನೇತೃತ್ವದಲ್ಲಿ ಮುಂದಿನ ವಾರ ಸಭೆ ನಡೆಯುವ ವಿಶ್ವಾಸವಿದೆ. ಸಾಹಿತ್ಯ ಪರಿಷತ್ ಅಧ್ಯಕ್ಷರು ಮತ್ತು ನೀವು ಸೇರಿಕೊಂಡು ಎಲ್ಲ ಸಿದ್ಧತೆ ಮಾಡಿ ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಈಗ ಕೆಲಸಗಳನ್ನು ಆರಂಭಿಸಿದರೂ ಸಮ್ಮೇಳನ ಮಾಡಬಹುದು' ಎಂದೂ ಹೇಳಿದರು.

### ವೆಚ್ಚ ಮೂರು ಪಟ್ಟು ಹೆಚ್ಚು!

'ಹಾವೇರಿಯಲ್ಲಿ 2021ರ ಫೆ. 26ರಿಂದ ನಡೆಯಬೇಕಿದ್ದ ಸಾಹಿತ್ಯ ಸಮ್ಮೇಳನವನ್ನು ಕೋವಿಡ್ ಕಾರಣದಿಂದಾಗಿ ಮುಂದೂಡಲಾಗಿತ್ತು. ಈ ಬಾರಿಯ ಸಮ್ಮೇಳನಕ್ಕೆ ₹ 24 ಕೋಟಿ ವೆಚ್ಚ ಅಂದಾಜಿಸಲಾಗಿದೆ. ಇದು ಈ ಹಿಂದಿನ ಸಮ್ಮೇಳನಗಳ ವೆಚ್ಚಕ್ಕೆ ಹೋಲಿಸಿದರೆ ಮೂರು ಪಟ್ಟು ಹೆಚ್ಚು.

ಕಲಬುರಗಿಯಲ್ಲಿ 2019ರಲ್ಲಿ ನಡೆದ 85ನೇ ಸಮ್ಮೇಳನದಲ್ಲಿ ಸುಮಾರು ₹ 9 ಕೋಟಿ ವೆಚ್ಚವಾಗಿತ್ತು. ಅದಕ್ಕಿಂತಲೂ ಮೊದಲು ಧಾರವಾಡ ಮತ್ತು ಮೈಸೂರಿನಲ್ಲಿ ನಡೆದ ಸಮ್ಮೇಳನಗಳಿಗೆ ಸುಮಾರು ₹ 8 ಕೋಟಿಯಂತೆ ವೆಚ್ಚ ಆಗಿತ್ತು' ಎಂದು ಕನ್ನಡ ಸಾಹಿತ್ಯ ಪರಿಷತ್ ಮೂಲಗಳು ತಿಳಿಸಿವೆ.

**ಹಣ ಬಿಡುಗಡೆಗೆ ಸರ್ಕಾರಕ್ಕೆ ಪತ್ರ ಬರೆದಿದ್ದೇನೆ. 4ಜಿ ವಿನಾಯಿತಿಗೂ ಮನವಿ ಮಾಡಿದ್ದೇನೆ. ಸಾಹಿತ್ಯ ಸಮ್ಮೇಳನದ ಆ್ಯಪ್ ಸಿದ್ಧವಾಗಿದೆ. ಲಾಂಛನ ಅಂತಿಮವಾಗಿಲ್ಲ**

**ಸಂಜಯ ಬಿ. ಶೆಟ್ಟೆಣ್ಣವರ,** ಜಿಲ್ಲಾಧಿಕಾರಿ, ಹಾವೇರಿ (ಸ್ವಾಗತ ಸಮಿತಿ ಅಧ್ಯಕ್ಷ)

# ಕೇಸ್‌ಗಳಿಗೆ ಹೆದರಿ ಓಡಿ ಹೋಗುವುದಿಲ್ಲ: ವಿಜಯೇಂದ್ರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಬಿಡಿಎ ವಸತಿ ಯೋಜನೆಗೆ ಸಂಬಂಧಿಸಿದಂತೆ ಯಡಿಯೂರಪ್ಪನವರ ಮೇಲಿನ ಆರೋಪದಲ್ಲಿ ಯಾವುದೇ ಹುರುಳಿಲ್ಲ. 30 ಕೇಸ್‌ಗಳನ್ನು ಈಗಾಗಲೇ ಎದುರಿಸಿದ್ದು, ಇದು 31ನೇ ಕೇಸ್. ಇದು, ರಾಜಕೀಯ ವಿರೋಧಿಗಳ ಷಡ್ಯಂತ್ರ. ಅಂತಹವರಿಗೆ ಹೆದರಿ ಓಡಿ ಹೋಗುವುದಿಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಪಕ್ಷದ ಕಚೇರಿಯಲ್ಲಿ ಶನಿವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಯಡಿಯೂರಪ್ಪ ಅವರನ್ನು ರಾಜಕೀಯವಾಗಿ ಮುಗಿಸಬೇಕು, ನಾನು ರಾಜಕೀಯವಾಗಿ ಬೆಳೆಯಬಾರದು ಎಂಬ ಷಡ್ಯಂತ್ರ ಇದು. ಇದಕ್ಕೆ ತಕ್ಕ ಉತ್ತರವನ್ನು ಎಲ್ಲಿ, ಯಾರಿಗೆ ಕೊಡಬೇಕು ಎಂದು ಗೊತ್ತಿದೆ' ಎಂದರು.

'ಒಬ್ಬ ಮಾಜಿ ಮುಖ್ಯಮಂತ್ರಿ ವಿರುದ್ಧ 30 ಕ್ರಿಮಿನಲ್ ಕೇಸ್ ಹಾಕಿದ ಉದಾಹರಣೆ ರಾಜ್ಯದ ಇತಿಹಾಸದಲ್ಲೇ ಇಲ್ಲ. ನಾವು ಬಹುತೇಕ ಕೇಸ್‌ಗಳಲ್ಲಿ ಜಯಶಾಲಿಯಾಗಿದ್ದೇವೆ. ಯಡಿಯೂರಪ್ಪನವರ ಮೇಲಿನ ಪ್ರಕರಣದ ತನಿಖೆಗೆ ಕೋರ್ಟ್ ತಡೆಯಾಜ್ಞೆ ನೀಡಿದೆ. ನಾವು ಯಾರೊಬ್ಬರೂ ಅರ್ಜಿ ಹಾಕದೇ ಇದ್ದರೂ ಉಳಿದವರ ವಿರುದ್ಧ ತನಿಖೆ ನಡೆಸಿ ಎಂದು ಕೋರ್ಟ್ ಹೇಳಿಲ್ಲ' ಎಂದು ಹೇಳಿದರು.

'ಯಡಿಯೂರಪ್ಪ ಅವರನ್ನು ರಾಜಕೀಯವಾಗಿ ಮುಗಿಸಲು ಯತ್ನಿಸಿದರು. ಅವರು ಸಿ.ಎಂ ಆಗುವುದನ್ನು ತಪ್ಪಿಸಲು ಯಾರಿಂದಲೂ ಆಗಲಿಲ್ಲ. ರಾಜಕೀಯ ವಿರೋಧಿಗಳಿಗೆ ಯಶಸ್ಸು ಸಿಗುವುದಿಲ್ಲ. ಮೆಟ್ಟಿನಿಲ್ಲುವ ತಾಕತ್ತಿದೆ. ನೂರು ಆರೋಪ ಬಂದರೂ ಎದುರಿಸುತ್ತೇನೆ' ಎಂದರು.

'ಯಡಿಯೂರಪ್ಪ ಅವರು ಸಿ.ಎಂ ಆಗಿದ್ದಾಗ ಬಿಡಿಎ ಯೋಜನೆಯನ್ನು ಖಾಸಗಿ ಕಂಪನಿಗೆ ಕೊಟ್ಟಿದ್ದರು. ಆ ಕಂಪನಿಯಿಂದ ₹7.5 ಕೋಟಿ ಎಂದು ಆರೋಪಿಸಿದ್ದಾರೆ. ಯಾವ ಕಂಪನಿಗೂ ಗುತ್ತಿಗೆ ಕೊಟ್ಟಿಲ್ಲ. ಒಂದು ರೂಪಾಯಿಯೂ ಸಂದಾಯವಾಗಿಲ್ಲ' ಎಂದು ಹೇಳಿದರು.

### 'ಯತ್ನಾಳರಿಂದ ಪಕ್ಷಕ್ಕೆ ಹಾನಿ'

'ಪಂಚಮಸಾಲಿ ಮೀಸಲಾತಿಗೆ ಯಡಿಯೂರಪ್ಪನವರು ಅಡ್ಡಿಯಾಗಿದ್ದಾರೆ ಎಂದು ಶಾಸಕ ಬಸನವಗೌಡ ಪಾಟೀಲ ಯತ್ನಾಳ ಹೇಳಿರುವುದು ಸರಿಯಲ್ಲ. ಅಂತಹ ಹೇಳಿಕೆ ನೀಡುವ ಮೂಲಕ ಯತ್ನಾಳ ಅವರು ಪಕ್ಷಕ್ಕೆ ಹಾನಿ ಮಾಡುತ್ತಿದ್ದಾರೆ' ಎಂದು ವಿಜಯೇಂದ್ರ ಹೇಳಿದರು.

'ಯತ್ನಾಳ ಅವರಿಗೆ ನನ್ನ ಮೇಲೆ ಪ್ರೀತಿ ಜಾಸ್ತಿ. ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಮಠ, ದೇವಸ್ಥಾನಗಳಿಗೆ, ಎಲ್ಲ ಜಾತಿಗಳಿಗೆ ಸಾಕಷ್ಟು ಅನುದಾನ ನೀಡಿದ್ದಾರೆ. ಪಂಚಮಸಾಲಿ ಸಮುದಾಯದವರಿಗೆ ಪ್ರವರ್ಗ 3 ಬಿಗೆ ಸೇರಿಸಿದವರೂ ಅವರೇ. ಹಾಗಿದ್ದರೂ ಕೆಲವರು ಪಂಚಮಸಾಲಿ ಸ್ವಾಮೀಜಿಗಳು, ಸಮುದಾಯದ ಮುಖಂಡರಲ್ಲಿ ತಪ್ಪು ಮಾಹಿತಿ ನೀಡಿ ಸಮುದಾಯವನ್ನು ದಿಕ್ಕುತಪ್ಪಿಸುವ ಕೆಲಸ ಮಾಡುತ್ತಿದ್ದಾರೆ' ಎಂದರು.

## ಸಚಿವ ಶ್ರೀರಾಮುಲುಗೆ ಮುಖಂಡರ ದೂರು –ಕ್ರಮದ ಭರವಸೆ

# ಟೋಕರೆ ಕೋಳಿ– ಡಿಸಿಆರ್‌ಇ ಕಿರುಕುಳ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸುಪ್ರೀಂ ಕೋರ್ಟ್ ತೀರ್ಪಿನ ರಕ್ಷಣೆ ಇದ್ದರೂ ಜಾತಿ ಪ್ರಮಾಣಪತ್ರ, ಸಿಂಧುತ್ವ ಪ್ರಮಾಣಪತ್ರ ವಿಷಯದಲ್ಲಿ ಮೊಕದ್ದಮೆಗಳನ್ನು ದಾಖಲಿಸುವ ಮೂಲಕ ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದ (ಡಿಸಿಆರ್‌ಇ) ಅಧಿಕಾರಿಗಳು ಕಿರುಕುಳ ನೀಡುತ್ತಿದ್ದಾರೆ ಎಂದು ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವ ಬಿ.ಶ್ರೀರಾಮುಲು ಎದುರು ಟೋಕರೆ ಕೋಳಿ, ಕೋಳಿ ಡೋರ ಕ್ಷೇಮಾಭಿವೃದ್ಧಿ ಸಂಘ ಅಳಲು ತೋಡಿಕೊಂಡಿದೆ.

ಜಾತಿ ಪ್ರಮಾಣಪತ್ರ, ಸಿಂಧುತ್ವ ಪ್ರಮಾಣಪತ್ರ ನೀಡುವ ಕುರಿತಂತೆ ಟೋಕರೆ ಕೋಳಿ, ಕೋಳಿ ಡೋರ ಜನಾಂಗದವರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಶ್ರೀರಾಮುಲು ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ಜಾತಿ ಪ್ರಮಾಣಪತ್ರಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಆದೇಶಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರ ಹೊರಡಿಸಿರುವ ಆದೇಶಗಳ ಪ್ರತಿ ಸಹಿತ ಸಮುದಾಯದ ಮುಖಂಡರು ಸಲ್ಲಿಸಿದ ಮನವಿಯನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳುವುದಾಗಿ ಸಚಿವರು ಭರವಸೆ ನೀಡಿದರು.

'ರಾಜ್ಯ ಸರ್ಕಾರ 2002ರ ಮಾರ್ಚ್ 11ರಂದು ಹೊರಡಿಸಿರುವ ಆದೇಶವನ್ನು ಪಾಲಿಸಬೇಕು. ಜಾತಿ ಪ್ರಮಾಣಪತ್ರ ಸರಿ ಇಲ್ಲವೆಂದು ಆರೋಪಿಸಿ ದಾಖಲಿಸಿರುವ ಮೊಕದ್ದಮೆಗಳನ್ನು ಕೈಬಿಡಬೇಕು. ಈ ಕಾರಣಕ್ಕೆ ಸಮುದಾಯಕ್ಕೆ ಸೇರಿದ ನೂರಾರು ಸರ್ಕಾರಿ ನೌಕರ ಪಿಂಚಣಿ ಸೌಲಭ್ಯವನ್ನು ತಡೆಹಿಡಿಯಲಾಗಿದ್ದು, ಅದನ್ನು ಮಂಜೂರು ಮಾಡಬೇಕು, ಹುದ್ದೆಯಿಂದ ವಜಾಗೊಳಿಸಿ ಹೊರಡಿಸಿದ ಆದೇಶವನ್ನು ವಾಪಸ್ ಪಡೆಯಬೇಕು. ಹೊಸ ಆದೇಶಗಳನ್ನು ಹಳೆ ಪ್ರಕರಣಗಳಿಗೆ ಅನ್ವಯ ಮಾಡಿ ಕಾನೂನು ಕ್ರಮಗಳನ್ನು ತೆಗೆದುಕೊಳ್ಳಬಾರದು' ಎಂದೂ ಸಮುದಾಯದ ಪ್ರಮುಖರಾದ ಪಿ.ಎಂ. ಬೂದಿಹಾಳ್ ಅವರು ಸಚಿವರ ಗಮನಕ್ಕೆ ತಂದರು.

ರಾಜ್ಯ ಟೋಕರೆ ಕೋಳಿ, ಕೋಳಿ ಡೋರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಮಹದೇವಪ್ಪ ಕರ್ಜಗಿ, ಬೀದರ್‌ನ ಜಗನ್ನಾಥ, ಸುಭಾಷ್ ಗಸ್ತಿ, ಚಿದಾನಂದ ಆಲೂರು, ಸಂಗಪ್ಪ ಹೆಬ್ಬಾಳ, ಬಿ.ಎಂ. ಪೂಜಾರ, ಇಲಾಖೆ ಮತ್ತು ಡಿಸಿಆರ್‌ಇ ಅಧಿಕಾರಿಗಳು ಸಭೆಯಲ್ಲಿದ್ದರು.

### ಅ.2ರಂದು ಗಂಗಾಮತಸ್ಥರ ಪ್ರತಿಭಟನೆ

**ಬೆಂಗಳೂರು:** ಗಂಗಾಮತಸ್ಥರನ್ನು ಪರಿಶಿಷ್ಟ ಪಂಗಡಕ್ಕೆ (ಎಸ್‌ಟಿ) ಸೇರ್ಪಡೆ ಮಾಡುವಂತೆ ಒತ್ತಾಯಿಸಿ ಅಕ್ಟೋಬರ್ 2ರಂದು ರಾಜ್ಯದಾದ್ಯಂತ ಪ್ರತಿಭಟಿಸಲಾಗುವುದು ಎಂದು ಕರ್ನಾಟಕ ರಾಜ್ಯ ಗಂಗಾಮತಸ್ಥರ ಸಂಘ ತಿಳಿಸಿದೆ.

'ಈ ಸಮುದಾಯವನ್ನು ಎಸ್‌ಟಿಗೆ ಸೇರಿಸುವ ಸಲುವಾಗಿ ಐದು ಬಾರಿ ಕುಲ ಶಾಸ್ತ್ರೀಯ ಅಧ್ಯಯನ ನಡೆದಿದೆ. ಎಲ್ಲ ಅಧ್ಯಯನಗಳ ವರದಿ ಸಮುದಾಯದ ಪರವಾಗಿದೆ. ಐದೂ ಬಾರಿ ಕೇಂದ್ರ ಸರ್ಕಾರ ತಿರಸ್ಕರಿಸಿದೆ. ಇದಕ್ಕೆ ಸರ್ಕಾರ ಮತ್ತು ಜನಪ್ರತಿನಿಧಿಗಳ ನಿರ್ಲಕ್ಷ್ಯವೇ ಕಾರಣ' ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ಪಿ.ವಿ.ಸೀತಾರಾಂ ಅಸಮಾಧಾನ ವ್ಯಕ್ತಪಡಿಸಿದರು.

'ಸಮುದಾಯಕ್ಕೆ ಮಾಜಿ ಸಚಿವ ಬಾಬುರಾವ್ ಚಿಂಚನಸೂರು ಅವರ ಕೊಡುಗೆ ಶೂನ್ಯ. ಗಂಗಾಮತ ಸಮಾಜಕ್ಕೆ ತಮ್ಮ ತೊಡೆಯ ಚರ್ಮ ಸುಲಿದು ಚಪ್ಪಲಿ ಮಾಡಿಕೊಡುವುದಾಗಿ ಹೇಳಿದ್ದರು. ಸಮಾಜದ ಅಭಿವೃದ್ಧಿಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಸಂಸದರಾಗುವ ಮುನ್ನ ಉಮೇಶ್ ಜಾಧವ್ ಸಾಕಷ್ಟು ಭರವಸೆ ನೀಡಿದ್ದರೂ, ಈಡೇರಿಸಿಲ್ಲ. ಸಿದ್ದರಾಮಯ್ಯ ಅವರ ಆಡಳಿತದಲ್ಲಿ ಅಂಬಿಗರ ಚೌಡಯ್ಯ ನಿಗಮ ರಚಿಸಿ ₹1 ಕೋಟಿ ಬಿಡುಗಡೆ ಮಾಡಿದ್ದರು. ಅವರೊಬ್ಬರನ್ನು ಹೊರತುಪಡಿಸಿ ಯಾರೂ ಸಮುದಾಯದ ಸಹಾಯಕ್ಕೆ ನಿಂತಿಲ್ಲ' ಎಂದರು.

'ರಾಜ್ಯದಲ್ಲಿ ಸುಮಾರು 40–50 ಲಕ್ಷ ಜನಸಂಖ್ಯೆ ಇದೆ. 37 ಕ್ಷೇತ್ರಗಳಲ್ಲಿ ನಿರ್ಣಾಯಕರಾಗಿದ್ದು, 17 ಕ್ಷೇತ್ರಗಳಲ್ಲಿ ಗೆಲ್ಲುವ ಸಾಮರ್ಥ್ಯ ಹೊಂದಿದ್ದೇವೆ. ಕಾರವಾರದಿಂದ ನಿಪ್ಪಾಣಿ, ನಿಪ್ಪಾಣಿಯಿಂದ ಕೋಲಾರದವರೆಗೂ ಗಂಗಾಮತಸ್ಥ ಸಮುದಾಯದ ಜನ ಹರಡಿಕೊಂಡಿದ್ದಾರೆ. ರಾಜಕಾರಣಿಗಳನ್ನು ಬಿಟ್ಟು ಸಮುದಾಯದಿಂದಲೇ ಬೇಡಿಕೆಗಳ ಈಡೇರಿಕೆಗಾಗಿ ಹೋರಾಟ ಮಾಡಲಾಗುವುದು' ಎಂದರು.

ಟೋಕರೆ ಕೋಳಿ, ಕೋಳಿ ಡೋರ ಜನಾಂಗದವರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವ ಬಿ. ಶ್ರೀರಾಮುಲು ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ಇದ್ದರು

# 'ಸಿದ್ದರಾಮಯ್ಯ, ಡಿಕೆಶಿ ವಿರುದ್ಧ ಪ್ರಕರಣ ದಾಖಲು'

**ಬೆಂಗಳೂರು:** 'ಪೇಸಿಎಂ' ಭಿತ್ತಿಚಿತ್ರ ಅಂಟಿಸುವುದಕ್ಕಾಗಿ ರೇಸ್‌ಕೋರ್ಸ್ ರಸ್ತೆಯಲ್ಲಿ ವಾಹನಗಳ ಸಂಚಾರಕ್ಕೆ ಅಡ್ಡಿ ಉಂಟು ಮಾಡಿದ್ದ ಆರೋಪದಡಿ ಕಾಂಗ್ರೆಸ್ ಮುಖಂಡರ ವಿರುದ್ಧ ಹೈಗ್ರೌಂಡ್ಸ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

'ಸಿ.ಎಂ ಬಸವರಾಜ ಬೊಮ್ಮಾಯಿ ಭಾವಚಿತ್ರವಿದ್ದ 'ಪೇಸಿಎಂ' ಭಿತ್ತಿಚಿತ್ರವನ್ನು ಸಾರ್ವಜನಿಕ ಸ್ಥಳದಲ್ಲಿ ಅಂಟಿಸಿದ್ದ ಬಗ್ಗೆ ಈಗಾಗಲೇ ಪ್ರಕರಣ ದಾಖಲಾಗಿದ್ದು, ಐವರನ್ನು ಬಂಧಿಸಲಾಗಿದೆ. ಇದರ ಮುಂದುವರಿದ ಭಾಗವಾಗಿ ಈಗ ಪ್ರಕರಣ ದಾಖಲಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ .

'ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ ಸೇರಿ ಹಲವು ಮುಖಂಡರು ಹಾಗೂ ಕಾರ್ಯಕರ್ತರನ್ನು ಆರೋಪಿಗಳನ್ನಾಗಿ ಮಾಡಲಾಗಿದೆ. ಎಲ್ಲರಿಗೂ ನೋಟಿಸ್ ನೀಡಿ, ಮುಂದಿನ ಕ್ರಮ ಜರುಗಿಸಲಾಗುವುದು' ಎಂದೂ ತಿಳಿಸಿವೆ.

## ಕೆ.ಜಿ.ಹಳ್ಳಿ ಪ್ರಕರಣ: ಮುಖಂಡರ ವಿಚಾರಣೆ ಮುಂದುವರಿಕೆ

# 'ಪಿಎಫ್‌ಐನಿಂದ ಗೋಪ್ಯವಾಗಿ ಶಸ್ತ್ರಾಸ್ತ್ರ ತರಬೇತಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕಾನೂನುಬಾಹಿರ ಚಟುವಟಿಕೆ ಹಾಗೂ ಭಯೋತ್ಪಾದನಾ ಕೃತ್ಯಕ್ಕೆ ಸಂಚು ರೂಪಿಸುತ್ತಿದ್ದ ಆರೋಪದಡಿ ಬಂಧಿಸಲಾಗಿರುವ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ (ಪಿಎಫ್‌ಐ) 14 ಮುಖಂಡರನ್ನು ಕಸ್ಟಡಿಗೆ ಪಡೆದಿರುವ ಬೆಂಗಳೂರು ಪೊಲೀಸರು, ಹಲವು ಸ್ಥಳಗಳಿಗೂ ಕರೆದೊಯ್ದು ಮಾಹಿತಿ ಕಲೆಹಾಕುತ್ತಿದ್ದಾರೆ.

'ಪಿಎಫ್‌ಐ ಕಚೇರಿ ಹಾಗೂ ಮುಖಂಡರ ಮನೆಗಳ ಮೇಲೆ ದಾಳಿ ಮಾಡಿದಾಗ ಹಲವು ದಾಖಲೆಗಳು ಸಿಕ್ಕಿದ್ದವು. ಪ್ರಚೋದನಕಾರಿ ಭಾಷಣದ ಪ್ರತಿಗಳೂ ಲಭ್ಯವಾಗಿದ್ದವು. ಇವುಗಳನ್ನು ಮುಂದಿಟ್ಟುಕೊಂಡು ವಿಚಾರಣೆ ನಡೆಸಿದಾಗ ಆರೋಪಿಗಳು ಸಾಕಷ್ಟು ಮಾಹಿತಿ ಬಾಯ್ಬಿಟ್ಟಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸಾಮಾಜಿಕ ಮಾಧ್ಯಮಗಳಲ್ಲಿ ಹಲವು ಖಾತೆ ತೆರೆದಿದ್ದ ಮುಖಂಡರು, ಪ್ರಚೋದನಕಾರಿ ಬರಹ ಪ್ರಕಟಿಸುತ್ತಿದ್ದರು. ಭಾಷಣದ ವಿಡಿಯೊಗಳನ್ನೂ ಹರಿಬಿಡುತ್ತಿದ್ದರು. ಇದರ ಜೊತೆಯಲ್ಲೇ ಹಲವು ಸ್ಥಳಗಳಿಗೆ ಭೇಟಿ ನೀಡಿ, ಗುಪ್ತಸಭೆಗಳನ್ನು ನಡೆಸುತ್ತಿದ್ದರು. ಈ ಮೂಲಕ ಮುಸ್ಲಿಂ ಸಮುದಾಯದ ಹಲವು ಯುವಕರನ್ನು ಸಂಪರ್ಕಿಸುತ್ತಿದ್ದರು. ಅಂಥ ಯುವಕರಲ್ಲಿ ದ್ವೇಷ ತುಂಬಿ, ಭಯೋತ್ಪಾದನಾ ಕೃತ್ಯಕ್ಕೆ ಇಳಿಯುವಂತೆ ಪ್ರಚೋದಿಸುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ತಿಳಿಸಿವೆ.

'ಆರೋಪಿಗಳ ಪ್ರಚೋದನೆಯಿಂದಾಗಿ ಹಲವು ಯುವಕರು, ಪಿಎಫ್‌ಐ ಸೇರಿದ್ದರು. ಅಂಥ ಯುವಕರಿಗೆ, ರಾಜ್ಯದ ವಿವಿಧ ಸ್ಥಳಗಳಲ್ಲಿ ಗುಪ್ತವಾಗಿ ಶಸ್ತ್ರಾಸ್ತ್ರ ಬಳಕೆ ತರಬೇತಿ ನೀಡಿದ್ದರು. ಇದಕ್ಕೆ ಸಂಬಂಧಪಟ್ಟಂತೆ ಕೆಲ ಪುರಾವೆಗಳು ಲಭ್ಯವಾಗಿದ್ದು, ಆರೋಪಿಗಳನ್ನು ಸ್ಥಳಕ್ಕೆ ಕರೆದೊಯ್ಯುವುದು ಬಾಕಿ ಇದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

**ದಾಳಿಗೆ ಪ್ರಚೋದನೆ:** 'ಮುಸ್ಲಿಂ ಯುವಕರನ್ನು ಬಳಸಿಕೊಂಡು ಹಿಂದೂಗಳ ಮೇಲೆ ದಾಳಿ ಮಾಡುವುದು ಹಾಗೂ ರಾಜ್ಯದಲ್ಲಿ ಧರ್ಮ–ಧರ್ಮಗಳ ಮಧ್ಯೆ ಗಲಭೆ ಸೃಷ್ಟಿಸುವುದು ಪಿಎಫ್‌ಐ ಉದ್ದೇಶವಾಗಿತ್ತು. ಈ ಕೃತ್ಯಕ್ಕೆಂದು ವಿದೇಶದಿಂದಲೂ ಹಣ ಬರುತ್ತಿತ್ತು ಎಂಬ ಮಾಹಿತಿ ಇದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಕೆಲ ಮುಖಂಡರು ಮಾತ್ರ ತಪ್ಪೊಪ್ಪಿಕೊಳ್ಳುತ್ತಿದ್ದಾರೆ. ಬಹುತೇಕರು, ತಮ್ಮದೇನು ತಪ್ಪಿಲ್ಲವೆಂದು ಹೇಳುತ್ತಿದ್ದಾರೆ. ದೇಶದ ಭದ್ರತೆ ದೃಷ್ಟಿಯಿಂದ ಇದೊಂದು ಸೂಕ್ಷ್ಮ ಪ್ರಕರಣ. ಹೀಗಾಗಿ, ಕೇಂದ್ರದ ತನಿಖಾ ತಂಡಗಳ ಜೊತೆ ತನಿಖೆ ಮುಂದುವರಿಸಿದ್ದೇವೆ' ಎಂದೂ ಹೇಳಿವೆ.

# 'ಪಂಚಮಸಾಲಿಗೆ 2ಎ ಮೀಸಲಾತಿ ಪ್ರಸ್ತಾವಕ್ಕೆ ವಿರೋಧ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹಿಂದುತ್ವದ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ಪಂಚಮಸಾಲಿ ವೀರಶೈವ ಲಿಂಗಾಯತ ಸಮುದಾಯಕ್ಕೆ 2ಎ ಮೀಸಲಾತಿ ನೀಡುವ ಪ್ರಸ್ತಾವಕ್ಕೆ ಸಕಾರಾತ್ಮಕವಾಗಿ ಸ್ಪಂದಿಸುತ್ತಿರುವುದನ್ನು ಕರ್ನಾಟಕ ಕ್ಷತ್ರಿಯ ಒಕ್ಕೂಟ ಖಂಡಿಸಿದೆ.

'ಪಂಚಮಸಾಲಿ ವೀರಶೈವ ಲಿಂಗಾಯತ ಸಮುದಾಯಕ್ಕೆ ಶೇಕಡಾ 15ರಷ್ಟು ಮೀಸಲಾತಿ ನೀಡಿದರೆ, ಪ್ರಸ್ತುತ ಪ್ರವರ್ಗ 2ಎ ಪಟ್ಟಿಯಲ್ಲಿರುವ 102ಕ್ಕೂ ಹೆಚ್ಚು ಜಾತಿಗಳು ಮೀಸಲಾತಿಯಿಂದ ವಂಚಿತವಾಗುತ್ತವೆ. ಬಲಿಷ್ಠ ಸಮುದಾಯಕ್ಕೆ ಮೀಸಲಾತಿ ಕಲ್ಪಿಸಿದರೆ ಸಾಂವಿಧಾನಿಕ ಆಶಯವೇ ಮಣ್ಣು ಪಾಲಾಗಲಿದೆ' ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಉದಯ ಸಿಂಗ್ ಶನಿವಾರ ಸುದ್ದಿಗೋಷ್ಠಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

'ರಾಜ್ಯದಲ್ಲಿ ಸ್ವಾತಂತ್ರ್ಯ ಬಂದಾಗಿನಿಂದ ಇದುವರೆಗೂ ಲಿಂಗಾಯತ ಸಮುದಾಯವೇ ಬಹುತೇಕ ರಾಜ್ಯ ರಾಜಕಾರಣವನ್ನು ನಿಯಂತ್ರಿಸುತ್ತಿದೆ. ರಾಜ್ಯದ ಪ್ರಬಲ ಭೂ ಮಾಲೀಕತ್ವವೂ ಆ ಸಮುದಾಯದವರ ಕೈಯಲ್ಲಿದೆ' ಎಂದು ಆರೋಪಿಸಿದರು.

'ಪ್ರಬಲ ಸಮುದಾಯ 2ಎ ಪಟ್ಟಿಯಲ್ಲಿನ ನಮ್ಮ ಪಾಲನ್ನು ಕಬಳಿಸಲು ಬಂದರೆ ನಾವೆಲ್ಲಿಗೆ ಹೋಗಬೇಕು? ಈ ಪ್ರಸ್ತಾವನೆಯನ್ನು ಕೈಬಿಡದಿದ್ದರೆ ರಾಜ್ಯದಾದ್ಯಂತ ಪ್ರತಿಭಟನೆ ಕೈಗೊಳ್ಳಲಾಗುವುದು' ಎಂದು ಎಚ್ಚರಿಸಿದರು.

**ಬಿಜೆಪಿ ಲಿಂಗಾಯತ ಪಕ್ಷವೆಂದು ಘೋಷಿಸಲಿ:** ಬಿಜೆಪಿ ಕೇವಲ ಲಿಂಗಾಯತ ಪಕ್ಷ ಅನ್ನುವುದಾದರೆ ಅದನ್ನು ಬಹಿರಂಗವಾಗಿ ಘೋಷಣೆ ಮಾಡಲಿ, ಇಲ್ಲದಿದ್ದರೆ 2ಎ ಮೀಸಲಾತಿಗೆ ಉತ್ತೇಜನ ನೀಡುವುದನ್ನು ಬಿಡಲಿ ಎಂದು ಉದಯ್ ಸಿಂಗ್ ಸವಾಲು ಹಾಕಿದರು.

# ಕಾಂಗ್ರೆಸ್ ವಿರುದ್ಧ ಸುಧಾಕರ್ ಟೀಕೆ

**ಬೆಂಗಳೂರು:** 'ಲಿಂಗಾಯತರ ವಿರುದ್ಧ ಕಾಂಗ್ರೆಸ್‌ನವರು ಕೆಲಸ ಮಾಡುತ್ತಿದ್ದು, ಅಧಿಕಾರಕ್ಕೆ ಬರುವ ಅಲ್ಪ ಅವಕಾಶವನ್ನೂ ಕಳೆದುಕೊಂಡಿದ್ದಾರೆ' ಎಂದು ಸಚಿವ ಡಾ.ಕೆ. ಸುಧಾಕರ್ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಹಿಂದಿನಿಂದಲೂ ಪ್ರಬಲ ಸಮುದಾಯದವರ ವಿರುದ್ಧ ಕಾಂಗ್ರೆಸ್ ಕೆಲಸ ಮಾಡುತ್ತಿದೆ. ಹೀಗಾಗಿ, ಚುನಾವಣೆ ಸಮಯದಲ್ಲಿ ಕಾಂಗ್ರೆಸ್ ನಾಯಕರನ್ನು ಜನಸಾಮಾನ್ಯರೇ ಮನೆಗೆ ಕಳುಹಿಸುತ್ತಾರೆ' ಎಂದರು.

### ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **'ಪಿವಿ ಬ್ರ್ಯಾಂಡ್ ಸ್ಪಾಟ್'**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ


ಕರ್ನಾಟಕ ಸರ್ಕಾರ

**ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋ.ಇ ವಿಶೇಷ ವಿಭಾಗ, ಶಿವಮೊಗ್ಗ**

ಫೋನ್ ನಂ : 08182-222942, ಇ–ಮೇಲ್: spdivision@gmail.com

**ಅಲ್ಪಾವಧಿ ಟೆಂಡರ್ ಪ್ರಕಟಣೆ**

**(ದ್ವಿ–ಲಕೋಟೆ ಪದ್ಧತಿ) (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)**

ಐ.ಎಫ್.ಟಿ ಸಂಖ್ಯೆ: 30/2022-23 ದಿನಾಂಕ : 21.09.2022

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ/ಡಬ್ಲೂ–3&4 ನಿಯಮದನ್ವಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ **3ನೇ ದರ್ಜೆ ಹಾಗೂ ಮೇಲ್ಪಟ್ಟ** ಗುತ್ತಿಗೆದಾರರಿಗೆ ತೀರ್ಥಹಳ್ಳಿ ತಾಲ್ಲೂಕಿನಲ್ಲಿ 5054-04-337-0-01-154 ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ ಅಪೆಂಡಿಕ್ಸ್–ಇ ಲೆಕ್ಕಶೀರ್ಷಿಕೆಯಡಿಯಲ್ಲಿ ಅನುಮೋದನೆಗೊಂಡಿರುವ 06 ಕಾಮಗಾರಿಗೆ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಈ ಕೆಳಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. **ಸದರಿ ಕಾಮಗಾರಿಗೆ ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ ರೂ. 165.14 ಲಕ್ಷ & ಟೆಂಡರ್‌ಗಿಟ್ಟ ಕನಿಷ್ಟ ಮೊತ್ತ ರೂ. 83.45 ಲಕ್ಷ ಹಾಗೂ ಇ.ಎಂ.ಡಿ, ಗರಿಷ್ಠ ಮೊತ್ತ ರೂ. 2.48 ಲಕ್ಷ & ಇ.ಎಂ.ಡಿ ಕನಿಷ್ಠ ಮೊತ್ತ ರೂ. 1.70 ಲಕ್ಷ. ಸದರಿ ಕಾಮಗಾರಿಯ ಟೆಂಡರ್ ಅವಧಿ ಮಳೆಗಾಲ ಸೇರಿ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ.**

ಅರ್ಹ ಗುತ್ತಿಗೆದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ **http://eproc.karnataka.gov.in** ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್–2ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್–3 ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ವಿದ್ಯುನ್ಮಾನ ಜಾಲದಲ್ಲಿ **ದಿನಾಂಕ: 22-09-2022 ರಿಂದ 07-10-2022 ರ 17.00 ಗಂಟೆ**ವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು **ದಿನಾಂಕ: 07-10-2022 ರ ಸಂಜೆ 5:00 ಗಂಟೆಯೊಳಗೆ** ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಭರಿಸತಕ್ಕದ್ದು, ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ **ದಿನಾಂಕ: 10-10-2022 ರಂದು ಬೆಳಿಗ್ಗೆ 11.00ಕ್ಕೆ** ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು **ದಿನಾಂಕ: 11-10-2022 ರ ನಂತರ** ತೆರೆಯಲಾಗುವುದು. ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ–ಪ್ರಕ್ಯೂರ್‌ಮೆಂಟ್‌ನಲ್ಲಿಯೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ

ವಾಸಾಸಂಇ/ಶಿ/ನಂ.115-09 ಝುಂಕಾರ್/2022-23



**ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ**

#49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು–560 001

ದೂ: 080–2558 1383/ 2558 9112 ಫ್ಯಾಕ್ಸ್: 080–2588 6321

ಇಮೇಲ್: ho@kspcb.gov.in ವೆಬ್‌ಸೈಟ್: www.kspcb.karnataka.gov.in

ಸಂ: ಮಾನಿಮಂ/96/ಹಿಪಅ/ಗಣಿ/ಪಸಾಸ/2022–23/4258 ದಿನಾಂಕ: 22.09.2022

**ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ**

**ದಿ ಹಟ್ಟಿಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್,** ರವರು **"ಬೇಡವಟ್ಟಿ ಮರಳು ಬ್ಲಾಕ್"** ನಲ್ಲಿ ಸಾಮನ್ಯ ಮರಳು ಗಣಿಗಾರಿಕೆ ಮಾಡಲು ಕೃಷ್ಣಾ ನದಿ ದಂಡೆ ಸರ್ವೆ ನಂ. 14, 15, 55, 60, 65 to 71, ಬೇಡವಟ್ಟಿ ಗ್ರಾಮ, ಕೂಕನೂರು ತಾಲ್ಲೂಕು, ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು 16–00 ಎಕರೆ ಪ್ರದೇಶದಲ್ಲಿ ವರ್ಷಕ್ಕೆ 30,070 ಟನ್‌ಗಳಷ್ಟು ಸಾಮನ್ಯ ಮರಳು ಗಣಿಗಾರಿಕೆಯನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ. ಸದರಿ ಯೋಜನೆಯು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14.09.2006ರ (ತಿದ್ದುಪಡಿ ದಿನಾಂಕ: 01.12.2009)ಗೆ ಒಳಪಟ್ಟಿದ್ದು, ಅದರ ಪ್ರಕಾರ, ಪರಿಸರ ಸಾರ್ವಜನಿಕ ಆಲಿಕೆಯನ್ನು ನಡೆಸಬೇಕಿದೆ. ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರ Terms of Reference ಪತ್ರ ಸಂಖ್ಯೆ: SEIAA 431 MIN 2021 ದಿನಾಂಕ: 06.12.2021 ಮತ್ತು ಉದ್ದಿಮೆದಾರ ಮನವಿ ಪತ್ರ ಮಂಡಳಿಯಲ್ಲಿ ಸ್ವೀಕೃತಿ ದಿನಾಂಕ : 24.01.2022 ಪ್ರಕಾರ, ಪರಿಸರ ಸಾರ್ವಜನಿಕ ಆಲಿಕೆಯನ್ನು ಮಂಡಳಿವತಿಯಿಂದ ನಡೆಸಲಾಗುತ್ತಿದೆ. ಈ ಹಿಂದೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯು ದಿನಾಂಕ 05.07.2022 ರಂದು ನಿಗದಿಯಾಗಿತ್ತು ಮತ್ತು ಈ ಬಗ್ಗೆ ದಿನಾಂಕ 05.06.2022 ರಂದು ಪತ್ರಿಕಾ ಪ್ರಕಟಣೆಯು (ಕನ್ನಡ: ಪ್ರಜಾವಾಣಿ ಮತ್ತು ಆಂಗ್ಲ: ದಿ ಹಿಂದೂ) ಸಹ ನೀಡಲಾಗಿತ್ತು. ಆದರೆ, ಜಿಲ್ಲಾಧಿಕಾರಿಗಳು, ಕೊಪ್ಪಳ ಇವರ ಸೂಚನೆ ಮೇರೆಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಮುಂದೂಡಲಾಗಿದ್ದು, **ದಿನಾಂಕ 11.10.2022 (ಮಂಗಳವಾರ) ರಂದು ಮಧ್ಯಾಹ್ನ 3.00 ಗಂಟೆಗೆ** ಮರುನಿಗದಿಪಡಿಸಲಾಗಿದೆ.

**ಯೋಜನೆಯ ವಿವರಗಳು ಕಳಕಂಡಂತಿವೆ:**

| | |
|---|---|
| 1. | **ಕಂಪನಿಯ ಹೆಸರು ಮತ್ತು ವಿಳಾಸ: ದ ಹಟ್ಟಿಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್, 3rd ಪ್ಲೋರ್, KHB ಶಾಪಿಂಗ್ ಕಾಂಪ್ಲೆಕ್ಸ್, ನ್ಯಾಶನಲ್ ಗೇಮ್ಸ್ ಹಳ್ಳಿ, ಕೋರಮಂಗಲ ಬೆಂಗಳೂರು– 560 047.** |
| 2. | ಉದ್ದೇಶಿತ ಯೋಜನೆಯ ಸ್ಥಳ: ಸರ್ವೆ ನಂ. 14, 15, 55, 60, 65 to 71, ಬೇಡವಟ್ಟಿ ಗ್ರಾಮ, ಕೂಕನೂರು ತಾಲ್ಲೂಕು, ಕೊಪ್ಪಳ ಜಿಲ್ಲೆ, ಕರ್ನಾಟಕ. |
| 3. | **ಉದ್ದೇಶಿತ ಯೋಜನೆಯ ಕಾರ್ಯಚಟುವಟಿಕೆ: ವರ್ಷಕ್ಕೆ 30,070 ಟನ್‌ಗಳಷ್ಟು ಸಾಮನ್ಯ ಮರಳು ಗಣಿಗಾರಿಕೆ.** |
| 4. | **ಉದ್ದೇಶಿತ ಮಾಲಿನ್ಯ ನಿಯಂತ್ರಣ ಕ್ರಮಗಳು:** ಮರಳು ಗಣಿಗಾರಿಕೆ ಚಟುವಟಿಕೆಗಳ ಕಾರ್ಯಚರಣೆಯ ಸಮಯದಲ್ಲಿ ಉತ್ಪತ್ತಿಯಾಗುವ ಮನೆಯ ತ್ಯಾಜ್ಯವನ್ನು ವಿಲೇವಾರಿ ಮಾಡಲು ಡಸ್ಟಬಿನ್‌ಗಳನ್ನು ಒದಗಿಸಲಾಗುವುದು. ಸಾಗಣೆ ಮತ್ತು ರಸ್ತೆಗಳಲ್ಲಿ ನಿಯಮಿತವಾಗಿ ನೀರು ಚಿಮುಕಿಸುವುದು. ಡೀಸಲ್ ಎಂಜಿನ್‌ಗಳಿಂದ ಹೊರ ಹೊಮ್ಮುವ ಧೂಳಿನ ಕಣಗಳು ಮತ್ತು ಅನಿಲ ಹೊರ ಸೂಸುವಿಕೆಯನ್ನು ಕಡಿಮೆ ಮಾಡಲು ಎಲ್ಲಾ ಉಪಕರಣಗಳನ್ನು ನಿಯಮಿತವಾಗಿ ನಿರ್ವಹಣೆ ಮಾಡಲಾಗುತ್ತದೆ. ಗುತ್ತಿಗೆ ಪ್ರದೇಶದ ಗಡಿಯ ಸುತ್ತಲೂ ದಪ್ಪ ಹಸಿರು ಬೆಲ್ಟ್ ನಡುವಿಕೆಯನ್ನು ಒದಗಿಸಲಾಗುವುದು. ಪಲಾಯನಕಾರಿ ಹೊರ ಸೂಸುವಿಕೆಯನ್ನು ನಿಯಂತ್ರಿಸಲು ಘಟಕದ ಒಳಗೆ ಮತ್ತು ಸುತ್ತುಲೂ ಹಸಿರು ಪಟ್ಟಿಯನ್ನು ಒದಗಿಸಲಾಗುವುದು |
| 5. | **ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ: 11.10.2022 (ಮಂಗಳವಾರ) ರಂದು ಮಧ್ಯಾಹ್ನ 3.00 ಗಂಟೆ, ಸರ್ವೆ ನಂ. 14, 15, 55, 60, 65 to 71, ಬೇಡವಟ್ಟಿ ಗ್ರಾಮ, ಕೂಕನೂರು ತಾಲ್ಲೂಕು, ಕೊಪ್ಪಳ ಜಿಲ್ಲೆ, ಕರ್ನಾಟಕ.** |
| 6. | **ಯೋಜನೆಯ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಇಡುವ ಸ್ಥಳ:** (ಅ) ಜಿಲ್ಲಾಧಿಕಾರಿಗಳ ಕಛೇರಿ, ಕೊಪ್ಪಳ ಜಿಲ್ಲೆ, ಕೊಪ್ಪಳ. (ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಕೊಪ್ಪಳ (ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಪ್ಪಳ (ಈ) ತಾಲ್ಲೂಕು ಪಂಚಾಯತಿ ಕಾರ್ಯಲಯ ಕೂಕನೂರು. (ಉ) ತಹಶೀಲ್ದಾರರ ಕಾರ್ಯಲಯ ಕೊಪ್ಪಳ. (ಊ) ಗ್ರಾಮ ಪಂಚಾಯಿತಿ ಕಾರ್ಯಾಲಯ, ಬೇಡವಟ್ಟಿ (ಋ) ಪ್ರಾದೇಶಿಕ ಅಧಿಕಾರಿಗಳ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕೊಪ್ಪಳ (ೠ) ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಕೊಠಡಿ ಸಂಖ್ಯೆ. 706, 7ನೇ ಮಹಡಿ, 4ನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು–560 001 (ಎ) **ಸಹಾಯ ಕೇಂದ್ರ,** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು–560001 |

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ಕೊಪ್ಪಳ ಜಿಲ್ಲೆ, ಕೊಪ್ಪಳ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್: **kspcb.karnataka.gov.in** ನಲ್ಲಿ ಪಡೆಯಬಹುದು.

ಸಹಿ/– ಸದಸ್ಯ ಕಾರ್ಯದರ್ಶಿ

**ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ, ಪರಿಸರ ಹಾನಿ ತಪ್ಪಿಸಿ**

# ಕಾರ್ಮಿಕರ ಸೌಲಭ್ಯಕ್ಕೂ ಕಮಿಷನ್..?

ಒಂದನೇ ಪುಟದಿಂದ..

ಸೌಲಭ್ಯ ಕೋರಿ ಅರ್ಜಿ ಹಾಕುವಾಗ ಮೂಲ ಕಾರ್ಡ್‌ನ ಫೋಟೊ ಪ್ರತಿಯನ್ನೇ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಬೇಕು ಎಂಬ ನಿಯಮ ಇದ್ದು, ಕಾರ್ಮಿಕರು ತಮ್ಮ ಬಳಿಯೇ ಬರಲಿ ಎಂಬ ಹುನ್ನಾರ ಏಜೆಂಟರದ್ದು.

ಕಾರ್ಮಿಕರು ನಿಗದಿತ ಶುಲ್ಕ ಪಾವತಿಸಿ, ಅಗತ್ಯ ದಾಖಲೆಗಳೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಈ ಸಂಬಂಧ ಯಾರಿಗೂ ಹೆಚ್ಚುವರಿ ಹಣ ನೀಡಬೇಕಿಲ್ಲ ಎಂಬ ಅರಿವು ಮೂಡಿಸುವ ಗೋಜಿಗೂ ಮಂಡಳಿ ಹೋಗಿಲ್ಲ. ಹಾಗಾಗಿಯೇ ಅನಕ್ಷರಸ್ಥ, ಗ್ರಾಮೀಣ ಹಿನ್ನೆಲೆಯ ಕಾರ್ಮಿಕರು ತಮ್ಮನ್ನು ಸಂಪರ್ಕಿಸುವ ಏಜೆಂಟರು ಕೇಳಿದಷ್ಟು ಹಣ ನೀಡಿ, ಸುಲಿಗೆಗೆ ಒಳಗಾಗುತ್ತಿದ್ದಾರೆ ಎಂಬ ದೂರುಗಳಿವೆ.

ಸೌಲಭ್ಯಗಳ ಬಗ್ಗೆ ಕಾರ್ಮಿಕರಿಗೆ ತಿಳಿವಳಿಕೆ ನೀಡಿ, ನೋಂದಣಿ ಮಾಡಿಸಿ 'ಕಾರ್ಮಿಕ ಸ್ನೇಹಿ' ಎಂಬ ಹೆಸರು ಪಡೆಯುವ ಏಜೆಂಟರು, ನಂತರ ಕಾರ್ಮಿಕರಿಗೆ ದೊರೆಯುವ ಪ್ರತಿಯೊಂದೂ ಸೌಲಭ್ಯಗಳಿಗೆ ಅರ್ಜಿ ಸಲ್ಲಿಸುವ ಹೊಣೆಯನ್ನೂ ತಾವೇ ವಹಿಸಿಕೊಳ್ಳುತ್ತಾರೆ. 'ಕಾರ್ಮಿಕ ಇಲಾಖೆ ಅಧಿಕಾರಿಗಳಿಗೆ, ಮಂಡಳಿಯವರಿಗೆ ಹಣ ಕೊಡದಿದ್ದರೆ ಕೆಲಸ ಆಗುವುದಿಲ್ಲ. ಹಣ ಕೊಟ್ಟು ಕೆಲಸ ಮಾಡಿಸುತ್ತೇವೆ' ಎಂದೆಲ್ಲ ಹೇಳಿ, ಕಮಿಷನ್ ಎಂಬಂತೆ ಶೇ 25ರಿಂದ 30ರಷ್ಟು ಹಣವನ್ನು ಲಂಚವಾಗಿ ಪಡೆಯುವ ದಂಧೆ ಅವ್ಯಾಹತ ವಾಗಿ ನಡೆದಿದೆ. ಕಾರ್ಮಿಕ ಇಲಾಖೆಯ ಅಧಿಕಾರಿಗಳೂ ಇದರಲ್ಲಿ ಶಾಮೀಲಾ ಗಿದ್ದು, ಕೈ ಬೆಚ್ಚಗಾಗಿಸಿದರೆ ಮಾತ್ರ ಮಂಜೂರಾತಿ ದೊರೆಯುತ್ತದೆ ಎನ್ನುವ ಆರೋಪಗಳಿವೆ.

'ರಾಜ್ಯ ಸರ್ಕಾರದಲ್ಲಿ ಯಾವುದೇ ಕೆಲಸ ಆಗಬೇಕಿದ್ದರೂ ಶೇ 40ರಷ್ಟು ಕಮಿಷನ್ ನೀಡಬೇಕು. ಅಂಥದ್ದರಲ್ಲಿ ನಿಮ್ಮಿಂದ ಕೇವಲ ಶೇ 25ರಿಂದ 30ರಷ್ಟು ಕಮಿಷನ್ ಪಡೆಯಲಾಗಿದೆ. ಹಣ ನೀಡುವುದು ಅನಿವಾರ್ಯ' ಎಂದು ಫಲಾನುಭವಿಗಳನ್ನು ನಂಬಿಸಲಾಗುತ್ತಿದೆ. 'ಹೇಗಿದ್ದರೂ ನೆರವು ದೊರೆಯುತ್ತದೆ. ಸುಮ್ಮನೆ ಬಿಟ್ಟರೆ ಅದೂ ಸಿಗುವುದಿಲ್ಲ' ಎಂದು ಯೋಚಿಸುವ ಫಲಾನುಭವಿಗಳು ವಿಧಿಯಿಲ್ಲದೇ ಮುಂಗಡವಾಗಿ ಹಣ ನೀಡುತ್ತಿದ್ದಾರೆ ಎನ್ನುವ ಮಾತುಗಳಿವೆ.

ಹುಬ್ಬಳ್ಳಿ, ಮಂಡ್ಯ, ಕೋಲಾರ, ಬೆಂಗಳೂರು, ಮೈಸೂರು ಸೇರಿದಂತೆ ರಾಜ್ಯದ ಕೆಲವು ಕಡೆ ಬಲಾಢ್ಯರಾಗಿ ಬೆಳೆದಿರುವ ಇಂಥ ಏಜೆಂಟರು, ಕಾರ್ಮಿಕರನ್ನೇ ಬೆದರಿಸುತ್ತ ಕೋಟ್ಯಂತರ ಮೌಲ್ಯದ ಆಸ್ತಿಪಾಸ್ತಿ ಸಂಪಾದಿಸಿದ್ದಾರೆ. ಕೆಲವರು ಹಿಂಬಾಲಕರನ್ನೂ ಇಟ್ಟುಕೊಂಡು ಕಾರ್ಯಾಚರಣೆಗೆ ಇಳಿಯುತ್ತಾರೆ ಎಂಬ ದೂರುಗಳಿವೆ.

ಕಾರ್ಮಿಕರು ಮಕ್ಕಳ ಮದುವೆಗೆ ನೀಡುವ ₹ 50,000 ನೆರವು ಪಡೆಯಬೇಕಿದ್ದರೆ ₹ 15,000 ಕೊಡಲೇಬೇಕು. ಅರ್ಜಿ ಹಾಕಿದ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಹಣ ನೇರವಾಗಿ ವರ್ಗಾವಣೆ ಆಗುವುದರಿಂದ ಲಂಚದ ಹಣವನ್ನು ಮೊದಲೇ ಒಪ್ಪಿಸಬೇಕು. ಇಲ್ಲದಿದ್ದರೆ ಅವರ ಅರ್ಜಿ ಶೀಘ್ರ ಮಂಜೂರಾಗುವುದಿಲ್ಲ ಅಥವಾ ಮಂಜೂರಾತಿ ದೊರೆಯದೇ ತಿರಸ್ಕೃತವಾಗುತ್ತದೆ ಎಂಬ ಆರೋಪಗಳಿವೆ.

ಕಾರ್ಮಿಕರೇ ಅಲ್ಲದವರ ನೋಂದಣಿ ಮಾಡಿಸುವ ಏಜೆಂಟರು, ಸೌಲಭ್ಯ ಕೋರಿ ಅವರ ಹೆಸರಲ್ಲಿ ತಾವೇ ಅರ್ಜಿ ಹಾಕಿ, '₹50,000 ಜಮಾ ಮಾಡಿಸಿ ₹45,000 ತಾವೇ ಪಡೆದು, ಕೇವಲ ₹5,000ವನ್ನಷ್ಟೇ ನೀಡಿರುವ ಪ್ರಕರಣ ಇತ್ತೀಚೆಗಷ್ಟೇ ಮಂಡ್ಯ ಜಿಲ್ಲೆಯಲ್ಲಿ ನಡೆದಿದೆ. ಎಂಜಿನಿಯರಿಂಗ್ ಕಾಲೇಜೊಂದರ 50ಕ್ಕೂ ಹೆಚ್ಚು ವಿದ್ಯಾರ್ಥಿಗಳ ಪಾಲಕರ ಹೆಸರಲ್ಲಿ ಅರ್ಜಿ ಸಲ್ಲಿಸಿ ಹಣ ಗುಳುಂ ಮಾಡಲಾಗಿದೆ. ಈ ಸಂಬಂಧ ತನಿಖೆಗೆ ಆಗ್ರಹಿಸಿದರೂ ಪ್ರಯೋಜನವಾಗಿಲ್ಲ ಎಂದು ಕಾರ್ಮಿಕ ಸಂಘಟನೆಗಳು ದೂರಿವೆ.

ಸಾಂದರ್ಭಿಕ ಚಿತ್ರ

ಬೋಗಸ್ ಕಾರ್ಡ್ ಪತ್ತೆ ಮಾಡಿ ರದ್ದು ಪಡಿಸುವಂತೆ ಇತ್ತೀಚೆಗಷ್ಟೇ ಮಂಡಳಿ ಆದೇಶ ನೀಡಿದೆ. ಭ್ರಷ್ಟಾಚಾರ ನಿಯಂತ್ರಣ ಮತ್ತು ಪಾರದರ್ಶಕ ವ್ಯವಸ್ಥೆ ಜಾರಿಗಾಗಿ ಮಂಡಳಿ ಅಗತ್ಯ ಕ್ರಮ ಕೈಕೊಂಡು ಕಾರ್ಮಿಕರ ಸುಲಿಗೆ ತಪ್ಪಿಸಬೇಕು.

**ಕೆ.ಎಚ್.ಆನಂದರಾಜು**
ಕಾರ್ಮಿಕ ಮುಖಂಡ, ದಾವಣಗೆರೆ

ತೆರಿಗೆ ಮೂಲಕ ಸಂಗ್ರಹವಾಗಿರುವ ₹ 12,557 ಕೋಟಿ ಮಂಡಳಿ ಬಳಿ ಇದೆ. ವಾರ್ಷಿಕ ನೂರಾರು ಕೋಟಿ ಬಡ್ಡಿ ಬರುತ್ತದೆ. ಈ ಹಣವನ್ನು ಕಾರ್ಮಿಕರ ಕಲ್ಯಾಣಕ್ಕೆ ಮಾತ್ರ ಬಳಸಬೇಕು.

**ಕೆ.ಮಹಾಂತೇಶ**
ಪ್ರಧಾನ ಕಾರ್ಯದರ್ಶಿ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್

ಕಟ್ಟಡ ನಿರ್ಮಾಣ ಕೆಲಸ ಮಾಡುವವರು ಅರ್ಜಿ ಹಾಕಿದರೆ ಸ್ಕಾಲರ್‌ಶಿಪ್ ಮತ್ತಿತರ ಸೌಲಭ್ಯ ಸಿಗುತ್ತಿವೆ. ಬೋಗಸ್ ಕಾರ್ಡ್‌ದಾರರು ಪುಗ್ಸಟ್ಟೆ ಹಣ ಬಂದರೆ ಬರಲಿ ಎಂದು ಲಂಚ ನೀಡುತ್ತಿದ್ದಾರೆ. ಅವರಿಂದಾಗಿ ನೈಜ ಕಾರ್ಮಿಕರ ಸುಲಿಗೆಯೂ ನಡೆದಿದೆ.

**ಕರೀಂ ಸಾಬ್**, ಕಟ್ಟಡ ಕಾರ್ಮಿಕ, ಹರಿಹರ

## ಉಚಿತ ಕಿಟ್ ಅವ್ಯವಹಾರ

ಕೋವಿಡ್ ಸಂದರ್ಭ ನೋಂದಾಯಿತ ಕಾರ್ಮಿಕರಿಗೆ ಧಾನ್ಯ, ಸ್ಯಾನಿಟೈಸೇಷನ್, ಇಮ್ಯೂನಿಟಿ ಮತ್ತು ಆಯುರ್ವೇದದ ಬೂಸ್ಟರ್ ಕಿಟ್‌ಗಳನ್ನು ಉಚಿತವಾಗಿ ವಿತರಿಸಲಾಗಿದೆ. ಆದರೆ, ಕಳಪೆ, ಕಡಿಮೆ ದರದ ಈ ಸಾಮಗ್ರಿಗಳ ಖರೀದಿಯಲ್ಲಿ ಅಕ್ರಮ ನಡೆದಿದೆ ಎನ್ನುವ ಆರೋಪವಿದೆ.

ಕಾರ್ಮಿಕರಿಗೆ ನೆರವಾಗಲು ಮಂಡಳಿಯೇ ಕಿಟ್ ವಿತರಿಸಿದ್ದರೂ ಆಡಳಿತಾರೂಢ ಶಾಸಕರು, ಸಂಸದರು ತಾವೇ ನೀಡಿದ್ದಾಗಿ ಘೋಷಿಸಿಕೊಂಡು ಹೆಸರು ಪಡೆದ ನಿದರ್ಶನಗಳೂ ಇವೆ. 'ಮಧ್ಯವರ್ತಿ'ಯಾಗಿ ಕೆಲಸ ಮಾಡುವ ಕೆಲವು ಸಂಘಗಳ ಮುಖಂಡರು ತಾವೇ ಹಂಚಿದ್ದಾಗಿ ಹೇಳಿಕೊಂಡಿದ್ದಾರೆ.

ಆದರೆ, ಧಾನ್ಯ ಒಳಗೊಂಡ ಕಿಟ್ ವಿತರಣೆಯಲ್ಲಿ ವಿಳಂಬವಾಗಿದ್ದರಿಂದ ಫಲಾನುಭವಿಗಳಿಗೆ ಪ್ರಯೋಜನ ಆಗಲಿಲ್ಲ. ಕಿಟ್ ಸಿದ್ಧಪಡಿಸಿ ಮೂರು ತಿಂಗಳ ನಂತರ ಕಾರ್ಮಿಕರ ಮನೆ ಬಾಗಿಲು ತಲುಪಿದ್ದರಿಂದ ಅಕ್ಕಿ, ಬೇಳೆಯನ್ನೆಲ್ಲ ಹುಳುಗಳು ತಿಂದಿದ್ದು, ಉಪಯೋಗಕ್ಕೆ ಬರಲಿಲ್ಲ. ಈಗಲೂ ಇಂಥ ಕಿಟ್ ವಿತರಿಸುವ ಕಾರ್ಯ ಮುಂದುವರಿದಿದ್ದು, ಕೂಡಲೇ ಅದನ್ನು ಸ್ಥಗಿತಗೊಳಿಸುವ ಅಗತ್ಯವಿದೆ ಎಂದು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಸಂಘದ ದಾವಣಗೆರೆ ಜಿಲ್ಲಾ ಸಂಚಾಲಕ ಕೆ.ಎಚ್. ಆನಂದರಾಜು ಅಭಿಪ್ರಾಯಪಡುತ್ತಾರೆ.

ಇದೀಗ ಕೌಶಲಾಧಾರಿತ ನಿರ್ಮಾಣ ಕಾರ್ಮಿಕರಿಗೆ (ಬಾರ್ ಬೆಂಡರ್, ಎಲೆಕ್ಟ್ರೀಷಿಯನ್, ಕಾರ್ಪೆಂಟರ್ ಮತ್ತಿತರರು) ಉಚಿತ ಟೂಲ್ ಕಿಟ್ ನೀಡಲಾಗುತ್ತಿದೆ. ಪ್ರತಿ ಟೂಲ್ ಕಿಟ್ ₹ 20,000 ಲೆಕ್ಕ ನೀಡುತ್ತಿದೆ. ಮಂಡಳಿಯು ಚೀನಾ ಸಾಮಗ್ರಿ ಖರೀದಿಸುತ್ತಿದ್ದು, ಭಾರಿ ಅಕ್ರಮ ನಡೆದಿದೆ. ಕಾರ್ಮಿಕರಿಗೆ ಇಮ್ಯೂನಿಟಿ, ಬೂಸ್ಟರ್ ಕಿಟ್, ಬಾಣಂತಿಯರಿಗೆ ಆಯುರ್ವೇದ ಔಷಧ ಕಿಟ್ ಹಂಚಲಾಗುತ್ತಿದೆ. ಇದರ ಖರೀದಿಯಲ್ಲೂ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ. ಕಿಟ್ ನೀಡುವ ಬದಲಿಗೆ ಫಲಾನುಭವಿಯ ಖಾತೆಗೆ ನೇರವಾಗಿ ನೆರವಿನ ಹಣ ವರ್ಗಾಯಿಸಿದರೆ ಅನುಕೂಲವಾಗಲಿದೆ ಎಂಬುದು ಅವರ ಆಶಯ.

## ವಸತಿ ಯೋಜನೆಗೆ ಮಂಡಳಿಯ ಹಣ

ಆಯಾ ಸ್ಥಳೀಯ ಸಂಸ್ಥೆಗಳು ಕಟ್ಟಡ ನಿರ್ಮಾಣ ಪರವಾನಗಿ ನೀಡುವ ಸಂದರ್ಭ ನೋಂದಾಯಿತ ಕಾರ್ಮಿಕರ ಕಲ್ಯಾಣಕ್ಕಾಗಿ ತೆರಿಗೆ ವಸೂಲಿ ಮಾಡಿ ಮಂಡಳಿಗೆ ನೀಡುತ್ತವೆ. ಈ ಮೊತ್ತವೇ ಅಂದಾಜು ₹ 3,700 ಕೋಟಿಯಷ್ಟು ಸಂಗ್ರಹವಾಗಿತ್ತು. 2007ರಲ್ಲಿ ಕಾರ್ಮಿಕರ ನೆರವಿಗಾಗಿಯೇ ವಿವಿಧ ಸೌಲಭ್ಯ ನೀಡುವ ಯೋಜನೆಗಳು ಆರಂಭವಾಗಿದ್ದು, ಈ ಹಣವನ್ನೇ ಬಳಸಿಕೊಳ್ಳಲಾಗುತ್ತಿದೆ. ಮಂಡಳಿಯಲ್ಲಿ ನೋಂದಣಿ ಮಾಡಿಸಿ 3 ವರ್ಷ ಪೂರ್ಣಗೊಳಿಸಿರುವ, 60 ವರ್ಷ ಮೀರಿದ ಕಾರ್ಮಿಕರಿಗೆ ಮಾಸಿಕ ₹ 2,000 ಪಿಂಚಣಿ ಯೋಜನೆಯೂ ಜಾರಿಯಲ್ಲಿದೆ. ಕಾರ್ಮಿಕ ಮೃತಪಟ್ಟರೆ ಪತ್ನಿಗೆ ಮಾಸಿಕ ₹ 1,000 ಪಿಂಚಣಿ ದೊರೆಯಲಿದೆ.

ಇದರ ಜೊತೆಗೆ 5 ವರ್ಷ ಪೂರೈಸಿರುವ ಕಾರ್ಮಿಕರಿಗೆ ವಸತಿ ಸೌಲಭ್ಯಕ್ಕಾಗಿ ಬಡ್ಡಿರಹಿತ ₹ 2 ಲಕ್ಷ ಸಾಲ ನೀಡುವ ಸೌಲಭ್ಯವೂ ಇದೆ. ಆದರೆ, ವಿಧಾನಸಭೆ ಚುನಾವಣೆ ಸಮೀಪಿಸುತ್ತಿದ್ದಂತೆಯೇ ಆಡಳಿತಾರೂಢ ಪಕ್ಷದ ಶಾಸಕರು ಮತ್ತು ಸಚಿವರ ಕಣ್ಣು ಮಂಡಳಿ ಹಣದ ಮೇಲೆ ಬಿದ್ದಿದ್ದು, ಕೊಳಚೆ ನಿರ್ಮೂಲನಾ ಮಂಡಳಿಯ ವಸತಿ ಯೋಜನೆ ಹಾಗೂ ರಾಜೀವ್ ಗಾಂಧಿ ವಸತಿ ಯೋಜನೆಯ ಫಲಾನುಭವಿಗಳಿಗೆ ಮಂಡಳಿಯಿಂದ ಹಣಕಾಸಿನ ನೆರವು ದೊರಕಿಸಿಕೊಡುವ ಹುನ್ನಾರ ನಡೆದಿದೆ ಎಂಬ ಮಾತುಗಳು ಕೇಳಿ ಬಂದಿವೆ.

ಮಂಡಳಿಯ ಸದಸ್ಯತ್ವ ಪಡೆದುಕೊಳ್ಳುವಂತೆ ಆ ಯೋಜನೆಗಳ ಫಲಾನುಭವಿಗಳ ಮನವೊಲಿಸಲಾಗುತ್ತಿದ್ದು, ಅರ್ಹ ಫಲಾನುಭವಿ ಕಾರ್ಮಿಕರಿಗೆ ಅನ್ಯಾಯ ಎಸಗಲಾಗುತ್ತಿದೆ ಎಂದು ದೂರಿ ಕಾರ್ಮಿಕ ಸಂಘಟನೆಗಳು ಪ್ರತಿಭಟನೆ ನಡೆಸಿವೆ. ಈಗಾಗಲೇ ₹ 76 ಕೋಟಿ ಅನುದಾನವನ್ನು ಮಂಡಳಿಯ ಖಾತೆಯಿಂದ ಈ ವಸತಿ ಯೋಜನೆಗಳಿಗೆ ವರ್ಗಾಯಿಸಲಾಗಿದೆ. ಕಾರ್ಮಿಕರಿಗೆ ದೊರೆಯಬೇಕಿರುವ ಈ ಸೌಲಭ್ಯವನ್ನು ಬೇರೆಯವರ ಕಲ್ಯಾಣಕ್ಕೆ ಬಳಸಲಾಗುತ್ತಿದೆ ಎಂಬುದು ಕಾರ್ಮಿಕ ಸಂಘಟನೆಗಳ ಆರೋಪ.

## ಆರೋಗ್ಯ ತಪಾಸಣೆಯಲ್ಲೂ ಅಕ್ರಮ

ಗ್ರಾಮೀಣ ಮತ್ತು ನಗರ ಪ್ರದೇಶಗಳ ಕಾರ್ಮಿಕರ ಆರೋಗ್ಯ ತಪಾಸಣೆ ಹೆಸರಿನಲ್ಲೂ ಅಕ್ರಮ ನಡೆದಿರುವ ಆರೋಪಗಳಿವೆ.

ಉಚಿತ ಶಿಬಿರ ಹಮ್ಮಿಕೊಳ್ಳಲು ರಾಜ್ಯದಾದ್ಯಂತ ಕೆಲವು ಜನಪ್ರತಿನಿಧಿಗಳ ಒಡೆತನದ ಆಸ್ಪತ್ರೆಗಳಿಗೂ ಮಂಡಳಿ ಮೂಲಕ ಅನುಮತಿ ನೀಡಲಾಗಿದೆ. ಪ್ರತಿ ಕಾರ್ಮಿಕನ ಆರೋಗ್ಯ ತಪಾಸಣೆಗಾಗಿ ಆಸ್ಪತ್ರೆಗಳಿಗೆ ₹ 2,400 ಪಾವತಿಸಲಾಗುತ್ತದೆ. ಒಂದು ಶಿಬಿರದಲ್ಲಿ ಕನಿಷ್ಠ 30 ಕಾರ್ಮಿಕರನ್ನು ತಪಾಸಣೆಗೆ ಒಳಪಡಿಸಬೇಕೆಂಬ ನಿಯಮ ರೂಪಿಸಲಾಗಿದೆ. ಶಿಬಿರದಲ್ಲಿ ತಜ್ಞ ವೈದ್ಯರ ಬದಲಿಗೆ, ಶುಶ್ರೂಷಕಿಯರು, ಅನನುಭವಿ ವೈದ್ಯರು ಇರುತ್ತಾರೆ. ರಕ್ತದೊತ್ತಡ, ಮಧುಮೇಹ, ನಾಡಿಮಿಡಿತ, ಹೃದಯ ಬಡಿತದ ಸರಳ ತಪಾಸಣೆ ನಡೆಸಲಾಗುತ್ತದೆ.

ಶಿಬಿರದಲ್ಲಿ ಕಾರ್ಮಿಕರು ಭಾಗವಹಿಸಲಿ ಎಂಬ ಕಾರಣಕ್ಕೆ ಕೆಲವು ಆಸ್ಪತ್ರೆಗಳ ಸಿಬ್ಬಂದಿ ಉಚಿತ ಆಹಾರ ಕಿಟ್ ನೀಡುವ ಆಮಿಷವನ್ನೂ ಒಡ್ಡಿರುವ ಉದಾಹರಣೆಗಳಿವೆ. ಬೆಳಗಾವಿ ಜಿಲ್ಲೆಯ ವಿವಿಧೆಡೆ ₹ 300 ಮೊತ್ತದ ಆಹಾರ ಕಿಟ್ ನೀಡಿ ಆರೋಗ್ಯ ತಪಾಸಣೆ ನಡೆಸಲಾಗಿದೆ. ತಲಾ ₹ 2,400 ಪಡೆಯಲು ₹ 300 ಕಳೆದುಕೊಳ್ಳುವ 'ಔದಾರ್ಯ'ವನ್ನೂ ಆಸ್ಪತ್ರೆಯವರು ತೋರಿದ್ದಾರೆ ಎಂಬ ಆರೋಪ ಕಾರ್ಮಿಕ ಸಂಘಟನೆಗಳದ್ದಾಗಿದೆ.

## 'ಬೋಗಸ್ ಗುರುತಿನ ಚೀಟಿ ಹೊರಹಾಕಲು ಕ್ರಮ'

ಬೆಂಗಳೂರು: ಕಟ್ಟಡ ಕಾರ್ಮಿಕರಲ್ಲದವರೂ ಬೋಗಸ್ ಗುರುತಿನ ಚೀಟಿ ಹೊಂದಿರುವುದನ್ನು ಪತ್ತೆ ಮಾಡಿ ಅಂತಹವರನ್ನು ಪಟ್ಟಿಯಿಂದ ಕೈಬಿಡಲು ಕಾರ್ಮಿಕ ಕಲ್ಯಾಣ ಮಂಡಳಿ ಕಾಯ್ದೆಗೆ ತಿದ್ದುಪಡಿ ತರಲಾಗಿದೆ ಎಂದು ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಂ.ಪಿ.ಗುರುಪ್ರಸಾದ್ ತಿಳಿಸಿದರು.

'ಈ ಹಿಂದಿನ ಕಾಯ್ದೆ ಪ್ರಕಾರ ಒಮ್ಮೆ ಗುರುತಿನ ಚೀಟಿ ಪಡೆದರೆ ಅವರನ್ನು ಪಟ್ಟಿಯಿಂದ ಹೊರ ಹಾಕಲು ಅವಕಾಶ ಇರಲಿಲ್ಲ. ಆದ್ದರಿಂದ ಬೋಗಸ್ ಗುರುತಿನ ಚೀಟಿ ಹೊಂದಿದವರನ್ನು ಹೊರಹಾಕುವುದು ಕಷ್ಟವಾಗಿತ್ತು. 2022ರ ಆಗಸ್ಟ್‌ನಲ್ಲಿ ಕಾಯ್ದೆಗೆ ತಿದ್ದುಪಡಿಯಾಗಿದೆ. ಮುಂದಿನ ದಿನಗಳಲ್ಲಿ ಈ ಸಮಸ್ಯೆ ಪರಿಹಾರವಾಗಲಿದೆ' ಎಂದರು.

ಮಂಡಳಿಯ ಸೌಲಭ್ಯ ಪಡೆಯಲು ಇದ್ದ ಮಧ್ಯವರ್ತಿಗಳ ಹಾವಳಿ ತಡೆಗೂ ಕ್ರಮ ಕೈಗೊಳ್ಳಲಾಗಿದೆ. ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರ ಹಣ ವರ್ಗಾವಣೆ(ಡಿಬಿಟಿ) ಮಾಡಲಾಗುತ್ತಿದೆ. ವೈದ್ಯಕೀಯ ವೆಚ್ಚ ಮರುಪಾವತಿ ಕೋರಿ ಬರುವ ಅರ್ಜಿಗಳನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಬೇಕಾಗುತ್ತದೆ. ಆದರೆ, ಅಲ್ಲಿಯೂ ಮಧ್ಯವರ್ತಿಗಳು ಸುಳಿಯದಂತೆ ನೋಡಿಕೊಳ್ಳಲಾಗುತ್ತಿದೆ ಎಂದು ಅವರು ಸ್ಪಷ್ಟಪಡಿಸಿದರು.

ಕಾರ್ಮಿಕರಿಗೆ ನೀಡಿರುವ ಟೂಲ್ ಕಿಟ್ ಕಳಪೆ ಎಂಬ ಆರೋಪಕ್ಕೆ ಉತ್ತರಿಸಿದ ಅವರು, 'ಹಣ ನೀಡಿದರೆ ಕಾರ್ಮಿಕರು ಟೂಲ್ ಕಿಟ್ ಖರೀದಿ ಮಾಡಿಕೊಳ್ಳುವುದಿಲ್ಲ ಎಂಬ ಕಾರಣಕ್ಕೆ ಕಾರ್ಮಿಕ ಸಂಘಟನೆಗಳ ಅಭಿಪ್ರಾಯದಂತೆ ಟೂಲ್ ಕಿಟ್ ನೀಡಲಾಗಿದೆ. ಸರ್ಕಾರದ ಏಜೆನ್ಸಿಗಳ ಮೂಲಕವೇ ಗುಣಮಟ್ಟದ ಕಿಟ್ ವಿತರಿಸಲಾಗಿದೆ' ಎಂದು ವಿವರಿಸಿದರು.

# ಅರಣ್ಯೇತರ ಉದ್ದೇಶಕ್ಕೆ 1,865 ಎಕರೆ ಅರಣ್ಯ ಬಳಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಾರ್ವಜನಿಕ ಹಾಗೂ ಖಾಸಗಿ ಉದ್ದೇಶಗಳಿಗಾಗಿ 1,865 ಎಕರೆ ಅರಣ್ಯ ಬಳಸಲು ಅನುಮೋದನೆ ನೀಡಲಾಗಿದೆ.

ಅರಣ್ಯ ಸಂರಕ್ಷಣೆ ಕಾಯ್ದೆ 1980ರಡಿ ಅರಣ್ಯ ಪ್ರದೇಶವನ್ನು ಅರಣ್ಯೇತರ ಉದ್ದೇಶಕ್ಕೆ ಬಳಸಲು ಕೇಂದ್ರ ಅರಣ್ಯ, ಪರಿಸರ ಮತ್ತು ತಾಪಮಾನ ಬದಲಾವಣೆ ಸಚಿವಾಲಯಕ್ಕೆ ಪ್ರಸ್ತಾವನೆ ಸಲ್ಲಿಸಬೇಕು. ಪ್ರಸ್ತಾವನೆಗಳ ಸಾಧಕ–ಬಾಧಕಗಳನ್ನು ಪರಿಶೀಲಿಸಿ ಸಚಿವಾಲಯ ಅನುಮೋದನೆ ನೀಡುತ್ತದೆ. ಕಳೆದ ಮೂರು ವರ್ಷಗಳಲ್ಲಿ 48 ಪ್ರಸ್ತಾವನೆಗಳಿಗೆ ಪೂರ್ವಾನುಮೋದನೆ ನೀಡಲಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಗರಿಷ್ಠ 318 ಹೆಕ್ಟೇರ್ ಅರಣ್ಯ ಬಳಕೆಗೆ ಒಪ್ಪಿಗೆ ನೀಡಲಾಗಿದೆ. ಇದರಲ್ಲಿ ಬಹುತೇಕ ಪ್ರಸ್ತಾವನೆಗಳು ಗಣಿಗಾರಿಕೆಗೆ ಸಂಬಂಧಪಟ್ಟವು. ಉತ್ತರ ಕನ್ನಡದಲ್ಲಿ 171 ಹೆಕ್ಟೇರ್, ಚಿಕ್ಕಮಗಳೂರಿನಲ್ಲಿ 108 ಹೆಕ್ಟೇರ್, ತುಮಕೂರಿನಲ್ಲಿ 41 ಹೆಕ್ಟೇರ್, ರಾಮನಗರದಲ್ಲಿ 23 ಹೆಕ್ಟೇರ್, ರಾಯಚೂರಿನಲ್ಲಿ 15 ಹೆಕ್ಟೇರ್, ಬಾಗಲಕೋಟೆಯಲ್ಲಿ 12 ಹೆಕ್ಟೇರ್ ಅರಣ್ಯ ಬಳಕೆಗೆ ಅನುಮೋದನೆ ನೀಡಲಾಗಿದೆ. ಗಣಿಗಾರಿಕೆ, ನಾಲೆಗಳ ನಿರ್ಮಾಣ, ರಸ್ತೆ, ವಿದ್ಯುತ್ ಮಾರ್ಗ ಮತ್ತಿತರ ಯೋಜನೆಗಳಿಗೆ ಈ ಅರಣ್ಯ ಪ್ರದೇಶಗಳನ್ನು ಬಳಸಿಕೊಳ್ಳಲಾಗಿದೆ.

ಅರಣ್ಯ ಭೂಮಿಯನ್ನು ಅರಣ್ಯೇತರ ಉದ್ದೇಶಕ್ಕೆ ಬಳಸುವ ವೇಳೆ ಪರಿಹಾರಾತ್ಮಕ ಅರಣ್ಯೀಕರಣಕ್ಕೆ ಆದ್ಯತೆ ನೀಡಬೇಕು ಎಂದು 2016ರಲ್ಲಿ ಆದೇಶ ಹೊರಡಿಸಲಾಗಿದೆ. ಬದಲಿಯಾಗಿ ಕಂದಾಯ ಭೂಮಿಯನ್ನು ನೀಡಬೇಕು ಎಂಬ ಷರತ್ತು ಇದೆ. ಕಳೆದ ಮೂರು ವರ್ಷಗಳಲ್ಲಿ 25 ಪ್ರಕರಣಗಳಲ್ಲಿ 425 ಎಕರೆ ಕಂದಾಯ ಭೂಮಿಯನ್ನು ಅರಣ್ಯ ಇಲಾಖೆಗೆ ಹಸ್ತಾಂತರ ಮಾಡಲಾಗಿದೆ.

**75 ಪ್ರಸ್ತಾವನೆಗಳು:** ಕರ್ನಾಟಕದಲ್ಲಿ ನೀರಾವರಿ, ರಸ್ತೆ, ವಿದ್ಯುದ್ದೀಕರಣ, ಗಣಿಗಾರಿಕೆ, ಕಟ್ಟಡ ನಿರ್ಮಾಣ ಸೇರಿದಂತೆ ವಿವಿಧ ಉದ್ದೇಶಗಳಿಗೆ ಅರಣ್ಯ ಭೂಮಿಯನ್ನು ಬಳಸಲು ಅನುಮೋದನೆ ಕೋರಿರುವ 75 ಪ್ರಸ್ತಾವನೆಗಳು ಕೇಂದ್ರ ಪರಿಸರ ಸಚಿವಾಲಯದ ಮುಂದೆ ಇವೆ. ಕೆಲವು ಪ್ರಕರಣಗಳಲ್ಲಿ ಹೆಚ್ಚುವರಿ ದಾಖಲೆಗಳನ್ನು ಕೇಳಲಾಗಿದೆ. ಈ ಪ್ರಸ್ತಾವನೆಗಳು ಪರಿಶೀಲನೆಯ ಹಂತದಲ್ಲಿ ಇವೆ ಎಂದು ಸಚಿವಾಲಯದ ಮೂಲಗಳು ತಿಳಿಸಿವೆ.

# ಪ್ರಾಂಶುಪಾಲರ ಮೇಲೆ ಗುಂಡು ಹಾರಿಸಿದ ವಿದ್ಯಾರ್ಥಿ

ಪ್ರಜಾವಾಣಿ ವಾರ್ತೆ

ಲಖನೌ: ಕಪಾಳಮೋಕ್ಷ ಮಾಡಿದರೆಂದು ಸಿಟ್ಟಾದ ದ್ವಿತೀಯ ಪಿಯುಸಿ ವಿದ್ಯಾರ್ಥಿಯೊಬ್ಬ ಕಾಲೇಜಿನ ಪ್ರಾಂಶುಪಾಲರ ಮೇಲೆ ಶನಿವಾರ ಗುಂಡು ಹಾರಿಸಿ ಪರಾರಿಯಾಗಿದ್ದಾನೆ.

ಉತ್ತರ ಪ್ರದೇಶದ ಬಾರಾಬಂಕಿ ಜಿಲ್ಲೆಯಲ್ಲಿ ಘಟನೆ ನಡೆದಿದ್ದು, ಪ್ರಾಂಶುಪಾಲ ರಾಮ್‌ಸಿಂಗ್ ವರ್ಮಾ ಅವರ ಸ್ಥಿತಿ ಗಂಭೀರವಾಗಿದೆ.

'ರೇವಾನ್ ನಿವಾಸಿಯಾಗಿರುವ ವಿದ್ಯಾರ್ಥಿಯು ಆಸನದ ವಿಚಾರವಾಗಿ ಶುಕ್ರವಾರ ಸಹಪಾಠಿ ಜೊತೆ ಜಗಳ ಮಾಡಿಕೊಂಡಿದ್ದ. ಆತನನ್ನು ಕೊಠಡಿಗೆ ಕರೆಸಿದ್ದ ಪ್ರಾಂಶುಪಾಲರು ಬುದ್ಧಿವಾದ ಹೇಳಲು ಮುಂದಾಗಿದ್ದರು. ಈ ವೇಳೆ ಆತ ತನ್ನ ವರ್ತನೆ ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದ್ದ. ಆಗ ಕಪಾಳಕ್ಕೆ ಹೊಡೆದಿದ್ದರು. ಮರು ಮಾತನಾಡದೆ ಅಲ್ಲಿಂದ ಮನೆಗೆ ತೆರಳಿದ್ದ ಆತ ಶನಿವಾರ ಬೆಳಿಗ್ಗೆ ಪಿಸ್ತೂಲ್‌ನೊಂದಿಗೆ ಕಾಲೇಜಿಗೆ ಬಂದಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

'ಕಾಲೇಜಿನ ಹೊರಗೆ ನಿರ್ಮಾಣ ಮಾಡಲಾಗುತ್ತಿರುವ ಮಳಿಗೆಗಳನ್ನು ರಾಮ್‌ಸಿಂಗ್ ಪರಿಶೀಲಿಸುತ್ತಿದ್ದರು. ಈ ವೇಳೆ ವಿದ್ಯಾರ್ಥಿಯು ಅವರೆಡೆ ಮೂರು ಸುತ್ತು ಗುಂಡು ಹಾರಿಸಿದ್ದ. ಅವು ರಾಮ್‌ಸಿಂಗ್ ತಲೆ, ಹೊಟ್ಟೆ ಹಾಗೂ ತೊಡೆಗೆ ತಗುಲಿದ್ದವು. ಗುಂಡಿನ ಸದ್ದು ಕೇಳಿದೊಡನೆ ಕಾಲೇಜಿನ ಇತರ ಸಿಬ್ಬಂದಿ ಹೊರಗೆ ಬಂದಿದ್ದರು. ಅವರನ್ನು ಕಂಡೊಡನೆ ವಿದ್ಯಾರ್ಥಿಯು ಅಲ್ಲಿಂದ ಪರಾರಿಯಾಗಿದ್ದ' ಎಂದು ಮೂಲಗಳು ತಿಳಿಸಿವೆ.

'ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದೇವೆ. ವಿದ್ಯಾರ್ಥಿಯ ಪತ್ತೆಗೆ ತಂಡ ರಚಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಆತ ಪಿಸ್ತೂಲ್ ಎಲ್ಲಿಂದ ತಂದ ಎಂಬುದು ಗೊತ್ತಿಲ್ಲ ಎಂದು ವಿದ್ಯಾರ್ಥಿಯ ಕುಟುಂಬದವರು ತಿಳಿಸಿದ್ದಾರೆ.

# ಹಿಮಾಚಲ ಪ್ರದೇಶ: ಮತ್ತೊಮ್ಮೆ ಬಿಜೆಪಿ ಅಧಿಕಾರಕ್ಕೆ–ಮೋದಿ

ಪ್ರಜಾವಾಣಿ ವಾರ್ತೆ

ಮಂಡಿ (ಹಿಮಾಚಲ ಪ್ರದೇಶ) (ಪಿಟಿಐ): ಹಿಮಾಚಲ ಪ್ರದೇಶದ ಮತದಾರರು ರಾಜ್ಯದಲ್ಲಿ ಮತ್ತೊಮ್ಮೆ ಬಿಜೆಪಿಗೆ ಅಧಿಕಾರ ನೀಡಲು ಮನಸ್ಸು ಮಾಡಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ತಿಳಿಸಿದರು.

ಕೆಲ ತಿಂಗಳ ಹಿಂದೆ ನಡೆದ ಉತ್ತರಪ್ರದೇಶ ಮತ್ತು ಉತ್ತರಾಖಂಡದ ಚುನಾವಣೆಯಲ್ಲಿ ಅಲ್ಲಿನ ಮತದಾರರು ಬಿಜೆಪಿ ಸರ್ಕಾರ ಮತ್ತೆ ರಚನೆಯಾಗುವಂತೆ ಮಾಡಿದ್ದಾರೆ. ಇದೇ ರೀತಿಯ ಫಲಿತಾಂಶ ಹಿಮಾಚಲ ಪ್ರದೇಶದಲ್ಲೂ ಬರಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಮಂಡಿಯಲ್ಲಿ ನಿಗದಿಯಾಗಿದ್ದ ಬಿಜೆಪಿ ಯುವ ಪಡೆಯ ಸಮಾವೇಶವನ್ನು ಉದ್ದೇಶಿಸಿ ಮೋದಿ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ಮಾತನಾಡಿದರು. ಈ ಸ್ಥಳಕ್ಕೆ ಹೆಲಿಕಾಪ್ಟರ್‌ನಲ್ಲಿ ಹೋಗಬೇಕಿದ್ದ ಮೋದಿ ಅವರು, ಪ್ರತಿಕೂಲ ಹವಾಮಾನದ ಪರಿಣಾಮ ಹೋಗಲಾಗಲಿಲ್ಲ.

ಈ ಹಿಂದೆ ಉತ್ತರ ಪ್ರದೇಶ ಮತ್ತು ಉತ್ತರಾಖಂಡ ರಾಜ್ಯಗಳಲ್ಲಿನ ಮತದಾರರು ಒಂದೊಂದು ಬಾರಿ ಒಂದೊಂದು ಪಕ್ಷಕ್ಕೆ ಅಧಿಕಾರ ನೀಡುವುದನ್ನು ವಾಡಿಕೆ ಮಾಡಿಕೊಂಡಿದ್ದರು. ಆದರೆ ಈ ಬಾರಿ ಅವರು ಆ ಮನಸ್ಥಿತಿಯನ್ನು ಬದಲಿಸಿಕೊಂಡರು ಎಂದು ಮೋದಿ ತಿಳಿಸಿದರು.

## ಸಂಕ್ಷಿಪ್ತ ಸುದ್ದಿ

### ಸೇನಾ ಸಿಬ್ಬಂದಿ ಬಂಧನ

ಚಂಡೀಗಢ (ಪಿಟಿಐ): ಚಂಡೀಗಢ ವಿಶ್ವವಿದ್ಯಾಲಯದ ಹಾಸ್ಟೆಲ್ ವಿದ್ಯಾರ್ಥಿನಿಯೊಬ್ಬರು ಇತರೆ ವಿದ್ಯಾರ್ಥಿನಿಯರ ಆಕ್ಷೇಪಾರ್ಹ ವಿಡಿಯೊಗಳನ್ನು ಚಿತ್ರೀಕರಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಪಂಜಾಬ್ ಪೊಲೀಸರು ಶನಿವಾರ ಯೋಧನೊಬ್ಬನನ್ನು ಬಂಧಿಸಿದ್ದಾರೆ.

ಅರುಣಾಚಲ ಪ್ರದೇಶದ ಸೆಲಾ ಪಾಸ್‌ನಲ್ಲಿ ಆರೋಪಿ ಸಂಜೀವ ಸಿಂಗ್‌ನನ್ನು ಬಂಧಿಸಲಾಗಿದ್ದು, ಮೊಹಾಲಿ ನ್ಯಾಯಾಲಯದಲ್ಲಿ ಹಾಜರು ಪಡಿಸಲಾಗುವುದು ಎಂದು ಪಂಜಾಬ್ ಪೊಲೀಸ್ ಮಹಾನಿರ್ದೇಶಕ ಗೌರವ್‌ಯಾದವ್ ತಿಳಿಸಿದ್ದಾರೆ.

### 2023ರ ಅಂತ್ಯಕ್ಕೆ ಜಗನ್ನಾಥ ದೇವಾಲಯ ಪೂರ್ಣ

ದಿಘಾ (ಪಿಟಿಐ): ಪಶ್ಚಿಮ ಬಂಗಾಳದ ಪೂರ್ವ ಮೇದಿನಿಪುರ ಜಿಲ್ಲೆಯ ದಿಘಾದಲ್ಲಿ ₹100 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ಜಗನ್ನಾಥ ದೇವಾಲಯದ ನಿರ್ಮಾಣ ಕಾರ್ಯವು 2023ರ ಡಿಸೆಂಬರ್‌ಗೆ ಪೂರ್ಣವಾಗಲಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದರು.

ಇಲ್ಲಿಯ ಕರಾವಳಿ ತೀರದಲ್ಲಿ 20 ಎಕರೆ ಪ್ರದೇಶದಲ್ಲಿ ಈ ದೇವಸ್ಥಾನವನ್ನು ನಿರ್ಮಿಸಲಾಗುತ್ತಿದೆ. ಪಶ್ಚಿಮ ಬಂಗಾಳ ವಸತಿ ಮೂಲಸೌಕರ್ಯ ಅಭಿವೃದ್ಧಿ ನಿಗಮವು(ಡಬ್ಲ್ಯುಬಿಎಚ್‌ಐಡಿಸಿಎ) ನಿರ್ಮಾಣದ ಜವಾಬ್ದಾರಿ ಹೊತ್ತಿದೆ. ಒಡಿಶಾದ ಪುರಿ ಜಗನ್ನಾಥ ದೇವಾಲಯದ ಮಾದರಿಯಲ್ಲೇ ಈ ದೇವಸ್ಥಾನವನ್ನು ನಿರ್ಮಿಸಲಾಗುತ್ತಿದೆ. 65 ಮೀಟರ್ ಎತ್ತರದ ಈ ದೇವಾಲಯದಲ್ಲಿ ಜಗನ್ನಾಥ, ಬಲಭದ್ರ ಮತ್ತು ಸುಭದ್ರಾ ದೇವತೆಗಳ ಮೂರ್ತಿ ಇರಲಿದೆ ಎಂದು ಡಬ್ಲ್ಯುಬಿಎಚ್‌ಐಡಿಸಿಎ ಮುಖ್ಯ ಎಂಜಿನಿಯರ್ ಸುಮನ್ ನಿಯೋಗಿ ತಿಳಿಸಿದ್ದಾರೆ.

### ಅಮಿತ್ ಶಾಗೆ ಹುಚ್ಚು ಹಿಡಿದಿದೆ: ಲಾಲು ಪ್ರಸಾದ್

ಪಟ್ನಾ (ಪಿಟಿಐ): ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಹುಚ್ಚು ಹಿಡಿದಿದೆ ಎಂದು ಆರ್‌ಜೆಡಿ ವರಿಷ್ಠ ಲಾಲು ಪ್ರಸಾದ್ ಶನಿವಾರ ಇಲ್ಲಿ ತಿರುಗೇಟು ನೀಡಿದ್ದಾರೆ.

ಬಿಹಾರದ ಮಹಾ ಮೈತ್ರಿ ಸರ್ಕಾರವನ್ನು ಶಾ ಶುಕ್ರವಾರ ತರಾಟೆಗೆ ತೆಗೆದುಕೊಂಡಿದ್ದರು.

'ಅಮಿತ್ ಶಾಗೆ ಹುಚ್ಚು ಹಿಡಿದಿದೆ. ಬಿಹಾರದಿಂದ ಅವರ ಸರ್ಕಾರ ಕಿತ್ತೊಗೆಯಲಾಗಿದೆ. 2024ರಲ್ಲೂ ಬಿಜೆಪಿ ಸೋಲನುಭವಿಸಲಿದೆ. ಇದೇ ಕಾರಣಕ್ಕೆ ಅವರು 'ಜಂಗಲ್ ರಾಜ್' ಎಂದೆಲ್ಲ ಟೀಕೆ ಮಾಡುತ್ತಿದ್ದಾರೆ. ಅವರು ಗುಜರಾತಿನಲ್ಲಿ ಇದ್ದಾಗ ಏನು ಮಾಡಿದ್ದರು' ಎಂದು ಅವರು ದೆಹಲಿಗೆ ತೆರಳುವುದಕ್ಕೆ ಮೊದಲು ಸುದ್ದಿಗಾರರಿಗೆ ತಿಳಿಸಿದರು.

ಅಮಿತ್ ಶಾ ಗುಜರಾತಿನಲ್ಲಿದ್ದಾಗ ಅಲ್ಲಿ ಜಂಗಲ್ ರಾಜ್ ಇತ್ತು ಎಂದು ಲಾಲು ಟೀಕಿಸಿದ್ದರು.

## ಗುಂಡಣ್ಣ




## 25 ವರ್ಷಗಳ ಹಿಂದೆ

ಗುರುವಾರ, 25-9-1997

**● ಭದ್ರತಾ ಮಂಡಳಿಯಲ್ಲಿ ಕಾಯಂ ಸದಸ್ಯತ್ವಕ್ಕೆ ಪ್ರಧಾನಿ ವಾದ**

**ವಿಶ್ವಸಂಸ್ಥೆ, ಸೆಪ್ಟೆಂಬರ್ 24 (ಯುಎನ್‌ಐ)**– ಪ್ರಗತಿ ಪಥದಲ್ಲಿ ಸಾಗುತ್ತಿರುವ ಭಾರತ ಎಲ್ಲ ಜವಾಬ್ದಾರಿಗಳನ್ನು ವಹಿಸಿಕೊಳ್ಳಲು ಶಕ್ತವಾಗಿರುವ ಹಿನ್ನೆಲೆಯಲ್ಲಿ ಭಾರತಕ್ಕೆ ವಿಶ್ವಸಂಸ್ಥೆಯ ಭದ್ರತಾ ಕಾಯಂ ಸದಸ್ಯ ಸ್ಥಾನ ನೀಡಬೇಕು ಎಂದು ಪ್ರಧಾನಿ ಐ.ಕೆ. ಗುಜ್ರಾಲ್ ಅವರು ಇಂದು ರಾತ್ರಿ ಒತ್ತಾಯಿಸಿದರು.

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, ಭಯೋತ್ಪಾದನೆಯ ಮೂಲೋಚ್ಚಾಟನೆಗೆ ವಿಶ್ವಮಟ್ಟದಲ್ಲಿ ಯತ್ನ ನಡೆಸಬೇಕೆಂದು ಕರೆ ನೀಡಿದರು.

## 50 ವರ್ಷಗಳ ಹಿಂದೆ

ಸೋಮವಾರ, 25-9-1972

**● ಉತ್ಪಾದನೆ ಹೆಚ್ಚಿಸದಿದ್ದರೆ ಕೈಗಾರಿಕಾ ಬಾಂಧವ್ಯಗಳ ಬಗ್ಗೆ ಬಿಗಿ ಕಾನೂನು**

**ಪುಣೆ, ಸೆಪ್ಟೆಂಬರ್ 24 (ಯುಎನ್‌ಐ)** – ಉತ್ಪಾದನೆ ಹೆಚ್ಚಿಸುವ ದಿಶೆಯಲ್ಲಿ ಕಾರ್ಮಿಕರಿಂದ ಸರ್ಕಾರಕ್ಕೆ ನಿರೀಕ್ಷಿತ ಪ್ರತಿಕ್ರಿಯೆ ಸನಿಯ ಭವಿಷ್ಯದಲ್ಲಿ ಬಾರದಿದ್ದರೆ, ಆರ್ಥಿಕ ಶಿಸ್ತನ್ನು ರಕ್ಷಿಸುವ ಕಟ್ಟುನಿಟ್ಟಿನ ಕೈಗಾರಿಕಾ ಬಾಂಧವ್ಯಗಳ ಕಾನೂನುಗಳು ಜಾರಿಗೆ ಬರುತ್ತವೆ ಎಂದು ಕೇಂದ್ರ ಕಾರ್ಮಿಕ ಸಚಿವ ಆರ್.ಕೆ. ಖಾಡಿಲ್ಕರ್ ಇಂದು ಎಚ್ಚರಿಕೆ ನೀಡಿದರು. ಕಾರ್ಮಿಕ ಸಂಘಗಳ ನಡುವೆ ಪರಸ್ಪರ ದ್ವೇಷ ಮುಂದುವರಿಕೆ ಪರಿಣಾಮದ ಅಶಾಂತಿಯನ್ನು ಸರ್ಕಾರ ಸಹಿಸುವುದಿಲ್ಲ ಎಂದರು.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಸೆಪ್ಟೆಂಬರ್ 25, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ಅಮಾವಾಸ್ಯೆ ಗಂ. 27-25 ನಕ್ಷತ್ರ: ಉತ್ತರಫಲ್ಗುನಿ ಅಹೋರಾತ್ರ ಯೋಗ: ಶುಭ ಗಂ. 09-05, ಕರಣ: ಚತುಷ್ಪಾದ ಗಂ. 15-22, ಕನ್ಯಾ ಮಾಸದ 08 ನೇ ದಿನ.
ರಾಹುಕಾಲ : ಸಾಯಂಕಾಲ 04:30 – 06:00 ಸೂರ್ಯೋದಯ : 06-23 ಸೂರ್ಯಾಸ್ತ : 06-21 ಮುಸ್ಲಿಂ ದಿನಾಂಕ : 28 ಸಫರ್
ದಿನ ವಿಶೇಷ : ಮಹಾಲಯ ಅಮಾವಾಸ್ಯೆ, ಶಹದತ್-ಎ-ಇಮಾನ್-ಹಸನ್ (ಮುಸ್ಲಿಂ)
ಅದೃಷ್ಟ ಸಂಖ್ಯೆ : 6, 8

**ಮೇಷ:** ಧನಾಗಮನ ಹೆಚ್ಚಿದ್ದರೂ ಸಂಪಾದನೆಯ ಬಹುಪಾಲು ವೆಚ್ಚವಾಗಲಿದೆ. ಧ್ಯಾನ ಹಾಗೂ ಕ್ರೀಡೆಯಂತಹ ಚಟುವಟಿಕೆಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದುವಿರಿ. ಧಾರ್ಮಿಕ ಪರಂಪರೆಯ ವ್ಯಕ್ತಿಗಳಿಗೆ ಒತ್ತಡ ಹೆಚ್ಚಲಿದೆ.

**ವೃಷಭ:** ಸ್ವಚ್ಛತಾ ಕಾರ್ಯಗಳಲ್ಲಿ ಪಾಲ್ಗೊಂಡ ಕಾರಣ ಅಲರ್ಜಿ ಉಂಟಾಗಬಹುದು. ಹಿರಿಯರ ಸಲಹೆಯು ನಿಮ್ಮ ಜೀವನಕ್ಕೆ ಹೊಸ ಬುನಾದಿಯಾಗಲಿದೆ. ಬೇಳೆ ಕಾಳುಗಳ ವ್ಯಾಪಾರಸ್ಥರಿಗೆ ಅಧಿಕ ವ್ಯಾಪಾರ.

**ಮಿಥುನ:** ಏಕಾಂಗಿಯಾಗಿ ಮತ್ತು ಹೆಚ್ಚು ಸ್ವತಂತ್ರವಾಗಿರಲು ಇಚ್ಛಿಸಿದಲ್ಲಿ ಉತ್ತಮ ಅವಕಾಶಗಳು ಎದುರಾಗಲಿವೆ. ಕೆಲಸ ಕಾರ್ಯದಲ್ಲಿ ಏಕಾಗ್ರತೆ ಕಡಿಮೆಯಾಗಲಿದೆ. ಎಲೆಕ್ಟ್ರಾನಿಕ್ ಉಪಕರಣಗಳ ರಿಪೇರಿಯಿಂದ ಖರ್ಚು.

**ಕರ್ಕಾಟಕ:** ನಿಮ್ಮ ಅಭಿವೃದ್ಧಿಗೆ ನಿಮ್ಮ ಆಲಸ್ಯ, ಸೋಮಾರಿತನವೇ ಶತ್ರು ಎಂದು ಮರೆಯದಿರಿ. ಉದ್ಯೋಗದಲ್ಲಿ ಆತುರದ ನಿರ್ಧಾರಗಳನ್ನು ತೆಗೆದುಕೊಳ್ಳದಂತೆ ಮಗನಿಗೆ ತಿಳಿಸುವುದು ಉತ್ತಮ. ಜನ ಬಳಕೆಯನ್ನು ಮಾಡಿಕೊಳ್ಳಿರಿ.

**ಸಿಂಹ:** ಮಕ್ಕಳ ಆಸೆ ಆಕಾಂಕ್ಷೆ ತೀರಿಸುವ ಉದ್ದೇಶದಲ್ಲಿ ನಿಮ್ಮ ಹಣ ಕಾಸಿನ ಪರಿಸ್ಥಿತಿ ನಿಯಂತ್ರಣವನ್ನು ತಪ್ಪಿಹೋಗುವುದು. ರಫ್ತು, ಆಮದು ವ್ಯಾಪಾರಗಳಲ್ಲಿ ಹೇರಳ ಲಾಭ ಮತ್ತು ತಲೆಬಿಸಿಯ ವಾತಾವರಣಗಳೆರಡೂ ಇರುವುದು.

**ಕನ್ಯಾ:** ತರಕಾರಿ ಬೆಳೆಗಾರರಿಗೆ ನಷ್ಟ ಸಂಭವ. ರಾಜಕೀಯ ಸಮೂಹದವರು ಯಾವುದೇ ಗಲಭೆಗೆ ಕಾರಣರಾಗದಂತೆ ಇರುವುದು ಉತ್ತಮ. ಪ್ರಭಾವಿ ವ್ಯಕ್ತಿಗಳ ಸಂಪರ್ಕ ನಿಮ್ಮ ವೈಯಕ್ತಿಕ ಬೆಳವಣಿಗೆಗೆ ಉಪಯೋಗವಾಗುವುದು.

**ತುಲಾ:** ವೃತ್ತಿಯನ್ನು ಸವಾಲೆಂಬಂತೆ ಯಾವುದೇ ವಿಶ್ರಾಂತಿಗಳಿಲ್ಲದೆ ಸ್ವೀಕರಿಸುವ ಸನ್ನಿವೇಶಗಳು ಎದುರಾಗುತ್ತದೆ. ಮಿತ ಆಹಾರ ಸೇವನೆಯಿಂದ ಆರೋಗ್ಯ ಉತ್ತಮವಾಗಿರುವುದು. ದಿನೇ ದಿನೆ ಸಂಸಾರದಲ್ಲಿ ನೆಮ್ಮದಿ ವೃದ್ಧಿಯಾಗಲಿದೆ.

**ವೃಶ್ಚಿಕ:** ಅಲಂಕಾರಿಕ ವಿಭಾಗದಲ್ಲಿ ಸ್ವ ಸಾಮರ್ಥ್ಯವನ್ನು ಉತ್ತಮ ರೀತಿಯಲ್ಲಿ ಪ್ರದರ್ಶಿಸಿದಲ್ಲಿ, ಹುದ್ದೆಯನ್ನು ಸುಲಭವಾಗಿ ಪಡೆದುಕೊಳ್ಳುವಿರಿ. ಬರವಣಿಗೆ ಕೆಲಸದವರು ಸಾಕ್ಷಿಗಳ ಅಧ್ಯಯನ ಸಮಂಜಸವಾಗಿ ಮಾಡುವುದು ಉತ್ತಮ.

**ಧನು:** ಲೇವಾದೇವಿ ವ್ಯವಹಾರಗಳಲ್ಲಿ ಹೆಚ್ಚಿನ ಜಾಗ್ರತೆ ವಹಿಸಬೇಕಾಗುವುದು. ವೃತ್ತಿ ವಿಷಯದಲ್ಲಿ ಒಪ್ಪಂದ ಏರ್ಪಡಿಸುವ ಬಗ್ಗೆ ಅಭಿಪ್ರಾಯ ಬರುವುದು, ಸೂಕ್ಷ್ಮವಾದ ಮತ್ತು ಮಹತ್ವದ ವಿಷಯವಾದ್ದರಿಂದ ಗಂಭೀರ ಚಿಂತನೆ ಅಗತ್ಯ.

**ಮಕರ:** ಪ್ರದರ್ಶನ ಮಾರಾಟ ಮಳಿಗೆಯವರಿಗೆ ಲೋಹದ ಉತ್ಪನ್ನ ಮಾರಾಟದಿಂದ ನಿರೀಕ್ಷೆಗೂ ಮೀರಿದ ಲಾಭ. ಹೊಸ ಜಾಗ ಅಥವಾ ಹೊರ ರಾಜ್ಯದಲ್ಲಿ ಕೆಲಸ ನಿರ್ವಹಿಸಬೇಕಾಗುವುದು. ಹೊಸ ಯೋಜನೆಗಳು ಕೈಗೂಡಲಿವೆ.

**ಕುಂಭ:** ಸೇವಾನಿರತ ವ್ಯಕ್ತಿಗಳಿಗೆ ಜನಪ್ರಿಯತೆ ಹೆಚ್ಚುತ್ತದೆ. ಮಕ್ಕಳ ಅನಾರೋಗ್ಯದ ಕಾರಣ ಗಾಬರಿಯ ವಾತಾವರಣ ಸೃಷ್ಟಿಯಾಗಬಹುದು. ನಿಮ್ಮ ಬಹುಮಟ್ಟಿನ ಪ್ರಯತ್ನದಿಂದ ಆರ್ಥಿಕತೆಯಲ್ಲಿ ಸುಧಾರಣೆಯಾಗುವುದು.

**ಮೀನ:** ನಿಮ್ಮ ಅಭಿರುಚಿಗೆ ತಕ್ಕಂಥ ವ್ಯಕ್ತಿತ್ವ ಹೊಂದಿದವರೊಂದಿಗೆ ವ್ಯವಹರಿಸುವುದು ಹೆಚ್ಚು ಸೂಕ್ತ. ಅನಿರೀಕ್ಷಿತ ಘಟನೆಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಡುವ ಅವಶ್ಯಕತೆಯಿಲ್ಲ. ಸಂಜೆಯೊಳಗೆ ಮನಸ್ಸಿಗೆ ಮುದ ನೀಡುವ ಸುದ್ದಿ ಬರಲಿದೆ.

## ಪದಬಂಧ 5090

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ಆಕಾಶದಿಂದ ಬೀಳುವ ತೇಜೋಪುಂಜವಾದ ವಸ್ತು (2)
3.ಹಾಡಿನ ಧಾಟಿಯಲ್ಲೇ ಮೂಡಿದ ಒಲವು(2)
5.ಭೇದ ಭಾವವಿಲ್ಲದಿರುವಿಕೆ (5)
6.ಸಲ್ಲಾಪದ ಮಾತುಕತೆ (3)
7.ಮಾವು ಅಥವಾ ನೆಲ್ಲಿಕಾಯಿಯ ಮುರಬ್ಬ (3)
8.ಸಂಸ್ಥೆಗಳ ಹಕ್ಕಿನ ಮೇಲೆ ಸರ್ಕಾರ ಸ್ವಾಮ್ಯವನ್ನು ಸ್ಥಾಪಿಸುವುದು (5)
9.ಚಂದ್ರ ಸೂರ್ಯರ ಸುತ್ತ ಇರುವ ಪ್ರಭಾಮಂಡಲ (3)
10.ಕೃಪಾ ದೃಷ್ಟಿಯಿದು (3)
13.ಹಲ್ಲುಗಳನ್ನು ತೊಳೆಯುವುದು (5)
14.ವಿಷ್ಣುವಿನ ದಶಾವತಾರಗಳಲ್ಲಿ ಕೊನೆಯದು (2)
15.ಮಾತಿಲ್ಲದಿರುವಿಕೆ (2)

**ಮೇಲಿಂದ ಕೆಳಕ್ಕೆ**
1.ಆಹಾರವನ್ನು ಸೇವಿಸದಿರುವಿಕೆ (4)
2.ಕುಂಕುಮ ಅಥವಾ ಅರಿಶಿಣ ಸವರಿದ ಅಕ್ಕಿ (3)
4.ನೇಣಿಗೇರಿಸುವ ಕಂಬ (4)
5.ಯಾವುದೇ ಅಪರಾಧ ಮಾಡದಿರುವವನು (5)
7.ಸ್ವಭಾವವನ್ನು ಹೊಗಳಿ ಹೇಳುವುದು (5)
9.ಸಂಪೂರ್ಣವಾಗಿ ಪಕ್ವವಾಗಿರುವುದು (4)
11.ತಪ್ಪನ್ನು ಕ್ಷಮಿಸುವುದು (4)
12.ಪಂಡಿತ ಇಲ್ಲಿದ್ದಾನೆ (3)



### 5089ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:** 1.ಕಲಹ 4.ಸದಾಶಯ 6.ಮರೀಚಿಕೆ 8.ಖಚಿತ 10.ವ್ಯಾಘ್ರ 11.ಕರು 12.ಗುಲಾಮ 14.ಹಸುಗೂಸು 18.ಮಹಾರಾಜ 19.ರುಮಾಲು

**ಮೇಲಿಂದ ಕೆಳಕ್ಕೆ:** 1.ಕರುಬು 2.ಹಸನ್ಮುಖ 3.ಇಣಚಿ 5.ಯಮ 7.ಕೆಸರು 9.ತರಗು 10.ವ್ಯಾಮೋಹ 13.ಮಹಜರು 15.ಸುಶ್ರಾವ್ಯ 16.ಸುಮ 17.ಬಯಲು

## ಸುಡೊಕು 5476

| | | | | | | | | |
|---|---|---|---|---|---|---|---|---|
| | | | | 2 | | 3 | | 5 |
| 3 | | 6 | 5 | | 8 | | 1 | |
| | 4 | | | 7 | 3 | 2 | | 6 |
| | 6 | | | | | | 7 | 9 |
| 9 | | 1 | | 8 | | | | |
| | | | | | | 1 | | 8 |
| | | 2 | 3 | | 7 | | 5 | |
| 7 | 1 | | | | | 6 | | 3 |
| | | 3 | 4 | | 2 | | 9 | 1 |

**ಆಡುವುದು ಹೇಗೆ?**

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5475 ಸುಡೊಕು

| | | | | | | | | |
|---|---|---|---|---|---|---|---|---|
| 4 | 9 | 7 | 1 | 8 | 3 | 5 | 2 | 6 |
| 2 | 3 | 1 | 4 | 6 | 5 | 9 | 7 | 8 |
| 6 | 8 | 5 | 7 | 9 | 2 | 4 | 1 | 3 |
| 9 | 2 | 4 | 6 | 7 | 8 | 1 | 3 | 5 |
| 5 | 7 | 3 | 2 | 4 | 1 | 8 | 6 | 9 |
| 8 | 1 | 6 | 3 | 5 | 9 | 7 | 4 | 2 |
| 1 | 6 | 9 | 5 | 2 | 7 | 3 | 8 | 4 |
| 3 | 4 | 8 | 9 | 1 | 6 | 2 | 5 | 7 |
| 7 | 5 | 2 | 8 | 3 | 4 | 6 | 9 | 1 |

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಿಜೆಪಿ ಮುಖಂಡನ ರೆಸಾರ್ಟ್‌ನಲ್ಲಿ ಸ್ವಾಗತಕಾರಿಣಿಯಾಗಿದ್ದ ಯುವತಿಯ ಮೃತದೇಹ ನಾಲೆಯಲ್ಲಿ ಪತ್ತೆ

# ಲೈಂಗಿಕ ಕ್ರಿಯೆಗೆ ಒಪ್ಪದ್ದಕ್ಕೆ ಯುವತಿ ಕೊಲೆ

ಪ್ರಜಾವಾಣಿ ವಾರ್ತೆ

**ಲಖನೌ/ಡೆಹ್ರಾಡೂನ್:** 'ರೆಸಾರ್ಟ್‌ಗೆ ಭೇಟಿ ನೀಡಿದ್ದ ಅತಿಥಿಗಳ ಜೊತೆ ಲೈಂಗಿಕ ಕ್ರಿಯೆ ನಡೆಸಲು ನಿರಾಕರಿಸಿದ್ದಕ್ಕೆ ರೆಸಾರ್ಟ್‌ನ ಸ್ವಾಗತಕಾರಿಣಿ ಅಂಕಿತಾ ಭಂಡಾರಿ ಎಂಬ ಯುವತಿಯನ್ನು ಕೊಲೆ ಮಾಡಲಾಗಿದೆ' ಎಂದು ಉತ್ತರಾಖಂಡ ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಶೋಕ್ ಕುಮಾರ್ ತಿಳಿಸಿದ್ದಾರೆ.

ಪೌರಿ ಗಡವಾಲ್ ಜಿಲ್ಲೆಯ ಭೋಗ್‌ಪುರದಲ್ಲಿರುವ ವನಂತರ ರೆಸಾರ್ಟ್‌ನಲ್ಲಿ ಈ ಘಟನೆ ನಡೆದಿದ್ದು, ರೆಸಾರ್ಟ್‌ನ ಮಾಲೀಕ ಪುಲ್ಕಿತ್ ಆರ್ಯ, ಮ್ಯಾನೇಜರ್ ಸೌರಭ್ ಭಾಸ್ಕರ್ ಮತ್ತು ಉದ್ಯೋಗಿ ಅಂಕಿತ್ ಗುಪ್ತಾ ಎಂಬುವವರನ್ನು ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ. ಮೂವರನ್ನೂ 14 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಪ್ರಮುಖ ಆರೋಪಿ ಪುಲ್ಕಿತ್, ಉತ್ತರಾಖಂಡ ರಾಜ್ಯ ಬಿಜೆಪಿಯ ಹಿರಿಯ ಮುಖಂಡ ವಿನೋದ್ ಆರ್ಯ ಅವರ ಮಗ.

ರಿಷಿಕೇಶ ಸಮೀಪದ ಚೀಲಾ ನಾಲೆಯಲ್ಲಿ 19 ವರ್ಷದ ಅಂಕಿತಾ ಮೃತದೇಹ ಶನಿವಾರ ಪತ್ತೆಯಾಗಿದ್ದು, ಎಸ್‌ಡಿಆರ್‌ಎಫ್ ಸಿಬ್ಬಂದಿ ಅದನ್ನು ಹೊರತೆಗೆದಿದ್ದಾರೆ.

'ಸೆಪ್ಟೆಂಬರ್ 18ರಂದು ತನ್ನ ಸ್ನೇಹಿತರೊಬ್ಬರಿಗೆ ಕರೆ ಮಾಡಿದ್ದ ಅಂಕಿತಾ, ರೆಸಾರ್ಟ್‌ಗೆ ಬರುವ ಅತಿಥಿಗಳ ಜೊತೆ ಲೈಂಗಿಕ ಕ್ರಿಯೆ ನಡೆಸುವಂತೆ ಪುಲ್ಕಿತ್ ಹಾಗೂ ರೆಸಾರ್ಟ್‌ನ ಮ್ಯಾನೇಜರ್ ಪೀಡಿಸುತ್ತಿರುವ ವಿಚಾರವನ್ನು ಹೇಳಿದ್ದಳು. ತಾನು ಸಂಕಷ್ಟಕ್ಕೆ ಸಿಲುಕಿರುವುದಾಗಿಯೂ ಅಳಲು ತೋಡಿಕೊಂಡಿದ್ದಳು' ಎಂದು ಡಿಜಿಪಿ ಅಶೋಕ್ ಕುಮಾರ್ ತಿಳಿಸಿದ್ದಾರೆ.

'ಅದೇ ದಿನ ರಾತ್ರಿ 8.30ಕ್ಕೆ ಕರೆ ಮಾಡಿದಾಗ ಅಂಕಿತಾ ಮೊಬೈಲ್ ಸಂಖ್ಯೆ ಸಂಪರ್ಕಕ್ಕೆ ಸಿಗಲಿಲ್ಲ. ಕೂಡಲೇ ಪುಲ್ಕಿತ್‌ಗೆ ಕರೆ ಮಾಡಿದಾಗ, ಆಕೆ ಕೊಠಡಿಗೆ ತೆರಳಿದ್ದಾಗಿ ಹೇಳಿದ್ದ. ಮರುದಿನ ಬೆಳಿಗ್ಗೆ ಮತ್ತೆ ಪುಲ್ಕಿತ್‌ಗೆ ಹಲವು ಬಾರಿ ಕರೆ ಮಾಡಿದೆ. ಆತನ ಮೊಬೈಲ್ ಸ್ವಿಚ್ ಆಫ್ ಆಗಿತ್ತು. ಬಳಿಕ ಮತ್ತೊಬ್ಬ ಆರೋಪಿ ಅಂಕಿತ್‌ಗೆ ಕರೆ ಮಾಡಿದೆ. ಅಂಕಿತಾ ಜಿಮ್‌ನಲ್ಲಿ ಇರುವುದಾಗಿ ಆತ ಹೇಳಿದ್ದ. ರೆಸಾರ್ಟ್‌ನ ಬಾಣಸಿಗನಿಗೆ ಕರೆ ಮಾಡಿದಾಗ ಆಕೆಯನ್ನು ರೆಸಾರ್ಟ್‌ನಲ್ಲಿ ನೋಡೇ ಇಲ್ಲ ಎಂದು ತಿಳಿಸಿದ್ದಾಗಿ ಅಂಕಿತಾಳ ಸ್ನೇಹಿತ ಮಾಹಿತಿ ನೀಡಿದ್ದಾರೆ' ಎಂದು ಅವರು ವಿವರಿಸಿದ್ದಾರೆ.

ಎಸ್‌ಡಿಆರ್‌ಎಫ್ ಸಿಬ್ಬಂದಿ ಅಂಕಿತಾಳ ಮೃತದೇಹವನ್ನು ನಾಲೆಯಿಂದ ಹೊರತೆಗೆದರು–ಪಿಟಿಐ ಚಿತ್ರ

**ತನಿಖೆಗೆ ಎಸ್‌ಐಟಿ:** ಪ್ರಕರಣವನ್ನು ವಿಶೇಷ ತನಿಖಾ ತಂಡಕ್ಕೆ ವಹಿಸಿ ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಶನಿವಾರ ಆದೇಶ ಹೊರಡಿಸಿದ್ದಾರೆ. ಡಿಐಜಿ ಪಿ.ರೇಣುಕಾ ದೇವಿ ನೇತೃತ್ವದ ತಂಡವು ಈ ಕುರಿತು ತನಿಖೆ ಕೈಗೊಳ್ಳಲಿದೆ.

ತನಿಖೆ ಆರಂಭಿಸಿರುವ ಪೊಲೀಸರು ರೆಸಾರ್ಟ್‌ಗೆ ಭೇಟಿ ನೀಡಿ ಅಲ್ಲಿನ ಮಹಿಳಾ ಉದ್ಯೋಗಿಗಳ ಹೇಳಿಕೆ ಪಡೆದಿದ್ದಾರೆ ಎನ್ನಲಾಗಿದೆ.

> **ಮಹಿಳೆಯರು ಸುರಕ್ಷಿತವಾಗಿದ್ದಾಗ ಮಾತ್ರ ದೇಶ ಪ್ರಗತಿ ಕಾಣುತ್ತದೆ. ಉತ್ತರಾಖಂಡ, ಉತ್ತರ ಪ್ರದೇಶದಲ್ಲಿ ನಡೆದಿರುವ ಘಟನೆಗಳು ಆಘಾತ ಉಂಟು ಮಾಡಿವೆ.**
>
> **ರಾಹುಲ್ ಗಾಂಧಿ,** ಕಾಂಗ್ರೆಸ್ ಮುಖಂಡ

**ಕಾಂಗ್ರೆಸ್ ಪ್ರತಿಭಟನೆ:** ಘಟನೆ ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರು ಶನಿವಾರ ಪ್ರತಿಭಟನೆ ನಡೆಸಿದ್ದಾರೆ.

'ಯುವತಿಯು ಸೆಪ್ಟೆಂಬರ್ 18ರಂದೇ ನಾಪತ್ತೆಯಾಗಿದ್ದಾಳೆ. ನಾಲ್ಕು ದಿನಗಳ ನಂತರ ಈ ಸಂಬಂಧ ಪ್ರಕರಣ ದಾಖಲಿಸಲಾಗಿದೆ. ರಾಜ್ಯ ಸರ್ಕಾರವು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿಲ್ಲ ಎಂಬುದಕ್ಕೆ ಇದು ಸಾಕ್ಷಿ. ರಾಜ್ಯವು ಮಹಿಳೆಯರ ಪಾಲಿಗೆ ಅಷ್ಟು ಸುರಕ್ಷಿತವಾಗಿಲ್ಲ ಎಂಬುದೂ ಇದರಿಂದ ಮನದಟ್ಟಾಗುತ್ತದೆ' ಎಂದು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಕರಣ್ ಮಹ್ರಾ ದೂರಿದ್ದಾರೆ.

## ಪೊಲೀಸ್ ವಾಹನದ ಮೇಲೆ ದಾಳಿ

ಅಂಕಿತಾ ಕೊಲೆ ವಿಚಾರ ಗೊತ್ತಾದ ಕೂಡಲೇ ಉತ್ತರಾಖಂಡದ ಹಲವೆಡೆ ಪ್ರತಿಭಟನೆಗಳು ನಡೆದಿವೆ. ಪೊಲೀಸರು ಆರೋಪಿಗಳನ್ನು ಬಂಧಿಸಿ ನ್ಯಾಯಾಲಯಕ್ಕೆ ಕರೆದೊಯ್ಯುವಾಗ ಪ್ರತಿಭಟನಕಾರರ ಗುಂಪೊಂದು ಪೊಲೀಸ್ ವಾಹನದ ಮೇಲೆ ದಾಳಿ ನಡೆಸಿದೆ. ಕಾರಿನ ಗಾಜುಗಳನ್ನು ಒಡೆದು ಹಾಕಿದ ಉದ್ರಿಕ್ತರು, ಆರೋಪಿಗಳನ್ನು ಕಾರಿನಿಂದ ಆಚೆ ಎಳೆಯಲೂ ಪ್ರಯತ್ನಿಸಿದ್ದಾರೆ.

ಯಮಕೇಶ್ವರ ಕ್ಷೇತ್ರದ ಶಾಸಕಿ ರೇಣು ಬಿಷ್ಠ್ ಅವರು ಚೀಲಾ ನಾಲೆ ಮಾರ್ಗವಾಗಿ ತೆರಳುತ್ತಿದ್ದಾಗ ಪ್ರತಿಭಟನಕಾರರ ಗುಂಪು ಅವರ ಕಾರಿನ ಮೇಲೆ ದಾಳಿ ನಡೆಸಿ ಗಾಜುಗಳನ್ನು ಒಡೆದು ಹಾಕಿದೆ. ಘಟನೆಯಲ್ಲಿ ರೇಣು ಅವರಿಗೆ ಯಾವುದೇ ಅಪಾಯವಾಗಿಲ್ಲ. ಪೊಲೀಸರ ಬೆಂಗಾವಲಿನಲ್ಲಿ ಅವರನ್ನು ಸುರಕ್ಷಿತ ಸ್ಥಳಕ್ಕೆ ಕರೆದೊಯ್ಯಲಾಗಿದೆ.

ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಮಹಿಳೆಯರ ಗುಂಪೊಂದು ಆರೋಪಿಗಳನ್ನು ಮರಣದಂಡನೆಗೆ ಗುರಿಪಡಿಸಬೇಕೆಂದು ಒತ್ತಾಯಿಸಿದೆ.

ಭೋಗ್‌ಪುರದಲ್ಲಿರುವ ರೆಸಾರ್ಟ್ ಮೇಲೆ ಸ್ಥಳೀಯರು ಕಲ್ಲು ತೂರಾಟ ನಡೆಸಿದ್ದು, ಕಿಟಕಿ ಗಾಜುಗಳು ಪುಡಿಯಾಗಿವೆ. ರೆಸಾರ್ಟ್‌ನ ಕೆಲ ಭಾಗಗಳನ್ನು ಅನಧಿಕೃತವಾಗಿ ನಿರ್ಮಿಸಿರುವ ಆರೋಪ ಕೇಳಿ ಬಂದಿದ್ದು, ಅಧಿಕಾರಿಗಳು ಶುಕ್ರವಾರ ರಾತ್ರಿ ಅವುಗಳ ತೆರವು ಕಾರ್ಯಾಚರಣೆ ನಡೆಸಿದ್ದಾರೆ.

ಸ್ಥಳೀಯರು ಆರೋಪಿ ಪುಲ್ಕಿತ್ ಆರ್ಯ ಒಡೆತನದ ಉಪ್ಪಿನಕಾಯಿ ಘಟಕಕ್ಕೆ ಬೆಂಕಿ ಹಚ್ಚಿರುವುದು –ಪಿಟಿಐ ಚಿತ್ರ

ರೆಸಾರ್ಟ್ ಸಮೀಪದಲ್ಲೇ ಆರೋಪಿ ಪುಲ್ಕಿತ್ ಒಡೆತನದ ಉಪ್ಪಿನ ಕಾಯಿ ತಯಾರಿಕಾ ಘಟಕವಿದ್ದು, ಅದಕ್ಕೆ ಪ್ರತಿಭಟನಕಾರರು ಶನಿವಾರ ಬೆಂಕಿ ಹಚ್ಚಿದ್ದಾರೆ ಎಂದು ಹೇಳಲಾಗಿದೆ.

## ನೆರವಿಗೆ ಅಂಗಲಾಚಿದ್ದ ಯುವತಿ

'ಸೆಪ್ಟೆಂಬರ್ 18ರಂದು ಸಂಜೆ ಆರೋಪಿಗಳು ಅಂಕಿತಾಳನ್ನು ಕರೆದುಕೊಂಡು ರೆಸಾರ್ಟ್‌ನಿಂದ ಹೊರ ಹೋಗಿದ್ದರು. ಚೀಲಾ ನಾಲೆ ಬಳಿ ಕಾರು ನಿಲುಗಡೆ ಮಾಡಿದ್ದರು. ಅಲ್ಲಿ ಅಂಕಿತಾ ಮತ್ತು ಪುಲ್ಕಿತ್ ನಡುವೆ ಜಗಳ ನಡೆದಿತ್ತು. ಕೋಪಗೊಂಡಿದ್ದ ಪುಲ್ಕಿತ್ ಆಕೆಯನ್ನು ನಾಲೆಗೆ ತಳ್ಳಿದ್ದ. ಬಳಿಕ ಮೂವರು ಅಲ್ಲಿಂದ ವಾಪಸ್ಸಾಗಿದ್ದರು. ಆಕೆ ಸಹಾಯಕ್ಕಾಗಿ ಅಂಗಲಾಚಿದರೂ ಆರೋಪಿಗಳ ಮನಸ್ಸು ಕರಗಿರಲಿಲ್ಲ' ಎಂದು ಮೂಲಗಳು ಹೇಳಿವೆ.

'ಪೊಲೀಸರ ದಿಕ್ಕುತಪ್ಪಿಸುವ ಉದ್ದೇಶದಿಂದ ಪುಲ್ಕಿತ್, ರೆಸಾರ್ಟ್‌ಗೆ ಮರಳಿದ ಕೂಡಲೇ ಠಾಣೆಗೆ ಹೋಗಿದ್ದ. ಅಲ್ಲಿ ಅಂಕಿತಾ ಕಾಣೆಯಾಗಿರುವ ಕುರಿತು ದೂರು ದಾಖಲಿಸಿದ್ದ. ತನಿಖೆ ಕೈಗೊಂಡಿದ್ದ ಅಧಿಕಾರಿಗಳಿಗೆ ಪುಲ್ಕಿತ್ ಮೇಲೆ ಅನುಮಾನ ಮೂಡಿತ್ತು. ಹೀಗಾಗಿ ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದರು. ಈ ವೇಳೆ ಆತ ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿದ್ದ' ಎಂದೂ ತಿಳಿಸಿವೆ.

## ಬಿಜೆಪಿಯಿಂದ ಆರೋಪಿಯ ಅಪ್ಪ, ಅಣ್ಣ ವಜಾ

ಪುಲ್ಕಿತ್ ಬಂಧನದ ಬೆನ್ನಲ್ಲೇ ಬಿಜೆಪಿಯು ಆತನ ತಂದೆ ವಿನೋದ್ ಆರ್ಯ ಹಾಗೂ ಅಣ್ಣ ಅಂಕಿತ್ ಆರ್ಯ ಅವರನ್ನು ಪಕ್ಷದಿಂದ ವಜಾಗೊಳಿಸಿದೆ.

ಅಂಕಿತ್ ಅವರು ಉತ್ತರಾಖಂಡ ಹಿಂದುಳಿದ ವರ್ಗಗಳ ಆಯೋಗದ ಉಪಾಧ್ಯಕ್ಷರಾಗಿದ್ದರು.

## 'ಕೈ' ಅಧ್ಯಕ್ಷ ಸ್ಥಾನ: 30ರಂದು ತರೂರ್ ನಾಮಪತ್ರ?

**ನವದೆಹಲಿ (ಪಿಟಿಐ):** ಹಿರಿಯ ಕಾಂಗ್ರೆಸ್ ಮುಖಂಡ ಶಶಿ ತರೂರ್ ಅವರು ಎಐಸಿಸಿ ಅಧ್ಯಕ್ಷ ಚುನಾವಣೆಯಲ್ಲಿ ಸ್ಪರ್ಧಿಸುವ ಸಂಬಂಧ ಇದೇ 30ರಂದು ನಾಮಪತ್ರ ಸಲ್ಲಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ತರೂರ್ ಅವರ ಸಹಾಯಕ ಆಲಿಂ ಜವೇರಿ ಅವರು ಪಕ್ಷದ ಕೇಂದ್ರೀಯ ಚುನಾವಣಾ ಸಮಿತಿಯ ಅಧ್ಯಕ್ಷ ಮಧುಸೂದನ್ ಮಿಸ್ತ್ರಿ ಅವರ ಕಚೇರಿಗೆ ಹೋಗಿ ಅರ್ಜಿಗಳನ್ನು ಪಡೆದಿದ್ದಾರೆ.

10 ಪ್ರದೇಶ ಕಾಂಗ್ರೆಸ್ ಸಮಿತಿಗಳ ಪ್ರತಿನಿಧಿಗಳು ಅಭ್ಯರ್ಥಿಯನ್ನು ಅನುಮೋದಿಸಿ ಸಹಿ ಹಾಕಬೇಕಾಗುತ್ತದೆ. ಈ ಕಾರ್ಯಕ್ಕಾಗಿ ತರೂರ್ ಅವರಿಗೆ ಕೆಲ ದಿನಗಳು ಬೇಕಾಗುವುದರಿಂದ ಅವರು ಇದೇ 30ರಂದು ನಾಮಪತ್ರ ಸಲ್ಲಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಎರಡು ದಶಕಗಳ ಬಳಿಕ, ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ ನಡೆಯುತ್ತಿದೆ. ಈಗಾಗಲೇ ತಾವು ಸ್ಪರ್ಧಿಸುವುದಾಗಿ ರಾಜಸ್ಥಾನದ ಮುಖ್ಯಮಂತ್ರಿ ಅಶೋಕ ಗೆಹಲೋತ್ ಹೇಳಿದ್ದಾರೆ. ಗೆಹಲೋತ್ ಮತ್ತು ತರೂರ್ ಅವರ ನಡುವೆ ಅಧ್ಯಕ್ಷ ಸ್ಥಾನಕ್ಕೆ ತೀವ್ರ ಪೈಪೋಟಿ ನಡೆಯುವ ಸಾಧ್ಯತೆ ಇದೆ. ಕಾಂಗ್ರೆಸ್ ಕೊನೆಯದಾಗಿ ನವೆಂಬರ್ 2000ರಲ್ಲಿ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆಯನ್ನು ಕಂಡಿತ್ತು. ಜಿತೇಂದ್ರ ಪ್ರಸಾದ್ ಅವರು 2000ರಲ್ಲಿ ಸೋನಿಯಾ ಗಾಂಧಿ ಅವರ ವಿರುದ್ಧ ಸೋತಿದ್ದರು. ಅದಕ್ಕೂ ಮೊದಲು, ಸೀತಾರಾಮ್ ಕೇಸರಿ ಅವರು 1997ರಲ್ಲಿ ಶರದ್ ಪವಾರ್ ಮತ್ತು ರಾಜೇಶ್ ಪೈಲಟ್ ಅವರನ್ನು ಸೋಲಿಸಿದ್ದರು.

**ಧ್ವನಿ ಎತ್ತದಿರಿ:** ಎಐಸಿಸಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವ ಸಹೋದ್ಯೋಗಿಗಳ ವಿರುದ್ಧ ಪಕ್ಷದ ಯಾವುದೇ ನಾಯಕರು ಧ್ವನಿ ಎತ್ತಬಾರದು ಎಂದು ಕಾಂಗ್ರೆಸ್‌ನ ಹಿರಿಯ ನಾಯಕ ಅಭಿಷೇಕ್ ಮನು ಸಿಂಘ್ವಿ ಶನಿವಾರ ಆಗ್ರಹಿಸಿದರು.

'ನಾವು ಯಾವಾಗಲೂ ಮುಕ್ತ ಮತ್ತು ನ್ಯಾಯಸಮ್ಮತ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಕಾಪಾಡಿಕೊಳ್ಳಬೇಕು' ಎಂದು ಅವರು ಹೇಳಿದ್ದಾರೆ. ಕೆಲ ದಿನಗಳ ಹಿಂದೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಅವರೂ ಇದೇ ರೀತಿ ಹೇಳಿದ್ದರು.

## ಪೇರಂಬ್ರದಿಂದ 'ಭಾರತ್ ಜೋಡೊ' ಪುನರಾರಂಭಿಸಿದ ರಾಹುಲ್

**ತ್ರಿಶ್ಯೂರ್ (ಪಿಟಿಐ):** ಒಂದು ದಿನದ ವಿಶ್ರಾಂತಿಯ ಬಳಿಕ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಕೇರಳದ ಪೇರಂಬ್ರದಿಂದ 'ಭಾರತ್ ಜೋಡೊ ಯಾತ್ರೆ'ಯನ್ನು ಶನಿವಾರ ಪುನರಾರಂಭಿಸಿದರು.

ಯಾತ್ರೆಯ ಅಂಗವಾಗಿ ನಡೆದ ಮೆರವಣಿಗೆಯಲ್ಲಿ ಪಕ್ಷದ ನೂರಾರು ಕಾರ್ಯಕರ್ತರು ರಾಹುಲ್ ಅವರೊಂದಿಗೆ ಪಾಲ್ಗೊಂಡರು.

'ವಿಶ್ರಾಂತಿಯ ನಂತರ, ಭಾರತ್ ಜೋಡೊ ಯಾತ್ರೆಯ 17ನೇ ದಿನವು ಇಂದು ಬೆಳಗ್ಗೆ 6.35ರ ಸುಮಾರಿಗೆ ತ್ರಿಶ್ಯೂರ್ ಜಿಲ್ಲೆಯ ಪೇರಂಬ್ರ ಜಂಕ್ಷನ್‌ನಿಂದ ಪ್ರಾರಂಭವಾಯಿತು' ಎಂದು ಕಾಂಗ್ರೆಸ್ ಹಿರಿಯ ನಾಯಕ ಜೈರಾಮ್ ರಮೇಶ್ ಟ್ವೀಟ್ ಮಾಡಿದ್ದಾರೆ.

ವಿಶ್ರಾಂತಿ ದಿನವಾದ ಶುಕ್ರವಾರ ಚಾಲಕುಡಿಯಲ್ಲಿ ಪಾದಯಾತ್ರೆಯಲ್ಲಿ ಪಾಲ್ಗೊಂಡವರಿಗೆ ಹಾಗೂ ಸೇವಾದಳದ ತಂಡಕ್ಕೆ ವೈದ್ಯಕೀಯ ಶಿಬಿರ ಏರ್ಪಡಿಸಲಾಗಿತ್ತು. ಸೆಪ್ಟೆಂಬರ್ 7ರಂದು ಯಾತ್ರೆ ಆರಂಭವಾದ ನಂತರ ಇದು ಎರಡನೇ ವಿಶ್ರಾಂತಿ ದಿನವಾಗಿತ್ತು. ಕಾಂಗ್ರೆಸ್‌ನ ಭಾರತ್ ಜೋಡೊ ಯಾತ್ರೆಯು 150 ದಿನಗಳಲ್ಲಿ 3,570 ಕಿ.ಮೀ ಕ್ರಮಿಸಲಿದೆ. ಯಾತ್ರೆಯು ಅಕ್ಟೋಬರ್ 1ರಂದು ಕರ್ನಾಟಕ ಪ್ರವೇಶಿಸಲಿದೆ.

## ಪ್ರವಾಸಿಗರಿಗೆ ತೆರೆದ ಭಾರತ–ಭೂತಾನ್ ಗಡಿ ಪ್ರದೇಶ

**ರಂಗಿಯಾ/ಗುವಾಹಟಿ (ಪಿಟಿಐ):** ಅಸ್ಸಾಂ ಬಳಿ ಭಾರತ-ಭೂತಾನ್ ಅಂತರರಾಷ್ಟ್ರೀಯ ಗಡಿಯ ಪ್ರವೇಶದ್ವಾರಗಳನ್ನು ಎರಡೂವರೆ ವರ್ಷಗಳ ಬಳಿಕ ಪ್ರವಾಸಿಗರಿಗಾಗಿ ಶುಕ್ರವಾರ ತೆರೆಯಲಾಯಿತು ಎಂದು ಅಧಿಕಾರಿಯೊಬ್ಬರು ಶನಿವಾರ ತಿಳಿಸಿದರು.

ಅಸ್ಸಾಂನ ನಾಲ್ಕು ಜಿಲ್ಲೆಗಳಲ್ಲಿ ಗಡಿಗಳ ದ್ವಾರಗಳನ್ನು ತೆರೆಯಲಾಗಿದೆ ಎಂದು ಗುವಾಹಟಿಯಲ್ಲಿಯ ಭೂತಾನ್ ಕಾನ್ಸುಲ್ ಜನರಲ್ ಜಿಗ್ಮೆ ಥಿನ್ಲೇ ನಮ್‌ಗ್ಯಾಲ್ ಘೋಷಿಸಿದರು. ಪ್ರವೇಶದ್ವಾರಗಳು ಬೆಳಿಗ್ಗೆ 9ರಿಂದ ಸಂಜೆ 5ರ ವರೆಗೆ ತೆರೆದಿರಲಿವೆ ಎಂದರು.

ಕೋವಿಡ್–19 ಕಾರಣಕ್ಕಾಗಿ ಗಡಿಯ ಪ್ರವೇಶದ್ವಾರಗಳನ್ನು ಮುಚ್ಚಲಾಗಿತ್ತು.

**ಪ್ರವಾಸ ಶುಲ್ಕ:** ಭೂತಾನ್ ಪ್ರವಾಸ ಕೈಗೊಳ್ಳುವ ಭಾರತೀಯರು ದಿನಕ್ಕೆ 1,200 ಶುಲ್ಕ ಭರಿಸಬೇಕು. ಇಮಿಗ್ರೇಷನ್ ಕೇಂದ್ರಗಳಲ್ಲಿ ಗುರುತಿನ ಪತ್ರ, ಪಾಸ್‌ಪೋರ್ಟ್ ಅಥವಾ ಇನ್ನಾವುದಾದರೂ ಗುರುತಿನ ಚೀಟಿ ಒದಗಿಸಬೇಕು. ಜೊತೆಯಲ್ಲಿ ಮಕ್ಕಳಿದ್ದರೆ ಅವರ ಜನನ ಪ್ರಮಾಣ ಪತ್ರವನ್ನು ಒದಗಿಸಬೇಕು.

## ಬಿಹಾರ: ಮಹಿಳೆಯ ಎರಡೂ ಕಿಡ್ನಿ ತೆಗೆದರು!

**ಪಟ್ನಾ/ಮುಜಾಫರ್‌ಪುರ (ಪಿಟಿಐ):** ಮುಜಾಫರ್‌ಪುರ ಜಿಲ್ಲೆಯ ಖಾಸಗಿ ಆಸ್ಪತ್ರೆಯೊಂದರಲ್ಲಿ ಮಹಿಳೆಯ ಎರಡೂ ಮೂತ್ರಪಿಂಡಗಳನ್ನೂ (ಕಿಡ್ನಿ) ತೆಗೆಯಲಾಗಿದೆ ಎಂಬ ಆರೋಪ ಕೇಳಿಬಂದಿದೆ. ಪ್ರಕರಣ ಸಂಬಂಧ ಆಸ್ಪತ್ರೆ ಮಾಲೀಕರು ಮತ್ತು ವೈದ್ಯರ ಬಂಧನಕ್ಕೆ ಬಿಹಾರ ಪೊಲೀಸರು ಮೂರು ವಿಶೇಷ ತಂಡ ರಚನೆ ಮಾಡಿದ್ದಾರೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಮೂವರು ಮಕ್ಕಳ ತಾಯಿ ಸುನಿತಾ ದೇವಿ ಎಂಬುವವರ ಕಿಡ್ನಿ ತೆಗೆದಿದ್ದು, ಸೆ.15ರಿಂದ ಸಂತ್ರಸ್ತೆಗೆ ಪಟ್ನಾ ಇಂದಿರಾಗಾಂಧಿ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ (ಐಜಿಐಎಂಎಸ್) ಚಿಕಿತ್ಸೆ ನೀಡಲಾಗುತ್ತಿದೆ. ಸುನಿತಾ ಅವರ ಆರೋಗ್ಯ ಚಿಂತಾಜನಕವಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ.

ಮಹಿಳೆ ಸೆ.3ರಂದು ಇಲ್ಲಿನ ಅನಧಿಕೃತ ಶುಭಕಂತ್ ಕ್ಲಿನಿಕ್‌ನಲ್ಲಿ ಗರ್ಭಕೋಶ ತೆಗೆಯುವ ಚಿಕಿತ್ಸೆಗೆ ಒಳಗಾಗಿದ್ದರು. ಈ ವೇಳೆ ಅವರ ಎರಡೂ ಕಿಡ್ನಿ ತೆಗೆಯಲಾಗಿದೆ ಎಂಬ ಆರೋಪ ಕೇಳಿಬಂದಿದೆ. ಆದರೆ ಇದನ್ನು ಖಚಿತಪಡಿಸಲು ಇನ್ನೂ ಹೆಚ್ಚಿನ ಪರೀಕ್ಷೆ ನಡೆಸಬೇಕು ಎಂದು ಐಜಿಐಎಂಎಸ್ ವೈದ್ಯರು ತಿಳಿಸಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

## ಬಿಜೆಪಿ ಅಣತಿ ಪಾಲಿಸುತ್ತಿರುವ ರಾಜ್ಯಪಾಲ: ಎಎಪಿ

**ಚಂಡೀಗಢ (ಪಿಟಿಐ):** ಪಂಜಾಬ್ ರಾಜ್ಯಪಾಲ ಬನ್ವಾರಿ ಲಾಲ್ ಪುರೋಹಿತ್ ಅವರ ವಿರುದ್ಧ ಶನಿವಾರ ವಾಗ್ದಾಳಿ ನಡೆಸಿರುವ ಪಂಜಾಬ್ ಸಚಿವ ಅಮನ್ ಅರೋರಾ, ರಾಜ್ಯಪಾಲರು ಬಿಜೆಪಿ ಅಣತಿಯಂತೆ ವರ್ತಿಸುತ್ತಿದ್ದಾರೆ ಎಂದರು.

'ಆಪರೇಷನ್ ಕಮಲ' ಯಶಸ್ವಿಗೊಳಿಸುವ ಸಲುವಾಗಿಯೇ ಸೆ. 22ರಂದು ನಿಗದಿಯಾಗಿದ್ದ ವಿಶೇಷ ಅಧಿವೇಶನವನ್ನು ರದ್ದುಗೊಳಿಸಿದ್ದಾರೆ' ಎಂದರು.

## ಮಕ್ಕಳ ಲೈಂಗಿಕ ದೌರ್ಜನ್ಯದ ವಿಡಿಯೊ ಹಂಚಿಕೆ: 19 ರಾಜ್ಯಗಳಲ್ಲಿ ಸಿಬಿಐ ದಾಳಿ

**ನವದೆಹಲಿ (ಪಿಟಿಐ):** ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯಕ್ಕೆ (ಸಿಎಸ್‌ಎಎಂ) ಸಂಬಂಧಿಸಿದ ಆಡಿಯೊ, ವಿಡಿಯೊಗಳನ್ನು ಆನ್‌ಲೈನ್‌ನಲ್ಲಿ ಹಂಚಿಕೊಳ್ಳುತ್ತಿದ್ದ ಆರೋಪದಡಿ ದೇಶದ 19 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶದ 56 ಸ್ಥಳಗಳ ಮೇಲೆ ಸಿಬಿಐ ಅಧಿಕಾರಿಗಳು ಶನಿವಾರ ದಾಳಿ ನಡೆಸಿದ್ದಾರೆ. ಆಪರೇಷನ್ 'ಮೇಘ ಚಕ್ರ'ದ ಭಾಗವಾಗಿ ಈ ಶೋಧ ನಡೆಸಲಾಗುತ್ತಿದೆ.

ಕ್ಲೌಡ್ ಸ್ಟೋರೇಜ್ ಬಳಸಿಕೊಂಡು ಇಂಟರ್ನೆಟ್‌ನಲ್ಲಿ ಸಿಎಸ್‌ಎಎಂ ದಂಧೆ ನಡೆಸುತ್ತಿದ್ದ ಪೆಡ್ಲರ್‌ಗಳ ವಿರುದ್ಧ ಕಳೆದ ವರ್ಷ ನಡೆದ 'ಆಪರೇಷನ್ ಕಾರ್ಬನ್' ದಾಳಿ ಸಮಯದಲ್ಲಿ ದೊರೆತ ಗುಪ್ತಚರ ಮಾಹಿತಿ ಮತ್ತು ಸಿಂಗಪುರದ ಇಂಟರ್‌ಪೋಲ್ ಮಾಹಿತಿ ಆಧರಿಸಿ ಈ ದಾಳಿ ನಡೆದಿದೆ.

ಮಕ್ಕಳನ್ನು ಲೈಂಗಿಕವಾಗಿ ದುರ್ಬಳಕೆ ಮಾಡಿಕೊಂಡು, ಆ ಕುರಿತ ಆಡಿಯೊ-ದೃಶ್ಯಗಳನ್ನು ಪ್ರಸಾರ ಮಾಡಲು ಪೆಡ್ಲರ್‌ಗಳು ಬಳಸುವ ಕ್ಲೌಡ್ ಸ್ಟೋರೇಜ್ ಸೌಲಭ್ಯಗಳನ್ನು ಗುರಿಯಾಗಿಸಿಕೊಂಡೂ ಈ ದಾಳಿಗಳು ನಡೆದಿವೆ.

ದೇಶದಾದ್ಯಂತ ಇರುವ ಸಿಎಸ್‌ಎಎಂ ಪೆಡ್ಲರ್‌ಗಳನ್ನು ಗುರಿಯಾಗಿಸಿಕೊಂಡು ಕಾರ್ಯಾಚರಣೆ ನಡೆಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇರಾನ್‌ನಲ್ಲಿ ಹಿಜಾಬ್ ವಿರೋಧಿ ಹೋರಾಟ: ಮೃತರ ಸಂಖ್ಯೆ 35ಕ್ಕೆ ಏರಿಕೆ

# 80 ಪಟ್ಟಣಗಳಿಗೆ ವ್ಯಾಪಿಸಿದ ಪ್ರತಿಭಟನೆ

**ಟೆಹರಾನ್ (ಪಿಟಿಐ):** ಹಿಜಾಬ್ ವಿರೋಧಿ ಹೋರಾಟವು ಇರಾನ್‌ನಲ್ಲಿ ಇನ್ನಷ್ಟು ತೀವ್ರಗೊಂಡಿದ್ದು, 80ಕ್ಕೂ ನಗರ, ಪಟ್ಟಣಗಳಿಗೆ ವ್ಯಾಪಿಸಿದೆ. ಸಾವಿರಾರು ಮಹಿಳೆಯರು ಬೀದಿಗಿಳಿದಿದ್ದಾರೆ. ಒಂದು ವಾರದಲ್ಲಿ 35 ಮಂದಿ ಪ್ರತಿಭಟನಾನಿರತರು ಮೃತಪಟ್ಟಿದ್ದಾರೆ ಎಂದು ಸ್ಥಳೀಯ ಬೋರ್ನಾ ಸುದ್ದಿಸಂಸ್ಥೆ ವರದಿ ಮಾಡಿದೆ.

ಪ್ರತಿಭಟನಕಾರರು ಇಸ್ಲಾಮಿಕ್ ಆಡಳಿತ ಮತ್ತು ಅದರ ಪ್ರಮುಖ ನಾಯಕ ಆಯತ್‌ಉಲ್ಲಾ ಅಲಿ ಖಮೇನಿ ಅವರ ವಿರುದ್ಧ ತೀವ್ರ ಆಕ್ರೋಶವನ್ನು ವ್ಯಕ್ತಪಡಿಸುತ್ತಿದ್ದು, ಘೋಷಣೆಗಳನ್ನು ಕೂಗಿದರು.

ಶನಿವಾರ ಇಲ್ಲಿನ ಮಾಶಾದ್, ಖುಚಾನ್, ಶಿರಾಜ್, ತಬ್ರೀಜ್ ಮತ್ತು ಕರಜ್‌ನಲ್ಲಿ ನಡೆದ ಸಂಘರ್ಷದಲ್ಲಿ ಐವರು ಭದ್ರತಾ ಸಿಬ್ಬಂದಿ ಕೂಡಾ ಮೃತಪಟ್ಟಿದ್ದಾರೆ. ಇಸ್ಲಾಮಿಕ್ ರಾಷ್ಟ್ರದಲ್ಲಿ ವೈಯಕ್ತಿಕ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಆಡಳಿತದ ಧೋರಣೆಯ ವಿರುದ್ಧದ ಆಕ್ರೋಶ ಮಹಿಳೆ ಅಮೀನಿ ಸಾವಿನೊಂದಿಗೆ ಸ್ಫೋಟಗೊಂಡಿದೆ.

ಇರಾನ್ ರಾಜಧಾನಿ ಟೆಹರಾನ್‌ನಲ್ಲಿ ಶನಿವಾರ ನಡೆದ ಪ್ರತಿಭಟನೆಯಲ್ಲಿ ಮಹಿಳೆಯರು ಸೇರಿ ನೂರಾರು ಮಂದಿ ಭಾಗವಹಿಸಿದ್ದರು –ಎಎಫ್‌ಪಿ ಚಿತ್ರ

ಇರಾನ್‌ನಲ್ಲಿ ಹಿಜಾಬ್ ಧರಿಸುವ ಕುರಿತು ಕಟ್ಟುನಿಟ್ಟಿನ ನಿಯಮವಿದೆ. ಹಿಜಾಬ್ ಧರಿಸಿಲ್ಲ ಎಂಬ ಕಾರಣಕ್ಕೆ 24 ವರ್ಷದ ಕುರ್ದಿಷ್ ಮಹಿಳೆ ಮಾಸಾ ಆಮೀನಿ ಅವರನ್ನು ನೈತಿಕ ಪೊಲೀಸರು ಠಾಣೆಗೆ ಒಯ್ದಿದ್ದರು. ಠಾಣೆಯಲ್ಲಿ ಪ್ರಜ್ಞಾಹೀನರಾಗಿದ್ದ ಆಕೆ ಬಳಿಕ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದರು. ಪೊಲೀಸರ ಹಲ್ಲೆ ಕಾರಣ ಎನ್ನಲಾಗಿದೆ.

ಇದರ ಹಿಂದೇ ಹಿಜಾಬ್ ಧರಿಸುವುದರ ಕುರಿತಂತೆ ಸರ್ಕಾರದ ಕಟ್ಟುಪಾಡು ವಿರುದ್ಧ ಮಹಿಳೆಯರು ಪ್ರತಿಭಟಸಿದ್ದು, ಬೀದಿಗಳಲ್ಲೇ ಹಿಜಾಬ್‌ಗೆ ಬೆಂಕಿ ಹಾಕಿದ್ದಾರೆ. ಇನ್ನೊಂದೆಡೆ ಪುರುಷ ಪ್ರತಿಭಟನಕಾರರು ಇಸ್ಲಾಮಿಕ್ ಸ್ಟೇಟ್‌ನ ಪ್ರಮುಖ ನಾಯಕನ ಭಾವಚಿತ್ರಗಳನ್ನು ಸುಟ್ಟು ಆಕ್ರೋಶ ವ್ಯಕ್ತಪಡಿಸಿದ್ದಾರೆ.

### ತ್ವರಿತ ತನಿಖೆ: ರೈಸಿ ಭರವಸೆ

**ನ್ಯೂಯಾರ್ಕ್ (ಪಿಟಿಐ):** ಪೊಲೀಸ್ ವಶದಲ್ಲಿ ಇದ್ದಾಗಲೇ ನಡೆದ ಮಹಿಳೆ ಆಮೀನಿ ಸಾವಿನ ಪ್ರಕರಣದ ತನಿಖೆಯನ್ನು ತ್ವರಿತಗತಿಯಲ್ಲಿ ನಡೆಸಲಾಗುವುದು ಎಂದು ಇರಾನ್ ಅಧ್ಯಕ್ಷ ಇಬ್ರಾಹಿಂ ರೈಸಿ ಹೇಳಿದ್ದಾರೆ.

ವಿಶ್ವಸಂಸ್ಥೆಯ ಸಾಮಾನ್ಯ ಅಧಿವೇಶನದಲ್ಲಿ ಭಾಗವಹಿಸಲು ಬಂದಿರುವ ಅವರು, 'ಮಹಿಳೆ ಆಮೀನಿ ಸಾವಿನ ಕುರಿತು ಪಾಶ್ಚಿಮಾತ್ಯ ದೇಶಗಳು ತೋರುತ್ತಿರುವ ಕಾಳಜಿಯು ಬೂಟಾಟಿಕೆಯಾಗಿದೆ' ಎಂದು ಟೀಕಿಸಿದರು.

**ಸಂಕ್ಷಿಪ್ತ ಸುದ್ದಿ**

### 'ಶಾಂತಿ ಬಯಸಿದ್ದರೆ ಉಗ್ರರನ್ನು ಪಾಕ್ ಉತ್ತೇಜಿಸುತ್ತಿರಲಿಲ್ಲ'

**ವಿಶ್ವಸಂಸ್ಥೆ (ಪಿಟಿಐ):** ಪಾಕಿಸ್ತಾನವು ಶಾಂತಿ ಬಯಸುವ ರಾಷ್ಟ್ರವಾಗಿದ್ದರೆ, ಉಗ್ರ ಚಟುವಟಿಕೆಗೆ ಉತ್ತೇಜನ ನೀಡುತ್ತಿರಲಿಲ್ಲ ಹಾಗೂ ಮುಂಬೈ ದಾಳಿ ಪ್ರಕರಣದ ಉಗ್ರರಿಗೆ ಆಶ್ರಯ ನೀಡುತ್ತಿರಲಿಲ್ಲ ಎಂದು ವಿಶ್ವಸಂಸ್ಥೆಯ ಸಾಮಾನ್ಯಸಭೆಯಲ್ಲಿ ಭಾರತ ತಿರುಗೇಟು ನೀಡಿದೆ.

ಶುಕ್ರವಾರ ಮಾತನಾಡಿದ್ದ ಪಾಕ್ ಪ್ರಧಾನಿಯು, 'ಭಾರತ ಸೇರಿ ನೆರೆಯ ಎಲ್ಲ ದೇಶಗಳೊಂದಿಗೆ ಪಾಕಿಸ್ತಾನ ಶಾಂತಿ ಬಯಸಲಿದೆ. ಕಾಶ್ಮೀರ ವಿವಾದಕ್ಕೆ ಶಾಶ್ವತ ಪರಿಹಾರದ ಸಿಗದಿರುವ ಕಾರಣ ದಕ್ಷಿಣ ಏಷ್ಯಾದಲ್ಲಿ ಸುಸ್ಥಿರ ಶಾಂತಿ, ಸ್ಥಿರತೆ ಇಂದಿಗೂ ಅನಿಶ್ಚಿತವಾಗಿದೆ' ಎಂದರು.

ಈ ಹೇಳಿಕೆಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ವಿಶ್ವಸಂಸ್ಥೆಯ ಭಾರತದ ಶಾಶ್ವತ ಮಿಷನ್‌ನ ಪ್ರಥಮ ಕಾರ್ಯದರ್ಶಿ ಮಿಜಿತೋ ವಿನಿಟೊ, 'ಭಾರತದ ವಿರುದ್ಧ ಆಧಾರರಹಿತ ಆರೋಪಕ್ಕೆ ಪಾಕಿಸ್ತಾನದ ಪ್ರಧಾನಿ ಈ ವೇದಿಕೆಯನ್ನು ಬಳಸಿಕೊಂಡಿರುವುದು ಖಂಡನೀಯ. ಪಾಕಿಸ್ತಾನ ತನ್ನ ಭಾರತ ವಿರೋಧಿ ಕೃತ್ಯಗಳನ್ನು ಸಮರ್ಥಿಸುವ ಸಲುವಾಗಿ ನೀಡಿರುವ ಹೇಳಿಕೆ ಸ್ವೀಕಾರಾರ್ಹವಲ್ಲ' ಎಂದು ಹೇಳಿದರು.

### ಸಿರಿಯಾ: ಹಡಗು ಮುಳುಗಿ 89 ವಲಸಿಗರ ಸಾವು

**ಡೆಮಾಸ್ಕಸ್ (ಎಎಫ್‌ಪಿ):** ವಲಸಿಗರನ್ನು ಕರೆದೊಯ್ಯುತ್ತಿದ್ದ ಲೆಬನಾನ್‌ನ ಹಡಗು ಸಿರಿಯಾದ ಕಡಲಿನಲ್ಲಿ ಮುಳುಗಿದ್ದು, ಕನಿಷ್ಠ 89 ಮಂದಿ ಮೃತಪಟ್ಟಿದ್ದಾರೆ.

14 ಮಂದಿಯನ್ನು ರಕ್ಷಿಸಲಾಗಿದೆ. ಹಲವರು ನಾಪತ್ತೆಯಾಗಿದ್ದು, ಅವರಿಗಾಗಿ ಶೋಧ ನಡೆದಿದೆ. ಹಡಗಿನಲ್ಲಿ ಸುಮಾರು 150 ಜನರಿದ್ದರು ಎಂದು ಗೊತ್ತಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಲಸಿಗರನ್ನು ಅಕ್ರಮವಾಗಿ ಕರೆದೊಯ್ಯುತ್ತಿದ್ದ ವ್ಯಕ್ತಿಯನ್ನು ಬಂಧಿಸಲಾಗಿದೆ. ಇದು ಇತ್ತೀಚಿನ ದಿನಗಳಲ್ಲಿ ನಡೆದಿರುವ ಘೋರ ದುರಂತ ಎಂದು ಲೆಬನಾನ್ ಸೇನಾ ಅಧಿಕಾರಿಗಳು ಪ್ರತಿಕ್ರಿಯಿಸಿದ್ದಾರೆ. ವಿಶ್ವಸಂಸ್ಥೆಯ ಹೈಕಮಿಷನರ್ (ವಲಸಿಗರು) ಫಿಲಿಪ್ಪೊ ಗ್ರಾಂಡಿ ಅವರು, ಇದೊಂದು ಹೃದಯ ವಿದ್ರಾವಕ ಘಟನೆ ಎಂದಿದ್ದಾರೆ.

### ಸುಯೆಲ್ಲಾಗೆ 'ವರ್ಷದ ಮಹಿಳೆ' ಪ್ರಶಸ್ತಿ

**ಲಂಡನ್ (ಪಿಟಿಐ):** ರಾಣಿ 2ನೇ ಎಲಿಜಬೆತ್ ಹೆಸರಿನಲ್ಲಿ ನೀಡಲಾಗುವ 'ವರ್ಷದ ಮಹಿಳೆ' ಪ್ರಶಸ್ತಿಗೆ ಬ್ರಿಟನ್‌ನ ಭಾರತ ಮೂಲದ ಗೃಹ ಕಾರ್ಯದರ್ಶಿ ಸುಯೆಲ್ಲಾ ಬ್ರೇವರ್‌ಮನ್ ಅವರು ಆಯ್ಕೆಯಾಗಿದ್ದಾರೆ.

42 ವರ್ಷದ ಸುಯೆಲ್ಲಾ ಅವರನ್ನು ಈ ತಿಂಗಳ ಆರಂಭದಲ್ಲಿ ಪ್ರಧಾನಿ ಲಿಜ್ ಟ್ರಸ್ ಅವರು ಸಂಪುಟಕ್ಕೆ ಸೇರಿಸಿಕೊಂಡಿದ್ದರು. ಪ್ರಶಸ್ತಿಯನ್ನು ದಿವಂಗತ ರಾಣಿ 2ನೇ ಎಲಿಜಬೆತ್ ಅವರಿಗೆ ಅರ್ಪಿಸುತ್ತೇನೆ ಎಂದರು. ಸುಯೆಲ್ಲಾ ಲಂಡನ್‌ನಲ್ಲಿಯೇ ಜನಿಸಿದ್ದು, ತಾಯಿ ತಮಿಳು ಭಾಷಿಕರಾದ ಉಮಾ, ತಂದೆ ಗೋವಾ ಮೂಲದ ಕ್ರಿಸ್ಟಿ ಫರ್ನಾಂಡಿಸ್ ಆಗಿದ್ದಾರೆ. ಪುತ್ರಿಯ ಪರವಾಗಿ ತಂದೆ–ತಾಯಿ ಪ್ರಶಸ್ತಿ ಸ್ವೀಕರಿಸಿದರು.

### ಚೀನಾ ನಿಲುವಿಗೆ 'ಕ್ವಾಡ್' ಖಂಡನೆ

**ನ್ಯೂಯಾರ್ಕ್ (ಪಿಟಿಐ):** ಇಂಡೊ–ಪೆಸಿಫಿಕ್ ವಲಯದಲ್ಲಿ ಯಥಾಸ್ಥಿತಿ ಬದಲಿರುವ, ಉದ್ವಿಗ್ನ ಸ್ಥಿತಿ ಹೆಚ್ಚಿಸುವ ಚೀನಾದ ಯಾವುದೇ ಏಕಪಕ್ಷೀಯ ಕ್ರಮಗಳನ್ನು ಬಲವಾಗಿ ವಿರೋಧಿಸುವುದಾಗಿ ಭಾರತ, ಆಸ್ಟ್ರೇಲಿಯ, ಜಪಾನ್ ಮತ್ತು ಅಮೆರಿಕ ಒಳಗೊಂಡ ಕ್ವಾಡ್ ಒಕ್ಕೂಟ ತಿಳಿಸಿದೆ.

ವಿಶ್ವಸಂಸ್ಥೆಯ 77ನೇ ಸಾಮಾನ್ಯ ಸಭೆಯ ಹಿನ್ನೆಲೆಯಲ್ಲಿ ನ್ಯೂಯಾರ್ಕ್‌ಗೆ ಭೇಟಿ ನೀಡಿರುವ ಕ್ವಾಡ್ ಸದಸ್ಯ ರಾಷ್ಟ್ರಗಳ ವಿದೇಶಾಂಗ ಸಚಿವರು ಶುಕ್ರವಾರ ಈ ಕುರಿತು ಚರ್ಚಿಸಿದ್ದು, ಜಂಟಿ ಹೇಳಿಕೆ ನೀಡಿದರು.

### 'ಹಿಂದೂ ಬಾಲಕಿಯರು, ಮಹಿಳೆ ಅಪಹರಣ ಬಲವಂತದ ಮತಾಂತರ'

**ಕರಾಚಿ (ಪಿಟಿಐ):** ಹಿಂದೂ ಮಹಿಳೆ ಮತ್ತು ಇಬ್ಬರು ಬಾಲಕಿಯರನ್ನು ಇಲ್ಲಿನ ಸಿಂಧ್ ಪ್ರಾಂತ್ಯದಲ್ಲಿ ಅಪಹರಿಸಲಾಗಿದೆ. ಈ ಪೈಕಿ ಇಬ್ಬರನ್ನು ಬಲವಂತದಿಂದ ಇಸ್ಲಾಂಗೆ ಮತಾಂತರ ಮಾಡಿಸಿ, ಮುಸ್ಲಿಂ ಪುರುಷನ ಜೊತೆಗೆ ಮದುವೆ ಮಾಡಿಸಲಾಗಿದೆ ಎಂದು ಹೇಳಲಾಗಿದೆ.

ಪಾಕಿಸ್ತಾನದ ಸಿಂಧ್ ಪ್ರಾಂತ್ಯದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ದೌರ್ಜನ್ಯ ಘಟನೆಗಳಿಗೆ ಇದು ಮತ್ತೊಂದು ನಿದರ್ಶನವಾಗಿದೆ.

ನಸರ್‌ಪುರ್ ಪ್ರದೇಶದಿಂದ ಒಬ್ಬರ ಬಾಲಕಿಯನ್ನು, ಮಿರ್‌ಪುರ್‌ಖಾಸ್ ಪಟ್ಟಣದಲ್ಲಿ ಮಾರುಕಟ್ಟೆಯಿಂದ ಮನೆಗೆ ಮರಳುತ್ತಿದ್ದ ಇನ್ನೊಬ್ಬ ಬಾಲಕಿಯನ್ನು ಅಪಹರಿಸಲಾಗಿದೆ. ಇನ್ನೊಂದು ಪ್ರಕರಣದಲ್ಲಿ ಮೂರು ಮಕ್ಕಳ ತಾಯಿಯು ಇದೇ ಪ್ರದೇಶದಿಂದ ನಾಪತ್ತೆಯಾಗಿದ್ದಾರೆ.

ಪತ್ನಿಗೆ ಕಿರುಕುಳ ನೀಡುತ್ತಿದ್ದ ನೆರೆ ಮನೆಯ ಅಹ್ಮದ್ ಚಾಂಡಿಯೊ ಎಂಬಾತ ಪತ್ನಿಯನ್ನು ಅಪಹರಿಸಿದ್ದಾನೆ ಎಂದು ಗೃಹಿಣಿಯ ಪತಿ ರವಿ ಕುರ್ಮಿ ಪೊಲೀಸರಿಗೆ ದೂರು ನೀಡಿದ್ದಾರೆ. ಈ ಸಂಬಂಧ ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದು, ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.




ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

## ಪುಣ್ಯಸ್ಮರಣೆ




ಶ್ರೀ ಎಂ. ರಾಮಯ್ಯ (20-02-1922 to 28-09-2008)
ವೆಂಕಟಮ್ಮ (09-01-2016)

ಪುತ್ರರಾದ ಪಿ.ಆರ್.ಕೃಷ್ಣಪ್ಪ, ಪಿ.ಆರ್. ಶ್ರೀನಿವಾಸ, ಮೊಮ್ಮಗ ಆರ್.ಕೆ.ರಘುರಾಮ್, ಪುತ್ರಿ, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

ಎಂ. ರಾಮಯ್ಯ ವಿದ್ಯಾ ಸಂಸ್ಥೆ, ಮಂಡಿಕಲ್.

## ಚಿರಸ್ಮರಣೆ

ದಿ|| ಶ್ರೀಮತಿ ಗೌರಮ್ಮನವರು
ನಿಧನ: 25.09.2001
(ದಿ|| ಸ್ಕೂಲ್ ಮಾಸ್ಟರ್ ಬಸವಯ್ಯನವರ ಧರ್ಮಪತ್ನಿ)
ಹಿರೀಸಾವೆ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ.
ನೀವು ನಮ್ಮನ್ನಗಲಿ ಇಂದಿಗೆ 21 ವರ್ಷಗಳು ಕಳೆದವು.
ಸದಾ ನಿಮ್ಮನ್ನು ಸ್ಮರಿಸುವ: ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು, ಅಳಿಯಂದಿರು ಹಾಗೂ ಅಪಾರ ಬಂಧು ವರ್ಗದವರು.

## ಚಿರಸ್ಮರಣೆ



ಶ್ರೀಮತಿ ಕೆಂಪಮ್ಮ
ನಿಧನ: 10.01.2014

ಹನುಮಂತಪ್ಪ ಉರುಫ್ ತಾಯಪ್ಪ
ನಿಧನ : 25.09.1991

ನೀವು ತೋರಿದ ಮಾರ್ಗದರ್ಶನ ನಮಗೆ ಸದಾ ದಾರಿದೀಪವಾಗಿದೆ.
ಇಂತಿ, ಪುತ್ರ ಹೆಚ್.ಎನ್.ಕೃಷ್ಣಪ್ಪ, ವಕೀಲರು (ನಿವೃತ್ತ ಎಸ್.ಇ. ಬೆಸ್ಕಾಂ) ಮತ್ತು ಶಶಿಕಲಾ, ಪ್ರಮೋದ್, ಸುಷ್ಮ, ಶ್ರೇಯಸ್, ರಂಜಿತಾ, ತೇಜಸ್, ರಮ್ಯ, ತನಯ್, ಅಮೂಲ್ಯ, ಮಿತಾಕ್ಷಿ, ಹಗದೂರು, ವೈಟ್‌ಫೀಲ್ಡ್, ಬೆಂಗಳೂರು-66

NAME CHANGE ANNOUNCEMENT

Log on to :
dhclassifieds.com

| ಚಿನ್ನ, ಬೆಳ್ಳಿ | |
|---|---|
| ಬೆಂಗಳೂರು | |
| ಸ್ಟ್ಯಾಂಡರ್ಡ್ ಚಿನ್ನ (10ಗ್ರಾಂ) | ₹51,220 |
| ಆಭರಣ ಚಿನ್ನ (1ಗ್ರಾಂ) | ₹4,712 |
| ಬೆಳ್ಳಿ ಕೆ.ಜಿಗೆ | ₹57,200 |

| ಖಾದ್ಯ ತೈಲ ಮುಂಬೈ (10 ಕೆಜಿಗೆ) | |
|---|---|
| ಶೇಂಗಾ (ರಿಫೈನ್ಡ್) | ₹1640 (1650) |
| ಸೋಯಾ (ರಿಫೈನ್ಡ್) | ₹1152 (1170) |
| ಸೂರ್ಯಕಾಂತಿ (ರಿಫೈನ್ಡ್) | ₹1330 (1330) |
| ಪಾಮೋಲಿನ್ | ₹907 (919) |

| ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹440 |
| 12 ಮೊಟ್ಟೆಗೆ | ₹60 |
| ಮೈಸೂರು | |
| 100 ಮೊಟ್ಟೆಗೆ | ₹442 |

| ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ) | |
|---|---|
| ಆರ್‌ಎಸ್‌ಎಸ್-4 | ₹145.50 |
| ಆರ್‌ಎಸ್‌ಎಸ್-5 | ₹135.50 |
| ಗುಡ್ ಲಾಟ್ | ₹131.50 |

| ರಾಮನಗರ ರೇಷ್ಮೆಗೂಡು ಧಾರಣೆ | |
|---|---|
| ಮಿಶ್ರತಳಿ (ಸಿ.ಬಿ) | ₹271-636 |
| ದ್ವಿತಳಿ (ಬಿ.ವಿ) | ₹411-827 |

# ಆಕಾಶ್ ಸ್ವಾಧೀನ: ಬಾಕಿ ಪಾವತಿಸಿದ ಬೈಜುಸ್

ನವದೆಹಲಿ (ಪಿಟಿಐ): ಆಕಾಶ್ ಎಜುಕೇಷನಲ್ ಸರ್ವೀಸಸ್‌ನ ಸ್ವಾಧೀನಕ್ಕೆ ಸಂಬಂಧಿಸಿದಂತೆ ಬೈಜುಸ್ ಕಂಪನಿಯು ಬ್ಲಾಕ್‌ಸ್ಟೋನ್ ಕಂಪನಿಗೆ ₹1,863 ಕೋಟಿ ಬಾಕಿ ಮೊತ್ತವನ್ನು ಪಾವತಿಸಿದೆ ಎಂದು ಮೂಲಗಳು ಹೇಳಿವೆ.

ಬೈಜುಸ್ ಕಂಪನಿಯು ಏಪ್ರಿಲ್‌ನಲ್ಲಿ ₹7,695 ಕೋಟಿಗೆ ಆಕಾಶ್ ಅನ್ನು ಸ್ವಾಧೀನಪಡಿಸಿಕೊಂಡಿತ್ತು. ಆಕಾಶ್ ಮತ್ತು ಬ್ಲಾಕ್‌ಸ್ಟೋನ್‌ನ ಪಾಲುದಾರರು ಆಕಾಶ್ ಕಂಪನಿಯಲ್ಲಿ ಸಣ್ಣ ಪ್ರಮಾಣದಲ್ಲಿ ಷೇರುಪಾಲು ಹೊಂದಿರಲಿದ್ದಾರೆ ಎಂದು ತಿಳಿಸಿವೆ.

2021ರ ಮಾರ್ಚ್ 31ಕ್ಕೆ ಕೊನೆಗೊಂಡ ಹಣಕಾಸು ವರ್ಷದಲ್ಲಿ ಬೈಜುಸ್‌ನ ನಷ್ಟವು ₹4,588 ಕೋಟಿ ಆಗಿದೆ. ವರಮಾನವು ₹2,428 ಕೋಟಿಗೆ ಇಳಿಕೆ ಆಗಿದೆ. 2022ರ ಮಾರ್ಚ್ 31ಕ್ಕೆ ಕೊನೆಗೊಂಡ ಹಣಕಾಸು ವರ್ಷದಲ್ಲಿ ವರಮಾನವು ₹10 ಸಾವಿರ ಕೋಟಿಗೆ ತಲುಪಿದೆ ಎಂದು ಕಂಪನಿ ಹೇಳಿದೆ. ಆದರೆ, ಲಾಭ ಅಥವಾ ನಷ್ಟದ ಮಾಹಿತಿ ನೀಡಿಲ್ಲ.

### ಇನ್ಫೊಸಿಸ್ ಸಹಸ್ಥಾಪಕ ಎನ್‌.ಆರ್‌. ನಾರಾಯಣ ಮೂರ್ತಿ

# ಯುಪಿಎ ಕಾಲದಲ್ಲಿ ಆರ್ಥಿಕತೆ ಸ್ಥಗಿತ

ಅಹಮದಾಬಾದ್ (ಪಿಟಿಐ): 'ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಅವಧಿಯಲ್ಲಿ ದೇಶದಲ್ಲಿ ಆರ್ಥಿಕ ಚಟುವಟಿಕೆಗಳು ಸ್ಥಗಿತಗೊಂಡಿದ್ದವು' ಎಂದು ಇನ್ಫೊಸಿಸ್ ಸಹಸ್ಥಾಪಕ ಎನ್.ಆರ್. ನಾರಾಯಣ ಮೂರ್ತಿ ಹೇಳಿದ್ದಾರೆ.

ಅಹಮದಾಬಾದ್‌ನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ (ಐಐಎಂಎ) ವಿದ್ಯಾರ್ಥಿಗಳು ಮತ್ತು ಯುವ ಉದ್ಯಮಿಗಳೊಂದಿಗೆ ಸಂವಾದ ನಡೆಸಿದರು. 'ಭಾರತವನ್ನು ಚೀನಾದ ಯೋಗ್ಯ ಪ್ರತಿಸ್ಪರ್ಧಿಯಾಗಿ ಮಾಡುವ ಸಾಮರ್ಥ್ಯ ಯುವ ಮನಸ್ಸುಗಳಿಗಿದೆ' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

'2008ರಿಂದ 2012ರ ಅವಧಿಯಲ್ಲಿ ಲಂಡನ್‌ನಲ್ಲಿ ಎಚ್‌ಎಸ್‌ಬಿಸಿ ಮಂಡಳಿಯಲ್ಲಿ ಇದ್ದೆ. ಆ ವೇಳೆ, ಆಡಳಿತ ಮಂಡಳಿಯ ಸಭೆಗಳಲ್ಲಿ ಎರಡರಿಂದ ಮೂರು ಬಾರಿ ಚೀನಾ ಹೆಸರನ್ನು ಪ್ರಸ್ತಾಪಿಸಿದರೆ, ಭಾರತದ ಹೆಸರನ್ನು ಒಂದು ಬಾರಿಯಾದರೂ ಪ್ರಸ್ತಾಪಿಸಲಾಗುತ್ತಿತ್ತು. ಆದರೆ, ದುರದೃಷ್ಟವಶಾತ್, ಆ ಬಳಿಕ ಏನಾಯಿತು ಎಂದು ತಿಳಿಯಲಿಲ್ಲ. ಚೀನಾದ ಹೆಸರು 30 ಬಾರಿ ಪ್ರಸ್ತಾಪ ಆದಾಗಲೂ ಭಾರತದ ಹೆಸರು ಪ್ರಸ್ತಾಪ ಆಗುವುದು ತೀರಾ ವಿರಳ ಆಯಿತು.

'ಹೀಗಾಗಿ ಎಲ್ಲೆಲ್ಲಿ ಬೇರೆ ದೇಶಗಳ ಹೆಸರು ಅದರಲ್ಲಿಯೂ ಮುಖ್ಯವಾಗಿ ಚೀನಾದ ಹೆಸರು ಪ್ರಸ್ತಾಪ ಆದಾಗ, ಭಾರತದ ಹೆಸರೂ ಪ್ರಸ್ತಾಪ ಆಗುವಂತೆ ಮಾಡುವುದು ದೇಶದ ಯುವ ಸಮೂಹದ ಹೊಣೆಯಾಗಿದೆ. ನೀವು ಅದನ್ನು ಮಾಡುತ್ತೀರಿ ಎನ್ನುವ ವಿಶ್ವಾಸವಿದೆ' ಎಂದಿದ್ದಾರೆ.



ಮೂರ್ತಿ

'ಮನಮೋಹನ್ ಸಿಂಗ್ (ಮಾಜಿ ಪ್ರಧಾನಿ) ಅವರು ವೈಯಕ್ತಿಕವಾಗಿ ಒಬ್ಬ ಅಸಾಧಾರಣ ವ್ಯಕ್ತಿ. ಅವರ ಬಗ್ಗೆ ನನಗೆ ಅಪಾರ ಗೌರವ ಇದೆ. ಆದರೆ, ಯುಪಿಎ–ಅವಧಿಯಲ್ಲಿ ಭಾರತವು ಸ್ಥಗಿತವಾಗಿತ್ತು. ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿರಲಿಲ್ಲ. ಪ್ರತಿಯೊಂದೂ ವಿಳಂಬವಾಗುತ್ತಿತ್ತು' ಎಂದು ಮೂರ್ತಿ ಹೇಳಿದರು.

'ಪಾಶ್ಚಾತ್ಯರಲ್ಲಿ ಬಹುಪಾಲು ಮಂದಿ ಭಾರತವನ್ನು ಕೀಳಾಗಿ ನೋಡುತ್ತಿದ್ದ ಕಾಲವಿತ್ತು. ಆದರೆ, ಇಂದು ಭಾರತಕ್ಕೆ ಒಂದು ಮಟ್ಟದ ಗೌರವ ಇದೆ. ಭಾರತವು ಇಂದು ಜಗತ್ತಿನ ಐದನೇ ಅತಿದೊಡ್ಡ ಆರ್ಥಿಕತೆಯಾಗಿದೆ' ಎಂದರು.

'ಮನಮೋಹನ್ ಸಿಂಗ್ ಅವರು ಹಣಕಾಸು ಸಚಿವರಾಗಿದ್ದಾಗ 1991ರಲ್ಲಿ ಆದಂತಹ ಆರ್ಥಿಕ ಸುಧಾರಣೆಗಳು ಮತ್ತು ಸದ್ಯದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ 'ಭಾರತದಲ್ಲಿಯೇ ತಯಾರಿಸಿ', 'ಸ್ಟಾರ್ಟಅಪ್ ಇಂಡಿಯಾ' ತರಹದ ಯೋಜನೆಗಳು ಭಾರತದ ಬೆಳವಣಿಗೆಗೆ ನೆರವಾದವು' ಎಂದು ಅವರು ಅಭಿಪ್ರಾಯಪಟ್ಟರು.

## ಸಂಕ್ಷಿಪ್ತ ಸುದ್ದಿ

### ತೈಲ ಆಮದು: ಪೆಟ್ರೊಬ್ರಾಸ್ ಜತೆ ಬಿಪಿಸಿಎಲ್ ಒಪ್ಪಂದ

ನವದೆಹಲಿ (ಪಿಟಿಐ): ಲ್ಯಾಟಿನ್ ಅಮೆರಿಕದ ದೇಶಗಳಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುವ ಸಲುವಾಗಿ ಬ್ರೆಜಿಲ್‌ನ ಪೆಟ್ರೊಬ್ರಾಸ್ ಕಂಪನಿಯ ಜೊತೆ ಒಪ್ಪಂದ ಮಾಡಿಕೊಂಡಿರುವುದಾಗಿ ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ಶನಿವಾರ ತಿಳಿಸಿದೆ.

ಕಂಪನಿಯು ಮುಂಬೈ, ಮಧ್ಯಪ್ರದೇಶದ ಬಿನಾ ಮತ್ತು ಕೊಚ್ಚಿಯಲ್ಲಿ ತೈಲ ಸಂಸ್ಕರಣಾ ಘಟಕಗಳನ್ನು ಹೊಂದಿದೆ. ಇರಾಕ್, ಸೌದಿ ಅರೇಬಿಯಾ ಒಳಗೊಂಡು ಪಶ್ಚಿಮ ಏಷ್ಯಾದ ದೇಶಗಳಿಂದ ಕಂಪನಿಯು ಹೆಚ್ಚಿನ ಪ್ರಮಾಣದಲ್ಲಿ ತೈಲ ಆಮದು ಮಾಡಿಕೊಳ್ಳುತ್ತಿದೆ.

ಯಾವುದೇ ನಿರ್ದಿಷ್ಟ ಪ್ರದೇಶದ ಮೇಲಿನ ಅವಲಂಬನೆಯನ್ನು ತಗ್ಗಿಸಲು ಕಂಪನಿಯು ಬೇರೆ ಮೂಲಗಳ ಹುಡುಕಾಟ ನಡೆಸುತ್ತಿದೆ. ಇದರ ಭಾಗವಾಗಿ ಬ್ರೆಜಿಲ್‌ನ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಂಡಿದೆ.

ಬಿಪಿಸಿಎಲ್ ಅಧ್ಯಕ್ಷ ಅರುಣ್ ಕುಮಾರ್ ಸಿಂಗ್ ಮತ್ತು ಪೆಟ್ರೊಬ್ರಾಸ್ ಸಿಇಒ ಕೈಯೊ ಪೇಸ್ ಡಿ ಆಂಡ್ರೇಡ್ ಅವರು ಒಪ್ಪಂದಕ್ಕೆ ಸಹಿ ಮಾಡಿದ್ದಾರೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

# ಒಂದು ಜಿಲ್ಲೆ, ಒಂದು ಉತ್ಪನ್ನ: ರಾಜ್ಯದಿಂದ 265 ಉತ್ಪನ್ನಗಳ ಪಟ್ಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರದ 'ಒಂದು ಜಿಲ್ಲೆ ಒಂದು ಉತ್ಪನ್ನ' ಯೋಜನೆಯಡಿ ಕರ್ನಾಟಕ ರಾಜ್ಯವು ಈವರೆಗೆ ಗರಿಷ್ಠ 265 ಉತ್ಪನ್ನಗಳನ್ನು ಪಟ್ಟಿಮಾಡಿದೆ.

ಸರಕುಗಳಿಂದ ಔಷಧಗಳವರೆಗೆ, ಆಟೊಮೊಬೈಲ್, ರಕ್ಷಣಾ ಉಪಕರಣಗಳು, ಫೋನ್ ಮತ್ತು ಚಿನ್ನಾಭರಣ... ಹೀಗೆ ಉತ್ಪನ್ನಗಳ ಸಮಗ್ರ ಪಟ್ಟಿಯನ್ನು ರಾಜ್ಯವು ಹೊಂದಿದೆ.

ಬೆಂಗಳೂರಿನ ನೀಲಿ ದ್ರಾಕ್ಷಿ, ರೋಸ್ ಈರುಳ್ಳಿ, ವೀಳ್ಯದೆಲೆ, ಎಲೆಕ್ಟ್ರಾನಿಕ್ ಆಟಿಕೆಗಳು, ಬಿದರಿ ಕಲಾಕೃತಿ, ಮೈಸೂರಿನ ರೇಷ್ಮೆ ಸೀರೆ ಒಳಗೊಂಡು ಇನ್ನೂ ಹಲವು ಉತ್ಪನ್ನಗಳಿವೆ.

ಅಧಿಕಾರಿಯೊಬ್ಬರು ನೀಡಿರುವ ಮಾಹಿತಿಯ ಪ್ರಕಾರ, ಮಹಾರಾಷ್ಟ್ರ, ಉತ್ತರ ಪ್ರದೇಶ ಮತ್ತು ಆಂಧ್ರಪ್ರದೇಶ ರಾಜ್ಯಗಳು ಸಹ 150ಕ್ಕೂ ಅಧಿಕ ಉತ್ಪನ್ನಗಳನ್ನು ಪಟ್ಟಿಮಾಡಿವೆ. ಉತ್ತರ ಪ್ರದೇಶವು ಈ ಯೋಜನೆಯಡಿ ಈಗಾಗಲೇ ₹96 ಸಾವಿರ ಕೋಟಿ ಮೌಲ್ಯದ ಉತ್ಪನ್ನಗಳನ್ನು ರಫ್ತು ಮಾಡಿದೆ.

ಚಿನ್ನಾಭರಣ, ಆಟಿಕೆಗಳು, ಕರಕುಶಲ ಮತ್ತು ಕೈಮಗ್ಗ ಉತ್ಪನ್ನಗಳು ಯೋಜನೆಯಡಿ ಹೆಚ್ಚಿನ ಅವಕಾಶ ಹೊಂದಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ದೇಶದ ರಫ್ತು ಹೆಚ್ಚಿಸುವ ನಿಟ್ಟಿನಲ್ಲಿ ಯೋಜನೆಯಡಿ ಜಿಲ್ಲೆಗಳಿಗೆ ಉತ್ತೇಜನ ನೀಡಲಾಗುವುದು. ರಫ್ತಿಗೆ ಉತ್ತೇಜನ ನೀಡಲು ಒಂದು ಜಿಲ್ಲೆ, ಒಂದು ಉತ್ಪನ್ನಕ್ಕೆ ಶುಲ್ಕ ರಹಿತ ಪ್ರವೇಶವನ್ನು ಭಾರತ ಬಯಸುತ್ತಿದೆ.

### ಕಂಪನಿಗಳಿಗೆ ಸಚಿವ ರಾಜೀವ್ ಚಂದ್ರಶೇಖರ್ ಸಲಹೆ

# 'ನೌಕರರನ್ನು ನಿಯಂತ್ರಿಸಬೇಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಂಪನಿಗಳು ತಮ್ಮ ಉದ್ಯೋಗಿಗಳನ್ನು ನಿಯಂತ್ರಿಸಬಾರದು. ಅವರ ಕನಸುಗಳಿಗೆ ಮಿತಿಗಳನ್ನೂ ಹೇರಬಾರದು' ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಐ.ಟಿ. ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಹೇಳಿದ್ದಾರೆ.

ಪಬ್ಲಿಕ್ ಅಫೇರ್ಸ್ ಫೋರಂ ಆಫ್ ಇಂಡಿಯಾದ (ಪಿಎಎಫ್‌ಐ) 9ನೇ ವಾರ್ಷಿಕ ಸಮಾವೇಶ-2022ರಲ್ಲಿ ಮಾತನಾಡಿದ ಅವರು, 'ಉಲ್ಲಂಘಿಸಲು ಸಾಧ್ಯವಿಲ್ಲದ ಒಪ್ಪಂದವನ್ನು ಹೊರತುಪಡಿಸಿ, ಉಳಿದ ಯಾವ ನಿರ್ಬಂಧವೂ ಇಲ್ಲದೆ ತಮ್ಮ ಸಾಧನೆಗಳನ್ನು ಮಾಡಲು ಉದ್ಯೋಗಿಗಳಿಗೆ ಅವಕಾಶ ನೀಡಬೇಕು' ಎಂದು ಕಂಪನಿಗಳಿಗೆ ಸಲಹೆ ನೀಡಿದ್ದಾರೆ.

ಮೂನ್‌ಲೈಟಿಂಗ್ ವಿರುದ್ಧ ಐ.ಟಿ. ಕಂಪನಿಗಳು ತಮ್ಮ ಉದ್ಯೋಗಿಗಳಿಗೆ ಎಚ್ಚರಿಕೆ ನೀಡುತ್ತಿರುವ ಮತ್ತು ಕೆಲಸದಿಂದ ತೆಗೆಯುತ್ತಿರುವ ಬೆನ್ನಲ್ಲೇ ಅವರು ಈ ಹೇಳಿಕೆ ನೀಡಿದ್ದಾರೆ.

ಮಾಮೂಲಿ ಕೆಲಸದ ಅವಧಿಯ ನಂತರದಲ್ಲಿ ಇನ್ನೊಂದು ಕೆಲಸವನ್ನು ಕೈಗೆತ್ತಿಕೊಳ್ಳುವ ಪ್ರವೃತ್ತಿಯನ್ನು ಮೂನ್‌ಲೈಟಿಂಗ್ ಎಂದು ಕರೆಯಲಾಗುತ್ತಿದೆ.

'ಈಗಿನ ಸರ್ಕಾರದ ನೀತಿಗಳು ರಾಚನಿಕ ಬದಲಾವಣೆಗಳೊಂದಿಗೆ ರೂಪುಗೊಂಡು ಜಾರಿಯಾಗುತ್ತಿವೆ' ಎಂದು ರಾಜೀವ್ ಅವರು ಹೇಳಿದ್ದಾರೆ.

## 'ರೂಪಾಯಿ ಸ್ಥಿತಿ ಉತ್ತಮ'



ಪುಣೆ (ಪಿಟಿಐ): ಅಮೆರಿಕದ ಡಾಲರ್ ಎದುರು ಇತರೆ ಕರೆನ್ಸಿಗಳಿಗೆ ಹೋಲಿಸಿದರೆ ಭಾರತದ ರೂಪಾಯಿ ಸ್ಥಿತಿ ಉತ್ತಮವಾಗಿದೆ. ರಿಸರ್ವ್ ಬ್ಯಾಂಕ್ ಮತ್ತು ಹಣಕಾಸು ಸಚಿವಾಲಯವು ರೂಪಾಯಿ ಚಲನೆಯನ್ನು ಬಹಳ ಸೂಕ್ಷ್ಮವಾಗಿ ಗಮನಿಸುತ್ತಿದೆ ಎಂದು ಸಚಿವೆ ನಿರ್ಮಲಾ ಸೀತಾರಾಮನ್ ಶನಿವಾರ ಹೇಳಿದ್ದಾರೆ.

ಯಾವುದೇ ಒಂದು ಕರೆನ್ಸಿಯು ಇತರೆ ಕರೆನ್ಸಿಗಳಂತೆ ಏರಿಳಿತ ಅಥವಾ ಅಸ್ಥಿರತೆಗೆ ಒಳಗಾಗಿಲ್ಲ ಎಂದಾದರೆ ಅದು ಭಾರತದ ರೂಪಾಯಿ ಆಗಿದೆ ಎಂದು ಅವರು ಹೇಳಿದ್ದಾರೆ.

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಶುಕ್ರವಾರ ಸಾರ್ವಕಾಲಿಕ ಕನಿಷ್ಠ ಮಟ್ಟವಾದ ₹81.09ಕ್ಕೆ ಕುಸಿತ ಕಂಡಿದೆ.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸದ್ಯ, ಅಮೆರಿಕದ ಡಾಲರ್ ಎದುರು ಇತರೆ ಕರೆನ್ಸಿಗಳ ಸ್ಥಿತಿ ಹೇಗಿದೆ ಎಂಬುದನ್ನು ಪರಿಶೀಲಿಸುವಂತೆ ಅವರು ಸುದ್ದಿಗಾರರಿಗೆ ಸಲಹೆಯನ್ನೂ ನೀಡಿದ್ದಾರೆ.

# 'ಕೆಟ್ಟ ಶಕ್ತಿಗಳಿಗೆ ಪ್ರತ್ಯುತ್ತರ ನೀಡಲು ಸೇನೆ ಸಮರ್ಥ'

ನವದೆಹಲಿ (ಪಿಟಿಐ): ಕೆಟ್ಟ ಉದ್ದೇಶಗಳಿಂದ ದೇಶವನ್ನು ನೋಡುವ ಯಾವುದೇ ಶಕ್ತಿ ಮತ್ತು ಚೀನಾದೊಂದಿಗೆ ಈಗ ವ್ಯವಹರಿಸುವಾಗಲೂ ಭಾರತೀಯ ಸೇನೆಗೆ ತಕ್ಕ ಪ್ರತ್ಯುತ್ತರ ನೀಡುವ ಸಾಮರ್ಥ್ಯವಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ.

ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಅವರ ಉಪಸ್ಥಿತಿಯಲ್ಲಿ ಶನಿವಾರ ದೀನ್ ದಯಾಳ್ ಉಪಾಧ್ಯಾಯ ಕುರಿತ 5 ಸಂಪುಟಗಳ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 1964ರಲ್ಲಿ ಚೀನಾ ಮೊದಲ ಪರಮಾಣು ಪರೀಕ್ಷೆ ನಡೆಸಿದ ಸಂದರ್ಭದಲ್ಲಿ ದೀನ್ ದಯಾಳ್ ಉಪಾಧ್ಯಾಯ ಅವರು ಭಾರತ ಪರಮಾಣು ಪರೀಕ್ಷೆ ನಡೆಸುವುದರ ಪರವಾಗಿ ಮಾತನಾಡಿದ ಮೊದಲ ವ್ಯಕ್ತಿಯಾಗಿದ್ದರು ಎಂದರು.

1998ರಲ್ಲಿ ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದಲ್ಲಿ ರಾಜಸ್ಥಾನದಲ್ಲಿ ಭಾರತ ತನ್ನ ಮೊದಲ ಪರಮಾಣು ಪರೀಕ್ಷೆ ನಡೆಸಿದಾಗ, ಯಾವುದೇ ದೇಶದ ವಿರುದ್ಧ ಅಸ್ತ್ರ ಬಳಸುವುದು ಅಲ್ಲ, ಆದರೆ ನಿರೋಧಕವನ್ನು ನಿರ್ವಹಿಸುವುದು ಇದರ ಉದ್ದೇಶವಾಗಿದೆ ಎಂದು ಅವರು ಹೇಳಿದ್ದರು ಎಂದರು. ದೇಶದ ಅಗತ್ಯಕ್ಕೆ ಬೇಕಾದ ವಸ್ತುಗಳನ್ನು ತಯಾರಿಸುವುದು ಮಾತ್ರವಲ್ಲದೆ, ಇತರೆ ದೇಶಗಳಿಗೆ ರಕ್ಷಣಾ ವಸ್ತುಗಳನ್ನು ರಫ್ತು ಮಾಡುವುದು ಗುರಿಯಾಗಿದೆ ಎಂದು ಸಿಂಗ್ ತಿಳಿಸಿದರು.

## 'ಸರ್ಕಾರಿ ದಾವೆಗಳಿಗೆ ಕಡಿವಾಣ ಅಗತ್ಯ'

ಹೈದರಾಬಾದ್ (ಪಿಟಿಐ): 'ಸರ್ಕಾರಿ ಪ್ರಾಯೋಜಿತ ಮೊಕದ್ದಮೆಗಳಿಗೆ ಸರ್ಕಾರವು ಕಡಿವಾಣ ಹಾಕಿದರೆ ನ್ಯಾಯಾಂಗದ ಅರ್ಧ ಸಮಸ್ಯೆ ಬಗೆಹರಿಯುತ್ತದೆ' ಎಂದು ಸುಪ್ರೀಂ ಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಹೇಳಿದ್ದಾರೆ.

'ಐಎಸ್‌ಬಿ ಲೀಡರ್‌ಶಿಪ್ ಸಮ್ಮೇಳನ–2022'ರಲ್ಲಿ ಪಾಲ್ಗೊಂಡು ಶನಿವಾರ ಮಾತನಾಡಿದ ಅವರು, 'ದೇಶಕ್ಕೆ ಸ್ವಾತಂತ್ರ್ಯ ದೊರೆತು 75 ವರ್ಷಗಳಾದರೂ ಕೂಡ ನ್ಯಾಯಾಂಗ ವ್ಯವಸ್ಥೆ ಮೂಲಸೌಕರ್ಯಗಳಿಂದ ವಂಚಿತವಾಗಿದೆ. ರಾಷ್ಟ್ರಮಟ್ಟದ ಅಧ್ಯಯನದಿಂದ ಇದು ತಿಳಿದುಬಂದಿದೆ' ಎಂದು ವಿಷಾದ ವ್ಯಕ್ತಪಡಿಸಿದರು.

'ನ್ಯಾಯಾಂಗದ ಪಾಲಿಗೆ ಸರ್ಕಾರವೇ ದೊಡ್ಡ ದಾವೆಗಾರ. ಅಂತರ ವಿಭಾಗೀಯ ವ್ಯಾಜ್ಯಗಳು, ಸೇವಾ ವಿಚಾರಗಳಿಗೆ ಸಂಬಂಧಿಸಿದ ದೂರುಗಳನ್ನು ಪರಿಹರಿಸುವುದೇ ದೊಡ್ಡ ಸಮಸ್ಯೆಯಾಗಿದೆ' ಎಂದಿದ್ದಾರೆ.

ಅಂಗವಿಕಲರಿಗೆ ನ್ಯಾಯಾಂಗ ಸೇವೆ ಸುಲಭವಾಗಿ ದೊರೆಯುವಂತಾಗಬೇಕು (ನವದೆಹಲಿ ವರದಿ): 'ಅಂಗವಿಕಲರಿಗೆ ನ್ಯಾಯಾಂಗ ಸೇವೆಯು ಸುಲಭವಾಗಿ ದೊರೆಯುವಂತಾಗಬೇಕು. ಈ ದಿಸೆಯಲ್ಲಿ ಸುಪ್ರೀಂ ಕೋರ್ಟ್‌ನ ಇ-ಸಮಿತಿಯು ಡಿಜಿಟಲ್ ಮೂಲಸೌಕರ್ಯ ರೂಪಿಸಲು ಮುಂದಾಗಿದೆ' ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಶನಿವಾರ ತಿಳಿಸಿದ್ದಾರೆ.

'ಅಗತ್ಯ ಕಾನೂನು ಇದ್ದರೂ ಕೂಡ ಕೆಲ ಸರ್ಕಾರಿ–ಖಾಸಗಿ ಕಚೇರಿಗಳು, ಸಾರಿಗೆ ಸೇವೆ, ಉದ್ಯಾನಗಳು ಹಾಗೂ ಇತರೆ ಸ್ಥಳಗಳು ಅಂಗವಿಕಲರಿಗೆ ಮುಕ್ತವಾಗಿಲ್ಲ' ಎಂದು ವಿಷಾದ ವ್ಯಕ್ತಪಡಿಸಿದರು.

## ದೇಶದಾದ್ಯಂತ ಮಾರುಕಟ್ಟೆ ಧಾರಣೆ

| ಏಲಕ್ಕಿ ಧಾರಣೆ ಸಕಲೇಶಪುರ | |
|---|---|
| ಕೂಳೆ | 400-420 |
| ನಡುಗೋಲು | 450-480 |
| ರಾಶಿ | 500-600 |
| ರಾಶಿ ಉತ್ತಮ | 550-600 |
| ಜರಡಿ | 600-650 |
| ಹೆರಕಿದ್ದು | 1000-1100 |
| ಹಸಿರು ಸಾಧಾರಣ | 600-700 |
| ಹಸಿರು ಉತ್ತಮ | 900-1000 |
| ಹಸಿರು ಅತಿ ಉತ್ತಮ | 1150-1250 |
| ಕಾಳು ಮೆಣಸು | 485 |

| ಕೊಬ್ಬರಿ ತಿಪಟೂರು | |
|---|---|
| ಕನಿಷ್ಠ | 12500 |
| ಗರಿಷ್ಠ | 14200 |
| ಮಾದರಿ | 14000 |

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ: ಮುದ್ರೆಮನೆ | ಹಾಸನ: ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
|---|---|---|---|---|
| ಎಪಿ | 16000 | 15800 | 16150 | 221.30 ಸೆಂಟ್ಸ್ |
| ಎಸಿ | 9100 | 8400 | 8850 | |
| ಆರ್‌ಪಿ | 9800 | 9800 | 9800 | ಲಂಡನ್ |
| ಆರ್‌ಸಿ | 4800 | 4500 | 4750 | 2226 ಡಾಲರ್ಸ್ |

## ಮುಂಬೈ ಧಾರಣೆ

### ಶೇಂಗಾ

24–9–2022

| | |
|---|---|
| ಜಾವಾ 70/80(ಹೊಸ) | 11750-11800 |
| ಜಾವಾ 80/90(ಹೊಸ) | 10750-10800 |
| ದಪ್ಪ ಮಧ್ಯಪ್ರದೇಶ(ಹೊಸ) | 10300-10400 |
| ದಪ್ಪ ಗುಜರಾತ್(ಹೊಸ) | 10900-11000 |

### ಶೇಂಗಾ ಎಣ್ಣೆ (10 ಕೆಜಿಗೆ)

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1650 (1660) |
| ಒಂದು ವಾರದ ಡೆಲಿವರಿ | 1645 (1655) |
| ಸೋಯಾ ಕಚ್ಚಾ | 1110 (1125) |
| ಪಾಮ್ ವಾರದ ಡೆಲಿವರಿ | 905 (917) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1250 (1270) |

### ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
49,300 (49,350)
ಬೆಳ್ಳಿ ಕೆ.ಜಿ 55,500 (56,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

## ಉದ್ಯೋಗಾವಕಾಶ

### Cook

CHEF DE Partie - CDP: 2-3 yrs Exp in Indian, South Indian & Continental. Salary : 25-30K. Commi - I or Commi - II: 1-2 yrs Exp in Indian, South Indian & Continental. Salary : 15-20K. Qual: BHM / Dip. Ct: 8553516507

ಸೌತ್ ಇಂಡಿಯನ್ ಬ್ರೇಕ್ಫಾಸ್ಟ್ ತಯಾರಿಸುವ ಅಡುಗೆಯವರು ಆರ್ ಆರ್ ನಗರದ ಕೆಫೆಯೊಂದಕ್ಕೆ ಬೇಕಾಗಿದ್ದಾರೆ. ಆಸಕ್ತಿವುಳ್ಳವರು ಸಂಪರ್ಕಿಸಿ +91 7019078207 ಅಮರ್.

### Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

ಕೆನ್‌ಮೋರ್ ಸ್ಕೂಲ್‌ಗೆ ಚಾಲಕರು ಮತ್ತು ಭದ್ರತಾ ಸಿಬ್ಬಂದಿ ಬೇಕಾಗಿದ್ದಾರೆ. ನಂ.31, ಕನಕಪುರ, ಬಸವನಗುಡಿ, ಎಂ ಎನ್ ಕೃಷ್ಣರಾವ್ ಉದ್ಯಾನ, ಬಸವನಗುಡಿ, ಬೆಂಗಳೂರು. ಸಂಪರ್ಕಿಸಿರಿ : ಫೋನ್ : 9901501185 ವಾಟ್ಸಾಪ್

### Multiple Vacancy

LOOKING FOR ASM, SR & SO for a potato chips manufacturing company. Should speak one of the local languages. Attractive Packages Offered. Multiple Positions Open. Call: 9045936322/ 6364069184 Email: techorganea@gmail.com

### Accounts & Finance

REQUIRED SENIOR accountant aged 40 for manufacturing facility. Should reside around Yeshwanthpur/ Peenya.Email - cofplanter@gmail.com. 9480237094

### General

Columbia Pacific communities
ಭಾರತದ ಅತಿ ದೊಡ್ಡ ಹಾಗೂ ಅತ್ಯಂತ ಬೇಡಿಕೆಯುಳ್ಳ ಸೀನಿಯರ್ ಲಿವಿಂಗ್ ಆಪರೇಟರ್, ಈ ಕೆಳಗಿನ ಖಾಲಿ ಹುದ್ದೆಗಳ ನೇಮಕಾತಿಗೆ ಅರ್ಜಿಗಳನ್ನು ಆಮಂತ್ರಿಸುತ್ತಿದೆ:
- ಅಡಿಗೆ ಮನೆ ಶೆಫ್ ಮತ್ತು ಕುಕ್
- ಹೌಸ್‌ಕೀಪಿಂಗ್ ಕ್ಲೀನರ್
- ರೆಸ್ಟೋರೆಂಟ್ ವೇಟರ್
- ಎಲೆಕ್ಟ್ರಿಷಿಯನ್
- ಪ್ಲಂಬರ್

ನೌಕರಿಯ ಸ್ಥಳ: ದ ವರ್ಚ್ಯುವೊಸೊ ಕೊಲಂಬಿಯಾ ಪೆಸಿಫಿಕ್ ಕಮ್ಯುನಿಟೀಸ್ ಸರ್ವೇ ನಂ. 120/2 ಬೊಮ್ಮೆನಹಳ್ಳಿ ಗ್ರಾಮ, ಮಂಡೂರ್ ಪೋಸ್ಟ್, ಬಿದರಹಳ್ಳಿ ಹೋಬಳಿ ಈಸ್ಟ್, ತಾಲೂಕು ಮಂಡೂರ್, ಬೆಂಗಳೂರು-562129 ಕರ್ನಾಟಕ
PF ಮತ್ತು ESI ಸೌಲಭ್ಯವಿರುತ್ತದೆ.
ಆಸಕ್ತಿಯುಳ್ಳವರು ಈ ಕೆಳಗಿನ ನಂಬರ್‌ಗೆ ಕರೆ ನೀಡಿರಿ
+91 97410 00796

WANTED LEGAL Executive / Manager. Age below 35yrs Male with 4yrs of Experience Walk in Interview on 27th & 28th. AURICK Hotel, No.598,15th Cross, 35th Main Road, 6th Phase JP Nagar, Bangalore, Karanataka-560078. Ph: 8553516507

ರಾಜಾಜಿನಗರ ನವರಂಗ್ ಹತ್ತಿರ, ನೆಮ್ಮದಿ ಮನೆಹೆಣ್ಣು ಮಕ್ಕಳ ಆಶ್ರಮಕ್ಕೆವಿದ್ಯಾರ್ಥಿಯರು | ಮಹಿಳೆಯರು 60 ಜನ ಅಡಿಗೆ ಸಹಾಯಕರು ಬೇಕಾಗಿದ್ದರೆ 93414 94200

### Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/- ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ACCOUNTANT REQUIRED with Tally Salary 20K to 25K with 5 to 6 Experience Location Lalbagh Road Bangalore 560027 bskblore@gmail.com 9342851347

## ರಿಯಲ್ ಎಸ್ಟೇಟ್ ಸೆಲ್ಲಿಂಗ್

### Sites

### Out-Station

KHB ALLOTTED Site For Sale Measuring 1500sqft At Kadur Chikmagalur District Clear Title 12 Lakhs Contact Raghavendra 9606866368

## PROPERTY CORNER

### ಜಮೀನುಗಳು ಬೇಕಾಗಿದೆ

ಈ ಕೆಳಕಂಡ ಸ್ಥಳಗಳಲ್ಲಿ ದೇವನಹಳ್ಳಿ, ಹೊಸಕೋಟೆ, ದೊಡ್ಡಬಳ್ಳಾಪುರ, ದಾಬಸ್‌ಪೇಟೆ, ನೆಲಮಂಗಲ, ಬಿಡದಿ ಮತ್ತು ಬೆಂಗಳೂರು ನಗರಾದ್ಯಾಂತ ಎಲ್ಲಾ ತರಹದ ಜಮೀನುಗಳು ಬೇಕಾಗಿದೆ
1 ರಿಂದ 100 ಎಕರೆಯವರೆಗೆ
ಸಂಪರ್ಕಿಸಿ: 90354 40657

## ಬಿಲ್ಡರ್ ಎಸೆನ್ಶಿಯಲ್

### Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಮತ್ತು ರೆಡಿಮೇಡ್ ಪ್ರಿಕ್ಯಾಸ್ಟಿಂಗ್ ಕಾಂಪೌಂಡ್‌ಗೋಡೆ ಕೆಲಸಕ್ಕಾಗಿ ಸಂಪರ್ಕಿಸಿ: 9880916988

## ಭವಿಷ್ಯ

### Astrology

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 9900510171

## ವೈವಾಹಿಕ

### Brides Wanted

Hindu

ವಧು ಬೇಕಾಗಿದ್ದಾರೆ
ಆರ್ಥಿಕವಾಗಿ ಸದೃಢವಾಗಿರುವ ಭಾಗಶಃ ಬುದ್ಧಿಮಾಂದ್ಯ 30 ವರ್ಷದ ಹಿಂದು ಯುವಕನಿಗೆ ಹಿಂದು ವಧು ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ: 9742265547

### Grooms Wanted

Brahmin

ಬ್ರಾಹ್ಮಣ ವಧು, ವಯಸ್ಸು 27, SSLC ಕಲಿತಿರುವ/ ವಯಸ್ಸು 32, PUC ಕಲಿತಿರುವ ವಧುವಿಗೆ ವರ ಬೇಕಾಗಿದೆ. ಸಂಪರ್ಕಿಸಿ. 9035730677

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

## ಪ್ರವಾಸ

### Travel

16.11.2022 16ದಿನಗಳು ಮಧ್ಯಪ್ರದೇಶ ಗುಜರಾತ್ ರಾಜಸ್ಥಾನ 4ಜ್ಯೋತಿರ್ಲಿಂಗ ಪಂಚದ್ವಾರಕ ಜೋದ್‌ಪುರ, ಪುಷ್ಕರ್‌ಉದಯಪುರ ಜೈಸಲ್ಮೇರ್ ಅಹಮದಾಬಾದ್. ಶ್ರೀಗಂಗಾ ಟೂರಿಸ್ಟ್.ಬೆಂಗಳೂರು: 9480253807, 8105522123

★ಶ್ರೇಯಸ್ ಟೂರ್ಸ್★ ಹಾರ್ನೋಬಿಲ್ ಫೆಸ್ಟಿವಲ್ ವಿಶೇಷ ಈಶಾನ್ಯರಾಜ್ಯಗಳ(ಸೆವೆನ್ ಸಿಸ್ಟರ್ಸ್)ಪ್ರವಾಸ 28.11.2022 12/15/21ದಿನಗಳು ಅಸ್ಸಾಂ ಮೇಘಾಲಯ,ಅರುಣಾಚಲ ನಾಗಲ್ಯಾಂಡ್,ಮಣಿಪುರ ಮಿಝೋರಾಂ,ತ್ರಿಪುರ. 24.11.2022,16.12.2022 10/21ದಿನಗಳು ತ್ರಿಪುರ ಮಿಝೋರಾಂ,ಮಣಿಪುರ ನಾಗಲ್ಯಾಂಡ್,ಅಸ್ಸಾಂ ಅರುಣಾಚಲ,ಮೇಘಾಲಯ. 8073824856 9206979202 6366322639

★ಶ್ರೇಯಸ್ ಟೂರ್ಸ್★ 08.10.2022 12ದಿನಗಳು ಅಖಂಡ ಗುಜರಾತ್‌ರಾಜ್ಯ ಪ್ರವಾಸ.12.10.2022 10ದಿನಗಳು ಅಖಂಡ ರಾಜಸ್ಥಾನ ರಾಜ್ಯ ಪ್ರವಾಸ. 01.11.2022 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯ ಪ್ರವಾಸ.04.11.2022 10ದಿನಗಳು ಅಖಂಡ ನೇಪಾಳರಾಷ್ಟ್ರ(ಮುಕ್ತಿನಾಥ) 25.10.2022 8ದಿನಗಳು ಅಖಂಡ ಕೇರಳರಾಜ್ಯ ಪ್ರವಾಸ.8073824856 9206979202 6366322639

ಮಾರುತಿ ಟ್ರಾವೆಲ್ಸ್. 1.10.2022 ತಮಿಳುನಾಡು 5 ದಿನಗಳು. 7.10.2022 ಕೇರಳ 5 ದಿನಗಳು. 14.10.2022 ಶಿರಡಿ 5 ದಿನಗಳು. 21.10.2022 ಆಂಧ್ರ- ತೆಲಂಗಾಣ 5 ದಿನಗಳು. 30.10.2022 ಕಾಶಿಯಾತ್ರಾ 14 ದಿನಗಳು. 9916688569

ಕಾಶಿ ಅಯೋಧ್ಯ ಅಲಹಾಬಾದ್ ಗಯಾ,ಬುದ್ಧಗಯಾ,ಕೋಲ್ಕತ ಪೂರಿಜಗನ್ನಾಥ್ ಕೊನಾರ್ಕ್ ಸೂರ್ಯ ದೇವಾಲಯಾ ಭುವನೇಶ್ವರ್ 02.12.2022 ರಿಂದ 9 ದಿನಗಳು. ಸಂಪರ್ಕಿಸಿ: ವಿಜಯ ಟ್ರಾವಲ್ಸ್ ಮಲ್ಲೇಶ್ವರಂ ಬೆಂಗಳೂರು. 9448294477

### Pilgrimage Tours

ಸುವರ್ಣಯಾತ್ರ. 7 ದಿನಗಳ ಕಾಶಿ ಪ್ರವಾಸ 121022.ವೈದ್ಯನಾಥ, ನೈಮಿಷಾರಣ್ಯ, ಅಯೋಧ್ಯಾ, ಇತರೆ. 7 ದಿನಗಳ ಶಿರಡಿ ಪ್ರವಾಸ 051022ತ್ರಯಂಬಕಶ್ವರ, ಗೃಷ್ಣೇಶ್ವರ, ಭೀಮಾಶಂಕರ, ಪಂಡರಾಪುರ, ಕೊಲ್ಲಾಪುರ, ಇತರೆ. 9019462508, 9008381022

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

| Per word | Ordinary | Bold | Ordinary Semi Display | Bold Semi Display |
|---|---|---|---|---|
| | 70 | 100 | 80 | 135 |

| CD Per Sqcm | Single Col | Double Col | Multi Col |
|---|---|---|---|
| | 480 | 450 | 475 |

| SPECIAL OFFER | | | | | |
|---|---|---|---|---|---|
| PAY | 2 | And | GET | 1 | Free |
| PAY | 3 | And | GET | 2 | Free |
| PAY | 5 | And | GET | 5 | Free |

For More Details Contact:
Ph:080- 45557160 | 163 | 164 |
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

ಲಂಡನ್‌ನ ಒ2 ಅರೆನಾದಲ್ಲಿ ಭಾವುಕ ಕ್ಷಣಗಳು; ತೆರೆಮರೆಗೆ ಸರಿದ ಸ್ವಿಸ್ ದಿಗ್ಗಜ ಫೆಡರರ್

# ವಿದಾಯಕ್ಕೆ ಭಾವನಾತ್ಮಕ ಸ್ಪರ್ಶ

ಲಂಡನ್ (ರಾಯಿಟರ್ಸ್/ ಎಎಫ್‌ಪಿ): ಟೆನಿಸ್ ಲೋಕದ ದಿಗ್ಗಜ ಆಟಗಾರ, ಕೋಟ್ಯಾಂತರ ಅಭಿಮಾನಿಗಳ ಕಣ್ಮಣಿ ಸ್ವಿಟ್ಜರ್‌ಲೆಂಡ್‌ನ ರೋಜರ್ ಫೆಡರರ್ ಅವರು ಇಪ್ಪತ್ತನಾಲ್ಕು ವರ್ಷಗಳ ವೃತ್ತಿಜೀವನಕ್ಕೆ ಕಣ್ಣೀರಿನ ವಿದಾಯ ಕೋರಿದರು.

ಲೆವರ್ ಕಪ್ ಟೆನಿಸ್ ಟೂರ್ನಿಯಲ್ಲಿ ಶುಕ್ರವಾರ ರಾತ್ರಿ ನಡೆದ ಡಬಲ್ಸ್ ಪಂದ್ಯದಲ್ಲಿ ಫೆಡರರ್ ತಮ್ಮ 'ಬದ್ಧ ವೈರಿ ಹಾಗೂ ಉತ್ತಮ ಸ್ನೇಹಿತ' ಸ್ಪೇನ್‌ನ ರಫೆಲ್ ನಡಾಲ್ ಜತೆಗೂಡಿ ಆಡಿ ಟೆನಿಸ್ ಜಗತ್ತಿಗೆ ಗುಡ್‌ಬೈ ಹೇಳಿದರು. 20 ಗ್ರ್ಯಾನ್ ಸ್ಲಾಮ್ ಟ್ರೋಫಿಗಳ ಒಡೆಯನಿಗೆ ಕೊನೆಯ ಪಂದ್ಯ ದಲ್ಲಿ ಗೆಲುವು ದಕ್ಕಲಿಲ್ಲ. 'ಟೀಮ್ ವರ್ಲ್ಡ್' ತಂಡದ ಜಾಕ್ ಸಾಕ್ ಮತ್ತು ಫ್ರಾನ್ಸೆಸ್ಕೊ ಟೈಫೊ 4-6, 7-6, 11-9 ರಲ್ಲಿ 'ಟೀಮ್ ಯುರೋಪ್' ತಂಡದ ಫೆಡರರ್–ನಡಾಲ್ ವಿರುದ್ಧ ಗೆದ್ದರು.

ಟೆನಿಸ್ ಜಗತ್ತಿನ ಅಪ್ರತಿಮ ಆಟಗಾರನ ವಿದಾಯ ಪಂದ್ಯದ ವೇಳೆ ಲಂಡನ್‌ನ ಒ2 ಅರೆನಾ ದಲ್ಲಿ ಮೂಡಿಬಂದ ಭಾವುಕ ಕ್ಷಣಗಳು ಅಭಿಮಾನಿಗಳ ಹೃದಯದಲ್ಲಿ ಬಹುಕಾಲ ಅಚ್ಚಳಿಯದೇ ಉಳಿಯಲಿದೆ. ಈ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಗಲು 17,500 ಪ್ರೇಕ್ಷಕರು ನೆರೆದಿದ್ದರು.

ಡಬಲ್ಸ್ ಪಂದ್ಯ ಕೊನೆಗೊಂಡಾಗ ಕೆಲ ಸೆಕೆಂಡು ಕ್ರೀಡಾಂಗಣ ನಿಶ್ಯಬ್ಧವಾಯಿತು. ಆ ಬಳಿಕ ಎಲ್ಲರೂ ಎದ್ದುನಿಂತು ಚಪ್ಪಾಳೆ ಮೂಲಕ ತಮ್ಮ ನೆಚ್ಚಿನ ಆಟಗಾರನಿಗೆ ಗೌರವ ಸಲ್ಲಿಸಿದರು.

ಸ್ಪರ್ಧಾತ್ಮಕ ಟೆನಿಸ್‌ನ ಕೊನೆಯ ಪಂದ್ಯಕ್ಕೆ ತೆರೆಬೀಳುತ್ತಿದ್ದಂತೆಯೇ ಫೆಡರರ್, ಜತೆಗಾರ ನಡಾಲ್ ಅವರನ್ನು ಅಪ್ಪಿಕೊಂಡು ಕೃತಜ್ಞತೆ ಸಲ್ಲಿಸಿದರು. ಆ ಬಳಿಕ ಎದುರಾಳಿ ಆಟಗಾರರನ್ನು ಅಭಿನಂದಿಸಿದರು.

ತಮ್ಮ ರ‍್ಯಾಕೆಟ್ ಬ್ಯಾಗ್‌ನೊಳಗಿಟ್ಟ ಬಳಿಕ 'ಟೀಮ್ ಯುರೋಪ್' ತಂಡ ಸಹ ಆಟಗಾರರ ಬಳಿ ತೆರಳಿದರು. ಸಮಕಾಲೀನ ಆಟಗಾರರಾದ ಆ್ಯಂಡಿ ಮರೆ, ನೊವಾಕ್ ಜೊಕೊವಿಚ್ ಅವರನ್ನು ಅಪ್ಪಿಕೊಂಡು ಬೆನ್ನುತಟ್ಟಿದರು. ಅದುವರೆಗೂ ದುಃಖವನ್ನು ಅದುಮಿಟ್ಟುಕೊಂಡಿದ್ದ 41 ವರ್ಷದ ಫೆಡರರ್, ಬಿಕ್ಕಿಬಿಕ್ಕಿ ಅತ್ತರು.

ಪಂದ್ಯದ ಬಳಿಕ ಮಾತನಾಡುವಾಗ ಅವರಿಗೆ ದುಃಖ ಪದೇ ಪದೇ ಉಮ್ಮಳಿಸಿ ಬಂತು. ಟಿ.ವಿ ನಿರೂಪಕನ ಪ್ರಶ್ನೆಗಳಿಗೆ ಉತ್ತರ ಆರಂಭಿಸುತ್ತಿದ್ದರೂ ಪೂರ್ಣಗೊಳಿಸಲು ಆಗುತ್ತಿರಲಿಲ್ಲ. ಮಾತು ಗಂಟಲಲ್ಲೇ ಉಳಿದುಕೊಂಡಿತು. ಹಲವು ಸಲ ಕಣ್ಣೊರೆಸಿಕೊಂಡರು. ಅದರ ನಡುವೆಯೂ 'ನನಗೆ ದುಃಖ ಆಗಿಲ್ಲ. ಸಂತಸದಿಂದಲೇ ಇದ್ದೇನೆ' ಎಂದು ಗದ್ಗರಿತರಾಗಿ ಹೇಳಿದರು.

ವಿದಾಯ ಪಂದ್ಯದ ಬಳಿಕ ರೋಜರ್ ಫೆಡರರ್ ಅವರನ್ನು 'ಟೀಮ್ ಯುರೋಪ್' ಮತ್ತು 'ಟೀಮ್ ವರ್ಲ್ಡ್' ತಂಡದ ಆಟಗಾರರು ಎತ್ತಿಕೊಂಡ ಕ್ಷಣ –ಪಿಟಿಐ ಚಿತ್ರ

ಪತ್ನಿ ಮಿರ್ಕಾ ಅವರನ್ನು ಅಪ್ಪಿಕೊಂಡು ಭಾವುಕರಾದ ಫೆಡರರ್ –ಎಪಿ ಚಿತ್ರ

ಕೊನೆಯ ಪಂದ್ಯವನ್ನು ಜತೆಯಲ್ಲಿ ಆಡಿದ ನಡಾಲ್ ಅಲ್ಲದೆ ಲೆವರ್ ಕಪ್‌ನಲ್ಲಿ ಪಾಲ್ಗೊಂಡ ಆಟಗಾರರಿಗೆ ಅಭಿನಂದನೆ ಸಲ್ಲಿಸಿದರು. ಟೆನಿಸ್ ಪಯಣದಲ್ಲಿ ತಮ್ಮ ಜತೆ ನಿಂತ ಪತ್ನಿ ಮಿರ್ಕಾ ಫೆಡರರ್ ಅವರ ಬೆಂಬಲವನ್ನು ಸ್ಮರಿಸಿಕೊಂಡರು. ಗ್ಯಾಲರಿಯಲ್ಲಿದ್ದ ಮಿರ್ಕಾ ಅವರೂ ಕಣ್ಣೀರು ಹಾಕಿದರು.

ಅವಳಿ ಹೆಣ್ಣುಮಕ್ಕಳಾದ ಮೈಲಾ- ಚಾರ್ಲಿನ್ ಮತ್ತು ಅವಳಿ ಗಂಡುಮಕ್ಕಳಾದ ಲಿಯೊ -ಲೆನಿ, ಹೆತ್ತವರಾದ ಲಿನೆಟ್– ರಾಬರ್ಟ್ ಅವರನ್ನು ಅಪ್ಪಿಕೊಂಡಾಗಲಂತೂ ಫೆಡರರ್‌ಗೆ ದುಃಖ ತಡೆಯಲಾಗಲಿಲ್ಲ. ಆ ವೇಳೆ ಸಾವಿರಾರು ಪ್ರೇಕ್ಷಕರ ಕಣ್ಣಾಲಿಗಳೂ ತೇವಗೊಂಡವು.

ಸ್ವಿಟ್ಜರ್‌ಲೆಂಡ್‌ನ ಬಾಸೆಲ್‌ನಲ್ಲಿ ಹುಟ್ಟಿ ಬೆಳೆದ ತನ್ನನ್ನು ಬಾನೆತ್ತರಕ್ಕೆ ಬೆಳೆದು ನಿಲ್ಲಿಸಿದ ಟೆನಿಸ್ ಕೋರ್ಟ್‌ಅನ್ನು ಭಾರವಾದ ಹೆಜ್ಜೆಗಳೊಂದಿಗೆ ತೊರೆದರು. ಒಂದು ಕೈಯನ್ನು ಎದೆಯ ಮೇಲಿಟ್ಟು, ಇನ್ನೊಂದು ಕೈಯನ್ನು ಪ್ರೇಕ್ಷಕರತ್ತ ಬೀಸಿ ಮನದಾಳದಿಂದ ಕೃತಜ್ಞತೆ ಸಲ್ಲಿಸಿದರು.

ಸಾಂಪ್ರದಾಯಿಕ ಟೆನಿಸ್‌ನ ಸೌಂದರ್ಯ ಮತ್ತು ಆಧುನಿಕ ಟೆನಿಸ್‌ನ ವೇಗದ ಶೈಲಿಯನ್ನು ತಮ್ಮ ಆಟದಲ್ಲಿ ಸಮಪ್ರಮಾಣದಲ್ಲಿ ಬೆರೆಸಿಕೊಂಡು, ಅಭಿಮಾನಿಗಳ ಹೃದಯ ಗೆದ್ದಿರುವ ಫೆಡರರ್ ತೆರೆಮರೆಗೆ ಸರಿಯುವುದರೊಂದಿಗೆ ಒಂದು ಯುಗ ಕೊನೆಗೊಂಡಂತಾಗಿದೆ.

20 ಗ್ರ್ಯಾನ್‌ಸ್ಲಾಮ್ ಕಿರೀಟ, 103 ಪ್ರಶಸ್ತಿ ಸೇರಿದಂತೆ ಎರಡು ದಶಕಗಳಿಗೂ ಹೆಚ್ಚು ಕಾಲ ಅಭಿಮಾನಿಗಳಿಗೆ ಆಟದ ಸೌಂದರ್ಯ ಉಣಬಡಿಸಿದ ಫೆಡರರ್ ನಿವೃತ್ತಿಯೊಂದಿಗೆ ಟೆನಿಸ್ ಜಗತ್ತಿನಲ್ಲೊಂದು ದೊಡ್ಡ ನಿರ್ವಾತ ಸೃಷ್ಟಿಯಾಯಿತು.

ಫೆಡರರ್ ತಲೆತಗ್ಗಿಸಿ ಕಣ್ಣೀರು ಹಾಕಿದಾಗ, ನಡಾಲ್ ಅವರ ಕಣ್ಣಾಲಿಗಳು ತೇವಗೊಂಡವು –ಎಎಫ್‌ಪಿ ಚಿತ್ರ

### ಕಣ್ಣೀರು ಹಾಕಿದ ರಫೆಲ್ ನಡಾಲ್

ಟೆನಿಸ್ ಜಗತ್ತಿನಲ್ಲಿ ಫೆಡರರ್– ನಡಾಲ್ ನಡುವಿನ 'ವೈರತ್ವ' ಏನೆಂಬುದು ಎಲ್ಲರಿಗೂ ತಿಳಿದಿದೆ. ಗ್ರ್ಯಾನ್‌ಸ್ಲಾಮ್ ಟೂರ್ನಿಯ ಎಷ್ಟೋ ಪಂದ್ಯಗಳಲ್ಲಿ ಇವರು ಪರಸ್ಪರ ಪಟ್ಟುಬಿಡದೆ ಪೈಪೋಟಿ ನಡೆಸಿದ್ದರು. ಆದರೆ ಶುಕ್ರವಾರ ರಾತ್ರಿ ಸ್ಪೇನ್ ಆಟಗಾರ ಕೂಡಾ ಫೆಡರರ್ ಜತೆ ಕಣ್ಣೀರು ಹಾಕಿದರು.

ಅಂಗಳದ ಬದಿಯ ಬೆಂಚ್‌ನಲ್ಲಿ ಕುಳಿತು ಫೆಡರರ್ ತಲೆತಗ್ಗಿಸಿ ಕಣ್ಣೀರು ಹಾಕಿದಾಗ, ಪಕ್ಕದಲ್ಲಿ ಕುಳಿತಿದ್ದ ನಡಾಲ್ ಕೂಡಾ ಕಣ್ಣೀರು ಸುರಿಸಿದರು. ಆ ಕ್ಷಣದ ಫೋಟೊ ಮತ್ತು ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿದೆ.

'ರೋಜರ್ ನಿವೃತ್ತಿಯೊಂದಿಗೆ ನನ್ನ ಜೀವನದ ಬಹುಮುಖ್ಯ ಭಾಗವೊಂದು ತೆರೆಮರೆಗೆ ಸರಿದ ಅನುಭವ ಆಗುತ್ತಿದೆ. ಏಕೆಂದರೆ ನನ್ನ ಜೀವನದ ಪ್ರಮುಖ ಕ್ಷಣಗಳಲ್ಲಿ ಅವರೂ ಭಾಗವಾಗಿದ್ದರು' ಎಂದು ನಡಾಲ್ ಪ್ರತಿಕ್ರಿಯಿಸಿದ್ದಾರೆ.

# ಸರಣಿ ಜಯದತ್ತ ರೋಹಿತ್ ಪಡೆ ಚಿತ್ತ

## ಭಾರತ–ಆಸ್ಟ್ರೇಲಿಯಾ ನಡುವಣ ಕೊನೆಯ ಟಿ20 ಕ್ರಿಕೆಟ್ ಪಂದ್ಯ ಇಂದು

ಹೈದರಾಬಾದ್ (ಪಿಟಿಐ): ಆಸ್ಟ್ರೇಲಿಯಾ ವಿರುದ್ಧದ ಮೂರನೇ ಹಾಗೂ ಕೊನೆಯ ಟಿ20 ಪಂದ್ಯ ಭಾನುವಾರ ಇಲ್ಲಿ ನಡೆಯಲಿದ್ದು, ರೋಹಿತ್ ಶರ್ಮಾ ಬಳಗ ಸರಣಿ ಗೆಲುವಿನತ್ತ ಚಿತ್ತಹರಿಸಿದೆ.

ಮೊಹಾಲಿಯಲ್ಲಿ ನಡೆದಿದ್ದ ಮೊದಲ ಪಂದ್ಯದಲ್ಲಿ ಸೋತಿದ್ದ ಭಾರತ, ನಾಗಪುರದಲ್ಲಿ ಶುಕ್ರವಾರ ನಡೆದಿದ್ದ ಎಂಟು ಓವರ್‌ಗಳ ಪಂದ್ಯ ಗೆದ್ದು ಸರಣಿಯನ್ನು 1–1 ರಲ್ಲಿ ಸಮಬಲ ಮಾಡಿಕೊಂಡಿತ್ತು.

ಕಳೆದ ಪಂದ್ಯದಲ್ಲಿ ಗೆದ್ದಿದ್ದರೂ ಭಾರತದ ಬೌಲಿಂಗ್ ವಿಭಾಗ ಪ್ರಭಾವಿ ಎನಿಸಿರಲಿಲ್ಲ. ನಾಯಕ ರೋಹಿತ್ ಅವರ ಭರ್ಜರಿ ಬ್ಯಾಟಿಂಗ್ ಗೆಲುವು ತಂದುಕೊಟ್ಟಿತ್ತು. ಆದ್ದರಿಂದ ಭಾನುವಾರ ಬೌಲರ್‌ಗಳು ನೀಡುವ ಪ್ರದರ್ಶನದ ಮೇಲೆ ಎಲ್ಲರ ಗಮನ ಹರಿದಿದೆ.

ಹರ್ಷಲ್ ಪಟೇಲ್ ಮತ್ತು ಯಜುವೇಂದ್ರ ಚಾಹಲ್ ಅವರು ಫಾರ್ಮ್ ಕಂಡುಕೊಳ್ಳುವ ವಿಶ್ವಾಸದಲ್ಲಿ ಭಾರತ ತಂಡ ಇದೆ.

ಗಾಯದಿಂದ ಚೇತರಿಸಿಕೊಂಡ ಬಳಿಕ ಮೊದಲ ಬಾರಿ ಆಡಿದ್ದ ಜಸ್‌ಪ್ರೀತ್ ಬೂಮ್ರಾ, ಗಮನ ಸೆಳೆದಿದ್ದರು. ತಮ್ಮ ಪ್ರಮುಖ 'ಅಸ್ತ್ರ' ಎನಿಸಿರುವ ಯಾರ್ಕರ್‌ಗಳನ್ನು ಪರಿಣಾಮಕಾರಿಯಾಗಿ ಬಳಸಿದ್ದರು.

ಭಾರತ ತಂಡದ ಕೋಚ್ ರಾಹುಲ್ ದ್ರಾವಿಡ್ ಹಾಗೂ ನಾಯಕ ರೋಹಿತ್ ಶರ್ಮ –ಪಿಟಿಐ ಚಿತ್ರ

ಆದರೆ ಇನ್ನೊಬ್ಬ ವೇಗಿ ಭುವನೇಶ್ವರ್ ಕುಮಾರ್ ಲಯ ಕಂಡುಕೊಳ್ಳದೇ ಇರುವುದು ಚಿಂತೆಗೆ ಕಾರಣವಾಗಿದೆ. ಏಷ್ಯಾ ಕಪ್ ಟೂರ್ನಿ ಅಲ್ಲದೆ, ಮೊಹಾಲಿಯಲ್ಲಿ ನಡೆದಿದ್ದ ಮೊದಲ ಪಂದ್ಯದಲ್ಲೂ ಅವರು ಪ್ರಭಾವಿ ದಾಳಿ ನಡೆಸಿರಲಿಲ್ಲ. ಶುಕ್ರವಾರ ಎಂಟು ಓವರ್‌ಗಳ ಪಂದ್ಯ ನಡೆಸಿದ್ದರಿಂದ ಭಾರತ, ನಾಲ್ವರು ಬೌಲರ್‌ಗಳೊಂದಿಗೆ ಕಣಕ್ಕಿಳಿದಿತ್ತು. ಭುವನೇಶ್ವರ್ ಅವರನ್ನು ಆಡಿಸಿರಲಿಲ್ಲ.

'ಡೆತ್ ಓವರ್ ಸ್ಪೆಷಲಿಸ್ಟ್' ಎನಿಸಿಕೊಂಡಿರುವ ಹರ್ಷಲ್, ಗಾಯದಿಂದ ಚೇತರಿಕೊಂಡು ಕಣಕ್ಕಿಳಿದರೂ ಹಳೆಯ ಲಯ ಕಂಡುಕೊಂಡಿಲ್ಲ. ಮೊದಲ ಎರಡು ಪಂದ್ಯಗಳಲ್ಲಿ ಅವರು ಆರು ಓವರ್‌ಗಳಲ್ಲಿ 13.50ರ ಸರಾಸರಿಯಲ್ಲಿ 81 ರನ್ ಬಿಟ್ಟುಕೊಟ್ಟಿದ್ದು, ವಿಕೆಟ್ ಪಡೆಯುವಲ್ಲಿ ವಿಫಲರಾಗಿದ್ದಾರೆ.

ಸ್ಪಿನ್ ವಿಭಾಗದಲ್ಲಿ ಅಕ್ಷರ್ ಪಟೇಲ್ ಭರವಸೆ ಮೂಡಿಸಿದರೆ, ಚಾಹಲ್ ವೈಫಲ್ಯ ಅನುಭವಿಸುತ್ತಿದ್ದಾರೆ. ಏಷ್ಯಾ ಕಪ್‌ನ ಪಂದ್ಯಗಳಲ್ಲಿ ಸಾಕಷ್ಟು ರನ್‌ಗಳನ್ನು ಬಿಟ್ಟುಕೊಟ್ಟಿದ್ದ ಚಾಹಲ್, ಅದೇ ತಪ್ಪನ್ನು ಈ ಸರಣಿಯಲ್ಲೂ ಮುಂದುವರಿಸಿದ್ದಾರೆ.

ಬ್ಯಾಟಿಂಗ್ ವಿಭಾಗದಲ್ಲಿ ರೋಹಿತ್ ಶರ್ಮ, ಕೆ.ಎಲ್.ರಾಹುಲ್, ವಿರಾಟ್ ಕೊಹ್ಲಿ ಮತ್ತು ಸೂರ್ಯಕುಮಾರ್ ಯಾದವ್ ಅವರು ಪ್ರದರ್ಶನದಲ್ಲಿ ಸ್ಥಿರತೆ ಕಾಪಾಡಿಕೊಳ್ಳುವುದು ಮುಖ್ಯ.

ಮತ್ತೊಂದೆಡೆ ಆಸ್ಟ್ರೇಲಿಯಾ ಕೂಡಾ ಸರಣಿ ಜಯದತ್ತ ಕಣ್ಣಿಟ್ಟಿದ್ದು, ಈ ಪಂದ್ಯದಲ್ಲಿ ತುರುಸಿನ ಹೋರಾಟ ನಿರೀಕ್ಷಿಸಲಾಗಿದೆ. ಮ್ಯಾಥ್ಯೂ ವೇಡ್ ಅತ್ಯುತ್ತಮ ಫಾರ್ಮ್‌ನಲ್ಲಿರುವುದು ಪ್ರವಾಸಿ ತಂಡದ ಆತ್ಮವಿಶ್ವಾಸ ಹೆಚ್ಚಿಸಿದೆ.

**ಪಂದ್ಯ ಆರಂಭ:** ಸಂಜೆ 7

**ನೇರ ಪ್ರಸಾರ:** ಸ್ಟಾರ್‌ಸ್ಪೋರ್ಟ್ಸ್ ಮತ್ತು ಡಿಸ್ನಿ ಹಾಟ್‌ಸ್ಟಾರ್

ಕ್ರಿಕೆಟ್: ಇಂಗ್ಲೆಂಡ್ ವಿರುದ್ಧ 16 ರನ್ ಗೆಲುವು; ಭಾರತ 'ಕ್ಲೀನ್‌ಸ್ವೀಪ್' ಸಾಧನೆ

# ಜೂಲನ್‌ಗೆ ಜಯದ ಉಡುಗೊರೆ

ಲಂಡನ್ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ಕಂಡಂತಹ ಅತ್ಯಂತ ಯಶಸ್ವಿ ವೇಗದ ಬೌಲರ್ ಜೂಲನ್ ಗೋಸ್ವಾಮಿ ಅವರಿಗೆ ಹರ್ಮನ್‌ಪ್ರೀತ್ ಕೌರ್ ಬಳಗ ಗೆಲುವಿನ ವಿದಾಯ ಕೋರಿತು.

ಲಾರ್ಡ್ಸ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಇಂಗ್ಲೆಂಡ್ ವಿರುದ್ಧದ ಏಕದಿನ ಕ್ರಿಕೆಟ್ ಸರಣಿಯ ಮೂರನೇ ಹಾಗೂ ಕೊನೆಯ ಪಂದ್ಯವನ್ನು ಭಾರತ 16 ರನ್‌ಗಳಿಂದ ಗೆದ್ದಿತು. ಈ ಮೂಲಕ ಮೂರು ಪಂದ್ಯಗಳ ಸರಣಿಯನ್ನು 3–0 ರಲ್ಲಿ ಜಯಿಸಿತು. ಇಂಗ್ಲೆಂಡ್ ನೆಲದಲ್ಲಿ ಭಾರತ ಮಹಿಳಾ ತಂಡ 'ಕ್ಲೀನ್‌ಸ್ವೀಪ್' ಸಾಧನೆ ಮಾಡಿದ್ದು ಇದೇ ಮೊದಲು.

ಮೊದಲು ಬ್ಯಾಟ್ ಮಾಡಿದ ಭಾರತ 45.4 ಓವರ್‌ಗಳಲ್ಲಿ 169 ರನ್ ಕಲೆಹಾಕಿತು. ಆದರೆ ಬಿಗುವಾದ ಬೌಲಿಂಗ್ ನಡೆಸಿ ಇಂಗ್ಲೆಂಡ್ ತಂಡವನ್ನು 43.5 ಓವರ್‌ಗಳಲ್ಲಿ 153 ರನ್‌ಗಳಿಗೆ ಆಲೌಟ್ ಮಾಡಿತು.

ವೃತ್ತಿಜೀವನದ ಕೊನೆಯ ಅಂತರರಾಷ್ಟ್ರೀಯ ಪಂದ್ಯದಲ್ಲೂ ಜೂಲನ್ ಮಿಂಚಿದರು. 10 ಓವರ್ ಬೌಲ್ ಮಾಡಿದ ಅವರು ಎರಡು ವಿಕೆಟ್ ಪಡೆದರು. ಏಕದಿನ ಕ್ರಿಕೆಟ್‌ನಲ್ಲಿ ತಮ್ಮ ವಿಕೆಟ್‌ಗಳ ಸಂಖ್ಯೆಯನ್ನು 255ಕ್ಕೆ ಹೆಚ್ಚಿಕೊಂಡರು. ರೇಣುಕಾ ಸಿಂಗ್ (29ಕ್ಕೆ 4) ಮತ್ತು ರಾಜೇಶ್ವರಿ ಗಾಯಕವಾಡ್ (38ಕ್ಕೆ 2) ಅವರು ಭಾರತದ ಗೆಲುವಿನ ಹಾದಿ ಸುಗಮಗೊಳಿಸಿದರು.

ಪಂದ್ಯಕ್ಕೂ ಮುನ್ನ ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರು ಜೂಲನ್ ಗೋಸ್ವಾಮಿ ಅವರನ್ನು ಅಪ್ಪಿಕೊಂಡು ಭಾವುಕರಾದರು – ಬಿಸಿಸಿಐ ಟ್ವಿಟರ್ ಚಿತ್ರ

ಸ್ಮೃತಿ, ದೀಪ್ತಿ ಆಸರೆ: ಮೊದಲು ಬ್ಯಾಟ್ ಮಾಡಿದ ಭಾರತ, ಕೇಟ್ ಕ್ರಾಸ್ (26ಕ್ಕೆ 4) ಅವರ ಬಿಗುವಾದ ದಾಳಿಗೆ ನಲುಗಿ 29 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡಿತು. ಶಫಾಲಿ ವರ್ಮಾ ಮತ್ತು ಯಸ್ತಿಕಾ ಭಾಟಿಯಾ ಖಾತೆ ತೆರೆಯದೆ ಪೆವಿಲಿಯನ್‌ಗೆ ಮರಳಿದರು. ಹರ್ಮನ್‌ಪ್ರೀತ್ (4) ಮತ್ತು ಹರ್ಲೀನ್ ಡಿಯೊಲ್ (3) ವಿಫಲರಾದರು.

ಆದರೆ ಸ್ಮೃತಿ ಮಂದಾನಾ (50 ರನ್, 79 ಎ., 4X5) ಮತ್ತು ದೀಪ್ತಿ ಶರ್ಮಾ (ಔಟಾಗದೆ 68, 106 ಎ., 4X7) ಅವರು ಅರ್ಧಶತಕ ಗಳಿಸಿ ತಂಡಕ್ಕೆ ಆಸರೆಯಾದರು.

ಜೂಲನ್ ಅವರು ಮೊದಲ ಎಸೆತದಲ್ಲೇ ಔಟಾದರು. ಫ್ರೆಯಾ ಕೆಂಪ್ ಬೌಲಿಂಗ್‌ನಲ್ಲಿ ಬೌಲ್ಡ್ ಆದರು.

**ಸಂಕ್ಷಿಪ್ತ ಸ್ಕೋರ್:** ಭಾರತ: 45.4 ಓವರ್‌ಗಳಲ್ಲಿ 169 (ಸ್ಮೃತಿ ಮಂದಾನ 50, ದೀಪ್ತಿ ಶರ್ಮಾ ಔಟಾಗದೆ 68, ಪೂಜಾ ವಸ್ತ್ರಕರ್ 22, ಕೇಟ್ ಕ್ರಾಸ್ 26ಕ್ಕೆ 4, ಫ್ರೆಯಾ ಕೆಂಪ್ 24ಕ್ಕೆ 2, ಸೋಫಿ ಎಕ್ಲೆಸ್ಟೋನ್ 27ಕ್ಕೆ 2)

ಇಂಗ್ಲೆಂಡ್: 43.3 ಓವರ್‌ಗಳಲ್ಲಿ 153 (ಆ್ಯಮಿ ಜೋನ್ಸ್ 28, ಚಾರ್ಲಿ ಡೀನ್ 47, ಜೂಲನ್ ಗೋಸ್ವಾಮಿ 30ಕ್ಕೆ 2, ರೇಣುಕಾ ಸಿಂಗ್ 29ಕ್ಕೆ 4, ರಾಜೇಶ್ವರಿ ಗಾಯಕವಾಡ್ 38ಕ್ಕೆ 2) ಫಲಿತಾಂಶ: ಭಾರತಕ್ಕೆ 16 ರನ್ ಗೆಲುವು

### ಜೂಲನ್‌ಗೆ ಗೌರವ

ಕೊನೆಯ ಪಂದ್ಯದಲ್ಲಿ ಬ್ಯಾಟಿಂಗ್‌ಗಾಗಿ ಕ್ರೀಸ್‌ಗೆ ಬರುವಾಗ ಇಂಗ್ಲೆಂಡ್ ತಂಡದ ಆಟಗಾರ್ತಿಯರು ಸಾಲಾಗಿ ನಿಂತು (ಗಾರ್ಡ್ ಆಫ್ ಆನರ್) ಜೂಲನ್‌ಗೆ ಗೌರವ ಸಲ್ಲಿಸಿದರು. ಆ್ಯಮಿ ಜೋನ್ಸ್ ನೇತೃತ್ವದಲ್ಲಿ ಇಂಗ್ಲೆಂಡ್ ತಂಡದ ಸದಸ್ಯರು ಚಪ್ಪಾಳೆ ಮೂಲಕ ಕ್ರೀಸ್‌ಗೆ ಸ್ವಾಗತಿಸಿದರು. ಜೂಲನ್ ತಮ್ಮ ಬಲಗೈ ಮೇಲಕ್ಕೆತ್ತಿ ಗೌರವ ಸ್ವೀಕರಿಸಿದರು.

ಆ ಬಳಿಕ ಫೀಲ್ಡಿಂಗ್‌ಗೆ ಬರುವಾಗ ಭಾರತ ತಂಡದ ತಂಡದ ಆಟಗಾರ್ತಿಯರು ಕೂಡಾ ಸಾಲಾಗಿ ನಿಂತು ಜೂಲನ್‌ಗೆ ಗೌರವ ಸಲ್ಲಿಸಿದರು.

### ಸಂಕ್ಷಿಪ್ತ ಸುದ್ದಿ

## ಫುಟ್‌ಬಾಲ್: ಡ್ರಾ ಪಂದ್ಯದಲ್ಲಿ ಭಾರತ

ಹೊ ಚಿ ಮಿನ್ ಸಿಟಿ (ಪಿಟಿಐ): ಭಾರತ ತಂಡ ಫಿಫಾ ಅಂತರರಾಷ್ಟ್ರೀಯ ಸೌಹಾರ್ದ ಫುಟ್‌ಬಾಲ್ ಪಂದ್ಯದಲ್ಲಿ ಸಿಂಗಪುರ ಜತೆ 1–1 ಗೋಲುಗಳ ಡ್ರಾ ಸಾಧಿಸಿತು.

ಶನಿವಾರ ನಡೆದ ಪಂದ್ಯದ 37ನೇ ನಿಮಿಷದಲ್ಲಿ ಇಖ್ಸನ್ ಫಂಡಿ ಅವರು ಸಿಂಗಪುರ ತಂಡಕ್ಕೆ ಮುನ್ನಡೆ ತಂದಿತ್ತರು. ಫ್ರೀಕಿಕ್‌ನಲ್ಲಿ ಅವರು 25 ಯಾರ್ಡ್ ದೂರದಿಂದ ಒದ್ದ ಚೆಂಡು ಭಾರತದ ಗೋಲ್‌ಕೀಪರ್ ಗುರುಪ್ರೀತ್ ಸಿಂಗ್ ಸಂಧು ಅವರನ್ನು ಕಬಳಿಸಿ ಗುರಿ ಸೇರಿತು.

ಆದರೆ ಸಿಂಗಪುರ ಆಟಗಾರರ ಸಂಭ್ರಮ ಹೆಚ್ಚುಹೊತ್ತು ಇರಲಿಲ್ಲ. ಆಶಿಕ್ ಕುರುನಿಯನ್ 43ನೇ ನಿಮಿಷದಲ್ಲಿ ಭಾರತಕ್ಕೆ ಸಮಬಲದ ಗೋಲು ತಂದಿತ್ತರು. ಸುನಿಲ್ ಚೆಟ್ರಿ ನೀಡಿದ ನಿಖರ ಪಾಸ್‌ನಲ್ಲಿ ಚೆಂಡನ್ನು ನಿಯಂತ್ರಣಕ್ಕೆ ಪಡೆದುಕೊಂಡ ಆಶಿಕ್, ಗುರಿ ಸೇರಿಸುವಲ್ಲಿ ಯಾವುದೇ ತಪ್ಪು ಮಾಡಲಿಲ್ಲ.

## ಕ್ರಿಕೆಟ್: ನಿಕಿ ಸಾರಥ್ಯ

ಬೆಂಗಳೂರು: ರಾಷ್ಟ್ರೀಯ 19 ವರ್ಷದೊಳಗಿನ ಮಹಿಳೆಯರ ಟಿ20 ಕ್ರಿಕೆಟ್ ಟ್ರೋಫಿ ಟೂರ್ನಿಗೆ ಕರ್ನಾಟಕ ತಂಡವನ್ನು ಪ್ರಕಟಿಸಲಾಗಿದೆ. ನಿಕಿ ಪ್ರಸಾದ್ ಅವರು ತಂಡವನ್ನು ಮುನ್ನಡೆಸಲಿದ್ದಾರೆ. ಹೈದರಾಬಾದ್‌ನಲ್ಲಿ ಅಕ್ಟೋಬರ್ 1ರಿಂದ 8ರವರೆಗೆ ಟೂರ್ನಿ ನಡೆಯಲಿದೆ.

ತಂಡ: ನಿಕಿ ಪ್ರಸಾದ್ (ನಾಯಕಿ), ರೋಶಿನಿ ಕಿರಣ್ (ಉಪನಾಯಕಿ), ಸೌಮ್ಯಾ ವರ್ಮಾ, ಅನ್ನಪೂರ್ಣಾ ಜಿ. ಭೋಸಲೆ (ಇಬ್ಬರೂ ವಿಕೆಟ್ ಕೀಪರ್‌ಗಳು), ರಕ್ಷಿತಾ ನಾಯಕ್, ಪ್ರೇರಣಾ ಜಿ.ಆರ್, ಮಿಥಿಲಾ ವಿನೋದ್, ಸವಿ ಸುರೇಂದ್ರ, ನಿರ್ಮಿತಾ ಸಿ.ಜೆ, ರೀಮಾ ಫರೀದ್, ಶ್ಲೋಕಾ ಕಿಶೋರ್, ವಂದಿತಾ ಕೆ.ರಾವ್, ಹರ್ಷಿತಾ ಶೇಖರ್, ರೀತು ಆರ್. ಗೌಡ, ತೇಜಸ್ವಿನಿ ಬಿ.ಜಿ. ಕೋಚ್: ಕರುಣಾ ಜೈನ್, ಮ್ಯಾನೇಜರ್: ರಾಖಿ ಗಂಗಲ್, ಫಿಸಿಯೊ: ಇಶಿತಾ ಕುಲಕರ್ಣಿ, ಟ್ರೇನರ್: ಕೃತಿ ಎಸ್, ವಿಡಿಯೊ ಅನಾಲಿಸ್ಟ್: ಮಾಲಾ ರಂಗಸ್ವಾಮಿ.

# ಶೂಟಿಂಗ್: ಚಿನ್ನ ಗೆದ್ದ ಭಾರತ ತಂಡ

ಒಸಿಜೆಕ್, ಕ್ರೊವೇಷ್ಯಾ (ಪಿಟಿಐ): ಭಾರತದ ಜೂನಿಯರ್ ಪುರುಷರ ಟ್ರ್ಯಾಪ್ ತಂಡವು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಶಾಟ್‌ಗನ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿದೆ.

ಶನಿವಾರ ನಡೆದ ಫೈನಲ್‌ನಲ್ಲಿ ಭಾರತದ ಶೂಟರ್‌ಗಳು 6–4ರಿಂದ ಇಟಲಿ ತಂಡವನ್ನು ಸೋಲಿಸಿದರು. ಅಮೆರಿಕ ತಂಡ ಕಂಚು ಗೆದ್ದಿತು. ಚಾಂಪಿಯನ್‌ಷಿಪ್‌ನಲ್ಲಿ ಭಾರತಕ್ಕೆ ಒಲಿದ ಮೊದಲ ಪದಕ ಇದು.

ಭಾರತ ತಂಡದಲ್ಲಿ ಶಪಥ್ ಭಾರದ್ವಾಜ್, ಶಾರ್ದೂಲ್ ವಿಹಾನ್ ಮತ್ತು ಆರ್ಯವಂಶ್ ತ್ಯಾಗಿ ಇದ್ದರು.

ಜೆನರೇಷನ್ ಕಪ್ ಆನ್‌ಲೈನ್ ಚೆಸ್ ಟೂರ್ನಿ ಫೈನಲ್

# ಅರ್ಜುನ್– ಕಾರ್ಲ್‌ಸನ್ ಸೆಣಸು

ನ್ಯೂಯಾರ್ಕ್ (ಪಿಟಿಐ): ಭಾರತದ ಯುವ ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಎರಿಗೈಸಿ ಮತ್ತು ವಿಶ್ವ ಚಾಂಪಿಯನ್, ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಅವರು ಜೂಲಿಯಸ್ ಬಾರ್ ಜೆನರೇಷನ್ ಕಪ್ ಆನ್‌ಲೈನ್ ರ‍್ಯಾಪಿಡ್ ಚೆಸ್ ಟೂರ್ನಿಯ ಪ್ರಶಸ್ತಿಗಾಗಿ ಸೆಣಸಲಿದ್ದಾರೆ.

ಶನಿವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ 19 ವರ್ಷದ ಅರ್ಜುನ್, ಟೈಬ್ರೇಕರ್‌ನಲ್ಲಿ ವಿಯೆಟ್ನಾಂನ ಲಿಯೆಮ್ ಕ್ವಾಂಗ್ ಲೀ ಅವರನ್ನು ಸೋಲಿಸಿದರು. ತೀವ್ರ ಪೈಪೋಟಿ ಕಂಡುಬಂದ ಪಂದ್ಯದ ಮೊದಲ ಗೇಮ್ ಡ್ರಾನಲ್ಲಿ ಅಂತ್ಯವಾಯಿತು.

ಅರ್ಜುನ್

ಕಾರ್ಲ್‌ಸನ್

ಎರಡನೇ ಗೇಮ್ ಜಯಿಸಿದ ಅರ್ಜುನ್ ಮುನ್ನಡೆ ಸಾಧಿಸಿದರು. ಆದರೆ ಮೂರನೇ ಗೇಮ್ ಮತ್ತೆ ಡ್ರಾನಲ್ಲಿ ಕೊನೆಗೊಂಡಿತು. 32 ನಡೆಗಳ ನಾಲ್ಕನೇ ಗೇಮ್ ಲೀ ಪಾಲಾಯಿತು. ಆದರೆ ಟೈಬ್ರೇಕರ್‌ನಲ್ಲಿ ಜಾಣತನ ಮೆರೆದ ಅರ್ಜುನ್ ಎರಡು ನೇರ ಗೇಮ್‌ಗಳನ್ನು ಗೆದ್ದು ಪಂದ್ಯ ಕೈವಶಮಾಡಿಕೊಂಡರು.

ನಾಲ್ಕರ ಘಟ್ಟದ ಮತ್ತೊಂದು ಸೆಣಸಾಟದಲ್ಲಿ ಕಾರ್ಲ್‌ಸನ್ 3–1ರಿಂದ ಜರ್ಮನಿಯ ವಿನ್ಸೆಂಟ್ ಕೇಮರ್ ಅವರಿಗೆ ಸೋಲುಣಿಸಿದರು. ಪಂದ್ಯದ ಮೊದಲ ಎರಡು ಗೇಮ್‌ಗಳು ಡ್ರಾನಲ್ಲಿ ಕೊನೆ ಗೊಂಡವು. ಆದರೆ ನಂತರದ 2 ಗೇಮ್‌ಗಳಲ್ಲಿ ವಿಶ್ವದ ಅಗ್ರ ಕ್ರಮಾಂಕದ ಕಾರ್ಲ್‌ಸನ್ ಪಾರಮ್ಯ ಮೆರೆದರು.

₹ 1.20 ಕೋಟಿ ಬಹುಮಾನ ಮೊತ್ತದ ಟೂರ್ನಿಯ ಫೈನಲ್ ಶನಿವಾರ ತಡರಾತ್ರಿ ಆರಂಭವಾಗಿ ಭಾನುವಾರ ಕೊನೆಗೊಳ್ಳಲಿದೆ.

# ಅ. 15ರಿಂದ ಬೆಂಗಳೂರಿನಲ್ಲಿ ರಾಷ್ಟ್ರೀಯ ಓಪನ್ ಅಥ್ಲೆಟಿಕ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆಯು (ಕೆಎಎ) ಅಕ್ಟೋಬರ್ 15ರಿಂದ 19ರವರೆಗೆ ರಾಷ್ಟ್ರೀಯ ಓಪನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ಅನ್ನು ಇಲ್ಲಿ ಆಯೋಜಿಸಲಿದೆ.

ಕಂಠೀರವ ಕ್ರೀಡಾಂಗಣದಲ್ಲಿ ಭಾರತ ಅಥ್ಲೆಟಿಕ್ಸ್ ಫೆಡರೇಷನ್ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ನಡೆಯುವ ಚಾಂಪಿಯನ್‌ಷಿಪ್‌ಗೆ 29 ರಾಜ್ಯ ಸಂಸ್ಥೆಗಳ 12ಕ್ಕೂ ಹೆಚ್ಚು ಅಥ್ಲೀಟ್‌ಗಳು ಭಾಗವಹಿಸಲಿದ್ದಾರೆ ಎಂದು ಕೆಎಎ ಅಧ್ಯಕ್ಷ, ಶಾಸಕ ಡಾ. ಜಿ. ಪರಮೇಶ್ವರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೈಲ್ವೇಸ್, ಸರ್ವಿಸಸ್, ಒಎನ್‌ಜಿಸಿ, ಎಫ್‌ಸಿಐ, ಇಂಡಿಯನ್ ಬ್ಯಾಂಕ್ಸ್ ಮತ್ತು ಎಲ್‌ಐಸಿ ಪ್ರತಿನಿಧಿಸುವ ಅಥ್ಲೀಟ್‌ಗಳೂ ಸ್ಪರ್ಧಿಸಲಿದ್ದಾರೆ. 2024ರ ಪ್ಯಾರಿಸ್ ಒಲಿಂಪಿಕ್ಸ್ ಮತ್ತು 2023ರಲ್ಲಿ ಚೀನಾದಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್‌ಗೆ ಪೂರ್ವಸಿದ್ಧತಾ ಶಿಬಿರಕ್ಕೆ ಆಯ್ಕೆ ಟ್ರಯಲ್ಸ್ ಆಗಿಯೂ ಈ ಚಾಂಪಿಯನ್‌ಷಿಪ್‌ಅನ್ನು ಪರಿಗಣಿಸಲಾಗುತ್ತದೆ.

**ಸಚಿವ ಅಶ್ವತ್ಥನಾರಾಯಣ್ ನೇಮಕ:** ರಾಜ್ಯ ಉನ್ನತ ಶಿಕ್ಷಣ ಡಾ.ಸಿ.ಎನ್. ಅಶ್ವತ್ಥನಾರಾಯಣ್ ಅವರನ್ನು ರಾಷ್ಟ್ರೀಯ ಓಪನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಸಂಘಟನಾ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಅ. 12ರಿಂದ ಬ್ಯಾಸ್ಕೆಟ್‌ಬಾಲ್

ಬೆಂಗಳೂರು: ಇಂಡಿಯನ್ ನ್ಯಾಷನಲ್ ಬ್ಯಾಸ್ಕೆಟ್‌ಬಾಲ್ ಲೀಗ್‌ನ 5X5 ಮಾದರಿಯ ಪಂದ್ಯಗಳು ಅಕ್ಟೋಬರ್ 12ರಿಂದ ಆರಂಭವಾಗಲಿವೆ.

ನವದೆಹಲಿಯಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಭಾರತ ಬ್ಯಾಸ್ಕೆಟ್‌ಬಾಲ್ ಫೆಡರೇಷನ್ ಅಧ್ಯಕ್ಷ ಕೆ. ಗೋವಿಂದರಾಜು ಮತ್ತು ಪ್ರಧಾನ ಕಾರ್ಯದರ್ಶಿ ಚಂದ್ರಮುಖಿ ಶರ್ಮಾ ಈ ವಿಷಯ ಪ್ರಕಟಿಸಿದರು. ಬೆಂಗಳೂರು, ಚಂಡೀಗಡ, ಚೆನ್ನೈ, ದೆಹಲಿ, ಮುಂಬೈ ಮತ್ತು ಕೋಲ್ಕತ್ತ ತಂಡಗಳು ಟೂರ್ನಿಯಲ್ಲಿ ಪಾಲ್ಗೊಳ್ಳಲಿವೆ. ಮೊದಲ ಸುತ್ತಿನ ಪಂದ್ಯಗಳು ಜೈಪುರದಲ್ಲಿ ಅಕ್ಟೋಬರ್ 12ರಿಂದ 16ರವರೆಗೆ, ಅ.26ರಿಂದ 30ರವರೆಗೆ ಕಟಕ್‌ನಲ್ಲಿ 2ನೇ ಸುತ್ತು ಮತ್ತು ಡಿ. 14ರಿಂದ 18ರವರೆಗೆ 3ನೇ ಸುತ್ತಿನಪಂದ್ಯಗಳು ನಡೆಯಲಿವೆ. ಬೆಂಗಳೂರಿನಲ್ಲಿ 2023ರ ಜನವರಿ 11ರಿಂದ 15ರವರೆಗೆ ಪ್ಲೇ ಆಫ್ ಪಂದ್ಯಗಳು ನಡೆಯಲಿವೆ.

ಯಶಸ್ವಿನಿ ಘೋರ್ಪಡೆ ಮತ್ತು ಖುಷಿ ವಿ. ಸಂಭ್ರಮ

# ಟಿಟಿ: ಯಶಸ್ವಿನಿ– ಖುಷಿಗೆ ಬೆಳ್ಳಿ

ಸೂರತ್ (ಪಿಟಿಐ) : ಕರ್ನಾಟಕದ ಯಶಸ್ವಿನಿ ಘೋರ್ಪಡೆ ಮತ್ತು ಖುಷಿ ವಿ. ಅವರು ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕ್ರೀಡಾಕೂಟದ ಟೇಬಲ್ ಟೆನಿಸ್ ಸ್ಪರ್ಧೆಯ ಮಹಿಳಾ ಡಬಲ್ಸ್‌ನಲ್ಲಿ ಬೆಳ್ಳಿ ಪದಕ ಜಯಿಸಿದರು.

ಶನಿವಾರ ನಡೆದ ಫೈನಲ್‌ನಲ್ಲಿ ಕರ್ನಾಟಕದ ಜೋಡಿ 0-3, 8–11, 5–11, 11–13ರಿಂದ ಪಶ್ಚಿಮ ಬಂಗಾಳದ ಐಹಿಕಾ ಮತ್ತು ಸುತೀರ್ಥಾ ಮುಖರ್ಜಿ ಎದುರು ಸೋತರು.

**ಹರ್ಮೀತ್, ಸುತೀರ್ಥಾಗೆ ಪ್ರಶಸ್ತಿ:** ಗುಜರಾತ್‌ನ ಹರ್ಮೀತ್ ದೇಸಾಯಿ ಮತ್ತು ಸುತೀರ್ಥಾ ಕ್ರಮವಾಗಿ ಪುರುಷರ ಸಿಂಗಲ್ಸ್ ಮತ್ತು ಮಹಿಳಾ ಸಿಂಗಲ್ಸ್ ವಿಭಾಗಗಳಲ್ಲಿ ಪ್ರಶಸ್ತಿ ಜಯಿಸಿದರು.

ದುಲೀಪ್ ಟ್ರೋಫಿ: ದಕ್ಷಿಣ ವಲಯಕ್ಕೆ 529 ರನ್ ಗುರಿ

# ಜಯದ ಹಾದಿಯಲ್ಲಿ ಪಶ್ಚಿಮ ವಲಯ

ಕೊಯಮತ್ತೂರು: ಪಶ್ಚಿಮ ವಲಯ ತಂಡದವರು ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ದಕ್ಷಿಣ ವಲಯ ವಿರುದ್ಧ ಮೇಲುಗೈ ಸಾಧಿಸಿದ್ದು, ಗೆಲುವಿನತ್ತ ದಾಪುಗಾಲಿಟ್ಟಿದ್ದಾರೆ.

ಕೊಯಮತ್ತೂರಿನಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಅಜಿಂಕ್ಯ ರಹಾನೆ ನೇತೃತ್ವದ ಪಶ್ಚಿಮ ವಲಯ, ಎದುರಾಳಿಗಳ ಗೆಲುವಿಗೆ 529 ರನ್‌ಗಳ ಕಠಿಣ ಸವಾಲು ನೀಡಿದೆ. ಈ ಗುರಿ ಬೆನ್ನಟ್ಟಿರುವ ದಕ್ಷಿಣ ವಲಯ ನಾಲ್ಕನೇ ದಿನವಾದ ಶನಿವಾರದ ಆಟದ ಅಂತ್ಯಕ್ಕೆ 6 ವಿಕೆಟ್‌ಗೆ 154 ರನ್ ಗಳಿಸಿದೆ.

ಅಂತಿಮ ದಿನ ಭಾನುವಾರ ನಾಲ್ಕು ವಿಕೆಟ್‌ಗಳಿಂದ 375 ರನ್ ಗಳಿಸುವ ಗುರಿ ಹನುಮ ವಿಹಾರಿ ಬಳಗದ ಮುಂದಿದೆ. ಆರಂಭಿಕ ಬ್ಯಾಟರ್ ರೋಹನ್ ಕುನ್ನುಮಲ್ (93 ರನ್) ಹೊರತುಪಡಿಸಿ ದಕ್ಷಿಣ ವಲಯ ತಂಡದ ಅಗ್ರ ಕ್ರಮಾಂಕ ವೈಫಲ್ಯ ಅನುಭವಿಸಿತು.

ಮಯಂಕ್ ಅಗರವಾಲ್ ಮತ್ತು ಮನೀಷ್ ಪಾಂಡೆ ತಲಾ 14 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಹನುಮ ವಿಹಾರಿ (1) ಹಾಗೂ ಬಾಬಾ ಇಂದ್ರಜಿತ್ (4) ಅವರೂ ನಿರಾಸೆ ಅನುಭವಿಸಿದರು. ಜಯದೇವ್ ಉನದ್ಕತ್, ಅತಿಥ್ ಶೇಟ್ ಮತ್ತು ಶಮ್ಸ್ ಮುಲಾನಿ ತಲಾ 2 ವಿಕೆಟ್ ಪಡೆದರು.

ಸರ್ಫರಾಜ್ ಖಾನ್ –ಸಂಗ್ರಹ ಚಿತ್ರ

**ಸರ್ಫರಾಜ್ ಶತಕ:** ಇದಕ್ಕೂ ಮುನ್ನ 3 ವಿಕೆಟ್‌ಗೆ 376 ರನ್‌ಗಳಿಂದ ಆಟ ಮುಂದುವರಿಸಿದ ಪಶ್ಚಿಮ ವಲಯ, 4 ವಿಕೆಟ್‌ಗೆ 585 ರನ್ ಗಳಿಸಿ 2ನೇ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತು.

209 ರನ್‌ಗಳೊಂದಿಗೆ ಔಟಾಗದೆ ಇದ್ದ ಯಶಸ್ವಿ ಜೈಸ್ವಾಲ್ 265 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಆದರೆ ಸರ್ಫರಾಜ್ (ಔಟಾಗದೆ 127, 178 ಎ) ಮತ್ತು ಹೆತ್ ಪಟೇಲ್ (ಔಟಾಗದೆ 51) ಐದನೇ ವಿಕೆಟ್‌ಗೆ 103 ರನ್ ಸೇರಿಸಿ ತಂಡವನ್ನು ಬೃಹತ್ ಮೊತ್ತದತ್ತ ಮುನ್ನಡೆಸಿದರು.

**ಸಂಕ್ಷಿಪ್ತ ಸ್ಕೋರು:** ಮೊದಲ ಇನಿಂಗ್ಸ್: ಪಶ್ಚಿಮ ವಲಯ: 96.3 ಓವರ್ ಗಳಲ್ಲಿ 270. ದಕ್ಷಿಣ ವಲಯ: 83.1 ಓವರ್ ಗಳಲ್ಲಿ 327. ಎರಡನೇ ಇನಿಂಗ್ಸ್: ಪಶ್ಚಿಮ ವಲಯ: 128 ಓವರ್‌ಗಳಲ್ಲಿ 4 ವಿಕೆಟ್‌ಗೆ 585 ಡಿಕ್ಲೇರ್ಡ್ (ಯಶಸ್ವಿ ಜೈಸ್ವಾಲ್ 265, ಸರ್ಫರಾಜ್ ಖಾನ್ ಔಟಾಗದೆ 127, ಹೆತ್ ಪಟೇಲ್ ಔಟಾಗದೆ 51, ಕೆ.ಗೌತಮ್ 235ಕ್ಕೆ 2, ಆರ್.ಸಾಯಿ ಕಿಶೋರ್ 157ಕ್ಕೆ 2) ದಕ್ಷಿಣ ವಲಯ: 40 ಓವರ್‌ಗಳಲ್ಲಿ 6 ವಿಕೆಟ್‌ಗೆ 154 (ರೋಹನ್ ಕುನ್ನುಮಲ್ 93, ಜಯದೇವ್ ಉನದ್ಕತ್ 26ಕ್ಕೆ 2, ಅತಿಥ್ ಶೇಟ್ 29ಕ್ಕೆ 2, ಶಮ್ಸ್ ಮುಲಾನಿ 24ಕ್ಕೆ 2).

### ಪುಣೆ ರೇಸ್

## ಝೂಕರೆಲಿ ಗೆಲ್ಲುವ ನಿರೀಕ್ಷೆ

ವೂಲ್ಫ್ 777 ಇಂಡಿಯನ್ ಸೇಂಟ್ ಲೆಗರ್ ಭಾನುವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಝೂಕರೆಲಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30 ರಿಂದ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ರಾಸ್ಪುಟಿನ್ 2, ಬೊಟೆರೊ 1
2ನೇ ರೇಸ್: ಮಾರ್ಕೆಟ್ ಕಿಂಗ್ 3, ಸ್ಕೈಫಾಲ್ 4
3ನೇ ರೇಸ್: ಫಿಯರಿ ರೆಡ್ 7, ಮೆಟ್‌ಜಿಂಗರ್ 5, ಗೋಲ್ಡಿವ 8
4ನೇ ರೇಸ್: ಕೂಲರ್ ಡಿ ಲಯನ್ 1, ಲೇಡಿ ಸಂಟಾನ 3, ಫುಲ್ ಆಫ್ ಗ್ರೇಸ್ 8
5ನೇ ರೇಸ್: ಮೊಜೆಲ್ 6, ಫರ್ರೆಲ್ 8, ಪೆಪ್ಪರ್ 3
6ನೇ ರೇಸ್: ಡಫಿ 3, ವಿನ್ಸೆಂಟ್ ವ್ಯಾನ್ ಗೋಗ್ 7, ನೆಲ್ಸನ್ ರಿವರ್ 5
7ನೇ ರೇಸ್: ಝೂಕರೆಲಿ 4, ಆರ್ಕ್ ಡೆ ಟ್ರಯಾಂಫೆ 1
8ನೇ ರೇಸ್: ಆಲ್ಪಾಗಿನಿ 2, ಲೈಟ್ನಿಂಗ್ ಫ್ಲೇಮ್ 4, ಎಲೆಯಾಸ್ 1

**ಉತ್ತಮ ಬೆಟ್: ರಾಸ್ಪುಟಿನ್**

| ಜಾಕ್‌ಪಾಟ್ | 1ನೇ ಟ್ರಿಬಲ್ | 2ನೇ ಟ್ರಿಬಲ್ |
|---|---|---|
| 4,5,6,7,8 | 5,6,7 | 6,7,8 |

### ಮಾನಸಾ ನಾಯಕಿ

ಬೆಂಗಳೂರು: ಗುಜರಾತ್‌ನಲ್ಲಿ ನಡೆಯಲಿರುವ ರಾಷ್ಟ್ರೀಯ ಕ್ರೀಡಾಕೂಟಕ್ಕೆ ಕರ್ನಾಟಕ ಮಹಿಳಾ ನೆಟ್‌ಬಾಲ್ ತಂಡವನ್ನು ಪ್ರಕಟಿಸಲಾಗಿದ್ದು, ಮಾನಸಾ ಎಲ್.ಜಿ. ನಾಯಕತ್ವ ವಹಿಸಿದ್ದಾರೆ.

ಇದೇ 27ರಿಂದ ರಾಷ್ಟ್ರೀಯ ಕ್ರೀಡಾಕೂಟ ನಡೆಯಲಿವೆ.

**ಕರ್ನಾಟಕ ತಂಡ:** ಮಾನಸಾ ಎಲ್.ಜಿ. (ನಾಯಕಿ), ಮೇಘನಾ ಬಿ.ಸಿ (ಉಪನಾಯಕಿ), ಪವಿತ್ರಾ ಎನ್, ನಂದಿನಿ ಎಲ್.ಜಿ, ರಂಜಿತಾ ಬಿ.ಜೆ, ಹರ್ಷಿತಾ ವಿ.ಎಲ್, ಗಗನಾ ಕೆ.ಎಸ್, ಶಿವಲೀಲಾ ಎಸ್, ಶಾಲಿನಿ ಕೆ, ತನುಶ್ರೀ ಎನ್, ಪವಿತ್ರಾ ಆರ್, ಡೆಲ್ಸಿಯಾ ಶೆರ್ಲಿ ಎ. ಕೋಚ್: ಗಿರೀಶ್ ಪಿ. ಸಹಾಯಕ ಕೋಚ್: ವಿಶ್ವನಾಥ್ ಎ.ಸಿ. ಮ್ಯಾನೇಜರ್: ಹಜೆಲ್ ಮೇರಿ ರಾಜು.

ಪ್ರಜಾವಾಣಿ ಭಾನುವಾರದ ಪುರವಣಿ
ಭಾನುವಾರ, 25 ಸೆಪ್ಟೆಂಬರ್ 2022

ಸಂಗೀತದಲ್ಲೂ ಇದೆ ಲಿಂಗತಾರತಮ್ಯ... 13

ಬಂಗಾಲದ ಮನೋಲೋಕದೊಳಗೆ...




ಕಲೆ: ಗಣೇಶ ಧಾರೇಶ್ವರ

# ದೇವ ದೈವದ ಬನ್ನಿ...

ನಿಂಗಪ್ಪ ಮುದೇನೂರು

ಹಬ್ಬ ಜಾತ್ರೆಗಳಿಲ್ಲದಿದ್ದರೆ ಹಳ್ಳಿಗಳ ಬಾಳಿನ ಕೊಂಡಿ ಬೆಸೆಯದು. ವರ್ಷದುದ್ದಕ್ಕೂ ನಡೆಯುವ ಇಂತಹ ಆಚರಣೆಗಳು ಹಳ್ಳಿನಾಡಿನ ಜೀವನೋತ್ಸಾಹದ ಬನಿಗಳು. ಕುಟುಂಬ, ಗ್ರಾಮ, ನಾಡು, ದೇಶ, ಪ್ರಪಂಚ ಎಂದೆಲ್ಲ ಒಡಮೂಡಿ ನಿಲ್ಲುವ ಇವುಗಳ ಲೋಕದೃಷ್ಟಿ ಅಪಾರ. ನಿಸರ್ಗದ ಧರ್ಮವನ್ನು ಕಾಪಿಟ್ಟುಕೊಂಡಿರುವ ಹಬ್ಬಗಳೆಂದರೇನೇ ಸದಾ ಚೆಲುವು.

ಬಹುತೇಕ ನಮ್ಮ ಗ್ರಾಮೀಣ ಪ್ರದೇಶದ ಜನಪದ ಹಬ್ಬಗಳು ಕೃಷಿ ಪ್ರಧಾನವಾದ ಹಬ್ಬಗಳೇ ಆಗಿವೆ. ಅಲ್ಲೊಂದು ಫಲವಂತಿಕೆಯ ಬಯಸುವ ಆಶಯವಿದೆ. ಶಿವ ಮತ್ತು ಶಕ್ತಿ ಪೂಜೆಯೊಂದಿಗೆ ಪಿತೃಪ್ರಧಾನ ವ್ಯವಸ್ಥೆ ಮತ್ತು ಮಾತೃಪ್ರಧಾನ ವ್ಯವಸ್ಥೆಗಳೆರಡು ಸಂಕರಗೊಂಡು ಸಹಬಾಳ್ವೆ ತೋರುವ ವಿಧಾನಗಳಾಗಿಯೂ ಈ ಹಬ್ಬಗಳು ನೆಲೆಗೊಂಡಿವೆ. ನಮ್ಮ 'ಜನಪದ ದಸರಾ' ಇದಕ್ಕೊಂದು ಒಳ್ಳೆಯ ಉದಾಹರಣೆ. ಜೀವನದ ವೈವಿಧ್ಯಮಯ ಪರ್ವವಾಗಿ ತೆರೆದುಕೊಳ್ಳುವ ಈ ಹಬ್ಬ ನಾಡಿನ ಹಬ್ಬವಾಗಿ ಗುರ್ತಿಸಿಕೊಂಡಿದೆ. ಮೈಸೂರಿನ ಅರಸರು ಆಚರಿಸುತ್ತಾ ಬಂದ ಮೈಸೂರು ದಸರೆಯಾಗಲೀ ವಿಜಯನಗರದ ಅರಸರ ಮಹಾನವಮಿ ವೈಭವದ ದಸರೆಯಾಗಲೀ ಸಂಡೂರು, ಜರಿಮಲೆ, ಗುಡೇಕೋಟೆ, ಕನಕಗಿರಿ, ಆನೆಗುಂದಿ, ಹರತಿ ಕೋಟೆ, ಸುರಪುರದ ಸ್ಥಳೀಯ ನಾಯಕ ಅರಸರ, ಸಾಮಂತ ಪಾಳೇಗಾರರ ದಸರೆಯಾಗಲೀ ಎಲ್ಲವೂ ಜನಮುಖಿ ಹಬ್ಬಗಳೇ. ಆದರೆ ಅವುಗಳಿಗೆ ಆಯಾ ಅರಸರಿಂದ, ಸಾಮಂತರರಿಂದ ಚಾಲನೆ ದೊರೆತು ವಿಶೇಷವಾಗಿ ಆಚರಿಸಲ್ಪಡುತ್ತಿದ್ದವು. ಒಂದೊಂದು ದಿನ ಒಂದೊಂದು ದೇವತೆಯನ್ನು ಸಿಂಗರಿಸಿ ಪೂಜಿಸುವ, ಅಷ್ಟದ್ರವ್ಯಗಳ ಶಾಸ್ತ್ರ ಮಾಡುವ, ಕಂಕಣವನ್ನು ಪೂಜಿಸಿ ಧರಿಸುವ ವಿಧಾನಗಳು ಈಗಲೂ ವಂಶಪರಂಪರಾನುಗತವಾಗಿವೆ ಮತ್ತು ಅವು ಜನ ಪಾಲ್ಗೊಳ್ಳುವಿಕೆಯ ಆಚರಣೆಗಳೂ ಆಗಿವೆ.

ಹಂಪಿಯ ಜಾನಪದವಾಗಲಿ, ಮೈಸೂರು ಜಾನಪದವಾಗಲಿ ಆಂತರ್ಯದಲ್ಲಿ ಕಟ್ಟಿಕೊಂಡ ಹಿರೀಕರ ಪರಂಪರೆಯ ಸಾಂಸ್ಕೃತಿಕ ಚೆಲುವೇ ಬೇರೆ. ಆನೆ, ಅಂಬಾರಿ, ಪಲ್ಲಕ್ಕಿ, ತುಲಾಭಾರಗಳ ಪ್ರದರ್ಶನಾತ್ಮಕ ಪ್ರಭುತ್ವದ ದಸರೆಗಿಂತ ಜನರೇ ದೈವಗೊಂಡು, ದೈವವೇ ಬೀದಿಗೊಂಡು, ಊರ ಬಾವಿ, ಕೆರೆ, ಹಳ್ಳ, ನದಿ, ಗುಡ್ಡದ ಬಾಳಿನಿಂದ ಗಂಗೆಗೊಂಡು ಬರುವ ವಿಧಾನವೇ ಹೆಚ್ಚು ಚೇತೋಹಾರಿ. ಹೊಸ ದಿನ, ಹೊಸ ಋತು, ಹೊಸ ಪೈರು, ಹೊಸ ಕಾಳು ಕಾಣುವ ಈ ಸೃಷ್ಟಿಯ ಮೂಲ ಸಂಗತಿಗಳನ್ನು ಹಳ್ಳಿ ಬಾಳನ್ನು ಹೊಕ್ಕು ನೋಡಿಯೇ ನಾವು ಸುಖಿಸಬೇಕು.

ಮೈಸೂರು ದಸರಾವನ್ನೇ ನಾವು ನಾಡ ದಸರಾ ಎಂದು ಹೇಳುವಷ್ಟು ಅದು ಜನಪ್ರಿಯಗೊಂಡಿದೆ. ನಮ್ಮ ಮಾಧ್ಯಮಗಳು, ಸಿನಿಮಾಗಳು ಆನೆ, ಅಂಬಾರಿ, ಪಥಸಂಚಲನ, ಕುಸ್ತಿ, ಕ್ರೀಡೆ, ರಾಜಮನೆತನದ ವೈಭವ, ಸರ್ಕಾರದ ನೇರ ಪಾಲ್ಗೊಳ್ಳುವಿಕೆ, ಪ್ರವಾಸೋದ್ಯಮದ ಲಾಭ, ವ್ಯಾಪಾರ ವಹಿವಾಟು ಇವೆಲ್ಲದರ ಭಾಗವಾಗಿ ಅದು ಅಂತರ್ಯದಲ್ಲಿ ಹಬ್ಬದಂತೆ ಕಂಡರೂ ಬಾಹ್ಯದಲ್ಲಿ ಜಾತ್ರೆಯ ಸ್ವರೂಪ ಪಡೆದು ನಿಂತಿದೆ. ಆದರೆ, ಹಳ್ಳಿ ಬಾಳಿನ ಸ್ವರೂಪಕ್ಕೆ ಬಂದಾಗ ಹಬ್ಬಗಳು ಇನ್ನಷ್ಟು ಪವಿತ್ರಗೊಳ್ಳುತ್ತವೆ. ತಮ್ಮ ಕುಲ ದೈವ ಊರದೈವಗಳನ್ನು ಕೂಡಿಕೊಂಡು ಆವರ್ತಗೊಳ್ಳುತ್ತವೆ.

ನಮ್ಮ ಜಾನಪದ 'ದಸರಾ ಹಬ್ಬ'ವನ್ನು ಈಗಲೂ 'ಬನ್ನಿ ಹಬ್ಬ'ವೆಂದೇ ಕರೆಯುತ್ತದೆ. ಇದು ಬನ್ನಿ ಮುಡಿಯುವ ಹಬ್ಬ. ಬನ್ನಿ ಮುಡಿದು ಬಂದು ಬನ್ನಿಯನ್ನು ಎಲ್ಲರಿಗೂ ಹಂಚಿ ಬಂಗಾರವಾಗುವ ಮನಸ್ಸಿನ ತಿಳಿಗೊಳದ ಹಬ್ಬ. ಈ ಹಬ್ಬವನ್ನು ನವರಾತ್ರಿ, ಮಹಾನವಮಿ, ದಸರಾ, ವಿಜಯದಶಮಿ, ನಾಡಹಬ್ಬವೆಂತಲೂ ಕರೆಯುತ್ತಾರೆ. ಅದೇನೇ ಇರಲಿ, ಧರ್ಮದ ಜೂಜಾಟದಲ್ಲಿ ಅಂದರೆ ಪಗಡೆ ಆಟದಲ್ಲಿ ಸೋಲು ಕಂಡ ಪಾಂಡವರು ಕೊಟ್ಟ ಮಾತಿನಂತೆ ವನವಾಸವನ್ನು ಅನುಭವಿಸುವರು. ಒಂದು ವರ್ಷದ ಅಜ್ಞಾತವಾಸದ ಮಾರುವೇಷದಲ್ಲಿ ವಿರಾಟ ನಗರಕ್ಕೆ ಬರುವ ಸನ್ನಿವೇಶವು ಈ ಕಥೆಯ ಹಿಂದಿದೆ.

ವನವಾಸಕ್ಕೆ ಹೋಗುವ ಪೂರ್ವದಲ್ಲಿ ಕಾಡಿನ ಶಮಿ ವೃಕ್ಷದಲ್ಲಿ (ಬನ್ನಿ ಗಿಡ) ತಮ್ಮ ಶಸ್ತ್ರಾಸ್ತ್ರಗಳನ್ನು ತೂಗುಹಾಕಿ ಹೋದರಂತೆ ಪಾಂಡವರು. ಅವರು ಇಂದಿಗೂ ಬನ್ನಿ ಗಿಡದಲ್ಲಿ ವಾಸವಾಗಿರುವರೆಂದೂ, ಬನ್ನಿ ಮಹಾಕಾಳಿಯೇ ಅವರನ್ನು ರಕ್ಷಿಸುತ್ತಿರುವವಳೆಂದೂ ಜನಪದ ನಂಬಿರುವುದಕ್ಕೆ ಬನ್ನಿ ಮುಡಿಯುವ ಹಬ್ಬವೇ ಸಾಕ್ಷಿ. ಶಿಷ್ಟ ಕಾವ್ಯವನ್ನು ಜನಪದಕ್ಕೂ, ಜನಪದ ಬದುಕನ್ನು ಶಿಷ್ಟ ಸಂಸ್ಕೃತಿಗೂ ಕೂಡಾಳಿಕೆ ಮಾಡಿಕೊಂಡು ಬದುಕುವ ಈ ಸಂಸ್ಕೃತಿ ಅನನ್ಯವಾದುದು. ಸೋತವರನ್ನು, ಸಾವನ್ನಪ್ಪಿದವರನ್ನು ಸ್ಮರಿಸುತ್ತಾ ಅವರ ಬಗೆಗೆ ದಿವ್ಯ ಅನುಕಂಪ, ಅಂತಃಕರಣವನ್ನು ಇಟ್ಟುಕೊಂಡು ಬಾಳುವ, ದೈವಿಕ ನೆಲೆಗೆ ತಂದು ಹಿರಿಯರನ್ನು ಇರಿಸುವ ಹಿರಿದಾದ ಹಬ್ಬವೇ 'ಹಿರಿಯರ ಹಬ್ಬ'.

ಈ ತ್ರಿಪದಿಯನ್ನು ನೋಡಿ **ಬನ್ನಿಯ ಗಿಡದಾಗ ಬಾಣ ಇಟ್ಟೀವಿ ತಾಯಿ ಯಾರು ಬಂದರೂ ಕೊಡಬೇಡ/ಹಡದಮ್ಮ ಅರ್ಜುನ ಬಂದರ ಕೊಡಬೇಕ**

ಮೈಸೂರು ದಸರಾ ಏನೋ ಜಗದ್ವಿಖ್ಯಾತವಾಗಿದೆ, ನಿಜ. ಆದರೆ, ನಮ್ಮ ಜನಪದರ ದಸರಾವೇನು ಸುಮ್ಮನೆಯೇ ಮತ್ತೆ? ಪ್ರತೀ ಊರಿನಲ್ಲೂ ಎಷ್ಟೊಂದು ಆಚರಣೆಗಳು, ಏನೆಲ್ಲ ವಿಧಾನಗಳು. ನಮ್ಮ ಗ್ರಾಮೀಣರ ಹಬ್ಬಗಳೆಂದರೆ ಅವು ಕೃಷಿ ಪ್ರಧಾನವಾದವುಗಳೇ. ಅಲ್ಲೊಂದು ಫಲವಂತಿಕೆಯ ಆಶಯವೂ ಇದೆ. ದಸರಾ ಸುತ್ತ ಸೃಷ್ಟಿಯಾದ ಜಾನಪದ ಜಗತ್ತೊಂದು ಇಲ್ಲಿ ಅನಾವರಣಗೊಂಡಿದೆ

ಹೀಗೆಂದು ಧರ್ಮರಾಯ ಹೇಳಿದಂತೆಯೂ, ಅರ್ಜುನ ಬಂದು ತನ್ನ ಗಾಂಡೀವಾಸ್ತ್ರವನ್ನು ತೆಗೆದುಕೊಂಡು ಹೋದನೆಂತಲೂ ನಂಬಿದ ಜಾನಪದ ಪ್ರಪಂಚ ನಮ್ಮದು. ಪಾಂಡವರ ಬಗೆಗಂತೂ ಎಷ್ಟೊಂದು ಮಮತೆ ಜನಪದರದ್ದು. ಸೋತವರಲ್ಲಿಯೂ ಆತ್ಮವಿಶ್ವಾಸವನ್ನು ತುಂಬಿ ಬದುಕಿಸುವ ಜೀವನ ಪ್ರೀತಿ ಇದು. ಬಡತನ, ಉಪವಾಸ, ವನವಾಸ, ಕಷ್ಟ ಕಾರ್ಪಣ್ಯಗಳ ಜೊತೆಯೂ ಉಕ್ಕುವ ಜಲಪಾತದಂತಹ ಜೀವನ ಪ್ರೀತಿಯನ್ನು ಈ ಹಬ್ಬಗಳು ಮೂಡಿಸುತ್ತವೆ. ಪಾಂಡವರ ಹಬ್ಬದಲ್ಲೂ ಐದು ಜನ ಪಾಂಡವರ ಕಲ್ಲುಗಳನ್ನು ಇಟ್ಟು ಕಲ್ಲುಗಳನ್ನು, ಆ ಮರವನ್ನು, ಹೊಲದ ಪೈರನ್ನು ಪೂಜಿಸುವ, ಹೊಸ ಬೆಳೆಯ ಕಾಳಿನ ಅಂಬಲಿಯನ್ನು ಚರಗ ಚೆಲ್ಲಿ ಸೃಷ್ಟಿಗೆ ನಮಿಸುವ ಧನ್ಯತೆ ಜಾನಪದ ಹಬ್ಬಗಳಲ್ಲಿ ಉಳಿದುಕೊಂಡಿದೆ.

ಈಗಲೂ ಹಬ್ಬವನ್ನು ಆಚರಿಸುವಾಗ ಪಾಂಡವರು ಬನ್ನಿ ಗಿಡದಲ್ಲಿಯೇ ವಾಸವಾಗಿದ್ದಾರೆ ಎಂದು ನಂಬುತ್ತಾರಲ್ಲ ನಮ್ಮ ಜನ. ಶಸ್ತ್ರಾಸ್ತ್ರಗಳು ತೂಗಿನಿಂತ ಜಾಗದಲ್ಲಿ ಈಗ ಕಾಳುಗಟ್ಟಿದ ಜೋಳದ ದಂಟುಗಳು ತೂಗಿ ನಿಲ್ಲುತ್ತವೆ. ಬನ್ನಿ ಮುಡಿಯಲು ಬಂದವರು ತೆನೆ ಇರುವ ಜೋಳದ ದಂಟುಗಳ ಸಮೇತ ಬರಬೇಕೆಂಬ ನಿಯಮವನ್ನು ಊರಹಿರಿಯರೇ ಹಾಕಿರುತ್ತಾರೆ. ಊರದೈವದ ಪಲ್ಲಕ್ಕಿ ಸಮೇತ ಬಂದು ಬನ್ನಿಕಟ್ಟೆಯೋ, ಬನ್ನಿಮಂಟಪದ ಮೇಲೆಯೋ ಪಲ್ಲಕ್ಕಿ ಇರಿಸಿ ಪೂಜಿಸಿ, ಹಾಡು ಶ್ಲೋಕ ಹೇಳಿ ಬನ್ನಿ ಗಿಡಕ್ಕೆ ವಸ್ತ್ರದಹಾರ ಕಟ್ಟಿ, ಮಂಗಳಾರತಿ ಮಾಡಿ, ಬನ್ನಿ ಪತ್ರಿ ಹರಿದುಕೊಂಡು, ತಾವು ತಂದ ಇತರೆ ಮರದ ಎಲೆಗಳನ್ನು ಕೂಡಿಸಿಕೊಂಡು ಸೌಹಾರ್ದದ ಬನ್ನಿಯಾಗಿಸುತ್ತಾರೆ.

'ಬನ್ನಿ ತಗೊಂಡು ಬಂಗಾರದಂಗೆ ಇರೋಣ' ಎಂದು ಬೇಡಿ ಶಪಥ ಮಾಡಿ ಊರಿಗೆ ಮತ್ತೆ ಮರಳುವ ಹಬ್ಬವಿದು. ಇಡೀ ಊರಿಗೆ ಊರೇ ಬನ್ನಿಕೊಟ್ಟು ಬಂಗಾರಗೊಳ್ಳುವ ಜೀವನ ವಿಧಾನವಿದು. ಪಾಂಡವರು ವನವಾಸ ಕಳೆದು ಸುಖಿಗಳಾದಂತೆ ಜನಪದರು ತಮ್ಮ ಕಷ್ಟ ನೋವುಗಳನ್ನು ಕಳೆದು ಸುಖಿಗಳಾಗುವ ವಿಶ್ವಾಸ ಈ ಹಬ್ಬದ್ದು.

**'ಕಲ್ಲ ಕಡಬ ಮಾಡಿ ಮುಳ್ಳ ಶಾವಿಗೆ ಮಾಡಿ**
**ಬನ್ನಿ ಎಲೆಯ ಎಡೆಮಾಡಿ/ಪಾಂಡವರು**
**ಉಂಡು ಹೋಗ್ಯಾರೋ ವನವಾಸ'**

15ನೇ ಪುಟಕ್ಕೆ...

# ನೃತ್ಯ ಪೂರ್ಣಾಹುತಿ!

## ಭಾರತದ ಒಡಿಸ್ಸಿ- ಶ್ರೀಲಂಕಾದ ಕಾಂಡ್ಯನ್ ನೃತ್ಯಗಳ ಸಮ್ಮಿಲನ

ಪ್ರತಿಭಾ ನಂದಕುಮಾರ್

**ಸಾಮ್ಯ ಮತ್ತು ವೈಷಮ್ಯಗಳೆರಡೂ** ಅವಿನಾಭಾವದಲ್ಲಿ ಮಿಳಿತಗೊಂಡ ಒಂದೇ ಪ್ರಕಾರದ ಎರಡು ಶೈಲಿಯ ಕಲೆಗಳಲ್ಲಿ ಪ್ರಯೋಗಕ್ಕೆ ಮಿತಿ ಇರುತ್ತದೆಯೇ? ಫ್ಯೂಷನ್ ಎನ್ನುವ ಪ್ರಯೋಗಗಳಲ್ಲಿ ಎರಡೂ ಕಲೆಗಳು ತಮ್ಮ ಸ್ವಂತಿಕೆಯನ್ನು ಉಳಿಸಿಕೊಂಡೇ ಮತ್ತೊಂದರ ಜೊತೆ ಸಂವಾದದಲ್ಲಿ ತೊಡಗಿಸಿ ಕೊಳ್ಳುತ್ತದೆಯೋ ಅಥವಾ ಎರಡೂ ತಮ್ಮ ಸ್ವತಂತ್ರ ಅಸ್ತಿತ್ವವನ್ನು ಒಂದರೊಳಗೊಂದು ವಿಲೀನಗೊಳಿಸಿ ಮತ್ತೊಂದೇನೋ ಆಗುತ್ತದೆಯೋ? ಹಿಂದೆ ಸಂಗೀತ ಜುಗಲ್ ಬಂದಿಗಳು ಜನಪ್ರಿಯವಾಗಿದ್ದವು.

ಜುಗಲ್ ಬಂದಿ ಈಗ ಫ್ಯೂಷನ್ ಎನ್ನುವ ಪ್ರಯೋಗ ಜಾಗತಿಕ ಕಲೆಗಳ ನಡುವೆ ಬಹಳ ಉತ್ಕಟವಾಗಿ ನಡೆಯುತ್ತಿದೆ. ಆದರೆ ಫ್ಯೂಷನ್‌ಗೂ ಸಹಯೋಗಕ್ಕೂ ನಡುವೆ ಏನು ವ್ಯತ್ಯಾಸ? ಎರಡು ಭಿನ್ನ ಶೈಲಿಯ ಕಲೆಯನ್ನು ಅದ್ಭುತವಾಗಿ ಸಂಯೋಜಿಸಿದಾಗ ಒಂದು ಮುಹೂರ್ತದಲ್ಲಿ ಅವುಗಳ ವೈಶಿಷ್ಟ್ಯದ ಜೊತೆಗೇ ಭಿನ್ನತೆಯನ್ನೂ ಮಿಂಚಿನಂತೆ ಝಗ್ಗನೆ ಹೊಳೆಯಿಸಿ ರಸಿಕರನ್ನು ಮಂತ್ರಮುಗ್ಧರನ್ನಾಗಿಸುತ್ತದೆ. ಅದರಲ್ಲೂ ಕಲಾವಿದರು ಅಪೂರ್ವ ದೈವೀಕ ಪ್ರತಿಭೆಯುಳ್ಳವರಾದರೆ ಅದು ಅಮೃತ ಗಳಿಗೆಯೇ ಹೌದು.

ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸುವ 'ಆಹುತಿ' ಫ್ಯೂಷನ್‌ನ ನೋಟ

ಅಂತಹ ಒಂದು ಮಾಂತ್ರಿಕ ಪ್ರಯೋಗವೇ ಶ್ರೀಲಂಕಾದ ಚಿತ್ರಸೇನಾ ಡ್ಯಾನ್ಸ್ ಕಂಪನಿ ಮತ್ತು ಭಾರತದ ನೃತ್ಯಗ್ರಾಮದ ಕಲಾವಿದರು ಸೇರಿ ಪ್ರಸ್ತುತಪಡಿಸುವ ನೃತ್ಯ ಪ್ರದರ್ಶನ 'ಆಹುತಿ'. ಇದು ನಮ್ಮ ಒಡಿಸ್ಸಿ ಮತ್ತು ಶ್ರೀಲಂಕಾದ ಕಾಂಡ್ಯನ್ ನೃತ್ಯ ಶೈಲಿಯ ಸಮ್ಮಿಲನ. ಒಡಿಸ್ಸಿ ನೃತ್ಯದ ಶೃಂಗಾರಭರಿತ ಪ್ರಲೋಭನೆಯ ಲಾಲಿತ್ಯವನ್ನು, ಜೊತೆಗೆ ಕಾಂಡ್ಯನ್ ನೃತ್ಯದ ಸುತ್ತುವ 'ಭ್ರಮರಿ' ಮತ್ತು ನೆಗೆತದ 'ಉತ್ಪಳನ'ವನ್ನು ಅವುಗಳ ಶುದ್ಧ ಸ್ವರೂಪದಲ್ಲಿ ಪ್ರದರ್ಶಿಸುವಾಗ ಅಲ್ಲೊಂದು ದೈವೀಕ ಅನುಭವ ಉಂಟಾಗುತ್ತದೆ. ಅಷ್ಟಲ್ಲದೇ ಈ ಕಲಾವಿದರನ್ನು ವಿಶ್ವದ ಅತ್ಯುತ್ತಮ ಸಾಲಿನಲ್ಲಿ ಹೆಸರಿಸುತ್ತಿದ್ದರೇ?

ಬೆಂಗಳೂರಿನ ಭೂಮಿಜಾ ಪ್ರಸ್ತುತ ಪಡಿಸುತ್ತಿರುವ ಈ ನೃತ್ಯ ವೈಭವದ ನಿರ್ದೇಶನ, ನೃತ್ಯ ಸಂಯೋಜನೆ ಹಾಗೂ ಶ್ರವ್ಯ ವಿನ್ಯಾಸಕಾರ್ತಿ ನೃತ್ಯಗ್ರಾಮದ ಪ್ರಥಮ ಪದವೀಧರೆ ಸುಪ್ರಸಿದ್ಧ ಒಡಿಸ್ಸಿ ನೃತ್ಯ ಕಲಾವಿದೆ ಸುರೂಪಾ ಸೇನ್. ಜೊತೆ ನೀಡಿದವರು ಚಿತ್ರಸೇನಾ ಕಂಪನಿಯನ್ನು ಹುಟ್ಟುಹಾಕಿದ ಕಲಾವಿದ ಚಿತ್ರಸೇನರ ಮೊಮ್ಮಗಳಾದ, ಪ್ರಸ್ತುತ ಅದರ ಆರ್ಟಿಸ್ಟಿಕ್ ಡೈರೆಕ್ಟರ್ ಆದ ಹೇಶ್ಮಾ ವಿಘ್ನರಾಜ. ಸಂಗೀತ ಪ್ರಸಿದ್ಧ ಪಂಡಿತ್ ರಘುನಾಥ್ ಪಾಣಿಗ್ರಾಹಿ ಅವರದು.

ಈ ಎರಡು ತಂಡಗಳು ಹಿಂದೆ 2018ರಲ್ಲಿ 'ಸಂಹಾರ' ಎನ್ನುವ ಜಂಟಿ ಪ್ರಯೋಗ ಮಾಡಿತ್ತು. ಅದಕ್ಕೆ ದಿ ನ್ಯೂಯಾರ್ಕ್ ಟೈಮ್ಸ್ 'ವರ್ಷದ ಅತ್ಯುತ್ತಮ ನೃತ್ಯ' ಎಂದು ಹೇಳಿತ್ತು. ಈಗ ಎರಡನೆಯ ಬಾರಿಗೆ 'ಆಹುತಿ'ಯ ಪ್ರಯೋಗವನ್ನು ರೂಪಿಸಿ ಬೆಂಗಳೂರಿಗೆ ತರಲಾಗಿದೆ. ಇದರಲ್ಲಿ ನಾಲ್ಕು ಭಾಗಗಳಿವೆ. ಇವು ಪ್ರತ್ಯೇಕ ಭಾಗಗಳಾಗಿದ್ದು ಒಂದೇ ದೀರ್ಘ ಕಥೆಯಲ್ಲ. ಪ್ರಾರಂಭದ ಸಂಕೀರ್ತನ ಶುದ್ಧ ಒಡಿಸ್ಸಿಯಲ್ಲಿದ್ದು 'ಸಂಕೀರ್ತನಂ', ಜಯದೇವನ ಅಷ್ಟಪದಿ 'ಧೀರ ಸಮೀರೇ ಯಮುನಾ ತೀರೇ' ಅಷ್ಟಪದಿಯಲ್ಲಿ ಮೈಮರೆತು ತಲ್ಲೀನರಾಗಿ ನರ್ತಿಸುವ, ಅಭಿನಯಿಸುವ ಸುರೂಪಾ ಅವರದ್ದು ಅದ್ಭುತ ಪ್ರತಿಭೆ. ಕಾವ್ಯ, ನೃತ್ಯ ಮತ್ತು ಸಂಗೀತ ಒಂದಾಗಿ ಮೇಳೈಸುವ ಅನುಭವವನ್ನು ಅದು ನೀಡುತ್ತದೆ.

ನಂತರ ನಾಲ್ಕು ಒಡಿಸ್ಸಿ ಕಲಾವಿದರು ಮತ್ತು ನಾಲ್ಕು ಕಾಂಡ್ಯನ್ ಕಲಾವಿದರಿಂದ 'ಪೂರ್ಣ ಆರತಿ' ನಡೆಯುತ್ತದೆ. ಮೂರನೆಯದು ಶಿವ ತಾಂಡವ. ಕೊನೆಯದು ಆಲಾಪ್. ಈ ಬಾರಿ ಶ್ರೀಲಂಕಾ ತಂಡದಲ್ಲಿ ಇಬ್ಬರು ಪುರುಷ ಕಲಾವಿದರು ಸೇರಿದ್ದಾರೆ. ಕುಶಾಲ್ ಮತ್ತು ಅಖಿಲ. ವರ್ಣರಂಜಿತ ಧೋತ್ರವನ್ನುಟ್ಟು ತೆರೆದ ಎದೆಯಲ್ಲಿ ಪರಿಪೂರ್ಣ ಅಂಗಸೌಷ್ಠವವನ್ನು ಮೆರೆಯುತ್ತಾ, ಹಾರಿ ಹಾರಿ ನರ್ತಿಸುವ ಪರಿಗೆ ಬೆರಗಾಗದೇ ವಿಧಿಯಿಲ್ಲ. ಜಗನ್ನಾಥನ ಆರತಿಯ ಸಂಭ್ರಮವನ್ನು ರಂಗದ ಮೇಲೆ ಸಂಪೂರ್ಣ ವಾದ್ಯ ಧ್ವನಿ ಜಯಘೋಷ ಸಂಗೀತ ನೃತ್ಯದ ಮೂಲಕ ಆಚರಿಸುವಾಗ ಪ್ರೇಕ್ಷಕರೂ ಅದರಲ್ಲಿ ಒಂದಾಗಿ ಬಿಡುತ್ತಾರೆ.

'ಆಲಾಪ್' ಶುದ್ಧ ಹೆಜ್ಜೆ ತಾಳ ಚಲನೆಯ ಕೆಲೈಡೊಸ್ಕೋಪಿಕ್ ಪರಿಣಾಮ ಕಣ್ಣಿಗೆ ಹಬ್ಬ. ಒಡಿಸ್ಸಿ ಕಲಾವಿದರು ನೃತ್ಯದಲ್ಲೇ ವೀಣೆ, ಮದ್ದಳೆ, ಕೊಳಲು, ಮಂಜಿರಗಳನ್ನು ನುಡಿಸುತ್ತಾ ಲಾಸ್ಯದಲ್ಲಿದ್ದರೆ ಶ್ರೀಲಂಕಾದ ಕಲಾವಿದರು ಥಟ್ಟನೆ ಪ್ರವೇಶಿಸಿ ರಭಸದ ಜ್ಯಾಮಿತೀಯ ಫಾರ್ಮೇಶನ್‌ಗಳನ್ನು ಮಾಡುತ್ತಾ ಗಾಳಿಯಲ್ಲಿ ಹಾರುತ್ತಾ ದೇಹದ ಚಲನೆಯ ಎಲ್ಲಾ ಸಾಧ್ಯತೆಗಳನ್ನು ನಿಭಾಯಿಸುತ್ತಾರೆ. ಈ ನೃತ್ಯದಲ್ಲಿ ದೃಷ್ಟಿಯನ್ನು ಕಿತ್ತು ಅತ್ತಿತ್ತ ನೋಡುವುದಕ್ಕಾಗದು ಅಷ್ಟು ಚಿತ್ತಾಕರ್ಷಕ. ದೀಪ ಸಂಯೋಜನೆಯನ್ನು ಮಾಡಿರುವ ಲಿನ್ನ್ ಫೆರ್ನಾಂಡಿಸ್ ಇಡೀ ನೃತ್ಯದ ಆತ್ಮವನ್ನು ಒಳಗು ಮಾಡಿಕೊಂಡು ನಮಗೆ ಗೊತ್ತಾಗದಂತೆಯೇ ಒಂದು ವರ್ಣಲೋಕದಲ್ಲಿ ವಿಹರಿಸುವ ಅನುಭವ ಕೊಡುತ್ತಾರೆ.

ಈ ಪ್ರಯೋಗದ ಯಶಸ್ಸಿಗೆ ಕಾರಣ ಕಲಾವಿದರ ಪ್ರತಿಭೆ ಜೊತೆಗೆ ಸಂಗೀತ ಮತ್ತು ನೃತ್ಯ ಸಂಯೋಜನೆಯ ಉತ್ಕೃಷ್ಟ ಮಟ್ಟ. ಭರತನ ನಾಟ್ಯಶಾಸ್ತ್ರದಲ್ಲಿ, ದೇಗುಲ ಶಿಲ್ಪಗಳಲ್ಲಿ ಜೊತೆಗೆ ಕಾವ್ಯಗಳಲ್ಲಿ ವರ್ಣಿಸಿದ ನೃತ್ಯ ಶ್ರೇಷ್ಠತೆಯನ್ನು ಕಾರ್ಯರೂಪಕ್ಕಿಳಿಸಬೇಕಾದರೆ ಸಾಧನೆ ಬೇಕು. ಕೆ.ವಿ. ಸುಬ್ಬಣ್ಣ ಅವರು ಶ್ರೇಷ್ಠತೆಯ ವ್ಯಸನದ ಬಗ್ಗೆ ಹೇಳಿದಾಗ ಅದನ್ನು ಹಲವರು ತಪ್ಪು ತಿಳಿದರು. ಶ್ರೇಷ್ಠತೆಯ ಕಡೆಗೆ ಸಾಗುವುದು ಮತ್ತು ಸಾಧಿಸುವುದು ಕಲೆಯ ಉತ್ತುಂಗದ ಫಲಶ್ರುತಿ. ಶ್ರೇಷ್ಠತೆಯ ಕಡೆಗೆ ಸಾಗುವ ಬದ್ಧತೆ – ಕಮಿಟ್‌ಮೆಂಟ್ - ಇಲ್ಲದಿದ್ದರೆ ಕಲಾವಿದರು ಆ ಉತ್ತುಂಗವನ್ನು ತಲುಪದೆಯೇ ಅಲ್ಪ ತೃಪ್ತರಾಗಿ ಬಿಡುತ್ತಾರೆ. ಸತತ ಅಭ್ಯಾಸದ ಫಲ ಕಲಾವಿದರಿಗೋ ಅಥವಾ ಪ್ರೇಕ್ಷಕರಿಗೋ? ಕಲೆಯನ್ನು ತಪಸ್ಸಿಗೆ ಯಾಕೆ ಹೋಲಿಸುತ್ತಾರೆ? 'ಆಹುತಿ' ಪ್ರಯೋಗವನ್ನು ನೋಡುತ್ತಾ ಪ್ರೇಕ್ಷಕರೂ ಕಲಾವಿದರೂ ಕಲೆಯೂ ಒಂದೇ ಆಗಿಬಿಡುವ ಮಾಂತ್ರಿಕತೆ ಉಂಟಾಗುತ್ತದೆ. ಕಾರ್ಯಕ್ರಮದಲ್ಲಿ ಲೈವ್ ಸಂಗೀತ ಇರುತ್ತದೆ. ಸುರೂಪಾ, ಮಂಜೀರಾ ಹಿಡಿದು ನುಡಿಸುತ್ತಾ ತಾಳ ಹೇಳತೊಡಗಿದರೆ ಅದೊಂದು ಬೇರೆಯೇ ಲೋಕ.

(ಸೆಪ್ಟೆಂಬರ್ 25ರಂದು ಭಾನುವಾರ ಸಂಜೆ 7 ಗಂಟೆಗೆ ಬೆಂಗಳೂರಿನ ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ 'ಆಹುತಿ' ಪ್ರಯೋಗ ನಡೆಯಲಿದೆ)

### ಸುರೂಪಾ ಸೇನ್

**ಸುರೂಪಾ ಸೇನ್** ಒಡಿಸ್ಸಿಯ ಮಹಾಗುರು ಕೇಲುಚರಣ್ ಮಹಾಪಾತ್ರ ಅವರಲ್ಲಿ ಮೊದಲು ಶಿಷ್ಯೆಯಾಗಿದ್ದರು. ನಟಿ ಪ್ರತಿಮಾ ಬೇಡಿ ಅವರು ಒಡಿಸ್ಸಿ ಕಲಿತು ಅದನ್ನೇ ತಮ್ಮ ಮುಂದಿನ ಜೀವನದ ಕೇಂದ್ರವೆಂದು ನಿರ್ಧರಿಸಿ ಬೆಂಗಳೂರಿಗೆ ಬಂದು ಹೆಸರಘಟ್ಟದಲ್ಲಿ ನೃತ್ಯಗ್ರಾಮವನ್ನು ಸ್ಥಾಪಿಸಿದರು. ಗುರುಶಿಷ್ಯ ಪರಂಪರೆಯಲ್ಲಿ ನೃತ್ಯದ ಸಾಧನೆ ಮಾಡುವ ಕಾರ್ಯ ಪ್ರಾರಂಭವಾಯಿತು. ಆಗಲೇ ಸುರೂಪಾ ಸೇನ್ ಅವರಿಗೆ ಶಿಷ್ಯೆಯಾಗಿ ಬಂದು ಸೇರಿದರು. ನೃತ್ಯಗ್ರಾಮದ ಮೊದಲ ಪದವೀಧರೆ ಆದರು.

ಪ್ರತಿಮಾ ಬೇಡಿಯ ಅಕಾಲಿಕ ಸಾವಿನ ನಂತರ ಸುರೂಪಾ ನೃತ್ಯಗ್ರಾಮವನ್ನು ಮುನ್ನಡೆಸುವ ಹೊಣೆಯನ್ನು ಹೊತ್ತುಕೊಂಡು ಮುನ್ನಡೆಸಿದರು. ಒಂದರ್ಥದಲ್ಲಿ ಪ್ರತಿಮಾಗಿಂತ ಹೆಚ್ಚು ಯಶಸ್ವಿಯಾಗಿ ಶಿಷ್ಯರನ್ನು ತಯಾರು ಮಾಡಿ ಏಳು ತಂಡ ಪ್ರಯೋಗಗಳು, ಎರಡು ದ್ವಿಕಲಾವಿದರ ಪ್ರಯೋಗಗಳು, ಎರಡು ಏಕಕಲಾವಿದ ಪ್ರಯೋಗಗಳನ್ನು ಸಂಯೋಜಿಸಿ ದೇಶವಿದೇಶಗಳಲ್ಲಿ ಪ್ರದರ್ಶನ ನೀಡಿ ಹೆಸರಾದರು. 1993ರಲ್ಲಿ ಅಮೆರಿಕದಲ್ಲಿ ಮೊದಲ ಪ್ರದರ್ಶನ ನೀಡಿದ ಮೇಲೆ ಅಲ್ಲಿಯ ಜನ ಇವರ ಕಲೆಯನ್ನು ಎಷ್ಟು ಇಷ್ಟಪಡುತ್ತಾರೆಂದರೆ ಪ್ರತಿ ವರ್ಷ ಅಮೆರಿಕನ್ ಡ್ಯಾನ್ಸ್ ಫೆಸ್ಟಿವಲ್‌ಗೆ ಬರಲೇಬೇಕೆಂದು ಆಹ್ವಾನಿಸುತ್ತಾರೆ. ಎರಡು ವರ್ಷ ಅತ್ಯುತ್ತಮ ನೃತ್ಯ ಪ್ರಶಸ್ತಿ ನೀಡಿದ್ದಾರೆ.

### ಹೇಶ್ಮಾ ವಿಘ್ನರಾಜ

ಶ್ರೀಲಂಕಾದ ಚಿತ್ರಸೇನಾ ಡ್ಯಾನ್ಸ್ ಕಂಪನಿ 1940ರಲ್ಲಿ ಗುರು ಚಿತ್ರಸೇನಾ ಅವರು ಸ್ಥಾಪಿಸಿದ ಸಂಸ್ಥೆ. ಗ್ರಾಮ ಕಲೆಯನ್ನು ಮುಖ್ಯವಾಹಿನಿಗೆ ತರುವಲ್ಲಿ ಗುರು ಚಿತ್ರಸೇನಾ ಅವರ ಪಾತ್ರ ಬಹಳ ಹಿರಿದು. ಆಧುನಿಕ ರಂಗಕ್ಕೂ ಅದನ್ನು ಅಳವಡಿಸಿದ ಸಾಧನೆ ಅವರದು. ಕಾಂಡ್ಯನ್ ನೃತ್ಯವನ್ನು ಅವರು ಮುಖ್ಯವಾಹಿನಿಯಲ್ಲಿ ಸೇರಿಸಿಕೊಂಡ ಪ್ರಕ್ರಮದಿಂದ ಶ್ರೀಲಂಕಾದಲ್ಲಿ ಜಾತಿ ಭೇದ ಕಡಿಮೆಯಾಯಿತು! ಹೇಶ್ಮಾ ವಿಘ್ನರಾಜ ಇವರ ಮೊಮ್ಮಗಳು. ತಾತನ ಕಾರ್ಯವನ್ನು ಮುಂದುವರಿಸಿಕೊಂಡು ಹೋಗುವಲ್ಲಿ ಆಕೆಗಿರುವ ಬದ್ಧತೆ ಬೆರಗುಗೊಳಿಸುವಂಥದು.


ಭಾರತದ ಒಡಿಸ್ಸಿ ನೃತ್ಯದ ಮುಂದೆ ಶ್ರೀಲಂಕಾದ ಕಾಂಡ್ಯನ್ ನರ್ತನ

# ‘ಸಂಗೀತದಲ್ಲೂ ಇದೆ ಲಿಂಗತಾರತಮ್ಯ...’

**ಡಾ.ಟಿ.ಎಸ್. ಸತ್ಯವತಿಯವರು ಹೆಸರಾಂತ ಕರ್ನಾಟಕ ಸಂಗೀತ ಗಾಯಕಿ, ಸಂಗೀತಶಾಸ್ತ್ರಜ್ಞೆ ಹಾಗೂ ಸಂಸ್ಕೃತ ವಿದುಷಿ. ನಿವೃತ್ತ ಸಂಸ್ಕೃತ ಪ್ರಾಧ್ಯಾಪಕರು. ಎರಡರ ಹರೆಯದಲ್ಲಿಯೇ ಮೈಸೂರು ಮಹಾರಾಣಿಯ ಮುಂದೆ ಹಾಡಿದ ಬಾಲಪ್ರತಿಭೆ. ಹಿರಿಯಕ್ಕ ವಿದುಷಿ ವಸಂತ ಮಾಧವಿ, ವಿದ್ವಾನ್ ಆರ್. ಕೆ. ಶ್ರೀಕಂಠನ್ ಅವರ ಮಾರ್ಗದರ್ಶನದಲ್ಲಿ ಅವರ ಕಲೆ ಅರಳಿ, ಪಕ್ವಗೊಂಡಿತು. ವಿದ್ವಾನ್ ಬೆಂಗಳೂರು ಕೆ. ವೆಂಕಟರಾಂ ಅವರಲ್ಲಿ ಮೃದಂಗ ಕಲಿತರು. ಸಂಗೀತಶಾಸ್ತ್ರ ಅಧ್ಯಯನಕ್ಕೆ ಡಾ. ಬಿ.ವಿ.ಕೆ. ಶಾಸ್ತ್ರಿಯವರ ಮಾರ್ಗದರ್ಶನವೂ ಇತ್ತು. ಸತ್ಯವತಿ ಅವರಿಗೆ 2022ರ ಶ್ರೀ ಷಣ್ಮುಖಾನಂದ ಎಂ.ಎಸ್. ಸುಬ್ಬುಲಕ್ಷ್ಮಿ ಸಂಗೀತ ಪ್ರಾಚಾರ್ಯ ಪ್ರಶಸ್ತಿ ಸಂದಿದೆ. ಈ ಸಂದರ್ಭದಲ್ಲಿ ನಡೆಸಿದ ಸಂದರ್ಶನದ ಆಯ್ದ ಭಾಗಗಳು.**

ಡಾ.ಟಿ.ಎಸ್. ಸತ್ಯವತಿ

**ಸಂದರ್ಶನ: ಶೈಲಜ**

**• ಒಬ್ಬ ಬಾಲಪ್ರತಿಭೆಯ ಕಲಾ ವಿಕಾಸದಲ್ಲಿ ಅಭ್ಯಾಸ ಹಾಗೂ ಕೇಳ್ಮೆಯ ಪಾತ್ರವೇನು?**

ಸಂಗೀತದಲ್ಲಿ ಅನೌಪಚಾರಿಕವಾದ ಕೇಳ್ಮೆಯ ಪಾತ್ರ ಹಿರಿದು. ಉತ್ತಮ ಸಂಗೀತವನ್ನು ಸುಮ್ಮನೆ ಆಡಾಡ್ತಾ ಕೇಳೋದು ಪ್ರಯೋಜನಕಾರಿ. ಹೀಗೆ ಕೇಳಿಸೋದ್ರಲ್ಲಿ ನನ್ನ ತಾಯಿಯ ಪಾತ್ರ ದೊಡ್ಡದು. ಸುಮಾರು ಹನ್ನೆರಡು ವಯಸ್ಸಿನ ತನಕ ಅವರ ಜೊತೆ ಬೆಂಗಳೂರಿನ ಕೋಟೆ ಹೈಸ್ಕೂಲಿನಲ್ಲಿ ಕಡಲೇಕಾಯಿ ತಿಂತಾ ಕಛೇರಿಗಳನ್ನು ಕೇಳಿಸಿಕೊಳ್ಳುತ್ತಿದ್ದೆ. ನಿದ್ದೆ ಬಂದಾಗ ಅವರ ತೊಡೆ ಮೇಲೆ ಮಲಗ್ತಿದ್ದೆ.

ನನಗೆ ಆಟದ ಆಸೆ. ಅಭ್ಯಾಸ ಮಾಡಬೇಕೆಂಬ ಉಮೇದು ಇರ್ಲಿಲ್ಲ. ಆದರೆ ಅಮ್ಮ ಬಲವಂತವಾಗಿ ಎಬ್ಬಿಸಿ ಅಭ್ಯಾಸಕ್ಕೆ ಹಚ್ಚುತ್ತಿದ್ದರು. ಇದು ಮುಂದೆ ತುಂಬಾ ಉಪಯೋಗಕ್ಕೆ ಬಂತು. ಕೂತು ಅಭ್ಯಾಸ ಮಾಡಿದ್ದು ಕಡಿಮೆ. ಆದರೆ ಎಲ್ಲೇ ಇದ್ದರೂ ಮನಸ್ಸಿನ ಒಂದು ಭಾಗ ಸಂಗೀತದಲ್ಲೇ ಇರ್ತಿತ್ತು. ಕಛೇರಿ ಇದ್ದಾಗಲೂ ಕಂಠ ಪರಿಷ್ಕರಣೆಗೆ ಅಂತ ಒಂದೂವರೆ ಗಂಟೆ ಅಭ್ಯಾಸ ಮಾಡ್ತಿದ್ದೆ. ಉಳಿದಂತೆ ಸದಾ ಆ ರಾಗಗಳು, ಕೃತಿಯ ಸಂಗತಿಗಳು, ಕಲ್ಪನಾಸ್ವರಗಳು ಮನಸ್ಸಿನಲ್ಲಿ ಸುಳಿದಾಡ್ತಾನೇ ಇರ್ತಿದ್ವು. ಮನೋಧರ್ಮ ಬೆಳೆಯೋದಕ್ಕೆ ಇದು ಸಹಕಾರಿಯಾಯ್ತು.

ಒಂದಷ್ಟು ಸಹಜ ಪ್ರತಿಭೆ, ಪೋಷಕರು ಕಲ್ಪಿಸಿದ ವಾತಾವರಣ, ಸದಾ ಕಿವಿಯ ಮೇಲೆ ಬೀಳುತ್ತಿದ್ದ ರೇಡಿಯೊ ಸಂಗೀತ, ಶಾಸ್ತ್ರೀಯ ಸಂಗೀತವನ್ನೇ ಆಧರಿಸಿದ್ದ ಹಳೆಯ ಚಿತ್ರಗೀತೆಗಳು ನನ್ನನ್ನು ರೂಪಿಸಿದವು. ಸಂಗೀತವನ್ನು ಸದಾ ನನ್ನಷ್ಟಕ್ಕೆ ಹಾಡ್ಕೊತಿದ್ದೆ. ಇದು ತುಂಬಾ ಮುಖ್ಯ.

**• ಸಂಗೀತದ ಕಲಿಕೆಗೆ ಸಂಗೀತದ ಹಿನ್ನೆಲೆ ಇರಬೇಕೇ?**

ಕುಟುಂಬದಲ್ಲಿ ಸಂಗೀತದ ಹಿನ್ನೆಲೆ, ವಾತಾವರಣ ಇರಬೇಕಾಗಿಲ್ಲ. ಆದರೆ ಸಂಗೀತದಲ್ಲಿ ಆಸಕ್ತಿ, ಪ್ರತಿಭೆ ಇರಬೇಕು. ಮಗುವಿನ ಆಸಕ್ತಿ ನೋಡಿ ಸಂಗೀತ ಹೇಳಿಕೊಟ್ಟಿದ್ದೇನೆಯೇ ಹೊರತು ಹಿನ್ನೆಲೆ ನೋಡಿ ಅಲ್ಲ. ಕಲಿಕೆಯ ಹಂಬಲ ಇರೋರು ಗುರುವನ್ನರಸಿ ಹೋಗುತ್ತಾರೆ. ಅಂತಹ ಮಕ್ಕಳು ಸಂಗೀತದಲ್ಲಿ ಉಳಿಯುತ್ತಾರೆ. ಅದಕ್ಕೆ ಜಾತಿ, ಜನಾಂಗದ ಹಿನ್ನೆಲೆ ಬೇಕಿಲ್ಲ. ಈಗ ಒಳ್ಳೆಯ ಕಲಾವಿದರು ಅನ್ನಿಸಿಕೊಂಡಿರುವ ಮಾರುತಿ ಪ್ರಸಾದನಂತಹ ನನ್ನ ವಿದ್ಯಾರ್ಥಿಗಳಿಗೆ ಸಂಗೀತದ ಹಿನ್ನೆಲೆಯೇ ಇರಲಿಲ್ಲ.

**• ಸಾಹಿತ್ಯ ಸಂಗೀತಗಳೆರಡರಲ್ಲೂ ರಸೋತ್ಪತ್ತಿಯೇ ಬಲು ಮುಖ್ಯ. ಸಂಗೀತದಲ್ಲಿ ಇದು ಹೇಗೆ ಸಂಭವಿಸುತ್ತದೆ?**

ಸಾಹಿತ್ಯದಲ್ಲಿ ನವರಸ ಎಂದು ಹೇಳುವುದನ್ನು ಸಾರಾಸಗಟಾಗಿ ಸಂಗೀತಕ್ಕೆ ಅನ್ವಯಿಸಲು ಆಗುವುದಿಲ್ಲ. ಎರಡರ ರಸದೃಷ್ಟಿ ಮೂಲಭೂತವಾಗಿ ಒಂದೇ ಇದ್ದರೂ ಕೂಡ ಸಂಗೀತದಲ್ಲಿ ಇದು ಸಂಭವಿಸುವ ಕ್ರಮ ಬೇರೆ. ರಸ ಎಂದರೆ ಆಸ್ವಾದ್ಯವಾದದ್ದು. ಸಂಗೀತದಲ್ಲಿನ ಆಸ್ವಾದ್ಯ ಮೂಲಭೂತವಾಗಿ ನಾದಲಯವೇ ಆಗಿರುತ್ತೆ. ಆದರೆ ಇದರ ಜೊತೆಗೆ ಸಾಹಿತ್ಯವೂ ಸೇರಿಕೊಳ್ಳುವುದು ಕರ್ನಾಟಕ ಸಂಗೀತದ ವಿಶೇಷ. ಇವೆಲ್ಲವೂ ಯಾವ ಹದಪಾಕದಲ್ಲಿ ಬೆರೆತುಕೊಂಡಿವೆ ಎಂಬುದನ್ನು ಅರಿತು, ಈ ನಾದ, ಲಯ, ಸಾಹಿತ್ಯವನ್ನು ಒಟ್ಟಿಗೆ ಆಸ್ವಾದಿಸಬಹುದಾದರೆ ಉತ್ಕೃಷ್ಟ ಮಟ್ಟದ ರಸಾನುಭೂತಿ ದೊರಕುತ್ತದೆ.

**• ಅಭಿಜಾತ ವಾದ್ಯಸಂಗೀತದಲ್ಲಿ ಸಾಹಿತ್ಯದ ಪಾತ್ರವೇನು?**

ಕರ್ನಾಟಕ ಸಂಗೀತ ಸಾಹಿತ್ಯಕ್ಕೆ ತುಂಬ ಆತುಕೊಂಡಿದೆ. ಆದರೆ ವಾದ್ಯಸಂಗೀತಕ್ಕೆ ಸಾಹಿತ್ಯದ ಅವಲಂಬನೆಯಿಲ್ಲ ಎಂಬ ಅಭಿಪ್ರಾಯವಿದೆ. ಆದರೆ ಇಲ್ಲಿ ರಾಗ ಇರುವುದು ಸಾಹಿತ್ಯದ ಅಕ್ಷರಗಳಲ್ಲಿ. ವಾದ್ಯಗಳಲ್ಲಿ ನುಡಿಸಲು ರಾಗ ಸಿಗುವುದು ಕೂಡ ಕೃತಿಗಳಲ್ಲೇ. ಈ ಮೂಲ ಕೃತಿಗಳನ್ನು ಬಿಟ್ಟುಬಿಟ್ರೆ, ಮುಂದಿನ ಪೀಳಿಗೆಗೆ ರಾಗವನ್ನು ಹಸ್ತಾಂತರಿಸುವುದು ಹೇಗೆ? ನಾವು ನಮ್ಮ ಬೇರನ್ನೇ ತೊರೆದಂತಲ್ಲವೇ?

**• ಈಗ ಹಾಡುತ್ತಿರುವ ರಾಗಗಳು ಸ್ಪಷ್ಟವಾಗಿ ರೂಪುಗೊಂಡಿದ್ದು ಯಾವಾಗ?**

ಚಾರಿತ್ರಿಕವಾಗಿ ನೋಡೋದಾದ್ರೆ ನಮ್ಮ ಸಂಗೀತದ ಚರಿತ್ರೆಯಲ್ಲಿ ಒಂದು ನಿರಂತರತೆ ಇಲ್ಲ. ರಾಗದ ದೃಷ್ಟಿಯಿಂದ ಇಂದು ನಮ್ಮ ಚಿಂತನೆ ತುಂಬಾ ಭಿನ್ನವಾಗಿದೆ. ಹಾಗಾಗಿ ಸಂಗೀತ ಗ್ರಂಥಗಳಲ್ಲಿ ರಾಗಗಳನ್ನು ಹುಡುಕುವುದು ಮೂರ್ಖತನ. ಇಂದು ಹಾಡುತ್ತಿರುವ ರಾಗಗಳೆಲ್ಲವೂ ಸ್ಪಷ್ಟ ರೂಪ ಪಡೆದಿರೋದು ಇತ್ತೀಚಿನ 250 ವರ್ಷಗಳಲ್ಲಿ.

**• ಅಭಿಜಾತ ಸಂಗೀತದ ಚೌಕಟ್ಟು ಎಂದರೇನು? ಅದು ಜಾನಪದ ಹಾಗೂ ಲಘು ಸಂಗೀತಕ್ಕಿಂತ ಭಿನ್ನವಾಗುವುದು ಯಾವ ಅಂಶದಿಂದ?**

ಅಭಿಜಾತ ಸಂಗೀತದಲ್ಲಿ ರಾಗ ತಾಳಗಳ ಪ್ರಯೋಗಗಳು ಪರಿಷ್ಕೃತಗೊಂಡು ಸಿದ್ಧವಾಗಿರುತ್ತವೆ. ಅದಕ್ಕೆ ಒಂದು ಸ್ಪಷ್ಟವಾದ ವ್ಯಾಕರಣವಿದೆ. ಆ ವ್ಯಾಕರಣಕ್ಕೆ ಒಗ್ಗದಿರುವುದನ್ನು ಅದು ಸಾಮಾನ್ಯವಾಗಿ ಸ್ವೀಕರಿಸುವುದಿಲ್ಲ. ಜಾನಪದ ಮತ್ತು ಸಿನಿಮಾ ಸಂಗೀತಕ್ಕೆ ತಮ್ಮದೇ ಆದ ಗಟ್ಟಿ ನೆಲೆಯಿದೆ. ಅಲ್ಲಿ ಪಿಚ್ ಮುಖ್ಯ. ಹೆಚ್ಚಾಗಿ ಎತ್ತರದ ಶ್ರುತಿಯಲ್ಲಿಯೇ ಹಾಡುತ್ತಾರೆ. ಶಾಸ್ತ್ರೀಯ ಸಂಗೀತಕ್ಕಿಂತ ಭಿನ್ನವಾದ ಕಂಠ ಪರಿಷ್ಕರಣೆ ಮತ್ತು ಧ್ವನಿ ಸಂಸ್ಕರಣ ಅವುಗಳಿಗೆ ಬೇಕು.

ಇವೆಲ್ಲಾ ಪರಸ್ಪರ ಭಿನ್ನವಾಗುವುದು ಗಮಕ ಪ್ರಯೋಗ ಮತ್ತು ಉಚ್ಚಾರಣೆ ಅಂದರೆ ಆರ್ಟಿಕ್ಯುಲೇಷನ್‌ನಿಂದ. ಅಭಿಜಾತ ಸಂಗೀತಕ್ಕೆ ಅದರದೇ ಆದ ವಿಶಿಷ್ಟ ಉಚ್ಚಾರಣೆಯಿದೆ. ಜಾನಪದದಲ್ಲಿ ಹೆಚ್ಚಾಗಿ ಪ್ಲೇನ್ ನೋಟ್ಸ್ ಬರುತ್ತವೆ. ಅವರದು ಮುಕ್ತಕಂಠದ ಗಾಯನ, ಹಕ್ಕಿಯ ಹಾಡಿನಂತೆ ಸ್ವಚ್ಛಂದ. ಜಗತ್ತಿನ ಎಲ್ಲಾ ಸಂಗೀತಗಳಿಗೂ ಅದರದ್ದೇ ಆದ ಪ್ರತ್ಯೇಕ ಸೌಂದರ್ಯವಿದೆ. ಅದನ್ನು ಗುರುತಿಸಿ, ಅದನ್ನು ಅದಾಗಿಯೇ ಅನುಭವಿಸಬೇಕೇ ಹೊರತು, ಅದನ್ನು ಇಲ್ಲಿಗೆ ತಂದು, ಬೆರೆಸಿ, ಪಚಪಚ ಮಾಡಬಾರದು.

**• ವಿಭಿನ್ನ ಭಾವವಿರುವ ರಚನೆಗಳನ್ನು ಸಂಗೀತಕ್ಕೆ ತಂದರೆ, ವೈವಿಧ್ಯಮಯ ದನಿಗಳು, ರಸಗಳು ಸೇರಿ ಸಂಗೀತದ ಬುಡ ಹಿಗ್ಗುತ್ತದಲ್ಲವೇ?**

ಈ ಮಾತು ನೂರಕ್ಕೆ ನೂರು ಸತ್ಯ. ಹೊಸ ಬಗೆಯ ಸಾಹಿತ್ಯ ನಮ್ಮ ಶಾಸ್ತ್ರೀಯ ಸಂಗೀತ ಒಪ್ಪುವಂತಿರಬೇಕು. ಧ್ವನಿಯ ದೃಷ್ಟಿಯಿಂದ ಹೊಂದಿಕೊಳ್ಳಬೇಕು. ಸಂಗೀತದ ಗಾಂಭೀರ್ಯಕ್ಕೆ ಧಕ್ಕೆ ಬಾರದಂತಿರಬೇಕು. ಶರದೃತು ಕುರಿತು ಋತುಗಾನ ಎನ್ನುವ ರೂಪಕದಲ್ಲಿ ವಾಲ್ಮೀಕಿ, ಭಾರವಿ, ಪುತಿನ, ಜಿಎಸ್‌ಎಸ್, ಅಡಿಗರು, ವೀಸೀ ಇಂತಹವರ ಕವನಗಳನ್ನು ಅಳವಡಿಸಿದೆ. ಇವುಗಳನ್ನು ಕಛೇರಿಗಳಲ್ಲಿ ಹಾಡಿದ್ದೇನೆ. ಇದರಿಂದ ಕರ್ನಾಟಕ ಸಂಗೀತ ಹೆಚ್ಚು ಜನರಿಗೆ ತಲುಪುತ್ತದೆ. ಆದರೆ ಹಾಗೆ ಮಾಡುವಾಗ ನಮ್ಮ ಬೇರು ಎಲ್ಲಿದೆ ಎನ್ನುವುದನ್ನು ಮರೆಯಬಾರದು.

**• 12ನೇ ಶತಮಾನದ ಮಾನಸೋಲ್ಲಾಸದಂತಹ ಶಾಸ್ತ್ರಗ್ರಂಥದ ಮೇಲೆ ಪ್ರೌಢಪ್ರಬಂಧ ಬರೆದವರು ನೀವು. ಆ ಪುರಾತನ ಗ್ರಂಥ ವರ್ತಮಾನಕ್ಕೆ ಹೇಗೆ ಪ್ರಸ್ತುತ?**

ಈ ಗ್ರಂಥ ಹಲವು ಕಾರಣಗಳಿಗೆ ಮುಖ್ಯ. ಕೇವಲ ಶಾಸ್ತ್ರದಲ್ಲಿದ್ದು ಪ್ರಯೋಗದಲ್ಲಿಲ್ಲದ ರಾಗಗಳ ಬಗ್ಗೆ ಮಾತನಾಡಬೇಕಿಲ್ಲ ಮತ್ತು ಯಾವುದೇ ಕಾಲಘಟ್ಟದಲ್ಲಿ 50ಕ್ಕಿಂತ ಹೆಚ್ಚು ರಾಗಗಳು ಬಳಕೆಯಲ್ಲಿರೋಲ್ಲ ಅನ್ನುತ್ತಾನೆ ಕವಿ ಮುಮ್ಮಡಿ ಸೋಮೇಶ್ವರ. ಮೃದಂಗ ಹಾಗೂ ವೀಣೆಯ ರಚನಾ ಕ್ರಮ, ನುಡಿಸುವ ಕ್ರಮ, ಅಂಗುಲಿವಿನ್ಯಾಸ, ಸಂಗೀತಸಭೆಯಲ್ಲಿ ಕಲಾವಿದರು, ವಾದಕರು ಎಲ್ಲೆಲ್ಲಿ ಕುಳಿತುಕೊಳ್ಳಬೇಕೆನ್ನುವುದನ್ನು ವಿವರಿಸುತ್ತಾನೆ. ವಾದನ ಮತ್ತು ಗಾಯನಗಳಲ್ಲಿ ಇಂದಿಗೂ ಅನ್ವಯಿಸಲಾಗುವ ಏಳು ಗಮಕಗಳನ್ನು ಹೇಳುತ್ತಾನೆ. ವಿಭಿನ್ನ ರೀತಿಯ ಸಂಗೀತ ಭಿನ್ನರುಚಿಯ ಜನರಿಗೆ ಆನಂದವನ್ನು ನೀಡುತ್ತದೆ ಎಂಬ ವಿಷಯವನ್ನು ತಿಳಿಸಿದ್ದಾನೆ. ದೈವಚಿಂತನೆಯೇ ಭಕ್ತಿಯಲ್ಲ, ಯಾವುದರ ಬಗ್ಗೆ ನಿಮಗೆ ಪೂಜ್ಯಭಾವವೂ, ಪ್ರೇಮವೂ ಇರುತ್ತದೋ ಅದೇ ಭಕ್ತಿ. ಹಾಗಾಗಿ ಲೋಭವಿಲ್ಲದೆ, ದುರುದ್ದೇಶವಿಲ್ಲದೆ, ತನಗಿಷ್ಟವಾದ ವಿಷಯವನ್ನು ಕುರಿತ ರಚನೆಯನ್ನು ತನ್ಮಯತೆಯಿಂದ ಹಾಡಿದರೆ, ಅದು ಉತ್ಕೃಷ್ಟ ಸಂಗೀತವೆನ್ನುತ್ತಾನೆ.

**• ಒಬ್ಬ ಕಲಾವಿದೆಯಾಗಿ ನಿಮ್ಮ ಸಂಗೀತದ ಗಟ್ಟಿಯಾದ, ವಿಶಿಷ್ಟ ಅಂಶ ಯಾವುದು?**

ನಾನು ಕೃತಿಗಳಲ್ಲಿ ಒಲವುಳ್ಳವಳು. ಕೃತಿಯ ವಿನ್ಯಾಸದ ಸೊಗಸು, ಭಾಷಾ ಸೊಗಸು, ಅದರ ಸಂಗೀತಾತ್ಮಕ ಸೊಬಗು, ಅದರ ಉದ್ದೇಶ, ಅದು ಯಾವ ರೀತಿಯ ಪ್ರೇರಣೆ ಕೊಡ್ತಿದೆ ಅನ್ನೋದು ನನಗೆ ಮುಖ್ಯ. ನನಗೆ ರಾಗ, ಕಲ್ಪನಾಸ್ವರ ನೆರವಲ್ ಇವೆಲ್ಲಾ ಹುಟ್ಟೋದು ಕೃತಿಯಿಂದ. ಕೃತಿಪ್ರಸ್ತುತಿಯಲ್ಲಿ ಯಾವುದೋ ಒಂದು ಜಾಗಕ್ಕೆ ಬಂದಾಗ ಈ ಜಾಗ ಎಷ್ಟು ಚೆನ್ನಾಗಿದೆ. ಸ್ವರಹಾಕಿ ಇದನ್ನು ಅಲಂಕರಿಸಬೇಕೆಂಬ ಪ್ರೇರಣೆ ನನ್ನೊಳಗಿನಿಂದ ಉಕ್ಕುತ್ತದೆ. ಅದು ನನ್ನ ನಿಜವಾದ ಶಕ್ತಿ. ಕೃತಿಯ ಸಾಹಿತ್ಯದ ಉಚ್ಚಾರಣೆಯಿಂದ ಹಿಡಿದು ಶಬ್ದಗಳ ಲಾಲಿತ್ಯ, ಮಾಧುರ್ಯ, ಸೌಂದರ್ಯ, ಆ ಕಟ್ಟಾಣಿಕೆ, ನನಗೆ ಮುಖ್ಯವಾಗುತ್ತದೆ. ಕೃತಿ ನನಗೆ ಕೊಡುವ ಪುಳಕ, ನವಿರು ಅವರ್ಣನೀಯ. ಅದು ನನ್ನನ್ನು ಒಂದು ಧ್ಯಾನದ ಸ್ಥಿತಿಗೆ ಒಯ್ದುಬಿಡುತ್ತದೆ.

**• ಇಂದು ಕೇಳುಗರು ಮತ್ತು ಕಲಾವಿದರ ಮನಸ್ಸು ಮತ್ತು ಅಭಿರುಚಿ ಬದಲಾಗಿದೆಯಲ್ಲವೇ?**

ಹೌದು. ಇವತ್ತಿನ ಗ್ಲೋಬಲೈಸೇಷನ್, ಲಿಬರಲೈಸೇಷನ್, ತಂತ್ರಜ್ಞಾನದ ಪ್ರಗತಿಯ ಪ್ರಭಾವ ಅಗಾಧ. ಅಪೇಕ್ಷೆಗಳು, ನಿರೀಕ್ಷೆಗಳು ಬದಲಾಗ್ತಾ ಇವೆ. ಧ್ವನಿವರ್ಧಕ ನಮ್ಮನ್ನು ಆಳ್ತಾ ಇದೆ. ಸಂಗೀತ ಅಂದರೆ ಸ್ಪೀಡ್, ಪಿಚ್, ವಾಲ್ಯೂಮ್ ಅಂತಾಗಿಬಿಟ್ಟಿದೆ. ಜನ ಮೆಚ್ಚುಗೆ ಸೂಚಿಸುವುದು ಇವುಗಳಿಗೆ. ಪ್ರಾಮಾಣಿಕವಾಗಿ ಹೇಳಬೇಕು ಅನ್ನಿಸಿದ್ದನ್ನು ಬಿಟ್ಟು, ಜನಕ್ಕೇನು ಬೇಕೋ ಅದನ್ನು ಕೊಡಬೇಕಾದಾಗ, ಸಂಗೀತದ ಗಟ್ಟಿತನವೇ ಕಳೆದುಹೋಗುತ್ತದೆ. ಇದೊಂದು ವಿಷವರ್ತುಲ. ಇವತ್ತು ಕೇಳುಗರ ದೊಡ್ಡ ವರ್ಗಕ್ಕೆ ಬೇಕಾಗಿರೋದು ಕೇವಲ ಮನರಂಜನೆ. ಸಂಗೀತದ ಸೂಕ್ಷ್ಮಗಳು, ವೈಶಿಷ್ಟ್ಯಗಳು ಅವರಿಗೆ ಬೇಕಾಗಿಲ್ಲ.

**• ಮಹಿಳೆಯಾಗಿ ಸಂಗೀತ ಕ್ಷೇತ್ರದಲ್ಲಿ ನಿಮ್ಮ ಅನುಭವ ಹೇಳಿ.**

ಕಾಲೇಜಿನಲ್ಲಿ ನನಗೆ ಲಿಂಗತಾರತಮ್ಯದ ಅನುಭವ ಎಂದೂ ಆಗಲಿಲ್ಲ. ಸಂಗೀತ ಕ್ಷೇತ್ರದಲ್ಲಿ ಲಿಂಗತಾರತಮ್ಯ ಖಂಡಿತವಾಗಿಯೂ ಇದೆ. ನೋಡಿದ್ದೇನೆ, ಆದರೆ ಅನುಭವಿಸಿಲ್ಲ. ಲಿಂಗತಾರತಮ್ಯ ಕಂಡಾಗ ನನ್ನೊಳಗೆ ನಾನು ನೊಂದಿದ್ದೇನೆ. ಒಮ್ಮೆ ಶೇಷಾದ್ರಿಪುರಂನಲ್ಲಿ ಘನವಾಗಿ ಬೇಗಡೆರಾಗ ಹಾಡಿ ನಾದೋಪಾಸನ ಕೃತಿ ಹಾಡಿದೆ. ವಂದನಾರ್ಪಣೆಯಲ್ಲಿ ಕಾರ್ಯದರ್ಶಿಗಳು ‘ಗಂಡು ರಾಗವಾದ ಬೇಗಡೆಯನ್ನು ಗಂಡಸರನ್ನೂ ಮೀರಿಸಿ ಹಾಡಿದ್ದಾರೆ’ ಎಂದರು. ರಾಗವೊಂದನ್ನು ಗಂಡುರಾಗ ಅನ್ನೋದೆ ನನಗೆ ವಿಚಿತ್ರವೆನಿಸುತ್ತೆ. ಕೆಲವು ಕಲಾವಿದರು ಹೆಂಗಸರಿಗೆ ಪಕ್ಕವಾದ್ಯ ನುಡಿಸಲ್ಲ ಅಂತ ಸಾರ್ವಜನಿಕವಾಗಿಯೇ ಹೇಳಿದ್ದಾರೆ. ನಾನೂ ಅಂತಹವರನ್ನು ಕರೆಯುವುದು ನಿಲ್ಲಿಸಿದೆ. ಸಂಕುಚಿತವಾದ ಭಾವನೆಗಳಿರೋ ಜನಗಳಿದ್ದಂತೆ, ಉದಾತ್ತವಾಗಿ, ಉದಾರವಾಗಿ ಯೋಚಿಸುವವರೂ ಇದ್ದಾರೆ. ಅವರ ಸಂಪರ್ಕದಲ್ಲಿರೋಣ. ❖

# ಬಂಗಾಲದ ಮನೋಲೋಕದೊಳಗೆ...

**ಡಾ.ಕೆ.ಎಸ್. ಪವಿತ್ರ**

**ಕೋಲ್ಕತ್ತದ** ನೇತಾಜಿ ಸುಭಾಷ್‌ಚಂದ್ರ ಬೋಸ್ ವಿಮಾನ ನಿಲ್ದಾಣದಲ್ಲಿ ಇಳಿದಾಗ ಬೆಳಗಿನ 9 ಗಂಟೆ. ಬೆಂಗಾಲಿಗಳ ಕೋಲ್ಕತ್ತ, ರವೀಂದ್ರರ ಅನುವಾದಿತ ಕನ್ನಡ ಕಾದಂಬರಿಗಳಲ್ಲಿ ಓದಿ ಓದಿ ನನ್ನ ಮಟ್ಟಿಗೆ ಇನ್ನೂ ಹಳೆಯ ಕಲ್ಕತ್ತೆಯೇ ಆಗಿ ಉಳಿದಿತ್ತು. ನಿಲ್ದಾಣದ ಹೊರಗೆ ಕಾಲಿಡುವಾಗಲೇ ಕಾಳೀಮಾತೆಯ ಮೆರವಣಿಗೆಯ ಸುಂದರ ಚಿತ್ರಕಲೆ ಕಣ್ಣು ಸೆಳೆದಿತ್ತು. ‘ಕಾಲೀ-ಬೆಂಗಾಲೀ-ಸೈರೆಯಾಟ್ರೀ’ ಎಂದು ನಗುತ್ತಲೇ ಅದರ ಫೋಟೊ ಕ್ಲಿಕ್ಕಿಸಿದ್ದೆ. ನಾನು ಅಲ್ಲಿ ಎರಡು ದಿನಗಳ ಠಿಕಾಣಿ ಹೂಡಲು ಕಾರಣ ಸೃಜನಶೀಲತೆ-ಮಾನಸಿಕ ಆರೋಗ್ಯದ ಬಗೆಗಿನ ಸಮ್ಮೇಳನ.

ಸಮ್ಮೇಳನಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಬಂದಿದ್ದರೂ ಕೋಲ್ಕತ್ತದಲ್ಲಿ ನನಗಿದ್ದ ಆಕರ್ಷಣೆಗಳು ಹಲವು. ಇನ್ನೇನು ದುರ್ಗಾಪೂಜೆಗಿದ್ದದ್ದು ಕೆಲವೇ ದಿನಗಳು. ಎಂದಿಗೂ ಆಕರ್ಷಕವೇ ಎನಿಸುವ ಗಿಜಿಗುಡುವ ಗರಿಯಾಹಟ್‌ಗಳು, ದೊಖಿನಾಪನ್‌ಗಳು ತುಂಬಿ ತುಳುಕುತ್ತಿದ್ದವು. ‘ದುರ್ಗಾಪೂಜೆಯವರೆಗೆ ಪ್ರತಿದಿನ ತೆರೆದಿದೆ’ ಎಂಬ ಫಲಕ ಹೊತ್ತ ಅಂಗಡಿಗಳು. ದುರ್ಗೆಯ ಮೂರ್ತಿಗಳು ಮೊರಗಳಲ್ಲಿ ಎಲ್ಲ ಸೈಜುಗಳಲ್ಲಿ ಕಂಗೊಳಿಸುತ್ತಿದ್ದವು.

ಕೋಲ್ಕತ್ತ ಮನೋವೈದ್ಯಕೀಯಕ್ಕೂ ಬಹು ಹತ್ತಿರದ್ದೇ. ಸ್ವಾತಂತ್ರ್ಯಪೂರ್ವದ ಕಾಲದಲ್ಲಂತೂ ಈಸ್ಟ್ ಇಂಡಿಯಾ ಕಂಪನಿಯ ಕೇಂದ್ರ ಸ್ಥಾನವಿದ್ದದ್ದು ಕೋಲ್ಕತ್ತದಲ್ಲಾದ್ದರಿಂದ, ಭಾರತದ ಮನೋವೈದ್ಯಕೀಯ ಚರಿತ್ರೆಯಲ್ಲಿ ಬಂಗಾಲದ್ದು ಬಹುಪಾಲು. ಇನ್ನು ಸಾಂಸ್ಕೃತಿಕವಾಗಿ ಬೆಂಗಾಲಿಗಳನ್ನು ಯಾವ ಯಾವ ಕ್ಷೇತ್ರದಲ್ಲಿ ಹೆಸರಿಸದಿರಬಹುದು?! ನನ್ನ ಸುತ್ತಮುತ್ತಲಿದ್ದ ಬೆಂಗಾಲಿ ಮನೋವೈದ್ಯ-ಕಲಾವಿದರ ಹೆಸರುಗಳೇ ಸುಂದರ ಕವಿತೆಯೊಂದರ ಶೀರ್ಷಿಕೆಗಳಂತೆ ಇದ್ದವು. ಅಭಿರುಚಿ ಶಯನ್ ದೀಪ್, ಶುದ್ಧೇಂದು, ದೇವಶಿಶು, ಶರ್ಮಿಷ್ಠಾ, ದೇವಲೀನಾ, ಅನಿರುದ್ಧ... ಇವೆಲ್ಲವೂ ಬೆಂಗಾಲಿಗಳ ಬಾಯಲ್ಲಿ ಸುದ್ಧೆಂದೂ, ದೇಬಸೀಸ್, ಅರೊಬಿಂದೋ ಆಗಿರುವುದು ಮಾತ್ರ ನಗು ಬರಿಸುತ್ತಿತ್ತು.

ನವರಾತ್ರಿಗೆ ಕೋಲ್ಕತ್ತ ಸಜ್ಜಾಗುವುದು ಹೀಗೆ...ಎಲ್ಲೆಲ್ಲೂ ದುರ್ಗೆಯ ಸಾನಿಧ್ಯ

ಹಿಂದೊಮ್ಮೆ ಕೋಲ್ಕತ್ತದ ವೈದ್ಯಕೀಯ ಸಮ್ಮೇಳನದಲ್ಲಿ ಸಂಜೆ ನಡೆಯುವ ಮನರಂಜನಾ ಕಾರ್ಯಕ್ರಮಕ್ಕೆ ‘ಕಬಿತಾ ವಾಚನ್’ ಇಟ್ಟಿದ್ದರು. ಆವೇಶ ಪೂರಿತವಾಗಿ ಕವಿತೆಯನ್ನು ‘ಕಲಾವಿದೆ’ಯೊಬ್ಬಳು ವಾಚನ ಮಾಡಿದ್ದನ್ನು ನೋಡಿ ನಾವೆಲ್ಲ ಬೆರಗಾಗಿದ್ದೆವು. ನಮ್ಮಲ್ಲಿ ನಡೆಯುವ ಕವಿಗೋಷ್ಠಿಗಳಂತಿರಲಿಲ್ಲ ಅದು! ಸಂಗೀತ-ನೃತ್ಯಗಳಂತೆ ಜಬರ್ದಾಗಿ, ಇಡೀ ರಂಗಮಂದಿರ ಮೊಳಗುವ ಹಾಗೆ ಈ ‘ಕಬಿತಾ ವಾಚನ್’ ನಡೆದಿತ್ತು, ಇನ್ನು ರಬೀಂದ್ರ ಸಂಗೀತ್ ಬಗ್ಗೆ ಹೇಳುವುದೇನು? ಬೆಂಗಾಲಿ ಕವಿಯೊಬ್ಬರ ಸಂಗೀತ ಪ್ರಕಾರವನ್ನೇ ಸೃಷ್ಟಿಸುವ, ಪ್ರಚಾರ ಮಾಡುವ ಧೈರ್ಯ ಬೆಂಗಾಲಿಗಳಲ್ಲದೇ ಮತ್ತ್ಯಾರಿಗೆ ಸಾಧ್ಯವಾದೀತು? ಇದೇ ಪ್ರವೃತ್ತಿಯನ್ನು ಮುಂದುವರಿಸಿ ‘ನಜರುಲ್ ಗೀತಿ’ ಎಂಬ ಗೀತಪ್ರಕಾರವನ್ನು ಕವಿ ಕಾಜೀ ನಜರುಲ್ ಇಸ್ಲಾಂರ ಗಜಲ್‌ಗಳನ್ನು ಆಧರಿಸಿ ಕಟ್ಟಿದ್ದಾರೆ. ನಮ್ಮ ಕನ್ನಡದಲ್ಲೂ ಬೇಕಷ್ಟು ಕವಿಗಳಿಲ್ಲವೇ? ಆದರೆ ಅವರ ಕಾವ್ಯವನ್ನೇ ಆಧರಿಸಿ ಸಂಗೀತ ಪ್ರಕಾರವನ್ನು ನಮಗೆ ಮಾಡಲು ಸಾಧ್ಯವಾಗಿಲ್ಲವಲ್ಲ?! ಬೆಂಗಾಲಿಗಳ ಇಂಥ ಸೃಜನಶೀಲ ಐಡಿಯಾಗಳಿಗೆ ಕೊನೆಯೇ ಇಲ್ಲ! ಇತ್ತೀಚಿನ ಇನ್ನೊಂದು ಪ್ರಕಾರದ ಸಂಗೀತ ‘ಜೀಬೋನ್‌ಮುಖಿಗಾನ್’ ಎಂದು ಗೆಳೆಯ - ಮಾತುಗಾರ ಅಭಿರುಚಿ ಚಟರ್ಜಿ (ಚ್ಯಾಟರ್ ಜೀ!) ಹೇಳಿದ. ಅದು ಏನಿರಬಹುದು? ‘ಜೀವನ್ಮುಖಿ ಸಂಗೀತ’ ಜೀವನದ ಬಗೆಗಿನ ಸಂಗೀತವಂತೆ ಅದು. ಸಿನಿಮಾ ಕ್ಷೇತ್ರವನ್ನೇ ಗಮನಿಸಿದರೂ ಅಷ್ಟೆ. ರಾಷ್ಟ್ರ ಪ್ರಶಸ್ತಿಗಳಲ್ಲಿ ಬೆಂಗಾಲಿ ಸಿನಿಮಾಗಳದ್ದೇ ಸಿಂಹಪಾಲು (ಈವರೆಗೆ 22 ಪ್ರಶಸ್ತಿ).

ಬೆಂಗಾಲಿಗಳ ಸೃಜನಶೀಲತೆ ಕಲೆ-ಚಿತ್ರ ವಿಚಿತ್ರ ಔಟ್ ಆಫ್ ಬಾಕ್ಸ್ ಆಲೋಚನೆಗಳ ಮೂರ್ತರೂಪವಾಗಿ ಅಂದಿನ ಸಮ್ಮೇಳನ. ಒಂದೆಡೆ ಅತಿ ಶಿಸ್ತು-ಇನ್ನೊಂದೆಡೆ ಯಾರಿಗೂ ‘ಕೇರ್’ ಮಾಡದ ಅಶಿಸ್ತುಗಳ ಅಪೂರ್ವ ಸಮ್ಮಿಳನ. ಹೊರಗಿನ ಪ್ರದರ್ಶನದಲ್ಲಿ ಮಾನಸಿಕ ಆರೋಗ್ಯ ಸಮಸ್ಯೆಗಳಿಂದ ನರಳುವವರು ತಮ್ಮ ಸೃಜನಶೀಲತೆಯಿಂದ ಮಾಡಿರುವ ವಸ್ತುಗಳ ಪ್ರದರ್ಶನ ಮಾರಾಟ. ಆ ಪ್ರದರ್ಶನದಲ್ಲಿಯೂ ಚಿತ್ರಕಲೆಯದ್ದೇ ಸಿಂಹಪಾಲು. ನನ್ನೊಡನೆ ಸಂಪನ್ಮೂಲ ವ್ಯಕ್ತಿಗಳಾಗಿ ಬಂದವರಲ್ಲಿ ಕೆಲವರು ಖ್ಯಾತನಾಮ ಕಲಾವಿದರಾದರೆ, ಇನ್ನು ಕೆಲವರು ಮನೋವೈದ್ಯ- ಕಲಾವಿದರು. ಅವರ ವೇಷಭೂಷಣಗಳೂ ಅಷ್ಟೆ. ಕೆಲವರು ಧೋತಿಯುಟ್ಟೇ ಬಂದಿದ್ದರೆ, ಕೆಲವರು ತಲೆಗೆ ಒಂದು ಟರ್ಬನ್ ಸುತ್ತಿಕೊಂಡು ವರ್ಣಮಯವಾಗಿ ತಮ್ಮದೇ ಸ್ಟೈಲ್ ಮಾಡಿಕೊಂಡಿದ್ದರು.

ಬೆಂಗಾಲಿಗಳು ಅವರು ಯಾವ ಕ್ಷೇತ್ರದವರೇ ಆಗಲಿ, ಮೈಕಿನಲ್ಲಿ ಮಾತನಾಡುವಾಗ ಆವೇಶಪೂರಿತವಾಗಿ ಮಾತನಾಡುತ್ತಾರೆ! ತಮ್ಮ ಅಭಿಪ್ರಾಯವನ್ನು ಸಾಧಿಸದೇ ಬಿಡುವುದಿಲ್ಲ ಮತ್ತು ಮಾತನಾಡುತ್ತಾ ಅವರು ಮಗ್ನರಾದರೆಂದರೆ ಸಭಿಕರಲ್ಲಿ ಕೆಲ ಬೆಂಗಾಲಿಗಳಷ್ಟೇ ಇದ್ದರೂ ಇಂಗ್ಲಿಷಿನಿಂದ ಯಾವ ಸಂಕೋಚ-ಮುಜುಗರಗಳಿಲ್ಲದೆ ಅವರು ಬಂಗಾಲಿಯಲ್ಲೇ ಮಾತನಾಡಲು ಆರಂಭಿಸಿಬಿಡುತ್ತಾರೆ! ಕೃಷ್ಣಾನಂದ ಕಾಮತರ ಪ್ರಸಿದ್ಧ ಪುಸ್ತಕ ‘ವಂಗದರ್ಶನ’ದಲ್ಲಿ ಬೆಂಗಾಲಿಗಳ ವೈಶಿಷ್ಟ್ಯ-ವೈಚಿತ್ರ್ಯಗಳನ್ನು 57 ಅಂಶಗಳಾಗಿ ಪಟ್ಟಿ ಮಾಡಿದ್ದಾರೆ. ಆ ಪಟ್ಟಿಗೆ ಇವುಗಳನ್ನೂ ಸೇರಿಸಬಹುದು ಎನಿಸಿತು.

ಬೆಂಗಾಲಿಗಳು ಕೇವಲ ಪ್ರತಿಭಾಶಾಲಿಗಳಲ್ಲ. ಸೃಜಿಸುವ ಪ್ರತಿಭೆಯ ಜೊತೆಗೆ ತಮಗೆ ಬೇಕಾದ ದಾರಿ ಹುಡುಕುವ, ಛಲಬಿಡದೆ ಸಾಧಿಸುವ, ‘ರೈಟ್ ಕನೆಕ್ಷನ್ಸ್’ ಸಾಧಿಸುವ ಪ್ರತಿಭೆಯೂ, ಜಾಣತನವೂ ಅವರಲ್ಲಿದೆ. ಖ್ಯಾತ ನೃತ್ಯಗಾತಿ – ಚಿತ್ರಕಲಾವಿದೆ ಅಲೋಕಾನಂದ ರಾಯ್ ಅವರ ಪ್ರಯತ್ನವನ್ನೇ ನೋಡಿದರೆ ಇದು ಸುಸ್ಪಷ್ಟ. ಸೆರೆಯಲ್ಲಿರುವ ಬಂಧಿಗಳ ಕಲಾ ತಂಡ ಕಟ್ಟಿದ್ದಾರೆ ಅಲೋಕಾನಂದ. 2007ರಿಂದ ಕೋಲ್ಕತ್ತದ ಜೈಲು ನಂತರ ಜಗತ್ತಿನಾದ್ಯಂತ ಹಲವು ಸೆರೆಮನೆಯ ವಾಸಿಗಳಿಗೆ ನೃತ್ಯ-ಕಲರಿಪಯಟ್ಟುಗಳ ಮುಖಾಂತರ ಅಲೋಕಾನಂದ ರಾಯ್ ಕಲೆಯನ್ನು ‘ಬಂಧಿತ ಮನಸ್ಸು’ಗಳನ್ನು ಬಿಡುಗಡೆ ಮಾಡುತ್ತಿದ್ದಾರೆ.

ರವೀಂದ್ರನಾಥ ಟ್ಯಾಗೋರರ ‘ವಾಲ್ಮೀಕಿ ಪ್ರತಿಭಾ’ ಎಂಬ ನೃತ್ಯ ರೂಪಕವನ್ನು ಇವರ ಮುಖಾಂತರ ಮಾಡಿಸಿದ್ದಾರೆ. ದಸ್ಯು ರತ್ನಾಕರನೆಂಬ ಡಕಾಯಿತ ವಾಲ್ಮೀಕಿಯೆಂಬ ಮಹರ್ಷಿಯಾಗಿ ಬದಲಾವಣೆ ಹೊಂದಿದ ಕಥೆ ಅಪರಾಧಗಳನ್ನು ಮಾಡಿ ಬಂಧಿತವಾದ ಮನಸ್ಸುಗಳಿಗೆ ಪರಿವರ್ತನೆಯ ಮಾದರಿಯಾದೀತು ಎಂಬ ಅಲೋಕಾನಂದ ರಾಯರ ಪರಿಕಲ್ಪನೆ ಮನಮುಟ್ಟಿತು. ಅವರು ವಿವರಿಸಿದ ಕೆಲವು ಅನುಭವಗಳು ಕಲೆ ಹೇಗೆ ಮಾನವ ಸಂಬಂಧಗಳನ್ನು ಬೆಸೆಯಬಹುದು ಎಂಬುದಕ್ಕೆ ನಿದರ್ಶನಗಳಾದವು. ‘ಒಂದು ದಿನ ಶೀಟುಗಳ ಕೆಳಗೆ, ಕೋಲ್ಕತ್ತೆಯ ಬೇಗೆ ತಡೆಯುತ್ತಾ ಅಭ್ಯಾಸ ಮಾಡಿಸುತ್ತಿದ್ದೆ. ಸೆರೆಯಲ್ಲಿದ್ದ ಗಂಡುಮಕ್ಕಳಿಗೂ ಒತ್ತಾಯದಿಂದ ಹೆಣ್ಣು ಮಕ್ಕಳ ಸ್ವತ್ತು ಎಂದು ಸಮಾಜ ಭಾವಿಸಿರುವ ನೃತ್ಯ ಕಲಿಸುತ್ತಿದ್ದೆ. ಸಮರ ಕಲೆ ಕಲರಿಪಯಟ್ಟು ಅವರಿಗೆ ಸೂಕ್ತ ಎಂದು ಆರಿಸಿದ್ದೆ. ಒಬ್ಬ 20-22ರ ವಯಸ್ಸಿನ ಯುವಕ ತಲೆ ತಿರುಗಿ ಬಿದ್ದ. ಎಲ್ಲರಿಗೆ ಮಾಡುವಂತೆ ನೀರು ಕುಡಿಸಿ, ತಲೆಗೆ ತಣ್ಣೀರು ತಟ್ಟಿದ ಮೇಲೆ ಆತ ಚೇತರಿಸಿಕೊಂಡ. ದಿಟ್ಟಿಸಿ ನೋಡಿದ. 2-3 ದಿನಗಳ ನಂತರ ಮತ್ತೆ ತರಗತಿಗೆಂದು ಹೋದಾಗ ಆತ ಬಂದು ಒಂದು ‘ಥ್ಯಾಂಕ್‌ಯೂ’ ಎಂದು ಬರೆದ ಚೀಟಿ ಕೊಟ್ಟ. ‘ಹೆಣ್ಣುಮಕ್ಕಳು ಮಾತನಾಡುವಂತೆ, ಕೈ ಹಿಡಿದುಕೊಂಡಂತೆ, ಅಪ್ಪಿಕೊಳ್ಳುವಂತೆ, ಅಳುವಂತೆ ಮಾಡುವುದು, ಗಂಡು ಮಕ್ಕಳಿಗೆ ಸುಲಭವಲ್ಲ. ‘ಅವರು ಅಳಬಾರದು, ದುಃಖ ತೋರಿಸಬಾರದು’ ಎಂದು ಸಮಾಜ ವಿಧಿಸಿದೆ. ಆ ಹುಡುಗ ಕಣ್ಣೀರು ತಡೆಹಿಡಿದ. ನಾನೆಂದೆ ‘ಅರೆ ಏಕೆ, ನಾನೇನು ದೊಡ್ಡದು ಮಾಡಿದೆ? ಬೇರೆಯವರು ತಲೆತಿರುಗಿ ಬಿದ್ದರೆ ಯಾರೂ ಮಾಡಬಹುದಾದ ಕೆಲಸವಷ್ಟೆ!’ ಆತನೆಂದ: ‘ಸೆರೆಯಲ್ಲಿರುವ ನಮ್ಮನ್ನು ಯಾರೂ ಮುಟ್ಟುವುದಿಲ್ಲ. ಹೆದರುತ್ತಾರೆ. ನನ್ನಮ್ಮ ನನ್ನನ್ನು ಸ್ಪರ್ಶಿಸಿದ್ದು ಬಿಟ್ಟರೆ, ನನಗೀಗ ನೆನಪಿರುವುದು ನಿಮ್ಮ ಸ್ಪರ್ಶವೇ!’ ಇದೇ ಸ್ಫೂರ್ತಿಯಿಂದ ಇಂದು ಅಲೋಕಾನಂದ ರಾಯ್ ಸ್ಥಾಪಿಸಿರುವ ಸಂಸ್ಥೆಯ ಹೆಸರು ‘ಟಚ್ ವರ್ಲ್ಡ್’.

ನಾಟಕ ಸಿನಿಮಾ-ಚಿತ್ರಕಲೆಯ ಜಗತ್ತಿನ ಬೆಂಗಾಲಿ ಪ್ರತಿಭಾಶೀಲರು ತಮ್ಮ ಅನುಭವಗಳನ್ನು ಮನೋವೈದ್ಯಕೀಯ ನೆಲೆಯಿಂದ ವಿವರಿಸಿದರು. ನಾನು ವಿವರಿಸಿ ನರ್ತಿಸಿದ ಕನ್ನಡ ಕವಿತೆಗಳನ್ನು ಪಡೆದು, ಅದರ ಇಂಗ್ಲೀಷ್ ಅರ್ಥಕೇಳಿ, ಬಂಗಾಲಿಯಲ್ಲಿ ಅನುವಾದಿಸುತ್ತೇವೆ ಎಂದರು.

ಸಮ್ಮೇಳನ ಮುಗಿಸಿ ಬೇಲೂರು ಮಠಕ್ಕೆ ಹೋದಾಗ ಮತ್ತೆ ಬಂಗಾಲದ ಶಿಸ್ತು-ಅಚ್ಚುಕಟ್ಟುತನ ಜೊತೆಗೇ ನದಿಗೆ ಪೇಪರ್-ತಿಂಡಿ ಎಸೆಯುವ, ಎಲ್ಲೆಂದರಲ್ಲಿ ಉಳುಗುವ ಅಶಿಸ್ತು-ಕೊಳಕುತನ ನನ್ನ ಮುಂದಿತ್ತು. ಚಂದದ ಟೆರ್ರಾಕೋಟಾ, ಬಟ್ಟೆಯ ಕಲೆಗಾರಿಕೆಯ ಆಭರಣಗಳು, ಸುತ್ತಮುತ್ತಲ ಬಡತನ, ಜನಜಂಗುಳಿ, ಹೇರಳ ‘ಬ’ ‘ಓ’ ಕಾರಗಳ ಮಧ್ಯೆ ‘ಕಾಳಿಮಾತಾ’ ನಿರ್ಭಯೆಯಾಗಿ ನಿಂತಿದ್ದಳು. ಸೃಜನಶೀಲದ ಬಂಗಾಲದ ಪ್ರತಿಭೆಗೆ ‘ಕಾಳಿಮಾತಾ’ ಕಾರಣಳೋ ಅಥವಾ ಬೆಂಗಾಲಿಗಳ ಸೃಜನಶೀಲ ಚಿತ್ರ-ವಿಚಿತ್ರ ಪ್ರತಿಭೆಯೇ ದೊಡ್ಡ ಕಂಗಳ, ನಮ್ಮ ಮನಸ್ಸು ಹೊಕ್ಕಿ ನೋಡುವ ದುರ್ಗಾ ಮಾತಾಳನ್ನು ಸೃಷ್ಟಿಸಿದೆಯೋ ಅರ್ಥವಾಗದೆ ದಕ್ಷಿಣೇಶ್ವರದ ಕಾಳಿ ಮಂದಿರದ ಮುಂಚೆ, ಗಂಗಾನದಿಯ ದಡದಲ್ಲಿ ‘ಕಾಲೀ- ಬೆಂಗಾಲೀ -ಕ್ರಿಯೇಟಿವಿಟಿ’, ಎಂದು ಗುನುಗುತ್ತಾ ನಿಂತೇ ಇದ್ದೆ! ❖

## ಮುನ್ನೋಟ 25-09-2022 ರಿಂದ 01-10-2022

**ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ**

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

### ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

**ಮೇಷ** — **ಅಶ್ವಿನಿ, ಭರಣಿ, ಕೃತ್ತಿಕಾ 1**

ಕಾರ್ಯಕ್ಷೇತ್ರದಲ್ಲಿನ ಸನ್ನಿವೇಶಗಳನ್ನು ನಿಮ್ಮ ಅನುಕೂಲಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳುವಿರಿ. ಕೆಲವು ವಿಚಾರಗಳನ್ನು ವಿಭಿನ್ನ ದೃಷ್ಟಿಕೋನದಿಂದ ನೋಡಿ ಅಪಾರ್ಥ ಕಲ್ಪಿಸುವಿರಿ. ದೈನಂದಿನ ರೀತಿ ರಿವಾಜುಗಳನ್ನು ಉಳಿಸಿಕೊಳ್ಳಲು ಬಹಳ ಹರಸಾಹಸಪಡುವಿರಿ. ಹೊಸ ಅವಕಾಶಗಳು ಒದಗಿ ಬರುವುದರಿಂದ ನಿಯೋಜಿತ ಕೆಲಸವನ್ನು ಆಸಕ್ತಿಯಿಂದ ಒಪ್ಪಿಕೊಳ್ಳುವಿರಿ. ಹಣದ ಒಳಹರಿವು ನಿರೀಕ್ಷೆಯಷ್ಟು ಇರುತ್ತದೆ.

**ವೃಷಭ** — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**

ವಾಹನಗಳ ಬಿಡಿಭಾಗಗಳನ್ನು ತಯಾರು ಮಾಡುವ ಕಂಪನಿಗಳಿಗೆ ವ್ಯವಹಾರ ಹೆಚ್ಚುತ್ತದೆ ಮತ್ತು ಲಾಭವೂ ಬರುತ್ತದೆ. ವಿದ್ಯಾರ್ಥಿಗಳಿಗೆ ತಮ್ಮ ಅಧ್ಯಯನಕ್ಕಾಗಿ ಉತ್ತಮ ಅವಕಾಶಗಳು ದೊರೆಯುತ್ತವೆ. ಸ್ವತ್ತುಗಳ ವಿವಾದಗಳಲ್ಲಿ ಬಂಧುಗಳೊಡನೆ ಸೌಹಾರ್ದ ರೀತಿಯ ಮಾತುಕತೆಯಿಂದ ಲಾಭಕರ ನಿರ್ಣಯಗಳು ಮತ್ತು ನಿರ್ಧಾರಗಳು ಹೊರಬರುತ್ತವೆ. ಆರ್ಥಿಕ ಸ್ಥಿತಿಯು ಸದೃಢವಾಗಿರುತ್ತದೆ.

**ಮಿಥುನ** — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**

ಅನವಶ್ಯಕ ಮಾತುಗಳಿಂದ ಉದ್ವೇಗಕ್ಕೆ ಒಳಗಾಗುವ ಸಾಧ್ಯತೆಗಳಿವೆ. ಮಾತು ಕಡಿಮೆ ಮಾಡಿರಿ. ಖರ್ಚು ಹೆಚ್ಚಾದರೂ ಆದಾಯವು ಅಷ್ಟೇ ಇರುತ್ತದೆ. ಸಿನಿಮಾ ಕ್ಷೇತ್ರದಲ್ಲಿ ದುಡಿಯುತ್ತಿರುವವರ ಆದಾಯದಲ್ಲಿ ಏರಿಕೆಯನ್ನು ಕಾಣಬಹುದು. ಹೋಟೆಲ್ ಉದ್ಯಮದವರು ಸ್ವಲ್ಪಮಟ್ಟಿನ ಚೇತರಿಕೆ ಕಾಣಬಹುದು. ಕರಕುಶಲ ವಸ್ತುಗಳನ್ನು ತಯಾರಿಸುವವರ ಮಾರುಕಟ್ಟೆ ವಿಸ್ತರಿಸುತ್ತದೆ.

**ಕಟಕ** — **ಪುನರ್ವಸು 4 ಪುಷ್ಯ, ಆಶ್ಲೇಷ**

ಕಾರ್ಯನಿಮಿತ್ತ ಕೈಗೊಂಡಿದ್ದ ದೂರ ಪ್ರಯಾಣದಿಂದ ಲಾಭ ಗಳಿಸುವಿರಿ. ವೆಚ್ಚದ ಮೇಲಿನ ಕಡಿತದಿಂದ ಉಳಿತಾಯವನ್ನು ಸಾಧಿಸುವಿರಿ. ಕಾರ್ಯಕ್ಷೇತ್ರಗಳಲ್ಲಿ ಕೆಲಸ ಕಾರ್ಯಗಳು ಸುಸೂತ್ರವಾಗಿ ಸಾಗುತ್ತವೆ. ಸಾಮಾಜಿಕ ವರ್ಚಸ್ಸನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನವನ್ನು ಮಾಡುವಿರಿ. ಸಹೋದ್ಯೋಗಿಗಳೊಡನೆ ಉತ್ತಮ ಹೊಂದಾಣಿಕೆ ಸಾಧಿಸುವಿರಿ. ಕೆಲಸದ ಒತ್ತಡ ಕಡಿಮೆಯಾಗಿ ನೆಮ್ಮದಿ ಅನುಭವಿಸುವಿರಿ.

**ಸಿಂಹ** — **ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**

ಕಚೇರಿಯಲ್ಲಿ ಕೆಲಸ ನಿರ್ವಹಿಸುವ ಕೆಲವು ಅರೆಕಾಲಿಕ ನೌಕರರಿಗೆ ಅವರ ಸ್ಥಾನ ಭದ್ರವಾಗುವ ಸಾಧ್ಯತೆ ಇದೆ. ಮೇಲ್ವರ್ಗದ ಗುತ್ತಿಗೆದಾರರಿಗೆ ಟೆಂಡರ್ ಮೂಲಕ ಗುತ್ತಿಗೆ ಪಡೆಯುವ ಎಲ್ಲಾ ಅವಕಾಶ ಸಿಗುತ್ತದೆ. ಕೃಷಿಕರ ವ್ಯವಹಾರದಲ್ಲಿ ಲಾಭ ಕಾಣಬಹುದು. ಭೂ ವ್ಯವಹಾರಗಳಲ್ಲಿ ನಿಮ್ಮ ಕರಾರಿಗೆ ಹೆಚ್ಚಿನ ಬೆಂಬಲ ದೊರೆತು ಹೆಚ್ಚು ಲಾಭವಾಗುತ್ತದೆ. ಸಂಗಾತಿ ಕಡೆಯವರಿಂದ ಸಾಕಷ್ಟು ಸಹಾಯ ಒದಗಿಬರುತ್ತದೆ.

**ಕನ್ಯಾ** — **ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2**

ಅಪೂರ್ವ ವಸ್ತುಗಳನ್ನು ಸಂಗ್ರಹ ಮಾಡಲು ಅಲ್ಪರ ಸಹವಾಸ ಮಾಡಬೇಡಿರಿ. ಮನೆಯ ಅಲಂಕಾರಕ್ಕಾಗಿ ಹಣವನ್ನು ಖರ್ಚು ಮಾಡುವಿರಿ. ವಾಹನಗಳ ವ್ಯಾಪಾರ ಮಾಡುವವರಿಗೆ ಸ್ವಲ್ಪಮಟ್ಟಿನ ಅಭಿವೃದ್ಧಿ ಇರುತ್ತದೆ. ಈ ಹಿಂದೆ ಹೂಡಿಕೆ ಮಾಡಿದ್ದ ಹಣ ಈಗ ಇಡಿ ಗಂಟಾಗಿ ಒದಗಿ ಬರುತ್ತದೆ. ಹಳೆಯ ಸಾಲ ತೀರಿಸಿಕೊಳ್ಳಬಹುದು. ಆಸ್ತಿಯ ವಿಚಾರದಲ್ಲಿ ಮೋಸಹೋಗುವ ಸಾಧ್ಯತೆ ಕಾಣುತ್ತಿದೆ, ಎಚ್ಚರ.

**ತುಲಾ** — **ಚಿತ್ತಾ 3,4 ಸ್ವಾತಿ, ವಿಶಾಖಾ 1,2,3**

ಕ್ರೀಡಾಪಟುಗಳಿಗೆ ತಮ್ಮ ಕ್ರೀಡೆಯಲ್ಲಿ ಭಾಗವಹಿಸಿ ಉತ್ತಮ ಪ್ರದರ್ಶನ ನೀಡುವುದಕ್ಕಾಗಿ ಹೆಚ್ಚಿನ ಹಣ ದೊರೆಯುತ್ತದೆ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹಣ ಕ್ರೋಡೀಕರಣ ಮಾಡುವಿರಿ. ಕಣ್ಣಿನ ತೊಂದರೆ ಅಥವಾ ರಕ್ತದಲ್ಲಿನ ತೊಂದರೆಗಳನ್ನು ಪರೀಕ್ಷೆ ಮಾಡಿಸಿಕೊಳ್ಳುವುದು ಉತ್ತಮ.

**ವೃಶ್ಚಿಕ** — **ವಿಶಾಖಾ 4 ಅನೂರಾಧ, ಜ್ಯೇಷ್ಠ**

ರೇಷ್ಮೆ ಬೆಳೆಗಾರರಿಗೆ ಉತ್ತಮ ಆದಾಯ ಬರುವ ಸಾಧ್ಯತೆ ಇದೆ. ರೇಷ್ಮೆ ಬಟ್ಟೆಯನ್ನು ನೇಯುವ ಕೆಲಸವನ್ನು ಮಾಡುವವರಿಗೆ ಬೇಡಿಕೆ ಹೆಚ್ಚಬಹುದು. ವಿದ್ಯಾರ್ಥಿಗಳಿಗೆ ವಿಶೇಷ ರೀತಿಯ ಸೌಲಭ್ಯ ಒದಗಿ ಬರುವ ಸಾಧ್ಯತೆ ದಟ್ಟವಾಗಿದೆ. ಜವಳಿ ವ್ಯಾಪಾರಸ್ಥರಿಗೆ ಹೆಚ್ಚಿನ ವ್ಯಾಪಾರವಿರುತ್ತದೆ. ಪಾಲುದಾರಿಕೆಯಿಂದ ಹೊರಗಡೆ ಇದ್ದ ವ್ಯಾಪಾರದಿಂದ ಹೆಚ್ಚು ಲಾಭ ಬರಬಹುದು.

**ಧನುಸ್ಸು** — **ಮೂಲಾ, ಪೂರ್ವಾಷಾಢ, ಉತ್ತರಾಷಾಢ 1**

ಮಕ್ಕಳಿಗೆ ಓದಿನಲ್ಲಿ ಆಸಕ್ತಿಯನ್ನು ಪೋಷಿಸುವ ಸಲುವಾಗಿ ಹೆಚ್ಚಿನ ಧನವ್ಯಯ ಮಾಡುವಿರಿ. ಹೆಚ್ಚು ಜನಾನುರಾಗಿಯಾಗಿರಲು ಪ್ರಯತ್ನ ಪಡುವಿರಿ. ಮಾತೃ ವರ್ಗದವರಿಂದ ನಿಮ್ಮ ಕೆಲಸಗಳಿಗೆ ಸಾಕಷ್ಟು ಸಹಾಯ ದೊರೆಯುತ್ತದೆ. ವೈಜ್ಞಾನಿಕ ಸಂಶೋಧನೆಗಳನ್ನು ಮಾಡುತ್ತಿರುವವರಿಗೆ ಬೇಕಾದ ಸೂಕ್ತ ಸವಲತ್ತುಗಳು ದೊರೆಯುತ್ತವೆ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ.

**ಮಕರ** — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**

ಕೃಷಿ ಚಟುವಟಿಕೆಗಳು ಭರದಿಂದ ಸಾಗುತ್ತವೆ. ಮಕ್ಕಳ ಸಂತೋಷಕ್ಕಾಗಿ ಕರಕುಶಲ ವಸ್ತುಗಳನ್ನು ಖರೀದಿ ಮಾಡುವಿರಿ. ಪ್ರಯಾಣದಲ್ಲಿ ಗಣ್ಯವ್ಯಕ್ತಿಗಳ ಪರಿಚಯವಾಗಿ ಅವರಿಂದ ನಿಮಗೆ ಪ್ರಯಾಣದಲ್ಲಿ ಅನುಕೂಲವಾಗುತ್ತದೆ. ಸ್ವತಂತ್ರ ವೃತ್ತಿಯನ್ನು ಮಾಡುತ್ತಿರುವವರಿಗೆ ನಿರಂತರ ಆದಾಯ ಇದ್ದರೂ ಖರ್ಚುವೆಚ್ಚಗಳ ಬಗ್ಗೆ ಜಾಗರೂಕತೆ ಅಗತ್ಯ. ಹಣದ ಒಳಹರಿವು ನಿಮ್ಮ ಅಗತ್ಯಕ್ಕೆ ತಕ್ಕಷ್ಟು ಇರುತ್ತದೆ.

**ಕುಂಭ** — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**

ಆಸೆ ಪಡುತ್ತಿದ್ದ ವಾಹನ ಖರೀದಿ ಮಾಡಲು ಮುಂದಾಗುವಿರಿ. ಅದಕ್ಕೆ ಬೇಕಾದ ಸಾಲ ಸೌಲಭ್ಯಗಳು ದೊರೆಯುತ್ತವೆ. ಹಿರಿಯರಿಗೆ ಗಣ್ಯರ ಜೊತೆ ವೇದಿಕೆಗಳಲ್ಲಿ ಕಾಣಿಸಿಕೊಳ್ಳುವ ಯೋಗವಿದೆ. ಸಾಂಸ್ಕೃತಿಕ ಕ್ಷೇತ್ರದ ಉನ್ನತಿಗಾಗಿ ಶ್ರಮ ಪಟ್ಟಿದ್ದಕ್ಕೆ ಗೌರವ ದೊರೆಯಬಹುದು. ಸರ್ಕಾರಿ ಮಟ್ಟದ ಕೆಲಸ ಕಾರ್ಯಗಳಲ್ಲಿ ಮುನ್ನಡೆಯನ್ನು ಕಾಣಬಹುದು. ಯಂತ್ರಗಳ ಬಿಡಿಭಾಗ ರಫ್ತು ಮಾಡುವವರಿಗೆ ಹೊಸ ಆದೇಶ ದೊರೆಯುವ ಸಾಧ್ಯತೆ ಇದೆ.

**ಮೀನ** — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**

ಹಿರಿಯರ ಮಾತಿನಂತೆ ನಡೆದಲ್ಲಿ ಹೆಚ್ಚಿನ ಗೌರವ ದೊರೆಯುತ್ತದೆ. ಪ್ರೀತಿಪಾತ್ರರೊಂದಿಗೆ ವಿಹಾರಕ್ಕಾಗಿ ಹೋಗಿ ಬರುವ ಸಾಧ್ಯತೆಗಳಿವೆ. ಭೂ ವ್ಯವಹಾರವನ್ನು ಮಾಡುವವರಿಗೆ ಲಾಭ ಹೆಚ್ಚುವ ಸಾಧ್ಯತೆಗಳಿವೆ. ಕಾರ್ಯಕ್ಷೇತ್ರದಲ್ಲಿ ಅತಿಯಾದ ಆತ್ಮವಿಶ್ವಾಸದಿಂದ ಹಿತಶತ್ರುಗಳು ಹೆಚ್ಚಾಗಬಹುದು. ಮಿಶ್ರಲೋಹಗಳ ತಯಾರಕರಿಗೆ ಮಾರುಕಟ್ಟೆ ವಿಸ್ತಾರವಾಗುವ ಯೋಗವಿದೆ.

## ಪದಬಂಧ 2757



**ಮೇಲಿನಿಂದ ಕೆಳಕ್ಕೆ**

1. ಹಿಂದಿನ ಕಾಲದ ತೂಗುವ ದಂಡ 3
2. ಹಿಂದಿಯವನಿಗೆ ಈತ ಹೊರಗಿನವನು 3
3. ಖಡ್ಗದಂತಹ ಕರಡು ಫಲ 4
4. ಕಣ್ಣಿಗೆ ಸುಂದರವಾಗಿ ಮನವನ್ನು ಅಪಹರಿಸುವುದು 4
7. ಜಲಗಜ ಪಡೆದ ಕನ್ನಡದ ಹೆಸರು 3
8. ಪದಾರ್ಥಗಳನ್ನು ಬಳಸುವವ 5
9. ಬಲಿಯಾಗಿ ಬೀಳುವ ಅರಣ್ಯ ಮೃಗ 4
10. ವ್ರೋಟಿಗೆ ಬಲೆ ಬೀಸಿದರೆ ಕೊಡುವ ಧರ್ಮದ ಕೊಡುಗೆ 4
12. ಹಿಂದಿಯ ಹುಚ್ಚ 3
13. ಭಗವದ್ಭಕ್ತ ಆಳಾಗಿ ರಚಿಸಿದ ಹಾಡು 4
14. ರಾಗ ದ್ವೇಷಗಳನ್ನು ಬಿಟ್ಟವ 4
15. ನೀರಿನಲ್ಲಿ ಹುಟ್ಟಿದವಳು 3
16. ರೀ ರೀ ದುರಸ್ತಿ ಮಾಡ್ರೀ 3

**ಎಡದಿಂದ ಬಲಕ್ಕೆ**

1. ಮಾರ್ಗ ನಿರ್ದೇಶಕ ಬೆಳಕಿನ ಹಣತೆ 4
3. ಕಬ್ಬಿಣ ಕಾಯಿಸಿ ಕುಟ್ಟುವವ 3
5. ಅಂತರಂಗ ಹಾಗೂ ಅನುಸರಣೆಯಲ್ಲಿ ದಾನವ ಗುಣ 6
6. ಮನಸ್ಸಿಗೆ ಮುದ ನೀಡಿ ಸಂತಸಗೊಳಿಸುವಂತದ್ದು 4
8. ರಕ್ತ ಮಾಂಸಗಳಿಲ್ಲದೆ ಶಕ್ತಿಹೀನನ ಶರೀರ 6
10. ಗೃಹದ ಮುಂಭಾಗದಲ್ಲಿ ಬೃಂದಾವನ ಮತ್ತು ರಂಗವಲ್ಲಿಯ ಆವರಣ 5
11. ಹಾದಿ ತೋರಲು ದೀಪ ಹಿಡಿದುಕೊಂಡು ಬರುವವ 5
13. ಕೊಡುಗೆಯ ಮಹಾಸಾಹಸಿ ಯುದ್ಧ ಪಟು 6
15. ತೈಲಕ್ಕೆ ಹೆಸರಾದ ಮರ ದಕ್ಷಿಣದ ಬೆಟ್ಟ 4
17. ಖ್ಯಾತ ಲೋಹಿಯಾ ಹೆಸರಾಗಿ ಹೀಗೆ ಪ್ರಸಿದ್ಧ 6
18. ಅಲೆ ಅಲೆಯಾಗಿ ಬರುವ ಕನ್ನಡ ವಾರಪತ್ರಿಕೆ 3
19. ಗೆದ್ದಾಗ ಬಾರಿಸುವ ವಿಜಯ ಘೋಷ 4

## ಪದಬಂಧ ಉತ್ತರ -2756

**ಮೇಲಿಂದ ಕೆಳಕ್ಕೆ**

1. ಮಣಿಕರ್ಣಿಕಾ 2.ಯಶೋಧರ 3.ನೇತ್ರಾವತಿ 4. ಪುರಾಣ 6.ರಬಡಿ 7.ಮಕರಂದ 9.ಪ್ರಧಾನ 10.ಗಾಣಗೆತ್ತು 11.ಗಟ್ಟಿಗ 14.ರಜನಿ 16.ಮೊಟ್ಟೆಎಸೆತ 17.ಅಕಳಂಕ 18.ವನದೇವಿ 19.ಹಾಸನ

**ಎಡದಿಂದ ಬಲಕ್ಕೆ**

1. ಮಹಾಲಯ 3.ನೇಸರಗೆಂಪು 5.ವಶೀಕರಣ 7.ಮರಕೋತಿ 9. ಪ್ರಕಾಶಕ 10.ಗಾರುಡಿಗ 12.ರಂಗಾಭರಣ 13.ನರಗುಂದ 15.ಗೆಲುಮೊಗ 17.ಅರವತ್ತು 19.ಹಾನಿಕಾರಕ 20.ನವನಾಯಕ 21.ವಿಕಸಿತ

# ಹಳ್ಳಿಯೂರ ಹಮ್ಮೀರ ಕವಿ

ಚನ್ನಪ್ಪ ಅಂಗಡಿ

**ಮುರುಕು ಬದುಕನ್ನು ಸಂಕೇತಿಸುವ 'ಹರಕು ಪುಸ್ತಕ' ಬರೆದ ಧರಣೇಂದ್ರ ಕುರಕುರಿ ಅವರು ಗ್ರಾಮ್ಯ ಜೀವನದ ಆಗುಹೋಗುಗಳನ್ನು ಶುದ್ಧ ಜಾನಪದ ಸತ್ವದ ಭಿತ್ತಿಯಲ್ಲಿ ಚಿತ್ರಿಸಿ ಹಳ್ಳಿಯೂರಿನ ಹಮ್ಮೀರ ಕವಿ ಎಂದು ಕರೆಯಿಸಿಕೊಂಡವರು. ಕನ್ನಡ–ಹಿಂದಿ ಸೇತುವಾಗಿ ಗುರ್ತಿಸಿಕೊಂಡವರು. ಅವರಿಗೀಗ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯ ಗರಿ**

**ಕೇಂದ್ರ ಸಾಹಿತ್ಯ** ಅಕಾಡೆಮಿ ಕೊಡಮಾಡುವ 2021ರ ಹಿಂದಿ ಅನುವಾದ ಪ್ರಶಸ್ತಿಗೆ ಭಾಜನರಾಗಿರುವ ಪ್ರೊ. ಧರಣೇಂದ್ರ ಕುರಕುರಿಯವರದ್ದು ಗತಿಶೀಲ ಬದುಕು, ಚಲನಶೀಲ ಬರಹ. ಧಾರವಾಡದ ಮಲೆನಾಡ ಸೆರಗಿನ ಗೊಂಡೆಯಂತಿರುವ ಮುಗದ ಗ್ರಾಮದಲ್ಲಿ ಹುಟ್ಟಿ, ಉದ್ಯೋಗ ನಿಮಿತ್ತ ಅಲ್ಲಲ್ಲಿ ಸಂಚರಿಸುತ್ತ, ಮತ್ತೊಂದು ದಟ್ಟ ಮಲೆನಾಡಿನ ಮಡಿಲು ಶಿರಸಿಯಲ್ಲಿ ನೆಲೆ ನಿಂತದ್ದೊಂದು ವಿಶೇಷವೇ ಸರಿ. ಒಂದು ರೀತಿಯಲ್ಲಿ ಅವರು ಮುಗದದಲ್ಲಿ 'ಬೇಡ್ತಿ' ನದಿಯಾಗಿ ಹುಟ್ಟಿ ಕರಾವಳಿಯಲ್ಲಿ ಗಂಗಾವಳಿಯಾಗಿ ಸಾಹಿತ್ಯ ಸಮುದ್ರ ಸೇರಿದವರು. 1973ರ ತಮ್ಮ ಪ್ರಥಮ ಕವನ ಸಂಕಲನ 'ಹರಕು ಪುಸ್ತಕ'ದ ಮೂಲಕ ಪ್ರಾರಂಭಿಸಿದ ಸಾಹಿತ್ಯಯಾತ್ರೆಯನ್ನು ಈ ದಿನದವರೆಗೂ ಮುಂದುವರೆಸಿಕೊಂಡು ಹೋಗುತ್ತಿರುವುದು ಮತ್ತೊಂದು ವಿಶೇಷ. ಹಿರಿಯರು- ಓರಗೆಯವರಲ್ಲದೇ ಕಿರಿಯರೊಂದಿಗೂ ಗೌರವಪೂರ್ವಕವಾಗಿ ನಡೆದುಕೊಳ್ಳುವ ಪ್ರೊಫೆಸರದ್ದು ಸದಾ ಸ್ನೇಹಮಯ ವ್ಯಕ್ತಿತ್ವ, ಹಾಗಾಗಿ ನಾಡಿನ ಒಳಗೆ ಮತ್ತು ಹೊರಗೆ ಅದರ ಆಪ್ತವಲಯ ಚಾಚಿಕೊಂಡಿದೆ.

ಮುರುಕು ಬದುಕನ್ನು ಸಂಕೇತಿಸುವ 'ಹರಕು ಪುಸ್ತಕ'ಕ್ಕೆ ಮುನ್ನುಡಿ ಬರೆಯುತ್ತ ಶಂಕರ ಮೊಕಾಶಿ ಪುಣೇಕರರು ನವ್ಯದ ಪ್ರಭಾವದ ನಡುವೆಯೂ ದೇಸಿ ಸೊಗಡನ್ನು ಉಳಿಸಿಕೊಂಡ ಕವಿ ಎಂದಿದ್ದಾರೆ. ಅಂದಿನ ಮುನ್ನೆಲೆಯ ಸಾಹಿತಿಗಳೊಂದಿಗೆ



ಕುರಕುರಿಯವರನ್ನು ನಿಲ್ಲಿಸಿ ಭವಿಷ್ಯದಲ್ಲಿ ಅವರು ಏರಬಹುದಾದ ಎತ್ತರವನ್ನು ಅಳೆದು ಕವಿಪಟ್ಟ ನೀಡಿದ್ದಾರೆ. ಆದರೆ, ಆರಂಭದಲ್ಲಿ ಸಿಕ್ಕ ಮನ್ನಣೆಯಿಂದ ಉಬ್ಬಿ ಹೋಗದೇ ಬೆಳಕು ಕಂಡಲೆಲ್ಲ ಚಿಗಿತು ದಟ್ಟ ಮರವಾಗಿ ಬೆಳೆದು ನಿಂತಿದ್ದಾರೆ ಕುರಕುರಿಯವರು. ಅಂತೆಯೇ ಅವರ ಬರಹ ವೃಕ್ಷಕ್ಕೆ ಹಲವು ಶಾಖೆಗಳು.

ಕಾವ್ಯ, ಅಂಕಣ ಬರಹ, ಬಿಡಿ ಲೇಖನಗಳಲ್ಲದೇ ಬಹು ಮುಖ್ಯವಾಗಿ ಅವರು ಅನುವಾದದಲ್ಲಿ ಮಾಡಿದ ಕೃಷಿ ಭಾಷೆಗಳಲ್ಲದೇ ವಿವಿಧ ಸಂಸ್ಕೃತಿಗಳಿಗೂ ನೀಡಿದ ಕೊಡುಗೆಯಾಗಿದೆ. ಕುರಕುರಿಯವರು ಕಾವ್ಯ ಮತ್ತು ಅನುವಾದ ಎರಡರಲ್ಲೂ ಸಾಧಿಸಿದ ಹಿಡಿತವನ್ನು ನೋಡಿದರೆ, ಯಾವುದು ಹೆಚ್ಚು, ಯಾವುದು ಕಡಿಮೆಯೆಂದು ಹೇಳುವುದು ಬಹುಶಃ ಅವರಿಗೇ ಸಾಧ್ಯವಾಗಲಿಕ್ಕಿಲ್ಲ.

'ಹರಕು ಪುಸ್ತಕ', 'ನೀರಾಗ ಕುಂತೇನ ನೆನಕೊಂತ', 'ಹೊಸಾಕಾಲ ಬರತಾವ', 'ನಾ ಕವಿ ಅಲ್ಲ', 'ಶಬ್ದವಾಯಿತು ನಕ್ಷತ್ರ', 'ಕುಂಚ ಮತ್ತು ಬಣ್ಣ' ಮುಂತಾದ ಕಾವ್ಯ ಕೃತಿಗಳನ್ನು ನೀಡಿದ್ದಾರೆ. ಅವರ ಆಯ್ದ ಕವನಗಳ ಸಂಕಲನವೂ ಪ್ರಕಟವಾಗಿದೆ.

1997ರಲ್ಲಿ ಸಮಾಜ ಪುಸ್ತಕಾಲಯದಿಂದ ಪ್ರಕಟವಾದ ಈ ಕೃತಿಯು ಕರ್ನಾಟಕ ವಿಶ್ವವಿದ್ಯಾಲಯದ ಪದವಿ ವರ್ಗಗಳಿಗೆ ಪಠ್ಯ ಪುಸ್ತಕವಾಗಿದೆ.

**ಹೊಲದ ಮ್ಯಾರ್ಯಾಗ/ ಮೈತುಂಬ ಮುಳ್ಳ ಹೊತ್ತ/**
**ನಿಂತಂಥ/**
**ಜಾಲೀಗಿಡ/ ಸರಳ ಹತ್ತಾಕ ಬರಂಗಿಲ್ಲ ಹತ್ತಿದರ/**
**ಇಳಿಯಾಕ ಬರಂಗಿಲ್ಲ...... (ಹೆಣ್ಣು)**
**ಗ್ವಾಡಿ ತುಂಬ ಗುದ್ದ ತೋಡಿ/ ಹೆಗ್ಗಣಾಗಿ**
**ಹೊಕ್ಕಾರಪ್ಪ/**
**ಹಾಳಗೆಡವಿ ಹೋಗತಾರೋ ಮನಿ-ಮಾರಾ/**
**ಹೆಗ್ಗಣ್ಣತ್ತಿದ ಮನಿಯೊಳಗ/ ಜಗದಂಬಿ ಅವತಾರ/**
**ದರಬಾರ, ಕಾರಭಾರ, ಬಲು ಜೋರಾ......**
**(ಹೆಗ್ಗಣಾಗಿ ಹೊಕ್ಕಾರಪ್ಪಾ)**

ಜನಸಾಮಾನ್ಯರ ಬದುಕನ್ನು ಅಸಹನೀಯಗೊಳಿಸಿದ ಶಕ್ತಿಗಳನ್ನು ತಮ್ಮ ಉಗ್ರಮಾತುಗಳಲ್ಲಿ ಖಂಡಿಸುತ್ತ ಬಂದರೂ 'ಹೊಸ ಕಾಲ ಬರತಾವ' ಎಂಬ ಆಶಾಭಾವನೆಯನ್ನು ಮೊಳೆಯಿಸಲು ಅವರು ಮರೆಯಲಿಲ್ಲ. ಗ್ರಾಮ್ಯ ಜೀವನದ ಆಗುಹೋಗುಗಳನ್ನು ಶುದ್ಧ ಜಾನಪದ ಸತ್ವದ ಭಿತ್ತಿಯಲ್ಲಿ ಚಿತ್ರಿಸುವ ಅವರು 'ಹಳ್ಳಿಯೂರ ಹಮ್ಮೀರ ಕವಿ' ಎಂದು ಕರೆಸಿಕೊಂಡಿದ್ದಾರೆ. ಜಡ ಸಂಸ್ಕೃತಿ ವಿರುದ್ಧ ಬಂಡೇಳುವ ಅವರ ಸಂವೇದನೆ ಪ್ರತಿಮೆ, ಸಂಕೇತಗಳ ಮೂಲಕ ಅಭಿವ್ಯಕ್ತಿ ಪಡೆಯುವುದು ಅವರ ಕಾವ್ಯಲಕ್ಷಣ.

**ಕೆಂಪಾದ ಕನಸೆಲ್ಲಾ ಕಡಿಯಾಗಿ ಸಿಡಿದಾವೋ**
**ಬೆಂಕಿ ಇಟ್ಟವರೆಲ್ಲ ಬೇರ್‍ಯಾರೋ| ಬೆಳಕಾಗಿ**
**ಹೊಸಾ ದಿನಾ ಬರತಾವೊ ನಾಡಾಗ|**
**ಗುದ್ದಿನಾಗ ಮದ್ದ ಇಟ್ಟು**
**ಹೆಗ್ಗಣಾ ಎಲ್ಲಾ ಹೆಣಾ ಮಾಡಿ**
**ಗಟ್ಟಿ ಮಾಡಿಕೊಳ್ಳಬೇಕು ಮನಿ-ಗ್ವಾಡಿ|**

ಎನ್ನುವಲ್ಲಿ ಪ್ರತಿರೋಧದ ನೆಲೆ ಜಾನಪದ ದರ್ಶನ ಬೆಡಗಿನ ಛಾಯೆಗಳೆಲ್ಲವೂ ಕಾಣಸಿಗುತ್ತವೆ.

ಎಲ್ಲಕ್ಕಿಂತ ಹೆಚ್ಚಾಗಿ ಕುರಕುರಿಯವರ ಅನುವಾದದ ಕೈಂಕರ್ಯವನ್ನು ಗಮನಿಸಿದರೆ ಆನಂದ ಆಶ್ಚರ್ಯಗಳೆರಡೂ ಉಂಟಾಗುತ್ತವೆ. ಹಿಂದಿಯಿಂದ ಕನ್ನಡಕ್ಕೆ, ಕನ್ನಡದಿಂದ ಹಿಂದಿಗೆ ತಮ್ಮ ಭಾಷಾಂತರದ ಮೂಲಕ ಎಡತಾಕುತ್ತಲೇ ಇದ್ದಾರೆ.

ನಾವು ಮೆಚ್ಚಿದ ಹಿಂದಿ ಕತೆಗಳು, (ಕಥಾ ಸಂಕಲನ), ಪ್ರಿಯ ಶಬನಂ, ಕಲಿಕತೆ ವ್ಹಾಯಾ ಬೈಪಾಸ್, ಮೋಹನದಾಸ, ಜಾನಕಿದಾಸ ತೇಜಪಾ ಮ್ಯಾನ್ಶನ್ (ಕಾದಂಬರಿಗಳು), ನಿರಾಲಾ (ಜೀವನ ಚರಿತ್ರೆ), ಜೈನಧರ್ಮ ಏನು ಹೇಳುತ್ತದೆ? (ಪ್ರವಚನಗಳು) ಕೃತಿಗಳು ಹಿಂದಿಯಿಂದ ಕನ್ನಡಕ್ಕೆ ಬಂದರೆ, ಕನ್ನಡದಿಂದ ಹಿಂದಿಗೆ ಹೋದ ಪುಸ್ತಕಗಳ ದೊಡ್ಡ ಪಟ್ಟಿಯೇ ಇದೆ.

ಪರ್ಯಟನ, ಅಂತ, ಕಠಪುತಲಿ ಕಾ ವಿದ್ರೋಹ, ಆಜಕಿ ಕನ್ನಡ ಕವಿತಾಯೆಂ, ಚಾವುಂಡರಾಯ ವೈಭವ, ಅಂಗಾರಕಿ ಚೋಟಿ ಪರ, ಪತ್ಥರ ಪಿಘಲನೆ ಕಿ ಘಡಿ, ಓಂ ಣಮೊ, ಜುರ್ಮಾನಾ, ದೃಷ್ಟಿ, ಸೀತಾಯನ, ಶೇರ ಬಾಜಾರಮೆಂ ಗಂಗಾ, ಉದ್ಧಾರ ಏವಂ ಬಾಜಾರ್, ಅಮೀನಪುರ ಕಾ ಬಾಜಾರ್, ಆಕರ್ಷಣ ಹೀಗೆ 15 ಕನ್ನಡ ಕೃತಿಗಳನ್ನು ಹಿಂದಿಗೆ ತರ್ಜುಮೆ ಮಾಡಿದ್ದಾರೆ. ಕಥೆ, ಕವಿತೆ, ಕಾದಂಬರಿ, ನಾಟಕ ಸಾಹಿತ್ಯವನ್ನು ಕನ್ನಡದಿಂದ ಹಿಂದಿಗೆ ಅನುವಾದಿಸಿದ್ದಾರೆ. ಇಂತಹ ಶ್ರಮವಹಿಸಿ ಮಾಡಿದ ದುಡಿಮೆಗೆ ಸಿಕ್ಕ ಮಾನ-ಸನ್ಮಾನಗಳು ಹತ್ತು ಹಲವು.

'ಆಜ ಕಿ ಕನ್ನಡ ಕವಿತಾಯೆಂ' ಕೃತಿಗೆ ಕೇಂದ್ರೀಯ ಹಿಂದಿ ನಿರ್ದೇಶನಾಲಯದ ರಾಷ್ಟ್ರೀಯ ಪ್ರಶಸ್ತಿ ದೊರೆತರೆ, 'ಕಲಿ-ಕತೆ: ವ್ಹಾಯಾ ಬೈಪಾಸ್' ಎನ್ನುವ ಅನುವಾದಿತ ಕಾದಂಬರಿಗೆ ಶಿವಮೊಗ್ಗ ಕರ್ನಾಟಕ ಸಂಘದ ಬಹುಮಾನ ಸಿಕ್ಕಿದೆ. ಅವರಿಗೆ ಸಿಕ್ಕ ಇತರ ಪುರಸ್ಕಾರಗಳು ಹಲವು. ಶಿಕ್ಷಕರಾಗಿ ಮತ್ತು ಸಂಘಟಕರಾಗಿಯೂ ಕೆಲಸ ಮಾಡಿರುವ ಧರಣೇಂದ್ರವರಿಗೆ 'ಕದಂಬ ಸೇವಾ ರತ್ನ ಪ್ರಶಸ್ತಿ' ಕೂಡ ಲಭಿಸಿದೆ. ಈಗ ಅವರ ಸಾಹಿತ್ಯ ಸಾಧನೆಯ ಮುಕುಟಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಅನುವಾದ ಪ್ರಶಸ್ತಿಯ ಗರಿ ಮೂಡಿದೆ.

ಸಾಧನೆ

# ಮಕ್ಕಳ ಸಾಹಿತ್ಯದ ಕೋಲ್ಮಿಂಚು

**ಮಲೆನಾಡಿನ ಸೊಗಡನ್ನು, ಅದರ ಹಚ್ಚಹಸಿರಿನ ಹೊದಿಕೆಯನ್ನು ಯಾವುದೇ ಸಾಂಪ್ರದಾಯಿಕ, ನೀತಿಗಳ ಹಂಗಿಲ್ಲದೆ ಮಕ್ಕಳ ಸಾಹಿತ್ಯದಲ್ಲಿ ಕಟ್ಟಿಕೊಟ್ಟವರು ತಮ್ಮಣ್ಣ ಬೀಗಾರ. ಮಲೆನಾಡಿನ ಮಕ್ಕಳ ಬದುಕನ್ನು ವೈವಿಧ್ಯವಾಗಿ ಅರಳಿಸಿದ ಅವರನ್ನೀಗ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಾಲ ಸಾಹಿತ್ಯ ಪ್ರಶಸ್ತಿ ಅರಸಿಕೊಂಡು ಬಂದಿದೆ...**

ಮಂಡಲಗಿರಿ ಪ್ರಸನ್ನ

**'ಶುದ್ಧವಾದ ಭಾಷೆ,** ಕಾವ್ಯದ ಲಯಗಾರಿಕೆ, ಆರೋಗ್ಯವಂತ ದೃಷ್ಟಿಕೋನ, ಮಕ್ಕಳಿಗೆ ಪ್ರಿಯವಾಗುವ ಪರಿಸರ, ಪ್ರಾಣಿ, ಪಕ್ಷಿ ಪ್ರಪಂಚ, ಈ ಕಾರಣದಿಂದ ಮಕ್ಕಳ ಕಾವ್ಯದಲ್ಲಿ ಗಟ್ಟಿಯಾಗಿ ನಿಲ್ಲಬಲ್ಲ ಹೆಸರು....' ಎಂದು ನಾಡಿನ ಹಿರಿಯ ಕವಿ ಡಾ.ಎಚ್.ಎಸ್.ವೆಂಕಟೇಶ ಮೂರ್ತಿ ಮಕ್ಕಳ ಸಾಹಿತಿ ತಮ್ಮಣ್ಣ ಬೀಗಾರ ಕುರಿತು ಬಹಳ ಹಿಂದೆಯೆ ಹೇಳಿರುವುದು ಈಗ ನಿಜವೆನಿಸಿದೆ. ಬೀಗಾರ ಮಕ್ಕಳ ಕವಿ ಮಾತ್ರವಲ್ಲ, ಮಕ್ಕಳ ಕತೆಗಾರ, ಕಾದಂಬರಿಕಾರ, ಮಕ್ಕಳ ಸಾಹಿತ್ಯದ ಒಟ್ಟಾರೆ ಗಂಭೀರ ಬರಹಗಾರ ಎಂಬುದು ಸಾಬೀತಾಗಿದ್ದು, ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ 2022ನೇ ಸಾಲಿನ ಬಾಲ ಸಾಹಿತ್ಯ ಪ್ರಶಸ್ತಿ ದಕ್ಕಿದೆ. ಸದರಿ ಪ್ರಶಸ್ತಿ ಅವರ 'ಬಾವಲಿ ಗುಹೆ' ಕಾದಂಬರಿಗೆ ಒಲಿದಿದ್ದರೂ ಅವರ ಸಮಗ್ರ ಸಾಹಿತ್ಯ ಒಂದು ಮಾದರಿಯಾಗಿ ನಮ್ಮ ಮುಂದೆ ಕಣ್ಣಮುಂದೆ ನಿಲ್ಲುತ್ತದೆ.

ಮಕ್ಕಳ ಸಾಹಿತ್ಯದಲ್ಲಿ ಮಲೆನಾಡಿನ ಸೊಗಡನ್ನು, ಅದರ ಹಚ್ಚಹಸಿರಿನ ಹೊದಿಕೆಯನ್ನು ಯಾವುದೇ ಸಾಂಪ್ರದಾಯಿಕ, ನೀತಿಗಳ ಹಂಗಿಲ್ಲದೆ ಕಟ್ಟಿಕೊಟ್ಟವರು ಬೀಗಾರ. ಅವರು ಮೂಲತಃ ಉತ್ತರಕನ್ನಡ ಜಿಲ್ಲೆ ಯಲ್ಲಾಪುರ ತಾಲ್ಲೂಕಿನ ಬೀಗಾರ ಗ್ರಾಮದವರು (ಜನನ: ನವೆಂಬರ್ 22, 1959). ಶಿಕ್ಷಕರಾಗಿ 37 ವರ್ಷ ಸೇವೆ ಸಲ್ಲಿಸಿ ನಿವೃತ್ತರಾದವರು. ಬೀಗಾರರದು ಪ್ರಕೃತಿಯ ಮಡಿಲಿನ ಪ್ರಶಾಂತ ಮನಸು. ತಮ್ಮ ಮಕ್ಕಳ ಕತೆ, ಕಾವ್ಯ, ಕಾದಂಬರಿ, ಮತ್ತಿತರ ಬರಹಗಳಲ್ಲಿ ಮಲೆನಾಡಿನ ಮಕ್ಕಳ ಬದುಕು ಮತ್ತು ಆ ಬದುಕಿನ ಚಿತ್ರಣಗಳನ್ನೇ ವೈವಿಧ್ಯವಾಗಿ ಅರಳಿಸಿದ ಸಶಕ್ತ ಬರವಣಿಗೆ ಅವರದು.

ನಿಸರ್ಗದಲ್ಲಿ ವಿಹರಿಸುವ, ಬೆಟ್ಟ-ಕಣಿವೆಗಳನ್ನು ಏರಿ ಇಳಿದ ಮಕ್ಕಳ ಖುಷಿ, ವಿನೋದ, ಹುಡುಗಾಟಿಕೆಗೆ ನೀರೆರೆಯುವ ಜೊತೆಗೆ ಅಲ್ಲಿನ ಗಂಭೀರ ಸಮಸ್ಯೆಗಳ ಕುರಿತು ಬೀಗಾರ ತಮ್ಮ ಬರಹಗಳಲ್ಲಿ ಚಿತ್ರಿಸಿದ್ದಾರೆ. ಜೊತೆಗೆ ಅಲ್ಲಿಯ ವೈರುಧ್ಯಗಳನ್ನು ಹೇಳಲು ಸಹ ಅವರು ಹಿಂಜರಿದಿಲ್ಲ. ಬೀಗಾರರ ಸಾಹಿತ್ಯ ಓದುವಾಗ ಭಾರತೀಯ ಇಂಗ್ಲಿಷ್ ಮಕ್ಕಳ ಸಾಹಿತ್ಯದ ರಸ್ಕಿನ್ ಬಾಂಡ್ ಮತ್ತು ಕನ್ನಡದವರೇ ಆದ ನಾ.ಡಿಸೋಜ, ಡಾ.ಆನಂದ ಪಾಟೀಲ ಅವರ ಬರಹಗಳು ನೆನಪಾಗುತ್ತವೆ. ಒಟ್ಟು 27 ಮಕ್ಕಳ ಸಾಹಿತ್ಯ ಕೃತಿಗಳನ್ನು ಪ್ರಕಟಿಸಿರುವ ಬೀಗಾರರು ಆ ಪೈಕಿ ತಲಾ ಹತ್ತು ಕಾವ್ಯ ಸಂಕಲನ ಮತ್ತು ಕಥಾ ಸಂಕಲನ, ತಲಾ ಎರಡು ಮಕ್ಕಳ ಸುಲಲಿತ ಬರಹಗಳ ಸಂಕಲನ, ಕಾದಂಬರಿ, ಚಿತ್ರ ಸಂಪುಟ ಹಾಗೂ ಒಂದು ವ್ಯಕ್ತಿ ಚಿತ್ರ ಪ್ರಕಟಿಸಿದ್ದಾರೆ.

ಬೀಗಾರರ ಎರಡು ಕಾದಂಬರಿಗಳಲ್ಲಿ ಮೊದಲನೆಯದು 'ಬಾವಲಿ ಗುಹೆ' (2019). ಈ ಪುಟ್ಟ ಕಾದಂಬರಿಯಲ್ಲಿ ದೊಡ್ಡ ಸಂದೇಶ ನೀಡಿರುವುದು ಹೆಗ್ಗಳಿಕೆ. ಊರಿನ ಗುಡ್ಡಗಳಲ್ಲಿ ಕಲ್ಲು ಒಡೆದು ಸಾಗಿಸುವ ಗಣಿಗಾರಿಕೆ ಸ್ಫೋಟದಿಂದಾಗಿ ಊರಿಗೆ ಅನಾಹುತವಾಗುತ್ತಿದೆ, ಬಂಡೆಗಳ ಒಡೆಯುವಿಕೆ ಅವಿರತವಾಗಿ ನಡೆದಿದೆ. ಮರಗಳನ್ನು ಉರುಳಿಸಲಾಗುತ್ತಿದೆ. ಸ್ಫೋಟದಿಂದ ಸಿಡಿದ ಕಲ್ಲುಗಳಿಂದ ದನಗಳು ಗಾಯಗೊಂಡಿವೆ. ಮರಗಳೆಲ್ಲ ಗಣಿಗಾರಿಕೆಯ ದೂಳಿನಿಂದ ಕೆಂಪಾಗಿವೆ. ಊರಿನ ಸಾರಾಯಿ ಅಂಗಡಿಯಲ್ಲಿ ಮಾತ್ರ ವ್ಯಾಪಾರ ಜೋರಾಗಿದೆ. ಆಗ ಊರವರೆಲ್ಲ ಸೇರಿ ಮಾಡಿದ ಚಳವಳಿಯಲ್ಲಿ ಶಾಲಾ ಮಕ್ಕಳು ಭಾಗವಹಿಸಿದರೆ ಪೊಲೀಸ್ ಇನ್ಸಪೆಕ್ಟರ್ ಅವರನ್ನು ಹೆದರಿಸಿ ಕಳಿಸುತ್ತಾರೆ. ಅವರಲ್ಲಿ ಜಾನು ಮತ್ತು ಶಂಕರ ಎಂಬ ಮಕ್ಕಳಿಗೆ ಹೇಗಾದರೂ ಮಾಡಿ ಗಣಿಗಾರಿಕೆ ನಿಲ್ಲಿಸುವ ಆಸೆ. ಶಂಕರನ ಅಪ್ಪ ಶಾಮಣ್ಣ, ಖಾಜಿ ಮಾಸ್ತರ ಮುಂತಾದವರೆಲ್ಲ ಚಳವಳಿ ಮಾಡಿದರೂ ಏನು ಪ್ರಯೋಜನವಾಗಲಿಲ್ಲ. ಶಾಲೆಯಲ್ಲಿ ಶಿಕ್ಷಕರು ಇತಿಹಾಸ ಪಾಠ ಮಾಡುವಾಗ 'ಐತಿಹಾಸಿಕ ವಸ್ತುಗಳ ರಕ್ಷಣೆಗೆ ಕಾನೂನು ಇದೆ....' ಎಂದು ತಿಳಿಸಿದ್ದು ನೆನಪಾಗಿ ಶಂಕರನಿಗೆ ಏನೋ ಹೊಳೆಯುತ್ತದೆ.

ಒಂದು ದಿನ ಜಾನು, ಶಂಕರ ಗುಡ್ಡದಲ್ಲಿರುವ ಬಾವಲಿ ಗುಹೆ ನೋಡಲು ಹೋಗಿ ಒಳಗೆ ಇಣುಕಿ ಕತ್ತಲಿಗೆ ಹೆದರಿ ಹಿಂದೆ ಬರುತ್ತಾರೆ. ಮತ್ತೊಂದು ದಿನ ಟಾರ್ಚ್ ತೆಗೆದುಕೊಂಡು ಹೋಗಿ ನೋಡಿದಾಗ ಬಿಳಿಗೋಡೆಯಲ್ಲಿ ಕೆತ್ತಿದ ಬಾಹುಬಲಿಯ ವಿಗ್ರಹ ಕಾಣುತ್ತದೆ. ಇದನ್ನು ನೋಡಿದ ಹುಡುಗರು ಐತಿಹಾಸಿಕ ಸ್ಮಾರಕವೊಂದು ದೊರೆಯಿತೆಂದು ಖುಷಿಗೊಂಡು ಮನೆಗೆ ಬಂದು ಹೇಳಿದಾಗ ಶಂಕರನ ಅಪ್ಪ ಬೈಯ್ದರೂ ಶಾಮಣ್ಣನವರಿಗೆ ಸಂತೋಷ ಉಂಟಾಗುತ್ತದೆ. ಯಾಕೆಂದರೆ ಐತಿಹಾಸಿಕ ಸ್ಮಾರಕದಿಂದಾಗಿ ಗಣಿಗಾರಿಕೆ ವಿರುದ್ಧದ ನ್ಯಾಯಾಲಯದ ತನ್ನ ಹೋರಾಟಕ್ಕೆ ಬಲ ಸಿಕ್ಕು ಜಯ ಸಿಕ್ಕೇ ಸಿಗುತ್ತದೆ ಎಂಬ ಭರವಸೆ. ಇಲ್ಲಿ ಮಕ್ಕಳ ಪರಿಸರ ಕಾಳಜಿ ಮತ್ತು ಸಾಹಸ ಊರಿನ ಸಂಕಷ್ಟ ನೀಗಿಸುವಲ್ಲಿ ಸಹಾಯ ಆಗುವುದು ಕಾದಂಬರಿಯ ಸಾರಾಂಶ. ಕಾದಂಬರಿ ಆಸಕ್ತಿಯಿಂದ ಓದಿಸಿಕೊಂಡು ಹೋಗುತ್ತದೆ. ಬೀಗಾರರ ಇನ್ನೊಂದು ಕಾದಂಬರಿ 'ಫ್ರಾಗಿ ಮತ್ತು ಗೆಳೆಯರು' (2020) ಈ ಕಾದಂಬರಿ ಅವರ ಸೃಜನಶೀಲ ಶಕ್ತಿಯ ಅತ್ಯುತ್ತಮ ನಿದರ್ಶನ.

ಬೀಗಾರರ 'ಹಸಿರೂರಿನ ಹುಡುಗ' ಕೃತಿಗೆ ಹೊಂಬಳ ಮಕ್ಕಳ ಸಾಹಿತ್ಯ ಪ್ರಶಸ್ತಿ, 'ಫ್ರಾಗಿ ಮತ್ತು ಗೆಳೆಯರು' ಕಾದಂಬರಿಗೆ ಪುಸ್ತಕ ಸೊಗಸು ಬಹುಮಾನ, 'ಮರ ಬಿದ್ದಾಗ' ಕೃತಿಗೆ ಬಾಲವಿಕಾಸ ಅಕಾಡೆಮಿ ಕೊಡುವ ಮಕ್ಕಳ ಚಂದ್ರ ಪ್ರಶಸ್ತಿ, 'ಉಲ್ಟಾಅಂಗಿ' ಕಥಾ ಸಂಕಲನಕ್ಕೆ 2019ರ ರಾಯಚೂರು ಜಿಲ್ಲಾ ಮಕ್ಕಳ ಸಾಹಿತ್ಯ ಪ್ರಶಸ್ತಿ ಸಂದಿವೆ.

ಬೀಗಾರರಿಗೆ ರಾಜ್ಯ ಶಿಕ್ಷಕರ ಪ್ರಶಸ್ತಿ, ರಾಷ್ಟ್ರ ಶಿಕ್ಷಕರ ಪ್ರಶಸ್ತಿ, ವ್ಯಂಗ್ಯ ಚಿತ್ರ ರಚನೆಗಾಗಿ ರಾಜ್ಯಮಟ್ಟದ ಬಹುಮಾನ, ರಾಜ್ಯಮಟ್ಟದ ವಿಜ್ಞಾನ ಗೋಷ್ಠಿ ಬಹುಮಾನ, ಪ್ರಜಾವಾಣಿ ಶಿಶುಕಾವ್ಯ ಸ್ಪರ್ಧಾ ಬಹುಮಾನ ಮತ್ತಿತರ ಪುರಸ್ಕಾರಗಳು ಮುಡಿಗೇರಿವೆ. ನಿರಂತರ ಮಕ್ಕಳ ಸಾಹಿತ್ಯದ ತುಡಿತದಲ್ಲೇ ಕಾಲಕಳೆಯುತ್ತಿರುವ ಬೀಗಾರರು ಪ್ರಸ್ತುತ ಸಿದ್ದಾಪುರದಲ್ಲಿ ನೆಲೆಸಿದ್ದಾರೆ. ತಮ್ಮ ಬಾಲ್ಯದ ಹಾಗೂ ಗ್ರಾಮೀಣ ಪ್ರದೇಶದ ಅನುಭವಗಳ ಮೂಲಕವೇ ಮಕ್ಕಳ ಸಾಹಿತ್ಯದಲ್ಲಿ ಈಗಲೂ ರಚನಾತ್ಮಕ ಕೆಲಸ ಮಾಡುತ್ತಿರುವ ಬೀಗಾರ ಅತ್ಯುತ್ತಮ ವ್ಯಂಗ್ಯಚಿತ್ರ ಕಲಾವಿದರೂ ಆಗಿರುವುದು ಬಹುತೇಕರಿಗೆ ತಿಳಿಯದು.

# ದಲಿತ ಮಹಿಳೆಯರು ಕಟ್ಟಿದ ಚರಿತ್ರೆ

ಸಬಿಹಾ ಭೂಮೀಗೌಡ

**ಅಂಬೇಡ್ಕರ್** ಚಳವಳಿಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ, ಸಾಧನೆ ಮತ್ತು ಸಬಲೀಕರಣದ ಸ್ವರೂಪವನ್ನು ಚರ್ಚಿಸುವ 'ನಾವೂ ಇತಿಹಾಸ ಕಟ್ಟಿದೆವು' ಎಂಬ ಕೃತಿಯನ್ನು 1989ರಲ್ಲಿ ಊರ್ಮಿಳಾ ಪವಾರ್ ಮತ್ತು ಮೀನಾಕ್ಷಿ ಮೂನ್ ಮರಾಠಿಯಲ್ಲಿ ಪ್ರಕಟಿಸಿದರು. ದು. ಸರಸ್ವತಿಯವರು ಅದನ್ನೀಗ ಕನ್ನಡಕ್ಕೆ ಅನುವಾದಿಸಿದ್ದು, ಅಂಬೇಡ್ಕರ್ ಕುರಿತು ಬಂದಿರುವ ಅಸಂಖ್ಯ ಕೃತಿಗಳ ಸಾಲಿನಲ್ಲಿ ಈ ಕೃತಿ ವಿಶಿಷ್ಟವೂ ಮಹತ್ವದ್ದೂ ಆಗಿದೆ.

'ಅವನ' ಚರಿತ್ರೆಯೇ ಎಲ್ಲೆಡೆ ವ್ಯಾಪಿಸಿರುವುದರ ನಡುವೆ 'ಅವಳ' ಚರಿತ್ರೆಯನ್ನು ಈ ಕೃತಿ ಕಟ್ಟಿದೆ. ಇದು ಊರ್ಮಿಳಾ ಮತ್ತು ಮೀನಾಕ್ಷಿ ಅವರ ಸ್ತ್ರೀವಾದಿ ನೋಟದಿಂದ ಕಟ್ಟಿದ 'ಅವಳ' ಚರಿತ್ರೆ. ಪ್ರಧಾನಧಾರೆಯ ಚಳವಳಿಗಳ ಇತಿಹಾಸದಲ್ಲಿ ದಾಖಲಾಗದ, ಸ್ಥಾನ ಪಡೆಯದ, ಅಂಬೇಡ್ಕರ್‌ವಾದಿಗಳು ರಚಿಸಿದ ಚಳವಳಿಗಳ ಚರಿತ್ರೆಯಲ್ಲೂ ಅದೃಶ್ಯರಾಗಿದ್ದ ಮಹಿಳೆಯರ ಚರಿತ್ರೆ ಇದು. ಪ್ರತಿಕೂಲ ಮತ್ತು ಪರಿಮಿತ ಪರಿಸ್ಥಿತಿಗಳಲ್ಲಿ ಆ ಮಹಿಳೆಯರು ಕಟ್ಟಿದ ಚರಿತ್ರೆಯನ್ನು ಓದಿ, ಇಂದಿನ ನಮ್ಮ ಸಾಮಾಜಿಕ ಜವಾಬ್ದಾರಿ ಮತ್ತು ಹೊಣೆಗಾರಿಕೆಯನ್ನು ಎಚ್ಚರಿಸುವ ಕೃತಿ ಇದು. ಜೊತೆಗೆ ಶತಮಾನಗಳಿಂದ ಸಮಾಜ ಉಪೇಕ್ಷಿಸಿದ ಮಹಿಳೆಯರು ಅದರಲ್ಲೂ ದಲಿತ ಮಹಿಳೆಯರು ಕಟ್ಟಿದ ಚರಿತ್ರೆಯಿದು- ಕಣ್ಣಿದ್ದರೆ ಕಾಣಿ ಎಂದು ಗಟ್ಟಿಸಿ ಹೇಳಿದ ಕೃತಿಯೂ ಹೌದು.

1920ರಿಂದ 1956ರ ಅವಧಿಯ ಅಂಬೇಡ್ಕರ್ ಚಳವಳಿಯಲ್ಲಿ ಭಾಗಿಯಾಗಿದ್ದ ಮಹಿಳೆಯರು ರೂಪುಗೊಂಡ, ಪ್ರಭಾವಿತರಾದ ಬಗೆ ಮತ್ತು ಸಬಲೀಕರಣದ ಸ್ವರೂಪವನ್ನು ದಾಖಲಿಸುವುದು ಕೃತಿಯ ಪ್ರಧಾನ ಉದ್ದೇಶ. ಇದರಲ್ಲಿ ಎರಡು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಅಂಬೇಡ್ಕರ್ ಚಳವಳಿಯ ಸಾಮಾಜಿಕ, ಐತಿಹಾಸಿಕ ಹಿನ್ನೆಲೆಯನ್ನು ಪತ್ರಿಕಾ ವರದಿಗಳ ಮೂಲಕ ಪುನರ್ ರೂಪಿಸಿದ ಹದಿಮೂರು ಅಧ್ಯಾಯಗಳಿವೆ. ಎರಡನೆಯದರಲ್ಲಿ ಚಳವಳಿಯಲ್ಲಿ ಭಾಗಿಯಾಗಿದ್ದ ನಲವತ್ತನಾಲ್ಕು ಮಹಿಳೆಯರ ಸಂದರ್ಶನಗಳಿವೆ.

ಸಂದರ್ಶಿಸಲ್ಪಟ್ಟ ದಲಿತ ಮಹಿಳೆಯರ ಹಿನ್ನೆಲೆಯನ್ನು ಮುಖ್ಯವಾಗಿ ಗಮನಿಸಬೇಕಿದೆ.




ಪು: 438 ₹450

**ನಾವೂ ಇತಿಹಾಸ ಕಟ್ಟಿದೆವು**
ಅನು: ದು. ಸರಸ್ವತಿ
ಪ್ರ: ಕವಿ ಪ್ರಕಾಶನ, ಕವಲಕ್ಕಿ
ಸಂ: 9480211320

ಇವರಲ್ಲಿ ಅನಕ್ಷರಸ್ಥರಿದ್ದಾರೆ, ಪ್ರಾಥಮಿಕ/ಪ್ರೌಢಶಾಲಾ ಶಿಕ್ಷಣವನ್ನು ಪಡೆದವರಿದ್ದಾರೆ, ವಿರಳವಾಗಿ ಟೀಚರ್ ಟ್ರೇನಿಂಗ್ ಮತ್ತು ಪದವಿ ಪಡೆದವರಿದ್ದಾರೆ. ಬಹುತೇಕರ ಹೆತ್ತವರು ಕಾರ್ಮಿಕರು, ಇನ್ನು ಕೆಲವರ ಹೆತ್ತವರು ಇಂಗ್ಲಿಷರ ಮನೆಯಲ್ಲಿ ಅಡುಗೆಯವರಾಗಿ, ವಾಹನ ಚಾಲಕರಾಗಿ, ಪೊಲೀಸರಾಗಿ, ಶಿಕ್ಷಕರಾಗಿ, ಗುಮಾಸ್ತರಾಗಿ ದುಡಿಯುತ್ತಿದ್ದವರು. ಆದರೆ 1920ರ ವೇಳೆಗೆಲ್ಲ ಈ ಹೆತ್ತವರು ಸಂಘಟನೆ, ಅಂಬೇಡ್ಕರ್ ಚಳವಳಿಯ ಮಹತ್ವ ಅರಿತು ಅದರಲ್ಲಿ ಪಾಲ್ಗೊಂಡಿದ್ದರು. ಹೀಗಾಗಿ ಹೆತ್ತವರ ಪ್ರೇರಣೆಯಿಂದ, ವಿವಾಹಾನಂತರ ಗಂಡನ ಮನೆಯ ಪರಿಸರದಿಂದ ಈ ಮಹಿಳೆಯರು ಅಂಬೇಡ್ಕರ್ ಚಳವಳಿಗಳಲ್ಲಿ ಭಾಗಿಯಾದರು.

ಅಂಬೇಡ್ಕರ್ ಮುನ್ನಡೆಸಿದ ಮಹಾಡ್ ಕೆರೆ ಸತ್ಯಾಗ್ರಹ, ಕಾಳಾರಾಮ್ ದೇವಾಲಯ ಪ್ರವೇಶ ಹೋರಾಟ, ಪೂನಾ ಒಪ್ಪಂದ, ಬೌದ್ಧಧರ್ಮಕ್ಕೆ ಮತಾಂತರ ಮುಂತಾದವುಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಈ ಮಹಿಳೆಯರು ಪಾಲ್ಗೊಂಡಿದ್ದರು. ಗೃಹಿಣಿಯರು ಮಕ್ಕಳನ್ನು ಕಂಕುಳಲ್ಲಿ ಇಟ್ಟುಕೊಂಡೇ ಹೋರಾಟಕ್ಕೆ ಬಂದರು. ಗರ್ಭಿಣಿಯರು ಮತ್ತು ಎಳೆಕೂಸಿನ ತಾಯಂದಿರು ಜೈಲುಶಿಕ್ಷೆ ಅನುಭವಿಸಿ ಹೊಸ ಚರಿತ್ರೆಯನ್ನು ನಿರ್ಮಿಸಿದರು.

ಚಳವಳಿಯ ಪ್ರೇರಣೆಯಿಂದ ಮಹಿಳೆಯರ ವ್ಯಕ್ತಿತ್ವದಲ್ಲಾದ ಬದಲಾವಣೆಗಳು ಗಮನಾರ್ಹ. ಅನೇಕ ಅನಕ್ಷರಸ್ಥ ಮಹಿಳೆಯರು ಪ್ರಭಾವಿ ಭಾಷಣಕಾರ್ತಿಯರಾಗಿ, ಸಂಘಟಕಿಯರಾಗಿ, ಹಾಡುಗಾರ್ತಿಯರಾಗಿ ರೂಪಾಂತರಗೊಂಡರು. ಶಿಕ್ಷಿತ ಮಹಿಳೆಯರು ಪತ್ರಿಕಾ ಬರಹ, ಕವಿತೆಗಳನ್ನು ಬರೆದರು; ರಾಜಕೀಯ ನಾಯಕಿಯರಾಗಿ, ದಲಿತ ಸಂಘಟನೆಗಳಲ್ಲಿ ಪದಾಧಿಕಾರಿಗಳಾಗಿ ತಮ್ಮ ಶಕ್ತಿ ಮತ್ತು ಸಾಮರ್ಥ್ಯ ಸಾಬೀತುಪಡಿಸಿದರು.

ದಲಿತ ಮಹಿಳೆಯರ ಈ ಹಾದಿ ಸುಗಮವಾಗಿರಲಿಲ್ಲ. 'ದಲಿತ ಹೆಣ್ಣುಮಕ್ಕಳ ಬದುಕು ಕತ್ತರಿಯ ನಡುವೆ ಸಿಕ್ಕಿದಂತೆ. ಹೊಲದಲ್ಲಿ ದುಡಿಯುವಾಗ ಮರ್ಯಾದೆಗಾಗಿ ಭಯಪಡಬೇಕು, ಮನೆಯೊಳಗೆ ಗಂಡಂದಿರ ಭಯ... ಹೊಡೆತ, ಜಗಳ, ಅಳು ಮತ್ತು ಹಸಿವು ಮಾಮೂಲಿಯಾಗಿದ್ದವು' ಎಂಬ ಬೇಬಿತಾಯಿ ಕಾಂಬ್ಳೆ ಅವರ ಮಾತು ದಲಿತ ಮಹಿಳೆಯರ ಬದುಕಿಗೆ ಹಿಡಿದ ಕನ್ನಡಿ.

ಒಳನೋಟ

ಹಲವರು ತಮ್ಮ ಕೌಟುಂಬಿಕ ಜವಾಬ್ದಾರಿಗಳ ಜೊತೆ ಸಾರ್ವಜನಿಕ ಬದುಕಿಗೆ ಸಮಯ ಕೊಡಲು ಹೆಣಗಾಡಿದ್ದರೆ, ಹೊರಗೆ ಹೋಗಿ ಸಮಾಜಸೇವೆ ಮಾಡಬೇಕೆಂದು ಕುಟುಂಬ ಯೋಜನೆಯನ್ನು ಆ ಕಾಲಕ್ಕೇ ಬಳಸಿದವರು ಕೆಲವರು. ಸಂಶಯ ಸ್ವಭಾವದ ಗಂಡ-ಅತ್ತೆಯರ ಕಿರುಕುಳ, ಹೊಡೆತ, ಅಪವಾದ ತಡೆಯಲಾಗದೆ ತವರಿಗೆ ಬಂದವರು ಕೆಲವರಾದರೆ, 'ಕಾರಣವಿಲ್ಲದೆ ನನ್ನನ್ನು ಅನುಮಾನಿಸಬೇಡಿ' ಎಂದು ಪ್ರತಿರೋಧ ತೋರಿದವರು ಕೆಲವರು. ಮತ ಚಲಾಯಿಸಲು ಬಿಡದ ಗುಂಪಿಗೆ, ಸೆರಗಲ್ಲಿ ಬಚ್ಚಿಟ್ಟುಕೊಂಡ ಖಾರದ ಪುಡಿ ಎರಚಿ ಪ್ರತಿರೋಧ ತೋರಿದವರು ಇನ್ನು ಕೆಲವರು.

ಅನೇಕ ಪರಿಮಿತ, ಸಂಕಷ್ಟದ ವಾತಾವರಣವಿದ್ದರೂ ಈ ಮಹಿಳೆಯರ ಆತ್ಮವಿಶ್ವಾಸ, ಧೀಶಕ್ತಿ, ಪ್ರಶ್ನಿಸುವ, ವಿವೇಚಿಸುವ ಗುಣಗಳು ಅನನ್ಯ. 'ನಾವು ನಿಮ್ಮ ಜೊತೆ ಮತಾಂತರಕ್ಕೆ ಸಿದ್ಧ. ನಮಗೆ ಘನತೆಯಿಂದ ಬದುಕಲು ಅವಕಾಶವಿರುವ, ನಮ್ಮ ಚಲನವಲನದ ಮೇಲೆ ನಿರ್ಬಂಧ ಹೇರದ, ನಮಗೆ ನಮ್ಮದೆನಿಸುವ ಧರ್ಮವನ್ನು ನಮಗೆ ಕೊಡಿ' ಎಂದು ಅಂಬೇಡ್ಕರ್ ಅವರಿಗೆ ಮನವಿ ಇಟ್ಟವರು ಇವರು. ಒಂದೇ ಮನದಿಂದ ತಾವು ಅದುವರೆಗೆ ಪೂಜಿಸುತ್ತಿದ್ದ ದೇವದೇವತೆಗಳನ್ನು ಮತಾಂತರದ ವೇಳೆ ನದಿಗೆ ಎಸೆದವರಿವರು! ಇಲ್ಲಿ ಮಹಿಳೆಯರ ಆತ್ಮವಿಶ್ವಾಸದಷ್ಟೇ ಸಾಮಾನ್ಯರ ಮಾತಿಗೆ ಕಿವಿಯಾಗುತ್ತಿದ್ದ ಅಂಬೇಡ್ಕರ್ ವ್ಯಕ್ತಿತ್ವವೂ ಮುಖ್ಯವಾಗಿದೆ.

'ನೀವ್ಯಾಕೆ ಹರಿಜನ ಸೇವಕ ಸಂಘದ ಹಣವನ್ನು ವಿನಿಯೋಗಿಸುವ ಕೆಲಸ ಹರಿಜನರಿಗೇ ವಹಿಸುವುದಿಲ್ಲ' ಎಂದು ಗಾಂಧಿಯನ್ನೇ ಪ್ರಶ್ನಿಸಿದ ಮುಕ್ತಾ ಸರ್ವಗೋಡ್; ಹಿಂದೂ ಕೋಡ್ ಬಿಲ್ ಕುರಿತು ಅಪಪ್ರಚಾರದಲ್ಲಿ ತೊಡಗಿದ್ದ ಕರ್‌ಪಾತ್ರಿ ಮಹಾರಾಜ್‌ರ ಮಾತಿನ ಜೊಳ್ಳುತನವನ್ನು ಬಯಲಿಗೆಳೆದ ನಲಿನಿತಾಯಿ ಲಢಕ್; 'ಅಡುಗೆಮನೆ ಒಲೆಯು ಯಾವತ್ತೂ ನನಗೆ ಆಕರ್ಷಣೆ ಹುಟ್ಟಿಸಲೇ ಇಲ್ಲ. ಅದು ಮಹಿಳೆಯರ ಸಾಮಾಜಿಕ ಚಟುವಟಿಕೆಗೆ ಅಡ್ಡಿಯಾಗಿದೆ' ಎಂದ ಗೀತಾಬಾಯಿ ಪವಾರ್; 'ಗಂಡ ನನ್ನನ್ನು ಪ್ರೋತ್ಸಾಹಿಸಲೂ ಇಲ್ಲ, ವಿರೋಧಿಸಲೂ ಇಲ್ಲ. ನನ್ನ ನಿರ್ಧಾರ ನಾನೇ ತೆಗೆದುಕೊಳ್ಳುತ್ತಿದ್ದೆ' ಎಂದ ಕೌಸಲ್ಯಾಬಾಯಿ ಬೈಸಂತ್ರಿ ಇವರೆಲ್ಲ ಕಟ್ಟಿದ ಅಪರೂಪದ ಚರಿತ್ರೆಯೇ 'ನಾವೂ ಇತಿಹಾಸ ಕಟ್ಟಿದೆವು' ಕೃತಿಯಾಗಿದೆ.

ದು. ಸರಸ್ವತಿಯವರ ಅನುವಾದದ ಭಾಷೆ ನವಿರಾಗಿದೆ, ಸೃಜನಶೀಲವಾಗಿದೆ, ಹಲವು ಭಾಷಾ ನಮೂನೆಗಳನ್ನು ಸಮಯೋಚಿತವಾಗಿ ಕೃತಿಯಲ್ಲಿ ದುಡಿಸಿಕೊಂಡಿದ್ದಾರೆ. ಇದೊಂದು ಕನ್ನಡದ ಹೋರಾಟದ ಚರಿತ್ರೆಗೆ ಮಹತ್ವದ ಕೊಡುಗೆಯಾಗಿದೆ. ಮಹಿಳಾ ಚರಿತ್ರೆಯನ್ನು ಎಲ್ಲೆಲ್ಲಿ ಮತ್ತು ಹೇಗೆಲ್ಲ ಕಟ್ಟಲು ಅವಕಾಶವಿದೆ ಎಂಬ ಹೊಸ ಯೋಜನೆಯನ್ನು ಈ ಮೂಲಕ ಸರಸ್ವತಿಯವರು ನಮಗೆ ನೀಡಿದ್ದಾರೆ.

# ಬಹುಸಂಖ್ಯಾತ ಸಮುದಾಯ ಸರಿ ಇದ್ದಾಗಲೂ ಎಂದರೇನು?

**ಡಾ.ಆರ್. ಲಕ್ಷ್ಮೀನಾರಾಯಣ** ಅವರು ಪುರುಷೋತ್ತಮ ಬಿಳಿಮಲೆ ಅವರ ಲೇಖನಕ್ಕೆ ಪ್ರತಿಕ್ರಿಯಿಸುತ್ತಾ (ಸೆ.18, 2022) 'ಬಹುಸಂಖ್ಯಾತ ಸಮುದಾಯ ಸರಿಯಿದ್ದಾಗಲೂ' ಬುದ್ಧಿಜೀವಿಗಳು ಎನಿಸಿಕೊಂಡವರು ಅದನ್ನು ಬಹಿರಂಗವಾಗಿ ಹೇಳಲು ಹಿಂಜರಿಯುತ್ತಾರೆಂತಲೂ, ಯಾವುದೋ ಪಕ್ಷದ ತುತ್ತೂರಿಯಂತೆ ಋಣ ಸಂದಾಯ ಮಾಡಲು ತುದಿಗಾಲಲ್ಲಿ ನಿಂತಿರುತ್ತಾರೆಂದೂ, ಬುದ್ಧಿಜೀವಿಗಳು ಧೀಮಂತರಾಗಲು ಬಯಸುತ್ತಿಲ್ಲವೆಂದೂ ಟೀಕೆಯ ಮಳೆಯನ್ನೇ ಸುರಿಸಿದ್ದಾರೆ. ಆದರೆ ಅವರ ಗ್ರಹಿಕೆಯೇ ಅಸಂಬದ್ಧವಾಗಿರುವುದು ಮೇಲ್ನೋಟಕ್ಕೇ ಗೋಚರಿಸುವಂತಿದೆ. ಅವರು ಹೇಳುವಂತೆ ಯಾವ ಬುದ್ಧಿಜೀವಿ, ಸಾಹಿತಿಯೂ ಸುಖಾಸುಮ್ಮನೆ ಯಾವುದೋ ರಾಜಕೀಯ ಪಕ್ಷದ ಬಾಂಗೋಚಿಯಂತೆ ವರ್ತಿಸುವುದು ಅಸಂಭವ. ಹಿಂದೆ ತುರ್ತು ಪರಿಸ್ಥಿತಿ ಕಾಲದಲ್ಲಿ ಪ್ರಭುತ್ವವನ್ನು ರಾಜಾರೋಷವಾಗಿ ವಿರೋಧಿಸಿ ಅನೇಕ ಕಷ್ಟಗಳಿಗೆ ಸಾಹಿತಿಗಳು ಒಳಗಾದ ದೃಷ್ಟಾಂತ ನಮ್ಮ ನೆನಪಿನಿಂದ ಇನ್ನೂ ಮಾಸಿ ಹೋಗಿಲ್ಲ. ಚಂಪಾ, ಲಂಕೇಶ್, ತೇಜಸ್ವಿ, ಅನಂತಮೂರ್ತಿ ಮುಂತಾದ ಧೀಮಂತರು ಆಗಿನ 'ಜನತಾ ಪಕ್ಷ'ವನ್ನು ಬೆಂಬಲಿಸಿ ಕಾಂಗ್ರೆಸ್ ಪಕ್ಷ ಸೋಲುಣ್ಣುವಂತೆ ಮಾಡಿದ್ದೂ ನಮ್ಮ ಕಣ್ಣ ಮುಂದಿದೆ. ಹಾಗೆಯೇ 'ಜನತಾ ಪಕ್ಷ' ಅಡ್ಡ ಹಾದಿ ಹಿಡಿದಾಗ ಅದರ ಕಿವಿ ಹಿಂಡಿದ್ದೂ ಅಂತಹ ಬುದ್ಧಿಜೀವಿಗಳೇ ಅಲ್ಲವೆ?

ಪ್ರತಿಕ್ರಿಯೆ

ನವೋದಯ, ಪ್ರಗತಿಶೀಲ ಸಾಹಿತಿಗಳು ಯಾವುದೇ ರಾಜಕೀಯ ಪಕ್ಷದೊಂದಿಗೆ ಗುರುತಿಸಿಕೊಳ್ಳಲಿಲ್ಲ ಎಂಬುದು ನಿಜವಾದರೂ ಅವರೆಲ್ಲರೂ ರಾಜಕೀಯ ಪ್ರಜ್ಞೆಯಿಂದ ದೂರವೇನೂ ಇರಲಿಲ್ಲ. ಮಹಾಕವಿ ಕುವೆಂಪು, ಕಾರಂತ, ಅನಕೃ ಮುಂತಾದವರು ಕ್ರಿಯಾಶೀಲರಾಗಿಯೇ ರಾಜಕಾರಣವನ್ನು ಮೆಚ್ಚುವ, ಟೀಕಿಸುವ ಪರಿಪಾಠ ಇಟ್ಟುಕೊಂಡಿದ್ದರಲ್ಲವೇ? ಸ್ವಯಂ ಅಡಿಗರು ಆಗಿನ 'ಜನಸಂಘ'ದ ಜೊತೆ ಗುರುತಿಸಿಕೊಂಡಿದ್ದರಲ್ಲದೆ ಅದೇ ಪಕ್ಷದಿಂದ ಚುನಾವಣೆಗೂ ಸ್ಪರ್ಧಿಸಿದ್ದರಲ್ಲವೇ? ಹಾಗಾದರೆ ಅವರೇ ಹೇಳಿದರೆನ್ನಲಾದ 'ಬುದ್ಧಿಜೀವಿ' ಪದದ ಬದಲಿಗೆ ಧೀಮಂತ' ಪದ ಬಳಕೆ ಮಾಡಬೇಕು ಎನ್ನುವುದಕ್ಕೆ ಅವರೇ ಹೊರತಾದರೇ? ಬುದ್ಧಿಜೀವಿ, ಸಾಹಿತಿಗಳು ಯಾವುದೇ ಪಕ್ಷದ ಜೊತೆ ಗುರುತಿಸಿಕೊಳ್ಳಬಾರದೆನ್ನುವುದು ಸಾಪೇಕ್ಷವೇ ವಿನಾ ನಿರ್ಣಾಯಕವಲ್ಲ. ಯಾವುದೇ ಪಕ್ಷದ ಸರ್ಕಾರ ಜನವಿರೋಧಿ, ಒಪ್ಪಿತ ಸಂವಿಧಾನದ ವಿರೋಧಿ ನೀತಿಗಳನ್ನು ಹೇರಲು ಹವಣಿಸಿದಾಗ ಯಾವ ಪ್ರಜ್ಞಾವಂತನೂ ಮೌನ ವಹಿಸಲಾರ. ಅದರಂತೆ ರಾಜಕೀಯ ಪರ್ಯಾಯ ಮಾರ್ಗಕ್ಕಾಗಿ, ಜನ ಹಿತಕ್ಕಾಗಿ, ಸರ್ವೋದಯಕ್ಕಾಗಿ ಬುದ್ಧಿ, ಹೃದಯ ಇರುವವರೆಲ್ಲರೂ ಕೊಂಚ ಅಳುಕಿನಿಂದಲೇ ಮತ್ತೊಂದು ಪಕ್ಷದ ರಾಜನೀತಿಯನ್ನು ಬೆಂಬಲಿಸುವುದು ಸುಮಾರ್ಗವಲ್ಲದೆ ಮತ್ತೇನೂ ಅಲ್ಲ. ಅಪ್ಪೀ ತಪ್ಪೀ ಆ ಪಕ್ಷವೂ ಎಡವುವಂತಾದರೆ ಅದರ ವಿರುದ್ಧವೂ ಬಂಡೇಳುವುದು ವಿವೇಕಿಗಳ ನಡೆ.

ಹಾಗೆ ನೋಡಿದರೆ ಈಗಿನ ಆಡಳಿತ ಪಕ್ಷದ ನೀತಿ ನಿರ್ಧಾರಗಳನ್ನು ಅನೇಕ ಸಾಹಿತಿಗಳು ಈಗಲೂ ಬೆಂಬಲಿಸುತ್ತಿರುವರಲ್ಲಾ? ಅವರೆಲ್ಲರೂ ಆ ಸರ್ಕಾರದ ಕೃಪಾಕಟಾಕ್ಷಕ್ಕಾಗಿ ಕಾದು ಕುಳಿತಿದ್ದಾರೆಯೇ? ಜನ ವಿರೋಧಿ, ಸಂವಿಧಾನ ವಿರೋಧಿ ನಡೆ ಕಂಡಾಗಲೂ ಇವರೆಲ್ಲಾ ಬಾಯಿಮುಚ್ಚಿ ಸಹಿಸುತ್ತಿರುವುದು ಯಾವ ಪುರುಷಾರ್ಥಕ್ಕಾಗಿ? ಸ್ವತಃ ಲಕ್ಷ್ಮೀನಾರಾಯಣ ಅವರ ಈ ವಕಾಲತ್ತಿನ ಹಿಂದಿರುವ ಧ್ವನಿಯಲ್ಲೂ ಇಂಥದೇ ಸಂಶಯದ ಎಳೆಗಳು ಇಣುಕುತ್ತಿವೆಯಲ್ಲಾ? ಇದಕ್ಕೇನೆನ್ನುವುದು?

ಇದೆಲ್ಲವ ಮೀರಿ 'ಬಹುಸಂಖ್ಯಾತ ಸಮುದಾಯ ಸರಿಯಿದ್ದಾಗಲೂ' ಎಂಬ ಪ್ರಮಾಣ ಪತ್ರವನ್ನು ಲಕ್ಷ್ಮೀನಾರಾಯಣ ಅವರು ಯಾವ ಮಾನದಂಡವನ್ನಿಟ್ಟುಕೊಂಡು ನೀಡಿದ್ದಾರೋ ಇದನ್ನು ನೆನೆದರೇ ದಿಗಿಲಾಗುತ್ತದೆ.

–**ಚಂದ್ರಶೇಖರ ತಾಳ್ಯ**, ಹೊಳಲ್ಕೆರೆ

**ಮೊದಲ ಓದು**

## ತಾಂತ್ರಿಕ ಮನಸ್ಸು ಬಿಚ್ಚಿಟ್ಟ ಕಥಾಲೋಕ

ಸಿ, ಸಿ ಪ್ಲಸ್ ಪ್ಲಸ್, ಪೈಥಾನ್ ಹೀಗೆನ್ನುತ್ತಾ ತಾಂತ್ರಿಕ ಲೋಕದಲ್ಲೇ ಮುಳುಗಿದ ಹತ್ತಾರು ಮನಸ್ಸುಗಳು ಮಕ್ಕಳ ಕಥಾಲೋಕದಲ್ಲೂ ಈಜಬಲ್ಲವು ಎನ್ನುವುದಕ್ಕೆ ಸಾಕ್ಷ್ಯವಾಗಿದೆ ಈ ಕೃತಿ. ಜಗತ್ತಿಗೆ ಹೆಜ್ಜೆ ಇಡಲು ಸಜ್ಜಾದ ಯುವಜನತೆಗೆ ಮಾರ್ಗದರ್ಶನವಷ್ಟೇ ಅಲ್ಲ, ಎಳೆಮನಸ್ಸಿಗೂ ಕಥೆಗಳ ಮೂಲಕ ನೀತಿಪಾಠ ಹೇಳುವ ಸಾಮರ್ಥ್ಯವೂ ನಮ್ಮಲ್ಲಿದೆ ಎಂದು ಪಿಇಎಸ್ ವಿಶ್ವವಿದ್ಯಾಲಯದ ಉಪನ್ಯಾಸಕರು ಇಲ್ಲಿ ಸಾಬೀತುಪಡಿಸಿದ್ದಾರೆ.

ಯಾಂತ್ರಿಕ ಲೋಕದಲ್ಲಿ ತಂತ್ರಜ್ಞಾನದ ಬಲೆಗೆ ಸಿಲುಕಿರುವ ಮಕ್ಕಳು ಕಥಾಲೋಕದಿಂದ ದೂರ ಸರಿಯುತ್ತಿದ್ದಾರೆ. ಅಜ್ಜಿಯಂದಿರೂ ತಮ್ಮ ಮೊಮ್ಮಕ್ಕಳಿಗೆ ಕಥೆ ಹೇಳಿ ವರ್ಷಗಳೇ ಉರುಳಿರಬಹುದು. ಶಾಲೆಗಳಲ್ಲಿ ನೀತಿಕಥೆಗಳು ಅಪರೂಪವಾಗಿವೆ. ಆದರೆ ಕಥೆ ಎನ್ನುವುದು ಮಕ್ಕಳನ್ನು ಸದಾ ಸೆಳೆಯುವ ಮಾಧ್ಯಮ ಎನ್ನುವುದನ್ನು ಅಲ್ಲಗಳೆಯುವಂತಿಲ್ಲ. ಈ ಉದ್ದೇಶದಿಂದಲೇ ಈ ಕೃತಿ ರಚಿಸಲಾಗಿದೆ ಎಂದಿದ್ದಾರೆ ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಎಂ.ಆರ್.ದೊರೆಸ್ವಾಮಿ. ಇವರ ಸಂಸ್ಥೆಯ ಉಪನ್ಯಾಸಕರು ರಚಿಸಿದ 150ಕ್ಕೂ ಅಧಿಕ ಕಥೆಗಳಲ್ಲಿ ಆಯ್ದ 34 ಕಥೆಗಳನ್ನು ಈ ಪುಸ್ತಕದಲ್ಲಿ ನೀಡಲಾಗಿದೆ. ಪ್ರತಿ ಕಥೆಯ ಕೊನೆಯಲ್ಲಿ ನೀತಿಪಾಠವಿದ್ದು, ಇದನ್ನು ನಿವೃತ್ತ ಅಧ್ಯಾಪಕ ಸಿ.ಎಸ್.ಬನಶಂಕರಯ್ಯ ಅವರು ಬರೆದಿದ್ದಾರೆ. ಶಿಕ್ಷಣ ವ್ಯವಸ್ಥೆಯೊಳಗಿನ ಒತ್ತಡದಿಂದ ಸಾಹಿತ್ಯ, ಬರವಣಿಗೆಯಿಂದ ದೂರವಾಗುತ್ತಿರುವ ಉಪನ್ಯಾಸಕ ವೃಂದ ಮತ್ತೆ ಲೇಖನಿ ಹಿಡಿದಿರುವುದು, ಅದರಲ್ಲೂ ಮಕ್ಕಳ ಸಾಹಿತ್ಯವನ್ನು ಗಂಭೀರವಾಗಿ ಪರಿಗಣಿಸಿರುವುದು ಒಳ್ಳೆಯ ಬೆಳವಣಿಗೆ.

ಸಮಾಜದಲ್ಲಿ ಇಳಿಮುಖವಾಗುತ್ತಿರುವ ನೈತಿಕ ಮೌಲ್ಯಗಳು ಮಕ್ಕಳ ಮೇಲೂ ಪ್ರಭಾವ ಬೀರುತ್ತಿವೆ. ಹೀಗಾಗಿ ಈ ಕೃತಿಯನ್ನು ರಾಜ್ಯದ ಎಲ್ಲ ಶಾಲೆಗಳಿಗೂ ತಲುಪಿಸುವ ದೊರೆಸ್ವಾಮಿ ಅವರ ನಿರ್ಧಾರ ಮೆಚ್ಚುಗೆಗೆ ಪಾತ್ರವಾಗುವಂಥದ್ದು. ಇತರರಿಗೆ ಮಾದರಿಯಾಗುವಂತೆ ಅವರೂ ಒಂದು ಕಥೆ ಬರೆದಿದ್ದಾರೆ. ಕಥೆಗೆ ಪೂರಕವಾಗಿ ಕಲೆಯೂ ಇದ್ದು, ಸರಳವಾದ ಬರವಣಿಗೆ ಮಕ್ಕಳ ಓದಿಗೆ ಸಹಕಾರಿ. ಬೀಜವೊಂದರ ಒಳಗೆ ಹೆಮ್ಮರ ಅಡಗಿರುವಂತೆ ಇಲ್ಲಿನ ಕಥೆಗಳೊಳಗಿರುವ ನೀತಿಪಾಠ ಮಕ್ಕಳ ಭವಿಷ್ಯಕ್ಕೆ ದಾರಿದೀಪವಾಗಲಿದೆ.




ಪು: 68

**ಕಥಾಲೋಕ**
ಪ್ರ: ಪಿಇಎಸ್ ವಿಶ್ವವಿದ್ಯಾಲಯ, ಬೆಂಗಳೂರು

## ಮಕ್ಕಳ ಸಾಹಿತ್ಯದ ಭವಿಷ್ಯಕ್ಕೆ ದಿಕ್ಸೂಚಿ




ಪು: 136 ₹160

**ಮಕ್ಕಳಿಗಾಗಿ ಅನುವಾದ ಒಂದು ಕೈಪಿಡಿ**
ಸಂಪಾದಕರು: ಎ.ವಿ.ನಾವಡ
ಪ್ರ: ಸಾಹಿತ್ಯ ಅಕಾದೆಮಿ, ಬೆಂಗಳೂರು
ಸಂ: 080-2224 5152

**ಪುಟಾಣಿ** ಕೈಗಳಲ್ಲಿ ಟಚ್‌ಸ್ಕ್ರೀನ್ ಮೊಬೈಲ್‌ಗಳು, ರಿಮೋಟ್‌ಗಳು ರಾರಾಜಿಸುತ್ತಿರುವ ಸಂದರ್ಭದಲ್ಲಿ ಮಕ್ಕಳ ಕಥೆ, ಪದ್ಯ ಹೊತ್ತ ಹೊತ್ತಿಗೆ ಬಗ್ಗೆ ಮತ್ತೆ ಚಿಂತಿಸುವ ಕಾಲ ಬಂದಿದೆ. ಅಜ್ಜಿ ಕಥೆಗಳು, ಪುಟಾಣಿ ಪದ್ಯಗಳಿಂದ ಮಕ್ಕಳು ಎಷ್ಟು ದೂರ ಉಳಿಯುತ್ತಿದ್ದಾರೋ ಹಾಗೆಯೇ ಮಕ್ಕಳ ಸಾಹಿತ್ಯ ರಚನೆಯೂ ಕ್ಷೀಣಿಸುತ್ತಿರುವುದು ಅಷ್ಟೇ ಸತ್ಯ. ಮಕ್ಕಳನ್ನು ಮತ್ತೆ ಹೊತ್ತಿಗೆಯತ್ತ ಸೆಳೆಯುವ ಪ್ರಯತ್ನದ ಆರಂಭಿಕ ಹೆಜ್ಜೆಯೇ ಈ ಕೃತಿ.

ಕೇಂದ್ರ ಸಾಹಿತ್ಯ ಅಕಾದೆಮಿಯ ಅನುವಾದ ಕೇಂದ್ರ ಶಬ್ದನಾ ಆಯೋಜಿಸಿದ್ದ 'ಮಕ್ಕಳಿಗಾಗಿ ಅನುವಾದ ಕಮ್ಮಟ'ದಲ್ಲಿ ಮಂಡನೆಯಾದ ಪ್ರಬಂಧಗಳ ಸಂಕಲನ ಈ ಕೃತಿ. ಶಿಕ್ಷಣ ಎನ್ನುವುದು ಪಠ್ಯಪುಸ್ತಕಗಳಿಗೆ ಸೀಮಿತ ಎನ್ನುವ ಈ ಕಾಲಘಟ್ಟದಲ್ಲಿ, ಮಕ್ಕಳ ಸಾಹಿತ್ಯದತ್ತ ಲೇಖಕರು, ಪೋಷಕರೂ ಗಮನಹರಿಸಬೇಕಾದ ಅಗತ್ಯವನ್ನು ಇಲ್ಲಿನ ಪ್ರಬಂಧಗಳು ಎತ್ತಿತೋರಿವೆ.

ಮಕ್ಕಳ ಸಾಹಿತ್ಯದ ಜಗತ್ತಿಗೆ ದಿಕ್ಸೂಚಿಯಂತಿರುವ ಈ ಕೃತಿ ಹಲವು ವಿಷಯಗಳನ್ನು ಪ್ರಸ್ತಾಪಿಸಿದೆ. 'ಮಕ್ಕಳ ಕವಿತೆ ಅಜ್ಜನ ಹೆಗಲ ಮೇಲೆ ಕೂತ ಮೊಮ್ಮಗುವಿನಂತೆ' ಎಂದು ಮಕ್ಕಳಿಗೆ ಬರೆಯುವುದು ಏಕೆ, ಹೇಗೆ ಎಂಬ ಪ್ರಬಂಧದಲ್ಲಿ ಸಾಹಿತಿ ಎಚ್.ಎಸ್. ವೆಂಕಟೇಶಮೂರ್ತಿಯವರು ಉಲ್ಲೇಖಿಸುತ್ತಾರೆ. ಈ ಮಾತಿಗೆ ಪೂರಕವಾಗಿ 'ಹಕ್ಕಿಸಾಲು' ಸಂಗ್ರಹದ ಸಾಕ್ಷ್ಯ ನೀಡುತ್ತಾರೆ. ಗಂಭೀರ ಸಾಹಿತ್ಯಕ್ಕೂ ಮಕ್ಕಳ ಸಾಹಿತ್ಯಕ್ಕೂ ಗುಲಗಂಜಿ ತೂಕ ಹೆಚ್ಚು ಕಮ್ಮಿ ಇಲ್ಲ ಎಂದು ಉಲ್ಲೇಖಿಸುವ ಎಚ್ಚೆಸ್ವಿ ಅವರ ಮಾತು ಯುವ ಲೇಖಕರಿಗೆ ತಟ್ಟಬೇಕಿದೆ. ವಾಸ್ತವ ಜಗತ್ತಿನ ಬಿಂಬಗಳೂ ಕಥೆಗಳ ಮೂಲಕ ಮಕ್ಕಳ ಮನಸ್ಸಿನಲ್ಲಿ ಪಡಿಮೂಡಬೇಕು ಎನ್ನುವ ಅಂಶವನ್ನು ನಾಗೇಶ ಹೆಗಡೆ ಅವರು ಉಲ್ಲೇಖಿಸುತ್ತಾರೆ. ಹೀಗೆ ಮಕ್ಕಳ ಕತೆಗಳು, ಅನುವಾದದ ಬಗ್ಗೆ ಪ್ರಸ್ತಾಪಿಸುತ್ತಾ, ಕನ್ನಡ ಶಾಲೆಗಳು ಉಳಿಯಬೇಕು, ಬಲಗೊಳ್ಳಬೇಕು ಎನ್ನುವ ಹಂಬಲದ ಜೊತೆಗೆ ಕನ್ನಡದ ಮಕ್ಕಳ ಸಾಹಿತ್ಯ ಸಮೃದ್ಧಗೊಳ್ಳಬೇಕು, ಮಕ್ಕಳಿಗಾಗಿ ಅನುವಾದ ಮಾಡುವ ಲೇಖಕರ ಸಂಖ್ಯೆಯೂ ಹೆಚ್ಚಬೇಕು ಎನ್ನುವ ಆಶಯವನ್ನೂ ಕೃತಿ ಹೊತ್ತಿದೆ. ಪ್ರಬಂಧಗಳನ್ನು ಸಂಪಾದಿಸಿದ ಎ.ವಿ. ನಾವಡರ ಕಾರ್ಯ ಸ್ತುತ್ಯರ್ಹವಾಗಿದೆ.

# ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

## ರಾಜ ಮತ್ತು ಭಿಕ್ಷುಕ

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ಒಂದು ಊರಿನಲ್ಲಿ ಒಬ್ಬ ಭಿಕ್ಷುಕ ಭಿಕ್ಷೆ ಬೇಡುತ್ತಿದ್ದ. ಯಾವಾಗ ತನ್ನ ದಾರಿದ್ರ್ಯ ದೂರವಾಗಿ ಶ್ರೀಮಂತನಾಗುತ್ತೇನೆ ಎಂದು ಚಿಂತಿಸುತ್ತಿದ್ದ. ಹೀಗಿರುವಾಗ ಆ ದಾರಿಯಲ್ಲಿ ಒಮ್ಮೆ ರಾಜ ಬಂದ

ರಾಜನ ಬಳಿ ಏನಾದರೂ ಕೇಳಲು ಭಿಕ್ಷುಕ ಮುಂದಾದ. ಅಷ್ಟರಲ್ಲಿ ರಾಜನೇ ಈ ಭಿಕ್ಷುಕನಿಂದ ಭಿಕ್ಷೆ ಕೊಡು ಎಂದು ಕೇಳಿದ. ಭಿಕ್ಷುಕನಿಗೆ ಗಾಬರಿಯಾಯಿತು

ಭಿಕ್ಷುಕ ತನ್ನ ಚೀಲದಿಂದ ಹುಡುಕಾಡಿ ಅಕ್ಕಿಯ ಒಂದೇ ಕಾಳನ್ನು ರಾಜನಿಗೆ ನೀಡಿದ. ಅದನ್ನು ಸ್ವೀಕರಿಸಿದ ರಾಜ ಸಂತೋಷದಿಂದ ತೆರಳಿದ



ರಾಜ ಹೋದ ಮೇಲೆ ಭಿಕ್ಷುಕ ತನ್ನ ಭಿಕ್ಷಾ ಚೀಲವನ್ನು ನೋಡಿದ. ಅದರಲ್ಲಿ ಒಂದೇ ಕಾಳು ಚಿನ್ನದ್ದಾಗಿಬಿಟ್ಟಿತ್ತು. ಛೇ ಎಲ್ಲ ಅಕ್ಕಿಯನ್ನೂ ಕೊಡುತ್ತಿದ್ದರೆ ಚಿನ್ನದ ರಾಶಿಯನ್ನೇ ಪಡೆಯಬಹುದಿತ್ತಲ್ಲಾ ಎಂದು ಹಲುಬಿದ.

ನೀತಿ: ನಾವೇನನ್ನು ಕೊಡುತ್ತೇವೋ ಅಷ್ಟೇ ಫಲವನ್ನು ವಾಪಸ್ ಪಡೆಯುತ್ತೇವೆ

## ಗಣಿತದಲ್ಲಿ ಗರ್ದಿ ಗಮ್ಮತ್ತು

### ಗುಣಿಸು ಎಣಿಸು



ಇದೊಂದು ಜಂತ್ರಿ ಮಗ್ಗಿಯ ಬೋರ್ಡ್. ಈ ಬೋರ್ಡ್‌ನ ಸಹಾಯದಿಂದ 10ರವರೆಗಿನ ಅಂಕಿಗಳಲ್ಲಿ ಮಗು ಆಟ ಆಡುತ್ತಲೇ ಎಣಿಸುವುದನ್ನು ಕಲಿಯುತ್ತದೆ. ಮಗ್ಗಿಯನ್ನೂ ಕಲಿಯುತ್ತದೆ. ಉದಾಹರಣೆಗೆ 6X4 ಬೇಕಾಗಿದ್ದರೆ ಎಡಭಾಗದಲ್ಲಿ 6ನ್ನು ಗುರುತಿಸಿ ಮೇಲ್ಭಾಗದಲ್ಲಿ 4ನ್ನು ಗುರುತಿಸಿ ಅದರ ಒಳಗೆ ಬರುವ ಚೌಕಗಳಲ್ಲಿರುವ ಗೋಲಿಗಳನ್ನು ಎಣಿಸಿದರೆ 24 ಗೋಲಿಗಳು ಸಿಗುತ್ತವೆ. ಹೀಗೆ ಮಗು ಆಡುತ್ತಾ ಆಡುತ್ತಾ 10ರವರೆಗಿನ ಮೂಲ ಮಗ್ಗಿಗಳನ್ನು ಕಂಠಪಾಠ ಮಾಡಬಹುದು.

## ಟ್ವೆಂಟಿ – 20 ಮ್ಯಾಚ್

| | | | |
|---|---|---|---|
| 1 | ತಾಳು | A | ಅಡಿಗಲ್ಲು |
| 2 | ಪುಷ್ಕರಿಣಿ | B | ನಡೆ |
| 3 | ಬೀಡು | C | ತಿಳಿವಳಿಕೆ |
| 4 | ರುದ್ಧ | D | ಹೆಗಲು |
| 5 | ವಾಯುಭಕ್ಷ | E | ಸುಕವಿ |
| 6 | ವೀಕ್ಷಿಸು | F | ಚಿನ್ನ |
| 7 | ಸಜ್ಜಿಗೆ | G | ತಡೆ |
| 8 | ಸತ್ಕವಿ | H | ಛತ್ರಿ |
| 9 | ಸತ್ತಿಗೆ | I | ಕಲ್ಯಾಣಿ |
| 10 | ಸವಲತ್ತು | J | ರವೆ |
| 11 | ಸೀಟಿ | K | ನೋಡು |
| 12 | ಸೀಳು | L | ನೆಲೆ |
| 13 | ಸ್ವಸ್ತಿ | M | ಹಾವು |
| 14 | ತರುವಾಯ | N | ಹೊಂದು |
| 15 | ಜರಗು | O | ಸಿಳ್ಳು |
| 16 | ಗ್ರಹಿಕೆ | P | ಅವಕಾಶ |
| 17 | ಕೋನಶಿಲೆ | Q | ಕ್ಷೇಮ |
| 18 | ಕುಂಚಿ | R | ಹೋಳು ಮಾಡು |
| 19 | ಕುಂಕೆ | S | ಆನಂತರ |
| 20 | ಕಾಂಚನ | T | ಕುಲಾಯಿ |

## ಪದ ಆಟ

ಇಲ್ಲಿ ಕೊಟ್ಟಿರುವ ಎರಡು ಅಕ್ಷರಗಳ ಆಚೆ ಈಚೆ ಇರುವ ಖಾಲಿ ಜಾಗಗಳಿಗೆ ಎರಡು ಅಕ್ಷರ ತುಂಬಿ ಹೊಸ ಪದ ರಚಿಸಿ. ಅಕ್ಷರಗಳನ್ನು ಪಕ್ಕದಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಆಯ್ದುಕೊಳ್ಳಬೇಕು.

1 __ರಾವ__
2 __ರಾವ__
3 __ರಾವ__
4 __ರಾವ__
5 __ರಾವ__

### ಅಕ್ಷರ ಪಟ್ಟಿ

ತ ಐ ಶ ರಿ ರಿ
ತ ಕ ನೀ ತಿ ಳಿ

ಕಳೆದ ಸಂಚಿಕೆಯ ಮಜಕೂರ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

## ಕಳೆದ ಸಂಚಿಕೆಯ ಸರಿ ಉತ್ತರಗಳು

**ಟ್ವೆಂಟಿ – 20 ಮ್ಯಾಚ್**

A: 1- G 2- H 3- E 4 -A 5-J 6-B 7- D 8- I 9-C 10- F

B: 1- G 2-H 3 -D 4-F 5-J 6-I 7- E 8- C 9-B 10-A

**ಅದಲುಬದಲು**

1 ಕೊಂಡಿಮಾಡು 2 ಜನಮಾನಸ 3 ಮಡಿದರ 4 ಮೊದಲ ಕುರುಹು

**ಜಾಣಪದ ಆಟ**

1 – ಕೇರು 2 – ಕೆರೆ 3– ಕಿರಿ 4– ಕುರಿ 5 – ಕಾರು

**ಪದ ಆಟ**

1– ನೇಸರ 2 ದಸರ 3 ಬೇಸರ 4 ಕೇಸರ 5 ಕೀಸರ
1– ಸರಳ 2 ಸರತಿ 3 ಸರಕು 4 ಸರಣಿ 5 ಸರಳು
1 – ಸವಾರ 2 ಸರ್ದಾರ 3 ಸರ್ಕಾರ 4 ಸತ್ಕಾರ 5 ಸದರ

**ಗಣಿತದಲ್ಲಿ ಗರ್ದಿ ಗಮ್ಮತ್ತು**

1
6 5
2 4 3

ಅಥವಾ

1
6 5
2 4 3

## ಜಾಣಪದ ಆಟ

ಇಲ್ಲಿ ಕೊಟ್ಟಿರುವ ಮೂಲ ಅಕ್ಷರಗಳನ್ನು ಬಳಸಿ ಪಕ್ಕದಲ್ಲಿರುವ ಸುಳಿವು ಆಧರಿಸಿ ಎರಡು ಅಕ್ಷರಗಳ ಹೊಸ ಪದ ರಚಿಸಿ

| | ಸ | ರ | ಸುಳಿವು |
|---|---|---|---|
| | | | ಯೋಗ್ಯ |
| | | | ತಿರುಳು |
| | | | ಸಂಪತ್ತು |
| | | | ಕೂಡು |
| | | | ಹೇಳು |

## ಅದಲು ಬದಲು ಕಂಚಿ ಕದಲು

ಇಲ್ಲಿರುವ ಪದಗಳ ಅಕ್ಷರಗಳನ್ನೇ ಪುನಃ ಬಳಸಿಕೊಂಡು ಬೇರೊಂದು ಪದ ಮಾಡಿ

1. ಆರವಿವಸ್ತಿ
2. ಜನಾನುರಾಗ
3. ರಾಧಿಕಾಉತ್ತರ
4. ಆನೆಯಶ್ರಮ

## ಕಳೆದ ಸಂಚಿಕೆಯ 'ಮಜಕೂರ'ಕ್ಕೆ ಪ್ರತಿಕ್ರಿಯಿಸಿದ ಆಯ್ದ ಮೂವರು ಪುಟಾಣಿಗಳು

ನಂದಿತಾ ಎಸ್.ಎಂ.
ಬೆಂಗಳೂರು

ಅಮಿತ್ ಪೂಜಾರ
ವೆಂಕಟಾಪುರ (ಕುಷ್ಟಗಿ)

ಗಗನ್ ಆರ್.ಎಂ.
ಮುಂಡಗೋಡ

## ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ–20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

# ದೇವ ದೈವದ ಬನ್ನಿ...

12ನೇ ಪುಟದಿಂದ...

ನಾವು ಜನಪದರು ಅನುಭವಿಸುವ ನೈಜತೆಯೇ ಪಾಂಡವರು ಅನುಭವಿಸಿದ ನೈಜತೆ ಎಂದು ಬದುಕುವ ಪರಿ ಇದು. ನಾವು ಬಾಲ್ಯದಲ್ಲಿ ಮಳೆ, ಗುಡುಗು, ಸಿಡಿಲುಗಳಿಂದ ಭಯಭೀತಗೊಂಡಾಗ, ಸಿಡಿಲು ಹೊರಗಡೆ ಜೋರಾಗಿ ಅಪ್ಪಳಿಸಿದಾಗ ಮಣ್ಣಿನ ಮನೆ ಒಳಗೆ ಇರುತ್ತಿದ್ದ ನಾವು ಅವ್ವನೊಂದಿಗೆ 'ಅರ್ಜುನ ಅರ್ಜುನ, ಭೀಮ, ನಕುಲ, ಸಹದೇವ' ಎಂದು ಜಪಿಸುತ್ತಿದ್ದೆವು. ಅಂದರೆ, ಇವರನ್ನು ನೆನಪಿಸಿದೆವೆಂದರೆ ಸಿಡಿಲು ಎರಗುವುದು ದೂರವಾಗುತ್ತದೆ ಎಂಬ ನಂಬಿಕೆ ನಮ್ಮ ತಾಯಂದಿರಲ್ಲಿತ್ತು. ಮಕ್ಕಳನ್ನು, ಕುಟುಂಬವನ್ನು ರಕ್ಷಿಸಿಕೊಳ್ಳುವ ರೀತಿಯೇ ಇದಾಗಿತ್ತು. ಆದರೆ ಈಗ...?

ಕಾಲದ ಬದಲಾವಣೆಗಳ ಪರ್ವದಲ್ಲೂ ಈ ಹಬ್ಬಗಳು ಹಳ್ಳಿ ಬಾಳಿನ ದಸರೆಯನ್ನು ಜೀವಂತವಾಗಿ ಇಟ್ಟಿವೆ '**ಬನ್ನಿ ಮುಡಿಯುವ ಬಾರ ಕೋಲು ಕೋಲ/ಚಿನ್ನ ತರುವುನ ಬಾರ ಕೋಲು ಕೋಲ/**' ಈಗಲೂ ಕೋಲಾಟದ ಪದಗಳಲ್ಲಿ ಬನ್ನಿಹಬ್ಬದ ಸಡಗರವೇ ಜಾಸ್ತಿ. ಊರು ಸೀಮೆ, ಕಾಡು, ಬೆಟ್ಟ ಗುಡ್ಡ ಯಾವುದೇ ಇರಲಿ ಬನ್ನಿ ತಂದು ಜನತೆಗೆ ಪರಸ್ಪರ ಕೈ ಮುಟ್ಟಿ, ಕಾಲು ಮುಟ್ಟಿ ನಮಸ್ಕರಿಸುವುದಷ್ಟೇ ಅಲ್ಲ, ಅದನ್ನು ಬೆಳೆದ ಬೆಳೆಗೂ, ಭೂಮಿತಾಯಿಗೂ, ನಾಡಿನ ಸಂಪತ್ತಿಗೂ ಅನ್ನದಂಬಲಿಯೊಂದಿಗೆ ಬೆರೆಸಿ ಅರ್ಪಿಸುವ ರೀತಿ ಅನನ್ಯ. ದುರ್ಗಮ್ಮ, ಚೌಡಮ್ಮ, ದ್ಯಾಮಮ್ಮ, ಊರಮ್ಮ, ಹುಲಿಗಮ್ಮ, ಎಲ್ಲಮ್ಮ, ಉಚ್ಚಂಗೆಮ್ಮ ಯಾವ ದೇವತೆಯೇ ಆಗಿರಲಿ ಎಲ್ಲರನ್ನೂ ಶಕ್ತಿ ದೇವತೆಗಳೆಂದು ಭಕ್ತಿಯಿಂದ ಸ್ಮರಿಸುವ ಸಮಯವೂ ಇದಾಗಿದೆ.

ಹಾಗಂತಲೇ -

**'ದೇವ ದೇವರ ಬನ್ನಿ ದೇವ ದೈವದ ಬನ್ನಿ**
**ನಾವು ಮುಡಿವುದು ನಮ್ಮ ಬನ್ನಿ**' ಎಂದರು.
**'ಅರಸನ ಅಂಗಳಕ ಸರಸ ರಂಗ ಹೋಯಿಸಿ**
**ಹೊರಸಿ ತಂದಾರ ಸಿರಿಬನ್ನಿ**' ಎನ್ನುವ ಅರಸರ ಪ್ರೀತಿಯನ್ನು ಜನ ಇನ್ನೂ ಮರೆತಿಲ್ಲ. ಅರಸರಾಗಲಿ, ಜನಸಾಮಾನ್ಯರಾಗಲಿ ಹಬ್ಬ ಎಂದಲ್ಲಿ ಎಲ್ಲರೂ ಸಮಾನರೇ. ಈ ಹಬ್ಬದ ನಿಜವಾದ ಬದುಕಿರುವುದು '**ನಾವು ಕುಣಿಯೋಣ ಬನ್ನಿ, ಹ್ಯಾಂವ ಮರಿಯೋಣ ಬನ್ನಿ/ಜೀವ ಒಂದಾಗಿ ಇರಬನ್ನಿ ಕೋಲು ಕೋಲ**' ಎನ್ನುವಲ್ಲಿ. ನಮ್ಮೆಲ್ಲ ಹ್ಯಾಂವ, ಈರ್ಷೆ, ವೈರತ್ವ, ಕೊಲೆಗಡುಕತನ ಮರೆತು ಜೀವ ಒಂದಾಗುವುದನ್ನೇ ಈ ಹಬ್ಬಗಳು ಸಾರುತ್ತವೆ. ನಾವು ಈ ಹಬ್ಬಗಳನ್ನು ಕಳೆದುಕೊಂಡರೆ ಮಹಾಭಾರತದ ದಾಯಾದಿಗಳ ಮತ್ಸರದ ಕಥೆಯೇ ನಮ್ಮದಾಗುತ್ತದೆ ಎಂಬುವ ಎಚ್ಚರವೂ ಈ ಜಾನಪದ ದಸರೆಯಲ್ಲಿದೆ.

ಇಂತಹ ವಿಜಯದಶಮಿಗೋ, ಬನ್ನಿ ಮುಡಿಯಲಿಕ್ಕೋ ಮನೆಯಲ್ಲಿ ಮಗನಿಲ್ಲದಾಗ ಜನಪದ ಬದುಕಿಗೆ ದೊಡ್ಡ ಶೋಕವೇ. ಅಂತಹ ಶೋಕವನ್ನು ವ್ಯಕ್ತಪಡಿಸುವುದು ಹೇಗೆಂದರೆ: '**ಬಂಜೆ ಬಾಗಿಲದಾಗ ಬಂಗಾರದೊಳಕಲ್ಲು, ಬಂದು ಕುಟ್ಟಾಕ ಸೊಸೆ ಇಲ್ಲ/ಮಹಾನವಮಿ/ಬನ್ನಿ ಮುಡಿಯಾಕ ಮಗನಿಲ್ಲ**' ಬಂಗಾರದ ಒಳಕಲ್ಲು ಇದ್ದರೂ ಧಾನ್ಯ ಕುಟ್ಟುವ ಸೊಸೆ ಇಲ್ಲ. ಮಹಾನವಮಿ ಬನ್ನಿ ಇದ್ದರೂ ಮುಡಿಯುವ ಮಗನಿಲ್ಲ. ನನ್ನ ಬಾಳು ಹೇಗೆ ಎಂದು ತಾಯಿ ಪರಿತಪಿಸುವ ಬಗೆಯಂತೂ ಜಾನಪದದ ದಸರೆಯ ಆರ್ದ್ರ ಭಾವವೇ ಆಗಿದೆ. ಆದರೂ ಅವಳು ಹಬ್ಬವಾಗುವವಳೇ.

ಪಾಂಡವರ ವನವಾಸದ ಕಷ್ಟದ ಮುಂದೆ ನನ್ನ ಕಷ್ಟ ಯಾವ ಲೆಕ್ಕ ಎಂದು ಮತ್ತೆ ಮತ್ತೆ ಚೈತನ್ಯಗೊಳ್ಳುವ ಹೆಣ್ಣು ಮಕ್ಕಳಿಗಂತೂ, ಊರ ತಾಯಂದಿರಿಗಂತೂ ಹಳ್ಳಿಗಳಲ್ಲಿ ಬರವಿಲ್ಲ.

ಹೊಸಬಟ್ಟೆ, ಹೊಸ ಆಭರಣ, ಗೃಹೋಪಯೋಗಿ ವಸ್ತುಗಳು, ಹೊಸ ಯಂತ್ರಗಳ ಖರೀದಿ, ಮನೆಯ ಗೃಹ ಪ್ರವೇಶದ ಕಾರ್ಯಕ್ರಮ, ಪಾಯಹಾಕಿ ಹೊಸ ಮನೆಗೆ ಶುಭ ಆರಂಭ, ಹೊಸ್ತಿಲ ಪೂಜೆ ಮಾಡುವುದು ಒಂದೇ ಎರಡೇ ದಸರೆಯ ಈ ದಶದಿನಗಳು ವಿರಾಮವಿಲ್ಲದೆ ಸೃಜನಶೀಲವಾಗಿ ಮೂಡಿ ನಿಲ್ಲುವ ಪರಿಯೇ ವಿಶೇಷ. ಉಡಿಯಲ್ಲಿ ಬನ್ನಿ ಇದ್ದರೆ ಅದು ಬಂಗಾರವೇ. ಒಡಲಲ್ಲಿ ಮಗನೋ, ಮಗಳೋ ಇದ್ದರೆ ಅದೂ ಬಂಗಾರವೇ. ಎಷ್ಟೊಂದು ಪ್ರೀತಿ, ಅಕ್ಕರೆ ಈ ನಿಸರ್ಗದ ಮೇಲೆ.

ಜನಪದರೇ ಬಾಳಿಸುವ ಇಂತಹ ನಿಸರ್ಗಗಳೇ ನಮ್ಮ ನಿಜವಾದ ಹಬ್ಬಗಳು. ಹಬ್ಬಗಳು ಉಳಿದರೆ ನಿಸರ್ಗವು ಉಳಿಯುತ್ತದೆ. ನಿಸರ್ಗವು ಉಳಿದರೆ ಹಬ್ಬಗಳು ಉಳಿಯುತ್ತವೆ ಎನ್ನುವುದಕ್ಕೆ ಸಾಕ್ಷಿಪ್ರಜ್ಞೆಯಾಗಿ ಈ ಜನಪದ ದಸರೆ ಇದೆ. ಈ ಬನ್ನಿ ಹಬ್ಬದ ಇನ್ನೊಂದು ವಿಶೇಷವೆಂದರೆ 'ಗಿಂಡೀಲಿ ನೀರು, ಬಂಡೀಲಿ ಅನ್ನ' ಎನ್ನುವ 'ಜೋಳ ಜೊಟ್ಟು ಆದಿತೋ, ಹತ್ತಿ ಬತ್ತಿಯಾದಿತೋ', 'ಅರಸ ಹಾಳಾದನೋ, ಕೊರಸ ಮೆರೆದನೋ' ಎಂಬುವ ಮಾತುಗಳು ಕಾರ್ಣಿಕದ ನುಡಿಗಳಾಗಿ ಮೈಲಾರಗೊಳ್ಳುವುದು ಇದೇ ಬನ್ನಿ ಹಬ್ಬದಲ್ಲಿ. ಭಾರತ ಹುಣ್ಣಿಮೆ, ಜಾತ್ರೆ ನೆರೆಯುವ ಪೂರ್ವಭಾವಿಯಾಗಿಯೂ ಈ ಬನ್ನಿ ಹಬ್ಬದ ದಿನ ಮೈಲಾರ ತನ್ನ ವಿಜಯೋತ್ಸವದ ಸಂಕೇತವಾಗಿಯೂ ಗೊರವರು ದೇವರಗುಡ್ಡದಲ್ಲಿ ನೆರೆತು ಜಾತ್ರೆ ಮಾಡುವರು. ಉಪವಾಸವಿದ್ದ ಹಿರಿಯ ಗೊರವ ಹುಟ್ಟುಗೊಂಡು ಕಾರಣಿಕ ಹೇಳುತ್ತಾನೆ. ಅದು ದೇವರ ಹೇಳಿಕೆಯಾಗಿ ಮಳೆ ಬೆಳೆ, ಜೀವನ ಕಾಲಮಾನವನ್ನು ವ್ಯಾಖ್ಯಾನಿಸುವ ಬಗೆಯನ್ನು ದೇವರಗುಡ್ಡ ಜಾತ್ರೆಯಲ್ಲಿ ಕಾಣುತ್ತೇವೆ. ಮಣಿ ಮಲ್ಲಾಸುರ ರಾಕ್ಷಸರ ಸಂಹರಿಸಿದ ಪುರಾಣ ದ್ಯೋತಕದ ಮೈಲಾರನ ವಿಜಯೋತ್ಸವವೂ ಇದೇ ಬನ್ನಿ ಹಬ್ಬದೊಂದಿಗೆ ಸಂಕರಗೊಂಡಿದೆ.

ಪ್ರತಿಹಬ್ಬವೂ ಒಂದೊಂದು ಹೊಸತನವೇ. ಹಿರಿಯರು ಹೇಗೆ ಬಾಳಿದರು, ಹೇಗೆ ಉಂಡು ಸುಖಿಗಳಾಗಿದ್ದರು, ಯಾವ ಉಡುಗೆ ತೊಡುಗೆಗಳಿಂದ ಸರಳವಾಗಿ ಬದುಕಿ ಸೌಹಾರ್ದಗೊಂಡಿದ್ದರು, ಏನನ್ನು ನುಡಿದರು, ಅವೇ ನುಡಿಗಳು ಹಳ್ಳಿ ಬಾಳನ್ನು ಈಗಲೂ ತುಂಬಿವೆ. ಅದೇ ರುಚಿ, ಅದೇ ಬಣ್ಣ, ಅದೇ ಭಾವ ಹಿರಿಯರ ಹಬ್ಬಕ್ಕೂ ತೋರಣವಾಗಿದೆ. ಕಿರಿಯರ ಪ್ರೀತಿಗೂ ತೋರುಗಂಬವಾಗಿದೆ. ಇಂತಹ ಹಿರಿದಾದ ಎತ್ತರದ ತಲೆಮಾರುಗಳನ್ನು ಬಾಳಿಸುವ ಮುಂದಿನ ಪೀಳಿಗೆಗಾಗಿ ಸ್ಮರಣೆಯನ್ನೊತ್ತು ಸಾಗುವ ಮಾಳಪಕ್ಷ ಈ ಜಾನಪದ ದಸರೆಯು ನಮಗೊಂದು ಆದರ್ಶವಾಗಬೇಕು.

ನಾನು ಬಾಲ್ಯದಲ್ಲಿದ್ದಾಗ ನಮ್ಮ ಹಳ್ಳಿ ಮನೆಗಳಲ್ಲಿ ಮನೆ ಬಾಗಿಲು ತೆರೆದರೆ ಎದುರಿನ ಗೋಡೆಯ ಮೇಲೆ ಸಾಲಾಗಿ ಹಿರೀಕರ ಫೋಟೊಗಳು ಇರುತ್ತಿದ್ದವು. ವಿಭೂತಿ ಹಚ್ಚಿದ, ಕುಂಕುಮವನ್ನಿಟ್ಟ ಬೆರಳ ಗುರುತು ಬಾಳ ಪ್ರತಿಬಿಂಬವಾಗಿತ್ತು. ಹೊರಗೆ ಹೊರಟರೆ ಅವರಿಗೆ ಕೈ ಮುಗಿದೇ ಹೋಗಬೇಕಿತ್ತು. ಅವರ ಜೊತೆಯಲ್ಲಿ ದೇವರ ಫೋಟೊಗಳಿಗೂ ನಮಿಸಬೇಕಿತ್ತು. ಇವುಗಳ ಮಧ್ಯದಲ್ಲಿ ಅರ್ಧ ದೇಹ ಪಶುವಿನದು, ಇನ್ನರ್ಧ ದೇಹ ಮನುಷ್ಯನದು. ಅದರ ತಲೆಯ ಮೇಲೆ ಎರಡು ಕೋಡು, ಬಾಲ, ನಾಲ್ಕು ಕಾಲುಗಳು ಇರುವ ದೊಡ್ಡ ಫೋಟೊವೊಂದು ಇರುತ್ತಿತ್ತು. ನನಗೀಗಲೂ ಅದು ಸೋಜಿಗದ ಸಂಗತಿಯೇ. ಮನುಷ್ಯ ಮತ್ತು ಸಾಕುಪ್ರಾಣಿಗಳ ನಡುವಿನ ಅನನ್ಯ ಪ್ರಕೃತಿಯ ಸಂಬಂಧವಾಗಿಯೂ ಇಂತಹ ಚಿತ್ರಗಳು ಮೂಡಿ ನಿಂತಿರಬಹುದೇನೋ. ಈಗ ಅವೆಲ್ಲಿ ಮಾಯವಾದವು?

ಅಷ್ಟಾದರೂ ಹಬ್ಬಗಳ ಆಚರಣೆಗಳು, ಜಾತ್ರೆಗಳ ಜೀವಂತಿಕೆಗಳ ವರತೆ ಆರಿಲ್ಲ. ಅದು ಸದಾ ಜಿನಗುವ ಜೀವದ್ರವ್ಯವೇ. ಆ ಜೀವ ದ್ರವ್ಯಗಳು ಇದ್ದರೇನೇ ನಾಡಿಗೆ, ಊರಿಗೆ, ದೇಶಕ್ಕೇ ಸೊಗಸು ಮತ್ತು ಶ್ರೀಮಂತಿಕೆ. ಜಾನಪದ ದಸರೆ ಸೊಗಸಿನ ಹೂ ಪರಿಮಳವನ್ನು ಹರಡುತ್ತಾ, ಧೂಪ ಗಂಧವಾಗುತ್ತಾ, ಹಿರಿಯರ ನುಡಿ ಸಂಸ್ಕೃತಿಯನ್ನು ಹಬ್ಬಿಸುತ್ತಾ ಸಾಗಬೇಕು. ಬನ್ನಿ ನಾವೆಲ್ಲ ಸದಾ ಬಂಗಾರವಾಗೋಣ ಎಂದು ಈ ಹಬ್ಬ ಸಾರಿ ಸಾರಿ ಹೇಳಬೇಕು ಎನ್ನುವುದಷ್ಟೇ ಹಾರೈಕೆ.

## ಸೃಷ್ಟಿಮೂಲ ಸಂಗತಿಗಳ ಹಬ್ಬ

ನವರಾತ್ರಿಯ ಮೂರನೇ ದಿವಸ, ಐದನೇ ದಿವಸ, ಇಲ್ಲವೆ ಒಂಬತ್ತನೇ ದಿವಸಕ್ಕೆ 'ಘಟ್ಟ' ಹಾಕುವ ಪದ್ಧತಿ ಉತ್ತರ ಕರ್ನಾಟಕದ ಭಾಗದಲ್ಲಿದೆ. ನವಧಾನ್ಯಗಳ ಸಸಿ ನೆಟ್ಟು ಬಿಂದಿಗೆ ನೀರು ತುಂಬಿ ಪೂಜುತ್ತಾರೆ. ಚಟಗಿ ಇಟ್ಟು, ಕಾಯಿ ಇಟ್ಟು ದೀಪ ಹಾಕುವುದು ಇದರ ವಿಶೇಷ. ಮನೆಯಲ್ಲಿ ತರಗಣ ಕಟ್ಟುತ್ತಾರೆ, ಅದರೊಳಗೆ ಕುಬಸದ ಗಳಿಗೆ, ಬಂಡಿಗಾಲಿ, ಬಸವಣ್ಣ, ಈಶ್ವರ, ಹಸ್ತ, ಜಡಿ ಇವೆಲ್ಲ ಸೇರಿಸಿ ಚಟಗಿ ತೂಗು ಹಾಕುತ್ತಾರೆ. ಮಣ್ಣಿನ ಚಟಗಿಯಲ್ಲಿ ನವ ಧಾನ್ಯ ಹಾಕಿ ಅದು ಬೆಳಕಿನಲ್ಲಿ, ಸಹಜವಾದ ಸ್ಥಿತಿಯಲ್ಲಿ ಬೆಳೆಯುವುದನ್ನು ಪೂಜ್ಯಭಾವದಿಂದ ಕಾಯುತ್ತಾರೆ.

ಹೆಣ್ಣು ಮಕ್ಕಳು ಹಳದಿ ಸಸಿಗಳನ್ನು ಜಡೆಗೆ ಮುಡಿದುಕೊಳ್ಳುವರು. ದೇವರಿಗೂ ಹಸಿರು ಸಸ್ಯಗಳನ್ನು ಇರಿಸುವರು. ಒಂದೆಡೆ ಹಳದಿ ಸಸಿ, ಇನ್ನೊಂದೆಡೆ ದೇವರಿಗೆ ಇರಿಸುವ ಹಚ್ಚ ಹಸಿರು ಸಸಿ ಎಲ್ಲವನ್ನೂ ಗಮನಿಸಿದರೆ ಘಟ್ಟ ಹಾಕುವ ಈ ಪದ್ಧತಿ ಹುಲುಸಾದ ಫಲವಂತಿಕೆಯ ವಿಧಾನವನ್ನು ಸೂಚಿಸುತ್ತದೆ. ಹಾಗೆ ಬದುಕಿನ ಸೃಷ್ಟಿಮೂಲ ಸಂಗತಿಗಳನ್ನೂ ಈ ಹಬ್ಬ ಬಿಂಬಿಸಿಕೊಂಡು ನಿಂತಿದೆ.

ಪ್ರೇಮಚಂದ್ ಅವರ **ಮಂತ್ರ** (ಕನ್ನಡಕ್ಕೆ: ಡಿ.ಎನ್. ಶ್ರೀನಾಥ್)

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ವಿ. ಹರಿನಾಥ ಬಾಬು ಅವರ **ಬಿಟ್ಟಿರುವುದಾದರೂ ಹೇಗೆ?!**

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/poetry